**2014-15**ನೇ ಸಾಲಿನ ಆಯವ್ಯಯವನ್ನು ದಿನಾಂಕ:**03-03-2014**ರಂದು ನಡೆದ ಹಣಕಾಸು ಸಮಿತಿಯ 3ನೇ ತ್ರೈಮಾಸಿಕ ಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳಲಾಗಿದೆ.ಅದೇರೀತಿ 2015-16ನೇ ಸಾಲಿನ ಆಯವ್ಯಯವನ್ನು ದಿನಾಂಕ:**02-02-2015**ರಂದು ನಡೆದ ಹಣಕಾಸು ಸಮಿತಿಯ 3ನೇ ತ್ರೈಮಾಸಿಕ ಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳಲಾಗಿದೆ. ವಿವರ ಈ ಕೆಳಗಿನಂತಿದೆ.

**2014-15ನೇ ಸಾಲಿನ ಆಯವ್ಯಯ(ಲಕ್ಷಗಳಲ್ಲಿ):-**

| ಕ್ರ ಸಂ | ವಿವರ | ಆಯವ್ಯಯ | | ಪರಿಷ್ಕೃತ ಆಯವ್ಯಯ | |
|---|---|---|---|---|---|
| | | ಆದಾಯ | ವೆಚ್ಚ | ಆದಾಯ | ವೆಚ್ಚ |
| 1 | ಯೋಜನೇತರ | 2100 | 2090.60 | 1446.66 | 2088.57 |
| 2 | ಯೋಜನೆ | 3761.85 | 3982.45 | 1162.76 | 1931.01 |
| | ಒಟ್ಟು | **5861.85** | **6073.05** | **2609.42** | **4019.58** |

| ಆದಾಯ | | ವೆಚ್ಚ | |
|---|---|---|---|
| ನಿರೀಕ್ಷಿತ | 5861.85 | ನಿರೀಕ್ಷಿತ | 6073.05 |
| ವಾಸ್ತವಿಕ | 2609.42 | ವಾಸ್ತವಿಕ | 4019.58 |
| | **3252.43** | | **2053.47** |

## 2015-16ನೇ ಸಾಲಿನ ಅಯವ್ಯಯ:-

| ಕ್ರ ಸಂ | ವಿವರ | ಆಯವ್ಯಯ | | ಪರಿಷ್ಕೃತ ಆಯವ್ಯಯ | |
|---|---|---|---|---|---|
| | | ಆದಾಯ | ವೆಚ್ಚ | ಆದಾಯ | ವೆಚ್ಚ |
| 1 | ಯೋಜನೇತರ | 2254.88 | 2254.88 | 2182.00 | 2206.89 |
| 2 | ಯೋಜನೆ | 4534.42 | 4534.42 | 1682.85 | 2595.08 |
| | ಒಟ್ಟು | **6789.30** | **6789.30** | **3864.85** | **4801.97** |

| ಆದಾಯ | | ವೆಚ್ಚ | |
|---|---|---|---|
| ನಿರೀಕ್ಷಿತ | 6789.30 | ನಿರೀಕ್ಷಿತ | 6789.30 |
| ವಾಸ್ತವಿಕ | 3864.85 | ವಾಸ್ತವಿಕ | 4801.97 |
| | **2924.45** | | **1987.33** |

ಕನ್ನಡ ವಿಶ್ವವಿದ್ಯಾಲಯದ **ಅಧಿನಿಯಮ 1991ರ ಪ್ರಕರ 30(9)**ರಲ್ಲಿ ಹಾಗೂ ಕನ್ನಡ ವಿಶ್ವವಿದ್ಯಾಲಯದ ಪರಿನಿಯಮದ **ಕಂಡಿಕೆ.43(ಎ)**ರಲ್ಲಿ ಸೂಚಿಸಿದಂತೆ ವಿಶ್ವವಿದ್ಯಾಲಯದ ಅಂದಾಜುಗಳನ್ನು ಹಣಕಾಸು ಅಧಿಕಾರಿಯು ಸಿದ್ಧಪಡಿಸಿ, ಸಿದ್ಧಿಪಡಿಸಿದ ಅಂದಾಜನ್ನು ಪರ್ಯಾಲೋಚನೆ ಮತ್ತು ಟೀಕೆ-ಟಿಪ್ಪಣಿಗಾಗಿ ಹಣಕಾಸು ಸಮಿತಿಯ ಮುಂದೆ ಮಂಡಿಸಬೇಕು ನಂತರ ಪರ್ಯಾಲೋಚನೆಗಾಗಿ ಸದರಿ ಅಂದಾಜುಗಳನ್ನು ಹಣಕಾಸು ಸಮಿತಿಯಿಂದ ಮಾರ್ಪಾಟಾದ ರೂಪದಲ್ಲಿ ಕಾರ್ಯಕಾರಿ ಸಮಿತಿಯ ಮುಂದೆ ಮಂಡಿಸಬೇಕು. ಕಾರ್ಯಕಾರಿ ಸಮಿತಿಯು ಹಣಕಾಸು ಸಮಿತಿ ಮಾಡಿದ ಮಾರ್ಪಾಡುಗಳನ್ನು ಅಂಗೀಕರಿಸಬಹುದ. ಸದರಿ ಸಂಸ್ಥೆಯಲ್ಲಿ ಈ ಮೇಲೆ ಸೂಚಿಸಿದಂತೆ ಆಯವ್ಯಯವನ್ನು ಅನುಮೋದನೆಗಾಗಿ ಹಣಕಾಸು ಸಮಿತಿ ಮುಂದೆ ಮುಂಡಿಸಿದ್ದು ಇದನ್ನು ಕಾರ್ಯಕಾರಿ ಸಮಿತಿ ಮುಂದೆ ಮಂಡಿಸಿರುವ ಬಗ್ಗೆ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಈ ಮೇಲೆ ಸೂಚಿಸಿದಂತೆ **2014-15 ಹಾಗೂ 2015-16ನೇ** ಸಾಲಿನಲ್ಲಿ ಯೋಜನೆ ಭಾಗದಲ್ಲಿ ಹೆಚ್ಚುವರಿ ಮೊತ್ತವನ್ನು ಆಯವ್ಯಯದಲ್ಲಿ ಅನುವು ಮಾಡಿಕೊಂಡಿದ್ದು ವಾಸ್ತವಿಕವಾಗಿ ಯೋಜನೆಗಾಗಿ ಕಡಿಮೆ ವೆಚ್ಚ ಮಾಡಿದೆ.ಅಲ್ಲದೆ 2014-15 ಹಾಗೂ2015-16ನೇ ಸಾಲಿನ ನಿರೀಕ್ಷಿತ ಆದಾಯ ಹಾಗೂ ವಾಸ್ತವಿಕ ಆದಾಯ ನಿರೀಕ್ಷಿತ ವೆಚ್ಚ ಹಾಗೂ ವಾಸ್ತವಿಕ ವೆಚ್ಚವನ್ನು ಗಮನಿಸಿದಾಗ ಬಹಳ ವ್ಯತ್ಯಾಸವಿದ್ದು ಸದರಿ ಸಂಸ್ಥೆಯವರು ತಯಾರಿಸಿದ ಆಯವ್ಯಯವು ಅವಾಸ್ತವಿಕವಾಗಿದೆ.

ಆಯವ್ಯಯದಲ್ಲಿ ಮಾಡಿರುವ ಅನುವುಗಳಿಗಿಂತ(provision) ಹೆಚ್ಚುವರಿಯಾಗಿ ವೆಚ್ಚ ಮಾಡಿರುವ ಬಗ್ಗೆ:

| ಕ್ರ ಸಂ | ವಿವರ | ಆಯವ್ಯಯದಲ್ಲಿ ಅನುವು ಮಾಡಿ ಕೊಂಡಿರುವುದು | ಲಕ್ಷಗಳಲ್ಲಿ | |
|---|---|---|---|---|
| | | | ವಾಸ್ತವಿಕ ವೆಚ್ಚ | ವ್ಯತ್ಯಾಸ |
| ಎ | **2014–15ನೇ ಸಾಲು (ಎ) ಯೋಜನೇತರ** | | | |
| 1 | ಪಿಂಚಣಿ ವೆಚ್ಚಗಳು | 450.00 | 598.77 | 148.77 |
| ಬಿ | **ಯೋಜನೆ** | | | |
| 1 | ಸಾಮನ್ಯ ಆಡಳಿತ | 256.50 | 388.01 | 131.51 |
| 2 | ಪೀಠಗಳ ವೆಚ್ಚ | 36.00 | 39.52 | 3.52 |
| | **2015–16ನೇ ಸಾಲು (ಎ)ಯೋಜನೇತರ** | | | |
| 1 | ವೇತನ ಮತ್ತು ಭತ್ಯಗಳು | 2054.88 | 2090.00 | 35.12 |
| 2 | ಅಧ್ಯಯನ ವಿಭಾಗ ವೆಚ್ಚ | 99.00 | 112.75 | 13.75 |
| 3 | ಇತರೆ ವಿಭಾಗಗಳ ವೆಚ್ಚ | 95.00 | 129.2 | 34.20 |
| 4 | ಪ್ರಸಾರಾಂಗ | 58.00 | 64.50 | 6.5 |
| 5 | ದೂರ ಶಿಕ್ಷಣ ಕೇಂದ್ರ | 225.00 | 277.32 | 52.32 |
| 6 | ಚಿತ್ರಕಲಾ ತರಬೇತಿ | 250.00 | 278.50 | 28.50 |
| 7 | ವಿಶೇಷ ಘಟಕ ಯೋಜನೆ | 200.00 | 250.17 | 50.17 |
| 8 | ದತ್ತಿ ನಿಧಿ | 3.45 | 6.5 | 3.05 |

ಈ ಮೇಲೆ **ಸೂಚಿಸಿದಂತೆ 2014–15 ಹಾಗೂ 2015–16ನೇ** ಸಾಲಿನಲ್ಲಿ ಆಯವ್ಯಯದಲ್ಲಿ ಅನುವು ಮಾಡಿಕೊಂಡಿರುವ ಮೊತ್ತಕ್ಕಿಂತ ಹೆಚ್ಚುವರಿಯಾಗಿ ವೆಚ್ಚ ಮಾಡಲಾಗಿದೆ. ಈ ರೀತಿ ಹೆಚ್ಚುವರಿಯಾಗಿ ವೆಚ್ಚ ಮಾಡುವ ಮುನ್ನ ಪೂರಕ ಆಯವ್ಯಯ/ ಪರಿಷ್ಕೃತ ಆಯವ್ಯಯ ತಯಾರಿಸಿ ಸಕ್ಷಮ ಪ್ರಾಧೀಕಾರದಿಂದ ಅನುಮೋದನೆ ಪಡೆದು ಪುನರ್‌ಧನ ವಿನಿಯೋಗದ ಮೂಲಕ ಅನುದಾನವನ್ನು ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ.ಆದರೆ ಈ ಸಂಸ್ಥೆಯಲ್ಲಿ ಈ ಮೇಲಿನ ಕ್ರಮವನ್ನು ಅನುಸರಿಸಿರುವ ಬಗ್ಗೆ ದಾಖಾಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ.

## 2.1.5)ಮುಂಗಡಗಳು:–

ಹಣಕಾಸು ವಿಭಾಗದಲ್ಲಿ ನಿರ್ವಹಿಸರಬಹುದಾಗಿನ ವಿವಿಧ ಮುಂಗಡ ರಿಜಿಸ್ಟರ್‌ಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಲೆಕ್ಕ ಪತ್ರ ವಿಚಾರಣೆ ಸಂಖ್ಯೆ:1:2016–17 ದಿನಾಂಕ:13–04–2016ರಂದು 2014–15 ಮತ್ತು 2015–16ನೇ ಸಾಲಿನಲ್ಲಿ ಮಂಜೂರು ಮಾಡಿದ ಮುಂಗಡಗಳ ಪೈಕಿ ಹಲವು ಮುಂಗಡಗಳ ಮೊತ್ತಗಳು ಹೊಂದಾಣಿಕೆಯಾಗದಿರುವ ಬಗ್ಗೆ ವಿಚಾರಣೆ ಪತ್ರ ನೀಡಿ ವಿವರ ಸಲ್ಲಿಸಲು ಸೂಚಿಸಿದ್ದು ಉತ್ತರ ಲೆಕ್ಕ ತನಿಖೆಗೆ ನೀಡಿರುವುದಿಲ್ಲ.

ವಿಶ್ವವಿದ್ಯಾಲಯದಲ್ಲಿ ಸಾಕಷ್ಟು ಹಿಂದಿನಿಂದ ನೀಡಲಾಗಿರುವ ವಿವಿಧ ಮುಂಗಡಗಳು ಈ ವರೆಗೆ ಬಾಕಿ ಇರುವುದಾಗಿ ತಿಳಿದುಬಂದಿದ್ದು ಅವುಗಳನ್ನು ಹೊಂದಾಣಿಕೆ ಅಥವಾ ವಸೂಲಿ ಮಾಡುವಲ್ಲಿ ವಿಶ್ವವಿದ್ಯಾಲಯದ ಹಣಕಾಸು ವಿಭಾಗ ಸೇರಿದಂತೆ ಒಟ್ಟಾರೆ ಆಡಳಿತ ವಿಫಲವಾಗಿದೆ. ಈ ರೀತಿ ಬಾಕಿ ಎಂದು ತೋರಿಸಲಾಗಿರುವ ಮುಂಗಡಗಳ ಮೊತ್ತವು ಈಗಾಗಲೇ ನಿವೃತ್ತ ರಾಗಿರುವ ಹಾಗೂ ಮರಣ ಹೊಂದಿರುವ ವಿಶ್ವವಿದ್ಯಾಲಯದ ಹಿಂದಿನ ಆಧಿಕಾರಿ ಮತ್ತು ಸಿಬ್ಬಂದಿಗಳ ಹೆಸರಿನಲ್ಲಿದ್ದು ಈ ವಿಶ್ವವಿದ್ಯಾಲಯದ ಸೇವೆಯಿಂದ ವಿಮುಕ್ತಿ ಹೊಂದುವ ಸಮಯದಲ್ಲಿ ಅವರಿಗೆ ಬೇಬಾಕಿ ಪ್ರಮಾಣ ಪತ್ರ ಯಾವ ಆಧಾರದ ಮೇಲೆ ನೀಡಲಾಗಿತ್ತು ಎಂಬುದು ತಿಳಿದುಬಂದಿಲ್ಲ.

ಈ ಕುರಿತು ಪರಿಣಾಮಕಾರಿಯಾದ ಕ್ರಮ ಕೈಗೊಂಡು ಬಾಕಿ ಇರುವ ಮುಂಗಡಗಳನ್ನು ಹೊಂದಾಣಿಕೆ ಮಾಡುವಲ್ಲಿಯಾಗಲೀ ಅಥವಾ ವಸೂಲಿ ಮಾಡುವುದಾಗಲಿ ಮಾಡಲಾಗಿರುವುದಿಲ್ಲ. ಈ ಮುಂಗಡ ಹಣ ಬಾಕಿ ಇದ್ದಾಗಲು ಬೇಬಾಕಿ ಪ್ರಮಾಣ ಪತ್ರ ನೀಡಿದ ಅಧಿಕಾರಿ ಮತ್ತು ಸಿಬ್ಬಂದಿಯವರಿಂದ ಈ ಮೊತ್ತವನ್ನು ವಸೂಲಿ ಮಾಡಲು ವಿಶ್ವವಿದ್ಯಾಲಯವು ತ್ವರಿತ ಕ್ರಮ ಕೈಗೊಳ್ಳದಿದ್ದಲ್ಲಿ ಅಷ್ಟು ಪ್ರಮಾಣದ ಮುಂಗಡ ಮೊತ್ತ ಶಾಶ್ವತವಾಗಿ ವಿಶ್ವವಿದ್ಯಾಲಯಕ್ಕೆ ಹಾನಿಯಾಗುವುದರಲ್ಲಿ ಯಾವ ಸಂಶಯವು ಇರುವುದಿಲ್ಲ.

**2014–15ಮತ್ತು 2015–16ನೇ** ಸಾಲಿನಲ್ಲಿ ಲೆಕ್ಕ ತಪಾಸಣೆಗೆ ಹಾಜರುಪಡಿಸಿದ ರಿಜಿಸ್ಟರ್ ಕಡತ ಹಾಗೂ ವಿಶ್ವವಿದ್ಯಾಲಯದ ಮೂಲಕ ನೀಡಿದ ವಿವರ ಅನುದಾನ ವಿವಿಧ ಉದ್ದೇಶಕ್ಕಾಗಿ ನೀಡಿದ ಮುಂಗಡಗಳಲ್ಲಿ ಪೂರ್ತಿ 2016ರ ಅಂತ್ಯಕ್ಕೆ ಹೊಂದಾಣಿಕೆ ಯಾಗದೆ ಕೆಳಕಂಡಂತೆ ಬಾಕಿ ಉಳಿಸಿ ಕೊಳ್ಳಲಾಗಿದ್ದು ವಿವರ ಈ ಕೆಳಗಿನಂತಿವೆ.

| ಕ್ರ ಸಂ | ಮುಂಗಡ ವಿವರ | 31-03-2016ಕ್ಕೆ ಹೊಂದಾಣಿಕೆ ಯಾಗದೆ ಬಾಕಿ ಉಳಿದು ಕೊಂಡಿರುವ ಮೊತ್ತ |
|---|---|---|
| 1 | ಸಾಮಾನ್ಯ ಮುಂಗಡ | 3537013 |
| 2 | ದೂರ ಶಿಕ್ಷಣ | 448800 |
| 3 | ಇತರೆ | 134714 |
| 4 | ಪ್ರಸಾರಾಂಗ | 83500 |
| 5 | ಚಿತ್ರಕಲೆ | 113000 |
| | **ಒಟ್ಟು** | **4317027** |

ಕರ್ನಾಟಕ ಆರ್ಥಿಕ **ಸಂಹಿತೆ 1958ರ ಪರಿಚ್ಛೇದ 243**ರಲ್ಲಿ ಮುಂಗಡ ನೀಡಿದ ತಿಂಗಳ ತರುವಾಯ ಬರುವ ತಿಂಗಳ ಕೊನೆಯೊಳಗೆ ಹೊಂದಾಣಿಕೆಯಾಗತಕ್ಕದ್ದು.ಒಂದು ವೇಳೆ ನೀಡಿದ ಮುಂಗಡ ಮೇಲೆ ತಿಳಿಸಿದಂತೆ ನಿರ್ದಿಷ್ಟ ಅವಧಿಯಲ್ಲಿ ಹೊಂದಾಣಿಕೆ ಯಾಗದಿದ್ದಲ್ಲಿ ಅವಧಿ ಹೆಚ್ಚಳಕ್ಕೆ ಮಂಜೂರಾತಿ ಪಡೆಯಲು ಸೂಚಿಸಲಾಗಿದೆ.ಆದರೆ ವಿಶ್ವವಿದ್ಯಾಲಯದ ಮೂಲಕ ನೀಡಿದ ಮುಂಗಡಗಳ ವಿವರ ಪರಿಶೀಲಿಸಿದಾಗ **05-02-1994ರಿಂದ** ಹೊಂದಾಣಿಕೆಯಾಗದೆ ಬಾಕಿ ಉಳಿದು ಕೊಂಡಿರುವುದು ದೃಡಪಟ್ಟಿದೆ.

ಕನ್ನಡ ವಿಶ್ವವಿದ್ಯಾಲಯ ಹಂಪಿ ಇದರ ಆರ್ಥಿಕ ಹಾಗೂ ಆಡಳಿತಾತ್ಮಾಕ ಅಧಿಕಾರದಿಂದ ವಿವರಗಳನ್ನು ಪರಿಶೀಲಿಸಿದಾಗ ಸದರಿ ಆರ್ಥಿಕ ಸ್ವರೂಪ **ಕ್ರಮ ಸಂಖ್ಯೆ:16ರಲ್ಲಿ** ಪ್ರಯಾಣ ವೆಚ್ಚ ಮುಂಗಡಗಳಿಗೆ ಹಾಗೂ ಆಡಳಿತಾತ್ಮಕ ಅಧಿಕಾರದ ಕ್ರಮ ಸಂಖ್ಯೆ:37ರಲ್ಲಿ ವರ್ಗಾವಣೆ ಮುಂಗಡ ನೀಡುವ ಸಂಬಂಧ ಮಾತ್ರ ಅವಕಾಶ ಕಲ್ಪಿಸಿ ವಿಶ್ವವಿದ್ಯಾಲಯ ಕಾರ್ಯಕಾರಿ ಸಮಿತಿ ಹಾಗೂ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದಿಸಿಕೊಳ್ಳಲಾಗಿದೆ.ವಿಶ್ವವಿದ್ಯಾಲಯ ಖರ್ಚುಗಳಿಗೆ ಸಂಬಂಧಿಸಿದಂತೆ ಮುಂಗಡ ನೀಡುವ ಅಧಿಕಾರ ಪ್ರಸ್ತಾಪಿಸಿರುವುದಿಲ್ಲ.ಹೀಗಿರುವಾಗ ಬೃಹತ್ ಮೊತ್ತದ ಮುಂಗಡಗಳನ್ನು ನಿರ್ದಿಷ್ಟ ಖರ್ಚುಗಳಗೆ ಮಂಜೂರಾತಿ ನೀಡಿ ವರ್ಷಗಟ್ಟಲೆ ಹೊಂದಾಣಿಕೆಯಾಗದೆ ಉಳಿದುಕೊಂಡಿರುವುದು ನಿಯಮ ಬಾಹಿರ ಕ್ರಮವಾಗಿದ್ದು ಈ ಮೂಲಕ ಆರ್ಥಿಕ ನಿಯಮಗಳ ಕಟ್ಟುನಿಟ್ಟಿನ ಪರಿಪಾಲನೆ ಹಾಗೂ ಈ ಸಂಬಂಧ ವಿಶ್ವವಿದ್ಯಾಲಯದ **ಅಧಿನಿಯಮ1991ರ** ಹಣಕಾಸು **ಸಮಿತಿ 8(ಸಿ)**ರಲ್ಲಿ ಸೂಚಿಸಿದಂತೆ ವಿಶ್ವವಿದ್ಯಾಲಯದ ಲೆಕ್ಕ ಪತ್ರಗಳ ನಿರ್ವಹಣೆ ಮತ್ತು ಪ್ರಕ್ರಿಯಗಳಿಗೆ ಸದರಿ ಮಂಗಡ ನೀಡುವ ಸಂಬಂಧ ಕಟ್ಟುನಿಟ್ಟಿನ ನಿಯಮ ರೂಪಿಸಿ ಅನುಮೋದಿಸಿಕೊಳ್ಳಲು ಸೂಚಿಸಿದೆ.

ಮಹಾಲೇಖಪಾಲರು **2012-13ರಿಂದ2014-15ನೇ ಸಾಲಿನ ವರದಿ ಸೆಕ್ಷನ್(ಬಿ)ಕಂಡಿಕೆ 3ರಲ್ಲಿ** ಮುಂಗಡಗಳ ಹೊಂದಾಣಿಕೆಯಾಗದಿರುವ ಬಗ್ಗೆ ತೀವ್ರ ಆಕ್ಷೇಪವ್ಯಕ್ತಪಡಿಸಿ ಹಣಕಾಸು ಅಧಿಕಾರಿ ಮುಂಗಡ ಹೊಂದಾಣಿಕೆ ಬಗ್ಗೆ ಯಾವ ಕ್ರಮವನ್ನು ಕೈ ಗೊಳ್ಳದೆ ಮ್ಯುಟ್ ಸ್ಪೆಕ್ಟೇಟರ್ ಆಗಿ ಕಾರ್ಯನಿರ್ವಹಿಸಿದ್ದಾರೆಂದು ಸೂಚಿಸಿದ್ದಾರೆ. ಕೆ.ಎಫ್.ಸಿ ಮತ್ತು ಎಂಸಿಇ ನಿಮಯ ಪಾಲಿಸಿರುವುದಿಲ್ಲ. ಮುಂಗಡಗಳು **ಸೋರ್ಸ್ ಆಫ್.ಪ್ರಾ.ಫಿ.ಟ್** ಆಗಿದ್ದು **10ವರ್ಷಗಳು** ಕಳೆದರೂ ಮುಂಗಡಗಳು ಹೊಂದಾಣಿಕೆ ಯಾಗದಿರುವುದರಿಂದ ಕರ್ನಾಟಕ ಆರ್ಥಿಕ ಸಂಹಿತಿಯ ಅನುಚ್ಛದ **15ರ ಪ್ರಕಾರ** ಆರ್ಥಿಕ ಔಚಿತ್ಯತೆಯ ನಿಯಮಗಳನ್ನು ಉಲ್ಲಂಘಿಸಿಲಾಗಿದೆ. ಸರಿಯಾಗಿ ಹಣ ಖರ್ಚುಮಾಡದೆ ವಿಶ್ವವಿದ್ಯಾಲಯದ ಹಣವನ್ನು ದುರುಪಯೋಗ ಪಡಿಸಿದ್ದಾರೆ.**ಪಿ.ಹೆಚ್.ಡಿ. ಕೊರ್ಸ್‌ಗಳಲ್ಲಿ 04-05ವರ್ಷಗಳಾಗಿದ್ದು** ಮುಂಗಡ ಹೊಂದಣಿಕೆ ಮಾಡಿರುವುದಿಲ್ಲ.

ವಿಶ್ವವಿದ್ಯಾಲಯದ ಪರಿನಿಯಮ 14ರ ಪ್ರಕಾರ ವಿಶ್ವವಿದ್ಯಾಲಯದ ಕುಲಪತಿಗಳು ಮುಂಗಡ ಹೊಂದಾಣಿಕೆ ಮಾಡಲು ಸೂಕ್ತ ಕ್ರಮ ಕೈ ಗೊಳ್ಳಬೇಕು. ಹಣಕಾಸು ಅಧಿಕಾರಿಗಳು 5(ಜಿ)ಸೆಡ್ಯೂಲ್ ಪ್ರಕಾರ ಬಹಳ ವರ್ಷದಿಂದ ಹೊಂದಾಣಿಕೆ ಯಾಗದ ಮುಂಗಡಗಳ ಬಗ್ಗೆ ಕ್ರಮ ತೆಗೆದುಕೊಳ್ಳವ ಬಗ್ಗೆ ಕುಲಪತಿಗಳ ಗಮನಕ್ಕೆ ತರಬೇಕು ಹಿಂದಿನ ಮುಂಗಡ ಹೊಂದಾಣಿಕೆ ಬಗ್ಗೆ ಯಾವುದೇ ಕ್ರಮ ತೆಗೆದು ಕೊಳ್ಳದಿರುವುದಕ್ಕೆ ಮಹಾಲೇಖಪಾಲರು ತೀವ್ರ ಆಕ್ಷೇಪ ವ್ಯಕ ಪಡಿಸಿದ್ದು **ಅನುಬಂಧ-6ರಲ್ಲಿ** ನಮೂದಿಸಿರುವ ಮೊತ್ತ **4317027/-**ಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿ ವಿ.ವಿ..ನಿಧಿಗೆ ಜಮಾ ಮಾಡಲು ಸೂಚಿಸಿದೆ.

ಮುಂಗಡಗಳು ಹೊಂದಾಣಿಕೆಯಾಗಿರುವ ಬಗ್ಗೆ **ಪುನರ್‌ಪರಿಶೀಲನೆ** ಸಮಯದಲ್ಲಿ **ವಿಚಾರಣಾ ಪತ್ರ 1ಕ್ಕೆ** ಅನುಪಾಲನಾ ವರದಿ ಸಲ್ಲಿಸಿದ್ದು. ಒಟ್ಟು ಹೊಂದಾಣಿಕೆ ಮಾಡಬೇಕಾದ ಮೊತ್ತ **ರೂ. 4317027/-ಕ್ಕೆ** ಇಲ್ಲಿಯವರೆಗೆ **ರೂ. 4255594/-** ಹೊಂದಾಣಿಕೆಯಾಗಿದ್ದು ಇನ್ನು **ರೂ. 61433/-** ಬಾಕಿ ಉಳಿದಿರುವುದಾಗಿ ತಿಳಿಸಿರುತ್ತಾರೆ. ಹೊಂದಾಣಿಕೆಯಾಗಿರುವ ಮೊತ್ತಕ್ಕೆ ಸಂಬಂಧಪಟ್ಟ ಹೊಂದಾಣಿಕೆ ಓಚರುಗಳನ್ನು ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ಹೊಂದಾಣಿಕೆಯಾದ ಮೊತ್ತವು ನಿಯಮಾನುಸಾರವಾಗಿದೆಯೆಂದು ಪರಿಶೀಲಿಸಲು ಸಾದ್ಯವಾಗಿಲ್ಲ. ಆದ್ದರಿಂದ ಸದರಿ ಅನುಪಾಲನಾ ವರದಿಯನ್ನು ಒಪ್ಪಲಾಗುವುದಿಲ್ಲ.

## 2.1.6)ಅನುದಾನಗಳು:–

ಕನ್ನಡ ವಿಶ್ವವಿದ್ಯಾಲಯಕ್ಕೆ ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿವೆ.(ಅನುಬಂಧ–7(ಎ)ಮತ್ತು7(ಬಿ)ರಲ್ಲಿ ಲಗತ್ತಿಸಿದೆ)

**2014–15**

| ಕ್ರ ಸಂ | ವಿವರ | ಮೊತ್ತ ರೂಗಳಲ್ಲಿ |
|---|---|---|
| 1 | ರಾಜ್ಯಸರ್ಕಾರದ ಬ್ಲಾಂಕ್ ಅನುದಾನ | 46776000 |
| 2 | ವಿಶೇಷ ಘಟಕ ಯೋಜನೆ ಅನುದಾನ | 9533500 |
| 3 | ಗಿರಿಜನ ಉಪಯೋಜನೆ ಅನುದಾನ | 3689500 |
| 4 | ಡಿಪ್ಲೊಮಾ ಪಠ್ಯಕ್ರಮ(ಚಿತ್ರಕಲೆ)ಅನುದಾನ | 17500000 |
| 5 | ಕೇಂದ್ರ ರಾಜ್ಯಸರ್ಕಾರದ ರೀಸ್‌ರ್ಚ್ ಪ್ರಾಜೆಕ್ಟ್ ಅನುದಾನ | 300000 |
| 6 | ವೇತನ ಅನುದಾನ | 142060000 |
| 7 | ಇತರೆ ಸ್ವೀಕೃತಿ | 32899277 |
| | **2015–16** | |
| 1 | ರಾಜ್ಯಸರ್ಕಾರದ ಬ್ಲಾಕ್ ಅನುದಾನ | 35200000 |
| 2 | ವಿಶೇಷ ಘಟಕ ಯೋಜನೆ ಅನುದಾನ | 7000000 |
| 3 | ಗಿರಿಜನ ಉಪಯೋಜನೆ ಅನುದಾನ | 2800000 |
| 4 | ಡಿಪ್ಲೊಮಾ ಪಠ್ಯಕ್ರಮ(ಚಿತ್ರಕಲೆ)ಅನುದಾನ | 17500000 |
| 5 | ಯು.ಜಿ.ಸಿ.ಅನುದಾನ | 162950000 |
| 6 | ಕೇಂದ್ರ ರಾಜ್ಯಸರ್ಕಾರದ ರಿಸ್‌ರ್ಚ್ ಪ್ರಾಜೆಕ್ಟ್ ಅನುದಾನ | 2748499 |
| 7 | ಇತರೆ ಸ್ವೀಕೃತಿ | 14552512 |

**2014–15 ಹಾಗೂ 2015–16ನೇ** ಸಾಲಿನಲ್ಲಿ ರಾಜ್ಯ ಸರ್ಕಾರದ ಅನುದಾನ ಹಾಗೂ ಯು.ಜಿ.ಸಿ ಮತ್ತು ಇತರೇ ಫಂಡಿಂಗ್ ಏಜೆನ್ಸಿಯಿಂದ ಬಿಡುಗಡೆಯಾದ ಅನುದಾನಗಳನ್ನು ಹಾಗೂ ಹಣ ಬಳಕೆ ಪ್ರಮಾಣ ಪತ್ರ ನೀಡುತ್ತಿರುವ ಕುರಿತು.

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಯು.ಜಿ.ಸಿ.ಮತ್ತು ಇತರೆ ಫಂಡಿಂಗ್ ಏಜೆನ್ಸಿಗಳಿಂದ 2014–15 ಹಾಗೂ **2015–16ನೇ** ಸಾಲಿನಲ್ಲಿ ಬಿಡುಗಡೆಯಾದ ಅನುದಾನದ ವಿವರ ಇಂತಿದೆ.

| ಕ್ರ ಸಂ | ವಿವರ | 2014–15ಮತ್ತು 2015–16ರಲ್ಲಿ ಸ್ವೀಕೃತಿ | 2014–15ಮತ್ತು 2015–16ರಲ್ಲಿನ ವೆಚ್ಚ | 31–03–2016ಕ್ಕೆ ಅಂತ್ಯಶಿಲ್ಕು |
|---|---|---|---|---|
| 1 | ರಾಜ್ಯ ಸರ್ಕಾರ ಯು.ಜಿ.ಸಿಮತ್ತು ಇತರ ಫಂಡಿಂಗ್ ಏಜೆನ್ಸಿಗಳಿಂದ ಬಿಡುಗಡೆಯಾದ ಅನುದಾನದ ವಿವರಗಳನ್ನುವಿವರಗಳನ್ನುಅನುಬಂಧ–**8&8**(ಎ)ನಲ್ಲಿ ಲಗತ್ತಿಸಿದೆ | 495509288 | 480386657 | 97685331 |

**1)**2014–15ಮತ್ತು 2015–16ನೇ ಸಾಲಿನಲ್ಲಿ ಬಿಡುಗಡೆಯಾದ ರಾಜ್ಯ ಸರ್ಕಾರದ ಅನುದಾನಗಳ (ಎಸ್.ಸಿ.ಪಿ,ಟಿ.ಎಸ್.ಪಿ. (diploma curriculum grant development grant)ಹಣ ಬಳಕೆ ಪ್ರಮಾಣ ಪತ್ರಕ್ಕೆ ಸಂಬಂಧಸಿದಂತೆ ಯಾವ ನಿಯಮಾವಳಿಗಳನ್ನು ಅನುಸರಿಸಿ ಹಣಕಾಸು ಅಧಿಕಾರಿಗಳು ಬಳಕೆ ಪ್ರಮಾಣ ಪತ್ರ ನೀಡುತ್ತಿದ್ದಾರೆ ಈ ಕುರಿತು ಸುತ್ತೋಲೆ ನಿಯಮಗಳಿದ್ದಲ್ಲಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವುದು ಹಾಗೂ ಅನುದಾನ ಬಳಕೆಗೆ ಇರುವ ಮಾರ್ಗದರ್ಶಿಗಳನ್ನು ಹಾಜರುಪಡಿಸಲು ಸೂಚಿಸಿ ಲೆ.ಪ.ವಿ.ಪತ್ರ ಸಂಖ್ಯೆ:97ದಿನಾಂಕ:06–08–2016ರಂದು ನೀಡಿದ್ದು ಯಾವುದೇ ಮಾಹಿತಿ ನೀಡಿರುವುದಿಲ್ಲ.

**2)**ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ ಅನುದಾನ ಬಳಕೆಗೆ ಸಂಬಂಧಿಸಿದಂತೆ ಪ.ಜಾತಿ/ಪ.ಪಂಗಡ ಉಪಯೋಜನೆಗಳ ಅಧಿನಿಯಮ 2013 ರನ್ವಯ ನಿಯಮ ಎ ಮತ್ತು ಬಿ ಪ್ರಕಾರ ವೆಚ್ಚಕ್ಕೆ ಸಂಬಂಧಿಸಿದ ಅನುದಾನ ವಿನಿಯೋಗ ಮಾಡಿ ವೆಚ್ಚ ಭರಿಸಿದ್ದರ ಕುರಿತು ಲೆ.ಪ.ಗೆ ದಾಖಲೆಗಳೊಂದಿಗೆ ಮಾಹಿತಿ ನೀಡಲು ತಿಳಿಸಿ ಲೆ.ಪ.ವಿ.ಪ ಸಂಖ್ಯೆ:97ದಿನಾಂಕ:06–08–2016ರಂದು ನೀಡಲಾಗಿದ್ದು ಮಾಹಿತಿ ನೀಡಿರುವುದಿಲ್ಲ.

**3)**2014–15ಮತ್ತು2015–16ನೇ ಅವಧಿಯಲ್ಲಿ ಯು.ಜಿ.ಸಿ ಹಾಗೂ ಇತರೆ ಫಂಡಿಂಗ್ ಏಜೆನ್ಸಿಯಿಂದ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾಕ್ಕೆ ಎದುರಾಗಿ ಭರಿಸಿದ ವೆಚ್ಚ ಹಾಗೂ ಬಾಕಿ ಮೊತ್ತವನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಮರಳಿ ಫಂಡಿಂಗ್ ಏಜೆನ್ಸಿಗಳಿಗೆ ಕಳುಹಿಸಿದ ಕುರಿತು ದಾಖಲೆಗಳನ್ನು ನೀಡಿರುವುದಿಲ್ಲ.

## 2.1.7)RUSA Grants:- Rashtriya uchchatar shiksha abhiyan

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಕೌನ್ಸಿಲ್ ಬೆಂಗಳೂರು ಪತ್ರ ಸಂಖ್ಯೆ:ಕೆ.ಎಸ್.ಹೆಚ್.ಇ.ಸಿ ರೂಸಾ **ಫಂಡ್:2015-16: ದಿನಾಂಕ:23-03-2016ರಲ್ಲಿ ಕೆನರಾಬ್ಯಾಂಕ್ ಖಾತೆಸಂಖ್ಯೆ:0537132000006 ರೂ:99000000/-ಕೆ.ಟಿ.ಪಿ.ಪಿ.ನಿಯಮಕ್ಕೆ** ಬದ್ಧರಾಗಿ ಕಾರ್ಯನಿರ್ವಹಿಸಿಸುವ ಷರತ್ತಿಗೊಳಪಟ್ಟು ಅನುದಾನ ಬಿಡುಗಡೆ ಮಾಡಿದ್ದು ಅನುದಾನ ಉದ್ದೇಶ ಈ ಕೆಳಗಿನಂತಿದೆ.

Rashtriya uchchatar shiksha abhiyan (rusa) is a centrally sponsored scheme launched in 2013 aims at providing strategic funding to eligible state higher educational institutions, the central funding in the ratio of 65:35 for general category and 90:10 for special category states.

## Objectives:-

Improve the overall quality of state institutions by ensuring confirmity to prescribed norms and standards and adopt accreditation as a mandatory quality assurance frame work.

ushar transformative reforms in the state higher education system by creating a facilitating institutional structure for planning and monitoring at the state level.promoting autonomy in state universities improving governance in institutions.

Ensure reforms in the affiliation academic and examination system, ensure adequate availability of quality faculty in all higher educational institutions and ensure capacity building at all levels of employment. create an enabling atmosphere in the higher educational institutions to devote them selves to research and innovations.

Expand the institutional base by creating additionl capacity in existing institutions and establish in new institutions in order to achieve enrolement targets correct regional imbalances in access to higher educations by setting up institutions in reserved and unrserved areas.

Improve equity higher educations by providing adequate opportunities of higher educations to sc/st and socially and educationally backward classes, promote inclusion of women, minorities and differentlyabled persons.

ಈ ಅನುದಾನವನ್ನು ಸರ್ಕಾರದಿಂದ ನೀಡಲಾದ ಷರತ್ತು ಮತ್ತು ನಿಬಂಧನೆಗಳಿನುಸಾರ ವೆಚ್ಚ ನಿರ್ವಹಿಸುವುದು.

## 2.1.8)ಸಾಲಗಳು:-

**2014-15 ಮತ್ತು 2015-16ನೇ ವರ್ಷಗಳ** ಲೆಕ್ಕ ತನಿಖೆ ಸಮಯದಲ್ಲಿ ಸಾಲಗಳ ರಿಜಿಸ್ಟರ್ ಅನ್ನು ಪರಿಶೀಲಿಸಲಾಗಿ ಸಂಪೂರ್ಣಸಾಲ ತೀರುವಳಿ ಆಗಿದ್ದು. ಪ್ರಸ್ತುತ ವರ್ಷದಲ್ಲಿ ಯಾವುದೇ ಸಾಲ ಪಡೆದಿರುವುದಿಲ್ಲ,ಆದ್ದರಿಂದ ಸಾಲದ ವಹಿವಾಟು ಇರುವುದಿಲ್ಲ.

# 2 . 2

# ಪರೀಕ್ಷಾ ವಿಭಾಗ ಪ್ರಮುಖ ನ್ಯೂನ್ಯತೆಗಳು

## 2.2.1)ಫೀಸು ಕುರಿತು:-(Fees)

**2014-15ನೇ** ಸಾಲಿನಲ್ಲಿ ಕನ್ನಡ ವಿ.ವಿ.ಯಲ್ಲಿ ವಿವಿಧ ಕೋರ್ಸ್‌ಗಳಿಗೆ **ಒಟ್ಟು 223** ವಿದ್ಯಾರ್ಥಿಗಳು ನೊಂದಣಿಯಾಗಿದ್ದು ವಿವಿಧ ಸಮೂಹದ ವಿದ್ಯಾರ್ಥಿಗಳಿಂದ ವಿ.ವಿ.ಗೆ ಬರಬೇಕಾದ ಫೀಜಿನ **ಬೇಡಿಕೆ:1560285/-**ಎಂದು ನೀಡಿದ್ದು. ಇದಕ್ಕೆ ಎದುರಾಗಿ ವಸೂಲಿಯಾದ ಮೊತ್ತ **ರೂ:4809119/-**ಎಂದು ಮಾಹಿತಿ ನೀಡಿದ್ದು ಸಮರ್ಪಕವಾಗಿರುವುದಿಲ್ಲ.ಮುಂದುವರಿದಂತೆ ವಸೂಲಿ ಮೊತ್ತಕ್ಕೆ ಸಂಬಂಧಿಸಿದಂತೆ ವಿವಿಧ ಕೋರ್ಸ್‌ಗಳ ವಿದ್ಯಾರ್ಥಿಗಳಿಂದ ವಸೂಲಾದ ಫೀಜಿನ ವಿವರ ನೀಡಿರುವುದಿಲ್ಲ.

**2015-16ನೇ** ಸಾಲಿನಲ್ಲಿ ಸದ್ರಿ ವಿ.ವಿ.ಯಲ್ಲಿ ವಿವಿಧ ಕೋರ್ಸ್‌ಗಳಿಗೆ 250 ವಿದ್ಯಾರ್ಥಿಗಳು ನೋದಣಿಯಾಗಿದ್ದು ವಿವಿಧ ಸಮೂಹದ ವಿದ್ಯಾರ್ಥಿಗಳಿಂದ ವಿ.ವಿ.ಗೆ ಬರಬೇಕಾದ ಫೀಜಿನ ಬೇಡಿಕೆ **ರೂ:1723490/-** ಇದ್ದು ಇದಕ್ಕೆ ಎದುರಾಗಿ **ರೂ:5692071/-**ವಸೂಲಿಯಾಗಿರುವ ಮಾಹಿತಿ ನೀಡಿರುತ್ತಾರೆ.ಬೇಡಿಕೆಗಿಂತ ವಸೂಲಿ ಮೊತ್ತ ಹೆಚ್ಚಾಗಿರುವುದರಿಂದ ನೀಡಿರುವ ಮಾಹಿತಿಯು ಅಸಮರ್ಪಕವಾಗಿರುತ್ತದೆ. ಬೇಡಿಕೆಗೆ ಅನುಗುಣವಾಗಿ ವಿದ್ಯಾರ್ಥಿಗಳ ಸಂಖ್ಯೆಗಳನ್ನು ತಿಳಿಸದಿರುವ ಹಿನ್ನಲೆಯಲ್ಲಿ ಸ್ವೀಕೃತವಾದ ಮೊತ್ತ ಬೇಡಿಕೆಗೆ ಅನುಗುಣವಾಗಿದೆ ಎಂದು ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಿಲ್ಲ.ಆದ್ದರಿಂದ ಲೆ.ಪ.ಗೆ ಸೂಕ್ತವಾದ ಹಾಗೂ ಸಮರ್ಪಕವಾದ ಮಾಹಿತಿಯನ್ನು ಹಾಜರುಪಡಿಸುವವರೆಗೆ **2014-15ಮತ್ತು2015-16ರಲ್ಲಿ** ವಸೂಲಿ ಫೀಜಿನ ಒಟ್ಟು ಮೊತ್ತ **ರೂ:10501190/-**ನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ-8(ಎ)ಮತ್ತು8(ಬಿ)ರಲ್ಲಿ** ವರದಿಗೆ ಲಗತ್ತಿಸಿದೆ.

## 2.2.2)ಲೆಕ್ಕ ಪರಿಶೋಧನಾ ಶುಲ್ಕದ ಬಗ್ಗೆ:-

ಕನ್ನಡ ವಿಶ್ವವಿದ್ಯಾಲಯದ **2014-15ಮತ್ತು 2015-16ನೇ ಸಾಲಿನ** ಲೆಕ್ಕ ಪರಿಶೋಧನೆಯನ್ನು ಈ **ಕೆಳಗಿನಂತೆ 4** ಜನ ತನಿಖಾ ಸಿಬ್ಬಂದಿಯಿಂದ **ದಿನಾಂಕ:11-04-2016ರಿಂದ06-08-2016ರವರೆಗೆ ಒಟ್ಟು 349** ಮಾನವದಿನಗಳನ್ನು ಉಪಯೋಗಿಸಲಾಗಿದೆ. **ಆಪೈಕಿ 2010-2011ರಿಂದ2012-13ನೇ ಸಾಲಿನ ವಿಶೇಷ ಲೆಕ್ಕ ತನಿಖೆಗೆ 40 ಮಾನವದಿನಗಳು** ಹಾಗೂ ಉಳಿದ **309** ಮಾನವದಿನಗಳನ್ನು 2014-2015ಮತ್ತು2015-16ನೇ ಸಾಲಿನ ಲೆಕ್ಕ ತನಿಖೆಗೆ ಉಪಯೋಗಿಸಿಲಾಗಿದೆ.

| ಕ್ರ ಸಂ | ಸಿಬ್ಬಂದಿ ವಿವರಗಳು | ಮಾನವ ದಿನಗಳು | | | | | ಒಟ್ಟು ಮಾನವ ದಿನಗಳು | ಪ್ರಯಾಣ ಭತ್ಯೆ | | | | | | |
|---|---|---|---|---|---|---|---|---|---|---|---|---|---|---|
| | | ಏಪ್ರಿಲ್ 2016 | ಮೇ2016 | ಜೂನ್ 2016 | ಜುಲೈ 2016 | ಆಗಸ್ಟ್ 2016 | | ವೇತನ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಒಟ್ಟು |
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** | **15** |
| 1 | ಲೆಕ್ಕ ಪರಿಶೋಧನಾಧಿಕಾರಿ | 16 | 22 | 23 | 24 | 6 | 91 | 89817 | 3450 | 4258 | 4400 | 4440 | 1070 | 107335 |
| 2 | ಲೆಕ್ಕ ಪರಿಶೋಧಕರು | 14 | 8 | 23 | 24 | 6 | 75 | 57000 | 3450 | 1411 | 4400 | 4941 | 1154 | 72356 |
| 3 | ಲೆಕ್ಕ ಪರಿಶೋಧಕರು | 16 | 24 | 23 | 24 | 6 | 93 | 53289 | 2910 | 3755 | 3755 | 3810 | 905 | 68424 |
| 4 | ಲೆಕ್ಕ ಪರಿಶೋಧಕರು | 16 | 23 | 21 | 24 | 6 | 90 | 54270 | 2910 | 3620 | 3556 | 3810 | 912 | 69078 |
| | **349 ಮಾನವದಿನಗಳು** | **62** | **77** | **90** | **96** | **24** | **349** | **254376** | **12720** | **12944** | **16111** | **17001** | **4041** | **317193** |

**4ಜನ ನಿಯೋಜಿತ ಸಿಬ್ಬಂಧಿ ಒಟ್ಟು 32 ಮಾನವದಿನಗಳನ್ನು ಉಪಯೋಗಿಸಿದ್ದಾರೆ ಸದರಿ ಅವಧಿಯಲ್ಲಿ ತನಿಖಾ ಸಿಬ್ಬಂಧಿ ಪಡೆದ ವೇತನ ಮೊತ್ತ ಮತ್ತು ಪಡೆದ ಪ್ರಮಾಣಭತ್ಯೆಗಳನ್ನು ತನಿಖಾ ಶುಲ್ಕವಾಗಿ ಲೆಕ್ಕಚಾರ ಮಾಡಲಾಗಿದೆ:-**

| ಕ್ರ ಸಂ | ಸಿಬ್ಬಂಧಿ ವಿವರ | ಮಾನವದಿನಗಳು | | ವೇತನ | ಪ್ರಯಾಣಭತ್ಯೆ | ಒಟ್ಟು |
|---|---|---|---|---|---|---|
| | ನಿಯೋಜಿತ ಸಿಬ್ಬಂದಿ | ಜುಲೈ | ಆಗಸ್ಟ್ | | | |
| 1 | ಪಿ.ಡಿ.ಕುಲಕರ್ಣಿ | 2 | 6 | 10160 | 3400 | 13560 |
| 2 | ಎಂ.ಜಿ.ಕುಲಕರ್ಣಿ | 2 | 6 | 4827 | 2680 | 7507 |
| 3 | ಎಂ.ಎಸ್.ಸಬರದ | 2 | 6 | 4267 | 2680 | 6947 |
| 4 | ಬಿ.ವೈ.ಕಾತರಕಿ | 2 | 6 | 4067 | 2520 | 6587 |
| | | 8 | 24 | 23321 | 11280 | 34601 |

**ಘೋಷ್ವಾರೆ:-**

| | | |
|---|---|---|
| 1 | ಜಂಟಿ ನಿರ್ದೇಶಕರು ಸ್ಥಲೆಪವ ಬಳ್ಳಾರಿ ತನಿಖಾ ತಂಡ ಲೆಕ್ಕ ಪರಿಶೋಧನಾ ಶುಲ | **ರೂ: 317193/-** |
| 2 | ಅಪರ ನಿರ್ದೇಶಕರು ಪ್ರಾಂತೀಯ ಕಛೇರಿ ಗುಲ್ಬರ್ಗ ದಿಂದ ನಿಯೋಜಿತ ಸಿಬ್ಬಂದಿ ಲೆಕ್ಕ ಪರಿಶೋಧನಾ ಶುಲ್ಕ | **ರೂ: 34601/-** |
| | | **ರೂ. 351794/-** |

ಸದರಿ ಮೊತ್ತ **ರೂ:351794/-**ಗಳನ್ನು ಲೆಕ್ಕ **ಶೀರ್ಷಿಕೆ 0070-60-110-0-01**ಗೆ ಸಂದಾಯ ಮಾಡಲು ಸೂಚಿಸಿದೆ.

# 2.4

# ಬೋಧಕ/ಬೋಧಕೇತರ ಸಿಬ್ಬಂದಿ ಮತ್ತು ನಿವೃತ್ತಿ ವೇತನದಲ್ಲಿ ಅನಿಯಮಿತ ವೇತನ ನಿಗದಿ ಮತ್ತು ವಿಶ್ವವಿದ್ಯಾಲಯಕ್ಕೆ ಆಗುತ್ತಿರುವ ಆರ್ಥಿಕ ಹಾನಿ ಕುರಿತು

## 2.4.1)ಕನ್ನಡ ವಿಶ್ವವಿದ್ಯಾಲಯದ ಸರ್ಕಾರದಿಂದ ಮಂಜೂರಾದ ಸಿ ಅಂಡ್ ಆರ್ ಒಟ್ಟು ಹುದ್ದೆಗಳ ಸಂಖ್ಯೆ ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ನೀಡಿರುವುದು ಸಿ ಅಂಡ್ ಆರ್ 03-12-1993ರಿಂದ ಪರಿಷ್ಕೃತವಾಗದಿರುವುದು:-

**2014-15ಮತ್ತು2015-16** ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮುಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ,ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ, ಹಾಗೂ ಖಾಲಿ ಇರುವ ಹುದ್ದೆಗಳ ವಿವರ ನೀಡಲು ವಿಚಾರಣಾ **ಪತ್ರ ಸಂಖ್ಯೆ:43/2016-17: ದಿನಾಂಕ:30-05-2016**ರಲ್ಲಿ ನೀಡಿದ್ದು ಅದಕ್ಕೆ ವಿಶ್ವವಿದ್ಯಾಲಯವು **ಪತ್ರ ಸಂಖ್ಯೆ:ಕವಿಹಂ:ಹವಿ:2016:17: ದಿನಾಂಕ:16-06-2016**ರಲ್ಲಿ ವಿವರ ನೀಡಿದ್ದಾರೆ.

ಸರ್ಕಾರದ ಅಧೀನ ಕಾರ್ಯದರ್ಶಿ ಶಿಕ್ಷಣ ಇಲಾಖೆ ವಿಧಾನಸೌಧ ಬೆಂಗಳೂರು ಇವರ ಕಛೇರಿ ಪತ್ರ **ಸಂಖ್ಯೆ: ಇಡಿ. 69:ಯು.ಎನ್.ಐ:93:3/12-12-93**ರ ಪತ್ರದಲ್ಲಿ ಕುಲಾಧಿಪತಿಗಳಾದ ಮುಖ್ಯ ಮಂತ್ರಿಗಳು ಆಡಳಿತಕ್ಕೆ ಸಂಬಂಧಿಸಿದ ಪರಿನಿಯಮ ಅನುಮೋದಿಸುತ್ತಾರೆಂದು ತಿಳಿಸಿ ಕಳುಹಿಸಿದ ಪ್ರತಿಯನ್ನು ನೀಡಿದ್ದಾರೆ. **31-03-2016**ಕ್ಕೆ ಭೋಧಕ ಸಿಬ್ಬಂದಿಯ ಮಂಜೂರಾದ ಹುದ್ದೆ, ಭರ್ತಿ ಮಾಡಿದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡತಿವೆ.

| ಕ್ರ ಸಂ | ವಿವರ | ಮಂಜೂರಾದ ಹುದ್ದೆ | ಭರ್ತಿ ಹುದ್ದೆ | ಖಾಲಿ ಹುದ್ದೆ | ಹುದ್ದೆ |
|---|---|---|---|---|---|
| 1 | ಪ್ರಾಧ್ಯಾಪಕರು | 9 | 02 | 7 | - |
| 2 | ಸಹಪ್ರಾಧ್ಯಾಪಕರು | 21 | 16 | 5 | - |
| 3 | ಸಹಾಯಕ ಪ್ರಾಧ್ಯಾಪಕರು | 43 | 38 | 5 | - |
| | **ಒಟ್ಟು** | **73** | **56** | **17** | - |

## ಬೋಧಕೇತರ ಸಿಬ್ಬಂಧಿಗಳು:- 31-03-2016:-

| ಕ್ರ ಸಂ | ವಿವರ | ಮಂಜೂರಾದ ಹುದ್ದೆಗಳು | ಭರ್ತಿ ಯಾಗಿರುವ ಹುದ್ದೆ | ರಿಕ್ತ ವಿರುವ ಹುದ್ದೆಗಳು |
|---|---|---|---|---|
| 1 | ಎ.ವೃಂದ | 19 | 16 | 03 |
| 2 | ಬಿ.ವೃಂದ | 13 | 13+3 | - |
| 3 | ಸಿ.ವೃಂದ | 70 | 65+3 | - |
| 4 | ಡಿ.ವೃಂದ | 92 | 75 | 17 |
| | | **194** | **169+6** | **25** |

**ವಿಶ್ವವಿದ್ಯಾಲಯದ ಸಿ ಅಂಡ್ ಆರ್ 03-12-1993ರಲ್ಲಿ ಸರ್ಕಾರದಿಂದ** ಅನುಮೋದನೆಯಾಗಿದ್ದು ವಿಶ್ವವಿದ್ಯಾಲಯವು ಸಿ ಅಂಡ್ ಆರ್ ಪ್ರತಿ ಮೂರುವರ್ಷಗಳಿಗೊಮ್ಮೆ ಪರಿಷ್ಕೃತ ಮಾಡಬೇಕಾಗಿದ್ದು ಮಹಾಲೇಖಪಾಲರು **2012-13ರಿಂದ2014-15ನೇ** ಸಾಲಿನ ಲೆಕ್ಕ ತನಿಖಾವರದಿ **ಸೆಕ್ಷನ್:ಬಿ.ಕಂಡಿಕೆ 13ರಲ್ಲಿ** ತೀವ್ರವಾಗಿ ಆಕ್ಷೇಪಿಸಿದ್ದು ಪರಿಷ್ಕೃತ ಸಿ ಆಂಡ್ ಆರ್ ಸರ್ಕಾರದಿಂದ ಮಂಜೂರಿಸಬೇಕಾಗಿದ್ದು ಹಳೇ ಸಿ ಆಂಡ್ ಆರ್‌ನ್ನು 22ವರ್ಷದಿಂದ ಪರಿಷ್ಕೃತ ಮಾಡದೇ ಇರುವುದು ತುಂಬಾ ವಿಷಾದಕರ ಸಂಗತಿಯಾಗಿದೆ.ಆದರೆ ವಿಶ್ವವಿದ್ಯಾಲಯವು ಭೋಧಕೇತರ ಸಿಬ್ಬಂದಿ ತಾಂತ್ರಿಕ ಸಿಬ್ಬಂದಿ ಹೊಸ ಹುದ್ದೆಗಳನ್ನು ಸಿ ಆಂಡ್ ಆರ್ ನಲ್ಲಿಲ್ಲದೇ ಮಂಜೂರುಮಾಡುವುದು ಕೆಲವು ಹುದ್ದೆಗಳನ್ನು ಡೌನ್ ಗ್ರೇಡ್ ಮಾಡುವುದು(ತೋಟಗಾರಿಕೆ ಅಧಿಕಾರಿ) ಕಂಪ್ಯೂಟರ್ ಆಪರೇಟರ್‌ನಿಂದ ಸಹಾಯಕ ನಿರ್ದೇಶಕರು(ಕಂಪ್ಯೂಟರ್) ಹುದ್ದೆ ಮಂಜೂರಾಗದೇ ಹುದ್ದೆಯನ್ನು ವಿಶ್ವವಿದ್ಯಾಲಯ ಮಂಜೂರುಮಾಡಿ ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿ ಆರ್ಥಿಕ ಹೊರೆ ಬೀಳುವುದನ್ನು ತಪ್ಪಿಸಬಹುದಾಗಿತ್ತು. ಸಿ ಆಂಡ್ ಆರ್ ವಿನಾಕಾರಣ ಪರಿಷ್ಕರಿಸದೇ ಇರುವುದನ್ನು ತೀವ್ರವಾಗಿ ಆಕ್ಷೇಪಿಸಿದ್ದಾರೆ. ಈ ಬಗ್ಗೆ ಲೆಕ್ಕ ತನಿಖಾ ವಿಚಾರಣೆ ಪತ್ರ ಸಂಖ್ಯೆ:70/ದಿನಾಂಕ:15-07-2016ರಲ್ಲಿ ಲೆಕ್ಕ ತನಿಖಾ ವರದಿಯಲ್ಲಿರುವ ಕಂಡಿಕೆಗಳಿಗೆ ಅನುಪಾಲನಾ ವರದಿ ಕಳುಹಿಸಿದ ವಿವರ ನೀಡಲು ವಿಚಾರಣೆ ಪತ್ರ ನೀಡಿದ್ದು ಪಾಲನಾವರದಿ ನೀಡಿರುವುದಿಲ್ಲ.

ಹಳೇ ಸಿ ಆಂಡ್ ಆರ್ ಪರಿಷ್ಕರಿಸದೆ ಹೊಸ ಹುದ್ದೆಗಳನ್ನು ವಿಶ್ವವಿದ್ಯಾಲಯವು ಹುದ್ದೆಗಳನ್ನು ಹೊಸದಾಗಿ ಸೃಜಿಸುವುದು ಹುದ್ದೆಗಳನ್ನು ಡೌನ್ ಗ್ರೇಡ್ ಮಾಡುವುದು ಇವೆಲ್ಲಾ ತನಿಖೆಯಲ್ಲಿ ಒಪ್ಪಲು ಸಾಧ್ಯವಾಗಿಲ್ಲ, ಕಾರಣ ವಿಶ್ವವಿದ್ಯಾಲಯದ ಆಡಳಿತ ವರ್ಗ ಪ್ರಥಮ ಆದ್ಯತೆ ನೀಡಿ ಸಿ ಆಂಡ್ ಆರ್ ಪರಿಷ್ಕರಿಸಿ ಎಲ್ಲಾ ಹುದ್ದೆಗಳನ್ನು ಸರ್ಕಾರದಿಂದ ಅನುಮೋದನೆ ಪಡೆದು ಕಾನೂನಿನ ಚೌಕಟ್ಟಿನಲ್ಲಿ ಹುದ್ದೆಗಳನ್ನು ಭರ್ತಿ ಮಾಡುವುದು, ಬಡ್ತಿ ನೀಡುವುದು ಸಾಧ್ಯವಾದಷ್ಟು ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗದಂತೆ ಎಚ್ಚರ ವಹಿಸಲು ಸೂಚಿಸಿದೆ.

**2.4.2)ಯು.ಜಿ.ಸಿ.1996ರ ಮಾರ್ಗಸೂಚಿಗೆ ವಿರುದ್ಧವಾಗಿ ಪ್ರವಾಚಕರ (Reader) ಹುದ್ದೆಗೆ ನೇಮಕ ಮಾಡಿಕೊಂಡಿರುವ ಬಗ್ಗೆ:**

**(ಡಾ.ಕೇಶವ ಪ್ರಸಾದ ಪ್ರಾಧ್ಯಾಪಕರು, ಡಾ.ಸುಬ್ಬಣ್ಣ ರೈ ಪ್ರಾಧ್ಯಾಪಕರು, ಡಾ. F.T,ಹಳ್ಳಿಕೇರಿ ಪ್ರಾಧ್ಯಾಪಕರು, ಡಾ.ವಿರೇಶ ಬಡಿಗೇರ ಪ್ರಾಧ್ಯಾಪಕರು, ಡಾ.ಚಂದ್ರಪೂಜಾರಿಪ್ರಾಧ್ಯಾಪಕರು,)**

**1996ರ ಯು.ಜಿ.ಸಿ. ಮಾರ್ಗಸೂಚಿ** ಪ್ರಕಾರ **ಪ್ರವಾಚಕರ** ಹುದ್ದೆಗೆ ನೇಮಕಾತಿ ಮಾಡಿಕೊಳ್ಳ ಬೇಕಾದರೆ **Phd ಪಡೆದ ಅಭ್ಯರ್ಥಿಗಳು 9 ವರ್ಷ ಅಧ್ಯಾಪಕರ ಹುದ್ದೆಯಲ್ಲಿ** ಸೇವೆ ಸಲ್ಲಿಸಬೇಕಾಗಿರುತ್ತದೆ (ಅಧ್ಯಾಪಕರ ಹುದ್ದೆಯಲ್ಲಿ -4 ವರ್ಷ, ಅಧ್ಯಾಪಕರು (ಹಿರಿಯ ವೇತನ ಶ್ರೇಣಿ) -5 ವರ್ಷ). [illegible]

ಆದರೆ ಮೇಲೆ ಸೂಚಿಸಿದ Phd ಹೊಂದಿರುವ ಅಭ್ಯರ್ಥಿಗಳಿಗೆ 9 ವರ್ಷಗಳು ಅಧ್ಯಾಪಕರರ ಹುದ್ದೆಯಲ್ಲಿ ಸೇವಾ ಅನುಭವ ಇಲ್ಲದಿದ್ದರೂ ಕೂಡ **ದಿನಾಂಕ 14-08-1997** ರಂದು ಪ್ರವಾಚಕ ಹುದ್ದೆಗೆ ನೇರ ನೇಮಕಾತಿ ಮಾಡಿ ಕೊಳ್ಳಲಾಗಿದೆ. ಇದು 1996ರ ಯು.ಜಿ.ಸಿ. ಮಾರ್ಗಸೂಚಿಗೆ ವಿರುದ್ಧವಾಗಿದೆ. ಈ ಭೋಧಕ ಸಿಬ್ಬಂದಿಗಳನ್ನು **ದಿನಾಂಕ 14-08-1997** ರಂದು ಪ್ರವಾಚಕ ಹುದ್ದೆಗೆ ನೇರ ನೇಮಕ ಮಾಡಿಕೊಂಡು **ದಿ:13-08-2005** ರಂದು **ಪ್ರಾಧ್ಯಾಪಕ ಹುದ್ದೆಗೆ** ಮುಬಂಡ್ತಿ ನೀಡಲಾಗಿದೆ.

ಈ ಬೋಧಕ ಸಿಬ್ಬಂದಿಗಳು ದಿನಾಂಕ 14-08-1997 ಕ್ಕೆ ಅಧ್ಯಾಪಕರಾಗಿ ನೇಮಕಾತಿ ಹೊಂದಲು ಅರ್ಹರಿದ್ದು **ಆಗಸ್ಟ 2001ಕ್ಕೆ ಅಧ್ಯಾಪಕ (ಹಿರಿಯ ವೇತನ ಶ್ರೇಣಿ)** ಗೆ ಅರ್ಹರಾಗುತ್ತಾರೆ. ಇವರು **ಆಗಸ್ಟ 2006ಕ್ಕೆ** ಪ್ರವಾಚಕ ಹುದ್ದೆಗೆ ಅರ್ಹರಿದ್ದರೂ ಕೂಡ **ಸರ್ಕಾರದ ಆದೇಶ ಸಂಖ್ಯೆ ED37 UNE 2009 Bangalore ದಿ:24-12-2009**ರನ್ವಯ **CAS ಮುಂಬಡ್ತಿ ಕೂಡ ಇತರೆ ಭತ್ಯೆ (Other Allowance)** ಆಗಿರುವುದರಿಂದ ಈ ಮುಂಬಡ್ತಿಯನ್ನು **24-12-2009**ಕ್ಕೆ ನೀಡಬೇಕಾಗುತ್ತದೆ. ಆದರೆ 2006ರ ವೇತನ ಶ್ರೇಣಿ ನಿಯಮಗಳನ್ವಯ ದಿನಾಂಕ 01-01-2006ಕ್ಕೆ ಅಧ್ಯಾಪಕರು (ಆಯ್ಕೆ ಕಾಲಿಕೆ ವೇತನ ಶ್ರೇಣಿ)((12000-18300)ಯಲ್ಲಿ 3 ವರ್ಷ ಪೂರೈಸಿದ್ದರೇ ಮಾತ್ರ ಪ್ರವಾಚಕ ಹುದ್ದೆಗೆ ಮುಂಬಡ್ತಿ ನೀಡ ಬಹುದಾಗಿರುತ್ತದೆ. ಆದರೆ ಈ ಅದ್ಯಾಪಕರು ಆಯ್ಕೆಕಾಲಿಕೆ ವೇತನ ಶ್ರೇಣಿಯನ್ನು ದಿನಾಂಕ 01-01-2006ಕ್ಕೆ ಹೊಂದಿರುವುದಿಲ್ಲ. ಆದ್ದರಿಂದ **ದಿ:01-01-2006** ಕ್ಕೆ ನೂತನ ವೇತನ ಶ್ರೇಣಿಯಲ್ಲಿ **(15600-39000+AGP 7000) ರೂ. 28020/-** ಕ್ಕೆ ವೇತನ ನಿಗದಿ ಮಾಡಿ, ದಿನಾಂಕ **24-12-2009**ಕ್ಕೆ ಇದೇ ವೇತನ ಶ್ರೇಣಿಯಲ್ಲಿ **8000 AGP** ನೀಡಿ **ರೂ. 32670/-**ಕ್ಕೆ ವೇತನ ನಿಗದಿ ಮಾಡಬೇಕಾಗುತ್ತದೆ.

ಅಲ್ಲಿಂದ 3 ವರ್ಷಕ್ಕೆ ಅಂದರೆ **ದಿನಾಂಕ 24-12-2012** ಕ್ಕೆ ಸದರಿಯವರಿಗೆ **ಸಹ ಪ್ರಾಧ್ಯಾಪಕರ ಹುದ್ದೆಗೆ (37400-67000+9000 AGP)** ಮುಂಬಡ್ತಿ ನೀಡಿ **ರೂ. 46400/-** ವೇತನ ನಿಗದಿ ಮಾಡಬೇಕಾಗುತ್ತದೆ. ಅಲ್ಲಿಂದ ಮತ್ತೆ 3 ವರ್ಷಕ್ಕೆ ಅಂದರೆ **ದಿನಾಂಕ 24-12-2015**ಕ್ಕೆ **AGP 10000** ರ ಪ್ರಾಧ್ಯಾಪಕರ ಹುದ್ದೆಗೆ ಮುಂಬಡ್ತಿ ನೀಡಬೇಕಾಗುತ್ತದೆ. ಆದರೆ ಈ ಭೋದಕ ಸಿಬ್ಬಂದಿಗೆ ದಿನಾಂಕ 13-8-2005 ರಲ್ಲಿಯೇ ಪ್ರಾಧ್ಯಾಪಕರ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ.

ಈ ರೀತಿ ಪ್ರವಾಚಕರ ಹುದ್ದೆಗೆ ನೇರ ನೇಮಕಾತಿ ಮಾಡಿಕೊಂಡಿರುವುವದು ಹಾಗೂ ಮುಂಬಡ್ತಿ ನೀಡಿರುವುದು 1996 ಯುಜಿಸಿ ಹಾಗೂ 2006 ಯುಜಿಸಿ ಮಾರ್ಗಸೂಚಿ ಗಳಿಗೆ ವಿರುದ್ದವಾಗಿದೆ. ಈ ಭೋಧಕ ಸಿಬ್ಬಂದಿಗಳಿಗೆ ನಿಗದಿ ಪಡಿಸಬೇಕಾಗಿದ್ದ ವೇತನ ಹಾಗೂ ವೇತನ ಶ್ರೇಣಿಯನ್ನು **ಅನುಬಂಧ 9ರಲ್ಲಿ** ಈ ವರದಿಗೆ ಲಗತ್ತಿಸಿದೆ ಈ ಭೋದಕ ಸಿಬ್ಬಂದಿಗಳಿಗೆ ತಪ್ಪಾದ ನೇಮಕಾತಿ ಹಾಗೂ ಮುಂಬಡ್ತಿಯಿಂದಾಗಿ ಲೆಕ್ಕ ಪರಿಶೋಧನಾ ಅವಧಿಯಲ್ಲಿಯೇ **(ಅನುಬಂಧ 9ಎ)** ಯಲ್ಲಿ ಸೂಚಿಸಿದಂತೆ **ರೂ. 4617035/-** ಗಳು ಹೆಚ್ಚು ವರಿ ವೇತನ ಮತ್ತು ಭತ್ಯೆ ಪಾವತಿಸಲಾಗಿದೆ.

**ವಿವರ ಈ ಕೆಳಗಿನಂತಿದೆ.**

| ಕ್ರಸ | ಭೋದಕ ಸಿಬ್ಬಂದಿ ವಿವರ | ಹೆಚ್ಚುವರಿ ಪಾವತಿ |
|---|---|---|
| 1 | ಡಾ.ಕೇಶವ ಪ್ರಸಾದ್ ಪ್ರಾಧ್ಯಾಪಕರು, | 923407 |
| 2 | ಡಾ.ಸುಬ್ಬಣ್ಣ ರೈ ಪ್ರಾಧ್ಯಾಪಕರು, | 923407 |
| 3 | ಡಾ. F.T,ಹಳ್ಳಿಕೇರಿ ಪ್ರಾಧ್ಯಾಪಕರು, | 923407 |
| 4 | ಡಾ.ವಿರೇಶ ಬಡಿಗೇರ ಪ್ರಾಧ್ಯಾಪಕರು | 923407 |
| 5 | ಡಾ.ಚಂದ್ರಪೂಜಾರಿ ಪ್ರಾಧ್ಯಾಪಕರು | 923407 |
| | **ಒಟ್ಟು** | **4617035** |

ಈ ಮೇಲಿನ ಲೆಕ್ಕಚಾರವು Approximate ಹಾಗೂ Probable ಆಗಿದ್ದು ಈ ಮೇಲೆ ಸೂಚಿಸಿದಂತೆ ಸದರಿ ಅಧ್ಯಾಪಕರ ನೇಮಕಾತಿ ಹಾಗೂ ಮುಂಬಡ್ತಿಯನ್ನು ಯು.ಜಿ.ಸಿ. ಮಾರ್ಗಸೂಚಿಯನುಸಾರ ಪರಿಶೀಲಿಸಿ ಹೆಚ್ಚುವರಿಯಾಗಿ ಪಾವತಿಸಿರುವ ವೇತನ ಮತ್ತು ಭತ್ಯೆಗಳನ್ನು ಲೆಕ್ಕ ಹಾಕಿ, ವಸೂಲಿ ಮಾಡಿ ಲೆಕ್ಕ ಪರಿಶೋಧನೆಗೆ ಅನುಸರಣೆ ಸಲ್ಲಿಸಲು ಸೂಚಿ ಸಿದೆ. ಇದೇ ರೀತಿ ಪ್ರಕರಣಗಳೇನಾದರು ವಿಶ್ವ ವಿದ್ಯಾಲಯದಲ್ಲಿದ್ದಲ್ಲಿ ಅವುಗಳನ್ನು ಸಹ ಮೇಲೆ ಸೂಚಿಸಿದಂತೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಿದೆ.

ಈ ಭೋದಕ ಸಿಬ್ಬಂದಿಗಳ ನಿಯಮಬಾಹಿರ ನೇಮಕಾತಿಯ ಬಗ್ಗೆ ಈಗಾಗಲೇ ಈ ಕಛೇರಿಯಿಂದ ಕೈಗೊಂಡ **2001-02 ನೇ** ಸಾಲಿನ ಲೆಕ್ಕ ಪರಿಶೋದನಾ ವರದಿಯ **ಕಂಡಿಕೆ 102 ಅನುಬಂಧ 28** ರಲ್ಲಿ ಹಾಗೂ **ಅದೇ ರೀತಿ 2002-03**ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ **ಕಂಡಿಕೆ ಸಂಖ್ಯೆ 36 ಅನುಬಂಧ 7** ರಲ್ಲಿ ವಿವರವಾಗಿ ತಿಳಿಸಿದ್ದರೂ ಕೂಡ ಯಾವುದೇ ಕ್ರಮ ಕೈ ಗೊಳ್ಳದೇ ಈ ಭೋದಕ ಸಿಬ್ಬಂದಿಗಳನ್ನು ಮುಂದುವರೆಸಲಾಗಿದೆ.

## 2.4.3)ಶ್ರೀ.ಕೆ. ಶ್ರೀನಿವಾಸಲು ಕಿರಿಯ ಅಭಿಯಂತರರು(ವಿದ್ಯುತ್)ಇವರಿಗೆ ಸಹಾಯಕ ಅಭಿಯಂತರರು (ವಿದ್ಯುತ್) ಮುಂಬಡ್ತಿ ನೀಡಲು ಅರ್ಹತೆ ಇಲ್ಲದಿದ್ದರು ಮುಂಬಡ್ತಿ ನೀಡಿರುವುದು:–

ಶ್ರೀ. ಕೆ.ಶ್ರೀನಿವಾಸಲು ಕಿರಿಯ ಅಭಿಯಂತರರು(ವಿದ್ಯುತ್)ಇವರ ಸೇವಾ ಪುಸ್ತಕ ಪರಿಶೀಲಿಸಲಾಗಿ ಸದರಿ ಕಿರಿಯ ಅಭಿಯಂತರರ **ಜನ್ಮ ದಿನಾಂಕ:15–11–1975ರಂದು** ಜನ್ಮ ದಿನಾಂಕ ನಮೂದಿಸಿದ್ದು ಕುಲಸಚಿವರು ಸಹಿ ಮಾಡಿರುವುದಿಲ್ಲ.
ಕಡತದ ಟಿಪ್ಪಣಿ ಕಂಡಿಕೆ 11ರಲ್ಲಿ ಪದೋನ್ನತಿ ಹೊಂದಲು ಕಿರಿಯ ಅಭಿಯಂತರು ಸಹಾಯಕ ಅಭಿಯಂತರರಾಗಿ ಪದೋನ್ನತಿ ಹೊಂದಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಈ ಮುಂದಿನಂತೆ ಅರ್ಹತೆ ಹೊಂದಿರಬೇಕಾಗುತ್ತದೆ.

**1)** ಕನಿಷ್ಠ **10 ವರ್ಷ** ಕಿರಿಯ ಅಭಿಯಂತರರಾಗಿ ಸೇವೆ ಸಲ್ಲಿಸಿರಬೇಕು.

**2)** ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳನ್ನು ಪಾಸ್ ಮಾಡಿರಬೇಕು.

**3)** ಕನ್ನಡ ವಿಶ್ವವಿದ್ಯಾಲಯ ನಡೆಸಿದ ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ **ಭಾಗ–1** ಕಡ್ಡಯವಾಗಿ ತೇರ್ಗಡೆ ಮಾಡಿರ ಬೇಕು.ಮೇಲಿನ ಷರತ್ತುಗಳನ್ನು **ಪೂರೈಸದೇ 7–05–2010ರಂದು ಸಹಾಯಕ ಅಭಿಯಂತರರು**(ವಿದ್ಯುತ್)ಹುದ್ದೆ ವೇತನ **ಶ್ರೇಣಿ 11400–21600** ಯಲ್ಲಿ ಮುಂಬಡ್ತಿ ನೀಡಿದ್ದಾರೆ. ಈ ಬಗ್ಗೆ **ವಿಚಾರಣಾ ಪತ್ರ ಸಂಖ್ಯೆ:95/ಮತ್ತು96:2016–17** ದಿನಾಂಕ:**06–08–2016**ರಲ್ಲಿ ಪೂರ್ಣ ವಿವರ ನೀಡಲು ಸೂಚಿಸಿದ್ದು ಸದರಿ ಸಂಸ್ಥೆಯವರು **ಪುನರ್‌ಪರಿಶೀಲನಾ** ಸಮಯದಲ್ಲಿ ದಿ:**26–03–2010**ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆ ಶಿಫಾರಸ್ಸು ಹಾಗೂ **07–05–2010** ರಂದು ನಡೆದ ಕಾರ್ಯಕಾರಿ ಸಮಿತಿ ನಿರ್ಣಯದ ಪ್ರಕಾರ ಮುಂಬಡ್ತಿ ನೀಡಲಾಗಿದೆಯೆಂದು ತಿಳಿಸಿರುತ್ತಾರೆ. ಪರಿಶೀಲಿಸಲಾಗಿ **ಶ್ರೀ, ಕೆ. ಶ್ರೀನಿವಾಸುಲು** ಇವರು ಕಿರಿಯ ಅಭಿಯಂತರರಾಗಿ ದಿ: **29–12–2003** ರಂದು ನೇಮಕಾತಿ ಹೊಂದಿರುತ್ತಾರೆ. ಸದರಿಯವರಿಗೆ ದಿನಾಂಕ **07–05–2010** ರಂದು ಸಹಾಯಕ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡಲಾಗಿದ್ದು ವೃಂದ ಮತ್ತು ನೇಮಕಾತಿ ನಿಯಮದಲ್ಲಿರುವಂತೆ ಶ್ರೀಯುತರು ಕಿರಿಯ ಅಭಿಯಂತರರಾಗಿ 10 ವರ್ಷ ಸೇವೆಸಲ್ಲಿಸಿರುವುದಿಲ್ಲ. ಅಲ್ಲದೆ AE ಹುದ್ದೆಗೆ ಮುಂಬಡ್ತಿಗೆ ಬೇಕಾದ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಿರುವುದಿಲ್ಲ. ಆದ್ದರಿಂದ ಈ ಅನುಸರಣೆಯನ್ನು ಒಪ್ಪಲಾಗುವುದಿಲ್ಲ. ಈ ಕೆಳಗೆ ಸೂಚಿಸಿ ದಂತೆ ಸದರಿಯವರ ವೇತನವನ್ನು ಪುನರ್ ನಿಗದಿ ಪಡಿಸಿ ವಾರ್ಷಿಕ ವೇತನ ಬಡ್ತಿಗಳನ್ನು ಕ್ರಮಗೊಳಿಸಿ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಸದರಿಯವರಿಗೆ ಹೆಚ್ಚುವರಿಯಾಗಿ ಪಾವತಿ ಸಿರುವ ವೇತನ ಮತ್ತು ಭತ್ಯೆಗಳ ಮೊತ್ತ **ರೂ 54025/-**ನ್ನು ಅವರಿಂದ ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಸರಣೆ ಸಲ್ಲಿಸಲು ಸೂಚಿಸಿದೆ.

| ಕ್ರಸ | ವಿವರ | ದಿನಾಂಕ | ನಿಗದಿ ಪಡಿಸಬೇಕಾಗಿದ್ದ ವೇತನ ಹಾಗೂ ಶ್ರೇಣಿ | ನಿಗದಿಪಡಿಸಿರುವ ವೇತನ ಹಾಗೂ ಶ್ರೇಣಿ |
|---|---|---|---|---|
| 1 | 2 | 3 | 4 | 5 |
| 1 | ವಾರ್ಷಿಕ ವೇತನ ಬಡ್ತಿ | 01-12-2009 | 10250 (8825-16000) | 10250 (8825-16000) |
| 2 | ಸಹಾಯಕ ಅಭಿಯಂತರರು ಮುಂಬಡ್ತಿ | 07-05-2010 | ಅರ್ಹರಿಲ್ಲ | 11400 (11400-21600) |
| 3 | ವಾರ್ಷಿಕ ವೇತನ ಬಡ್ತಿ | 01-12-2010 | 10500 (8825-16000) | 11400 (11400-21600) |
| 4 | ವಾರ್ಷಿಕ ವೇತನ ಬಡ್ತಿ | 01-12-2011 | 10800 (8825-16000) | 11700 (11400-21600) |
| 5 | **2012ರ ಪರಿಷ್ಕೃತ ವೇತನ ಶ್ರೇಣಿ** | 01-04-2012 | 21600 (17650-32000) | 23400 (22800-43200) |
| 6 | ವಾರ್ಷಿಕ ವೇತನ ಬಡ್ತಿ | 01-12-2012 | 22200 (17650-32000) | 24000 (22800-43200) |
| 7 | ವಾರ್ಷಿಕ ವೇತನ ಬಡ್ತಿ | 01-12-2013 | 22800 (17650-32000) | 24600 (22800-43200) |
| 8 | ವಾರ್ಷಿಕ ವೇತನ ಬಡ್ತಿ | 01-12-2014 | 23400 (17650-32000) | 25300 (22800-43200) |
| 9 | ವಾರ್ಷಿಕ ವೇತನ ಬಡ್ತಿ | 01-12-2015 | 24000 (17650-32000) | 26000 (22800-43200) |

## ಕೆ.ಶ್ರೀನಿವಾಸ ಕಿರಿಯ ಅಭಿಯಂತರರು ಇವರಿಗೆ ಹೆಚ್ಚುವರಿಯಾಗಿ ಪಾವತಿಸಿದ ವೇತನದ ವಿವರ

| ಸಂದಾಯ ಮಾಡಿದ ವೇತನ | ಸಂದಾಯ ಮಾಡ ಬೇಕಾ ಗಿದ್ದ ವೇತನ | ವ್ಯತ್ಯಾಸ | | | ಒಟ್ಟು | ಅವಧಿ | ತಿಂಗಳು | ವ್ಯತ್ಯಾಸ |
|---|---|---|---|---|---|---|---|---|
| | | ಮೂಲ ವೇತನ | ತುಟ್ಟಿ ಭತ್ಯೆ | ಮನೆ ಬಾಡಿಗೆ ಭತ್ಯೆ | | | | |
| 1 | 2 | 3 | 4 | 5 | 6 | 7 | 8 | 9 |
| 24600 | 22800 | 1800 | 378 | 180 | 2358 | 4/2014- 6/2014 | 3 | 7074 |
| 24600 | 22800 | 1800 | 455 | 180 | 2435 | 7/2014 -11/2014 | 5 | 12175 |
| 25300 | 23400 | 1900 | 480 | 190 | 2570 | 12/2014 | 1 | 2570 |
| 25300 | 23400 | 1900 | 546 | 190 | 2636 | 1/2015- 6/2015 | 6 | 15816 |
| 25300 | 23400 | 1900 | 618 | 190 | 2708 | 7/2015 - 11/2015 | 5 | 13540 |
| 26000 | 24000 | 2000 | 650 | 200 | 2850 | 12/2015 | 1 | 2850 |
| | ಒಟ್ಟು | | | | | | | **54025** |

**ಡಿ.ಎ. ಧರ**

| | | |
|---|---|---|
| 01-01-2014 | = | 21% |
| 01-07-2014 | = | 25.25% |
| 01-01-2015 | = | 28.75% |
| 01-07-2015 | = | 32.50% |

**2.4.4)ಡಾ.ಎ.ವೆಂಕಟೇಶ್ಇವರಿಗೆ ಕನ್ನಡ ವಿ.ವಿ.ಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ಅರ್ಹತಾ ಅವಧಿಗಿಂತ ಮೊದಲೇ ಸಹಾಯಕ ಕುಲಸಚಿವ ಹುದ್ದೆಗೆ ಮುಂಬಡ್ತಿ ನೀಡಿರುವುದು:-**

ಡಾ. ಎ.ವೆಂಕಟೇಶ್‌ರವರು **ದಿನಾಂಕ:15-09-2003ರಿಂದ** ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು.ಸದರಿಯವರನ್ನು **ಕ.ವಿ.ಹಂ:ಕು.ಸ/ರಿ.ಮೀಹು.ಮು/2006-07/6832 ದಿನಾಂಕ:09-05-2006ರ ಆದೇಶದ ಮೂಲಕ ವೇತನ ಶ್ರೇಣಿ ರೂ:7400-13120** ರಲ್ಲಿ ಸಹಾಯಕ ಕುಲಸಚಿವ ರಿಕ್ತ ಮೀಸಲು ಹುದ್ದೆಗೆ ಮುಂಬಡ್ತಿ ನೀಡಿನೇಮಕ ಮಾಡಲಾಗಿ ಸದರಿಯವರು **ದಿನಾಂಕ: 12-05-2006** ರಂದು ತಮ್ಮ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದನ್ನು ಪರಿಶೀಲಿಸಲಾಗಿ. **ಶ್ರೀಯುತರು ಅಧೀಕ್ಷಕ ಹುದ್ದೆಗೆ ಬಡ್ತಿ ಹೊಂದಿದ 2 ವರ್ಷ 7 ತಿಂಗಳು 27 ದಿನಗಳಿಗೆ** ಶ್ರೀಯುತರಿಗೆ ಸಹಾಯಕ ಕುಲಸಚಿವ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ.

ಕನ್ನಡ ವಿ.ವಿ. ಹಂಪಿಯ ವೃಂದ ಮತ್ತು ನೇಮಕಾತಿ ನಿಯಮಗಳು(ಸಿಅಂಡ್‌ಆರ್)**ದಿನಾಂಕ:03-12-1993ರ ಅನುಬಂಧ-1 ಕ.ವಿ.ವಿ.ಯ ಭೋಧಕ ಮತ್ತು ಭೋಧಕೇತರ** ಹುದ್ದೆಗಳಿಗೆ ಅಗತ್ಯವಾದ ವಿದ್ಯಾರ್ಹತೆ ಮತ್ತು ನೇಮಕಾತಿ ವಿಧಾನಗಳು ಅಡಿಯಲ್ಲಿ ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಲು**"ಅಧೀಕ್ಷಕರಾಗಿ 5 ವರ್ಷಗಳ ಅಥವಾ ಪ್ರಥಮದರ್ಜೆ ಸಹಾಯಕರಾಗಿ 10 ವರ್ಷಗಳ ಅನುಭವ ಹೊಂದಿರಬೇಕು" ಎಂದು ತಿಳಿಸಲಾಗಿದೆ.**

ಆದರೆ ಸದರಿಯವರು ಪ್ರದ ಸಹಾಯಕರ **ಹುದ್ದೆಯಲ್ಲಿ 5 ವರ್ಷಗಳ** ಸೇವಾನುಭವ ಮತ್ತು ಅಧೀಕ್ಷಕರಾಗಿ **2 ವರ್ಷ 7ತಿಂಗಳು 27ದಿನಗಳ** ಸೇವಾನುಭವ ಹೊಂದಿರುವುದರಿಂದ **ಸಿ.ಆಂಡ್.ಆರ್ ನಿಯಮಗಳಲ್ಲಿ** ವಿಧಿಸಿರುವ ಅಗತ್ಯ ಷರತ್ತುಗಳನ್ನು ಪೂರೈಸದೇ ಇದ್ದಾಗ್ಯೂ ಸದರಿಯವರಿಗೆ ಅರ್ಹತಾ ಅವಧಿಗಿಂತ ಪೂರ್ವದಲ್ಲಿಯೇ ಸಹಾಯಕ ಕುಲಸಚಿವ ಹುದ್ದೆಯ ಪದೋನ್ನತಿಯನ್ನು ಸರಿ ಎಂದು ಲೆಕ್ಕ ಪರಿಶೋಧನೆಯು ಮಾನ್ಯಮಾಡುವುದಿಲ್ಲ, ಈ ರೀತಿ ಸಹಾಯಕ ಕುಲಸಚಿವ ಹುದ್ದೆಗೆ **2ವರ್ಷ 7ತಿಂಗಳು 27ದಿನಗಳಿಗೆ** ಪದೋನ್ನತಿ ನೀಡಲು ನಿಯಮಗಳಲ್ಲಿ ಅವಕಾಶ ವಿದ್ದಲ್ಲಿ. ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ತಿಳಿಸಿ ಲೆ.ಪ.ವಿ.ಪತ್ರ ಸಂಖ್ಯೆ:89ಅನ್ನು **ದಿನಾಂಕ:05-08-2016** ರಂದು ನೀಡಲಾಗಿತ್ತು.ಇದಕ್ಕೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.

ಡಾ:ಎ.ವೆಂಕಟೇಶ್ ಇವರಿಗೆ ಅರ್ಹತಾ ಅವಧಿಗಿಂತ ಪೂರ್ವದಲ್ಲಿ ನೀಡಿರುವ ಸಹಾಯಕ ಕುಲಸಚಿವ ಹುದ್ದೆಯ ಪದೋನ್ನತಿಯನ್ನು ಹಿಂಪಡೆದು .ಅರ್ಹತಾ ಅವಧಿಗೆ ಸಹಾಯಕ ಕುಲಸಚಿವ ಹುದ್ದೆಗೆ ಪದೋನ್ನತಿ ನೀಡಿ ವೇತನ ನಿಗದಿಪಡಿಸಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ನೀಡಿದ ಪದೋನ್ನತಿಯಿಂದುಂಟಾದ ಹೆಚ್ಚುವರಿ ವೇತನ ಭತ್ಯಗಳ ಸಂದಾಯವನ್ನು ಲೆಕ್ಕ ಹಾಕಿ ವಸೂಲಿಸಿ ಲೆಕ್ಕ ಪರಿಶೋಧನೆಗೆ ಕೂಡಲೇ ಅನುಸರಣೆ ಸಲ್ಲಸುವುದು.

ಮುಂದುವರೆದು ಸದರಿಯವರಿಗೆ ಕುಲಸಚಿವರ ಆದೇಶ **ದಿನಾಂಕ:22-01-2015ರ** ಅನ್ವಯ ವೇತನ **ಶ್ರೇಣಿ 40050-56550 ರಲ್ಲಿ ದಿನಾಂಕ:10-07-2014ರಿಂದ** ಪೂರ್ವಾನ್ವಯವಾಗಿ ಉಪಕುಲಸಚಿವ ಹುದ್ದೆಗೆ ಪದೋನ್ನತಿಯನ್ನು ನೀಡಲಾಗಿರುತ್ತದೆ. ಈ ರೀತಿಯಾಗಿ ಪೂರ್ವಾನ್ವಯವಾಗಿ ಅನ್ವಯವಾಗುವಂತೆ ಪದೋನ್ನತಿ ನೀಡಲು ನಿಯಮಗಳಲ್ಲಿ ಇರುವ ಅವಕಾಶಗಳನ್ನು ದಾಖಾಲೆಗಳೊಂದಿಗೆ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವುದು.ಹಾಗೂ ಮೇಲೆ ಉಲ್ಲೇಖಿಸಲಾಗಿರುವ ವಿ.ವಿ.ಯ ಸಿ ಆಂಡ್ ಆರ್ ನಿಯಮಗಳ ಅನುಬಂಧ-1ರಲ್ಲಿ ಉಪಕುಲಸಚಿವ ಹುದ್ದೆಗೆ ಪದೋನ್ನತಿ ನೀಡಲು"ವಿಶ್ವವಿದ್ಯಾಲಯದ ಆಡಳಿತ ಲೆಕ್ಕ ಪತ್ರ ವಿಭಾಗದಲ್ಲಿ ಕನಿಷ್ಟಪಕ್ಷ 5 ವರ್ಷಗಳ ಅನುಭವ ಅಥವಾ ಯಾವುದೇ ಕಾಲೇಜಿನ ಪ್ರಾಂಶುಪಾಲರಾಗಿ 5 ವರ್ಷಗಳ ಅನುಭವ ಹೊಂದಿರಬೇಕು" ಎಂದು ತಿಳಿಸಿದ್ದು ಸದರಿಯವರ ಸೇವಾ ಪುಸ್ತಕದಲ್ಲಿ ಈ ಕುರಿತು ನಮೂದುಗಳಿರುವುದಿಲ್ಲ.ಈ ಹಿನ್ನಲೆಯಲ್ಲಿ ಈ ಕುರಿತು ಲೆಕ್ಕ ಪರಿಶೋಧನೆಗೆ ಸೂಕ್ತ ಅನುಸರಣೆ ನೀಡಲು **ಲೆ.ಪ.ವಿ.ಪ.ಸಂಖ್ಯೆ:-89 ದಿನಾಂಕ:05-08-2016** ರಂದು ನೀಡಲಾಗಿತ್ತು

ಸದರಿ ವಿಚಾರಣಾ ಪತ್ರಕ್ಕೆ ಪುನರ್‌ಪರಿಶೀಲನಾ ಸಮಯದಲ್ಲಿ ಕನ್ನಡ ವಿಶ್ವವಿದ್ಯಾಲಯ **ವೃಂದ ಮತ್ತು ನೇಮಕಾತಿ ನಿಯಮಾವಳಿ ದಿ:03-12-1993ರ ಅನುಬಂಧ 1** ರಲ್ಲಿ ನಮೂದಿಸಿರುವಂತೆ ಹಾಗೂ **ಪರಿನಿಯಮದಂತೆ** ಸದರಿಯವರು ಅಧೀಕ್ಷಕರಾಗಿ ಕನಿಷ್ಟ 2 ವರ್ಷ ಅನುಭವ ಹೊಂದಿರುವುದರಿಂದ ಸಹಾಯಕ ಕುಲಸಚಿವರ ಹುದ್ದೆಗೆ ಮುಂಬಡ್ತಿ ನೀಡಲು ಅವಕಾಶವಿರುವುದರಿಂದ ಸದರಿಯವರಿಗೆ ಮುಂಬಡ್ತಿ ನೀಡಲಾಗಿದೆ. ಅದೇರೀತಿ ಸಿ.ಅಂಡ್ ಆರ್ ನಿಯಮಗಳಲ್ಲಿರುವಂತೆ ಸ್ನಾತಕೋತ್ತರ ಪದವಿ ಪಡೆದಿದ್ದಲ್ಲಿ ಉಪಕುಲಸಚಿವರ ಹುದ್ದೆ ಮುಂಬಡ್ತಿ ನೀಡಲು ಅವಕಾಶವಿದೆಯೆಂದು ತಿಳಿಸಿರುತ್ತಾರೆ. ಪರಿಶೀಲಿಸಲಾಗಿ ಸದರಿ ಸಂಸ್ಥೆಯವರು ನೀಡಿದ ವೃಂದ ನೇಮಕಾತಿ ನಿಯಮಗಳ ಅನುಬಂಧ 1 ರಲ್ಲಿ ಸಹಾಯಕ ಕುಲಸಚಿವರ ಹುದ್ದೆಗೆ ಪದೋನ್ನತಿ ನೀಡಲು ಒಂದು ಕಡೆ ಅಧೀಕ್ಷಕರ ಹುದ್ದೆಯಲ್ಲಿ **ಕನಿಷ್ಟ 2 ವರ್ಷಗಳ** ಅನುಭವ ಹೊಂದಿರಬೇಕೆಂದು ಹೇಳಲಾಗಿದೆ. ಅದರೆ ಪಕ್ಕದಲ್ಲಿಯೇ ಅಧೀಕ್ಷಕರಾಗಿ **5 ವರ್ಷಗಳ** ಅಥವಾ ಪ್ರ.ದ.ಸರಾಗಿ 10 ವರ್ಷಗಳ ಅನುಭವ ಹೊಂದಿರಬೇಕೆಂದು ಹೇಳಲಾಗಿದೆ. ಈ ರೀತಿ ಒಂದೇ ಹುದ್ದೆಗೆ ಎರಡು ರೀತಿಯ ಮಾನದಂಡಗಳನ್ನು ನಿಗಧಿಪಡಿಸಿದ್ದು ಸಹಾಯಕ ಕುಲಸಚಿವರ ಹುದ್ದೆಗೆ ಮುಂಬಡ್ತಿ ನೀಡಲು ಬೇಕಾಗಿರುವ ಅರ್ಹತೆ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಆದ್ದರಿಂದ ಈ ವಿವರಣೆಯನ್ನು

ಒಪ್ಪಲಾಗುವುದಿಲ್ಲ. ಅಲ್ಲದೆ ದಿನಾಂಕ **10-07-2014** ರಿಂದ ಪೂರ್ವಾನ್ವಯವಾಗುವಂತೆ ಸದರಿಯವರಿಗೆ ಪದನ್ನೋತಿ ನೀಡಿದ್ದು ಪೂರ್ವಾನ್ವಯವಾಗಿ ಪದೋನ್ನತಿ ನೀಡಲು ಇದ್ದ ಅವಶ್ಯಕತೆ ಹಾಗೂ ಈ ರೀತಿ ಪೂರ್ವಾನ್ವಯವಾಗಿ ಪದೋನ್ನತಿ ನೀಡಲು ನಿಯಮಗಳಲ್ಲಿರುವ ಅವಕಾಶವನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿಲ್ಲ. ಆದ್ದರಿಂದ ಸದರಿಯವರ ವಿವರಣೆಯನ್ನು ಒಪ್ಪಲಾಗುವುದಿಲ್ಲ. ಆದ್ದರಿಂದ ಈ ಕಂಡಿಕೆಯನ್ನು ಮುಂದುವರೆಸಲಾಗಿದೆ.

## 2.4.5)ಶ್ರೀ.ಹೆಚ್.ಎಂ.ಸೋಮನಾಥ್ ಅಧೀಕ್ಷಕರು ಇವರು ಅಮಾನತುಗೊಂಡ ಪ್ರಕರಣವನ್ನು ಸೇವಾ ಪುಸ್ತಕದಲ್ಲಿ ದಾಖಲಿಸಿದೇ ಇರುವುದು ಹಾಗೂ ಅನಿಯಮಿತವಾಗಿ ಬಂದೇ ದಿನ ಹಿರಿಯಸಹಾಯಕ ಹಾಗೂ ಅಧೀಕ್ಷಕ ಹುದ್ದೆಗೆ ಬಡ್ತಿ ನೀಡಿರುವುದು:-

### (a) ಅಮಾನತು ಪ್ರಕರಣದ ಕುರಿತು:

**2014-15**ಮತ್ತು **2015-16**ನೇ ಸಾಲಿನ ಹಂಪಿ ಕನ್ನಡ ವಿ.ವಿ.ಯ ಲೆಕ್ಕ ಪರಿಶೋಧನೆಯಲ್ಲಿ ಸಿಬ್ಬಂದಿ ವೇತನ ಬಿಲ್ಲು ಪರಿಶೀಲಿಸಲಾಗಿದ್ದು ಶ್ರೀ.ಹೆಚ್.ಎಂ.ಸೋಮನಾಥ್ ಕಿರಿಯ ಸಹಾಯಕರು ಕನ್ನಡ ವಿ.ವಿ. ಇವರನ್ನು ಅಮಾನತು ಮಾಡಲಾಗಿರುತ್ತದೆ.ಅಮಾನತು **ಆದೇಶ ಸಂಖ್ಯೆ:ಕ.ವಿ.ಹಂ./ಕು.ಸ/ಭೋಕೆಸಿ/ಅಮಾನತು/2014-15/93 ಏಪ್ರಿಲ್ 4.2014** ರ ಆದೇಶದಲ್ಲಿ ಇವರ ವಿರುದ್ಧ ಚುನಾವಣಾ ಕೆಲಸಗಳನ್ನು ನಿರ್ವಹಿಸಿದ ಬಗ್ಗೆ **ಬಳ್ಳಾರಿ ಗಾಂಧಿನಗರ ಪೋಲಿಸ್ ಠಾಣೆಯಲ್ಲಿ ಎಫ್.ಐ.ಆರ್ ಸಂಖ್ಯೆ:88/2014 ದಿನಾಂಕ:25-03-2014** ರಂದು ಪ್ರಕರಣ ದಾಖಲಾಗಿದೆ.ಚುನಾವಣೆಯಲ್ಲಿ ಅಭ್ಯರ್ಥಿಗಳ ಪರ ಕಾರ್ಯನಿರ್ವಹಿಸಿರುವುದರಿಂದ ಕೆ.ಸಿ.ಎಸ್.(ಸಿ.ಸಿ.ಎ)ನಿಯಮಗಳು ನಿಯಮ 1957 ರ ನಿಯಮ ಮತ್ತು 10(1) ಅಡಿಯಲ್ಲಿ ಈ ಸರ್ಕಾರಿ ನೌಕರರು ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಮಾನ್ಯ ಜಿಲ್ಲಾ ಚುನಾವಣಾ ಅಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಬಳ್ಳಾರಿ ಇವರು ತಮ್ಮ ಪತ್ರದಲ್ಲಿ ಸೂಚಿಸಿರುವ ಹಿನ್ನಲೆಯಲ್ಲಿ ವಿಚಾರಣೆಯನ್ನು ಕಾಯ್ದಿರಿಸಿ ಮುಂದಿನ ಆದೇಶದವರೆಗೆ ಸದರಿಯವರನ್ನು ಅಮಾನತುಗೊಳಿಸಿ ಆದೇಶಿಸಲಾಗಿದೆ.

**ದಿನಾಂಕ:04-04-2014 ರಿಂದ 23-05-2014** ರವರೆಗೆ ಅಮಾನತು ಮಾಡಲಾಗಿರುತ್ತದೆ.**ಶ್ರೀ.ಹೆಚ್.ಎಂ.ಸೋಮನಾಥ್** ಕಿ.ಸ ಇವರು ಅಮಾನತು ಆದೇಶ ಹಿಂಪಡೆಯಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.ಅದರ ಪ್ರಕಾರ ಡಾ:ಡಿ.ಪಾಂಡುರಂಗ ಬಾಬು ಡೀನ್ ಇವರ ಅಧ್ಯಕ್ಷತೆಯಲ್ಲಿ **ದಿನಾಂಕ:23-05-2014** ರಂದು ಅಮಾನತು ವಿಚಾರಣಾ ಸಮಿತಿ ಸಭೆಸೇರಿ ವಿಚಾರಣಾ ಕ್ರಮಪಟ್ಟಿ ಮತ್ತು ವಿಚಾರಣಾ ವರದಿಯನ್ನು ಆಡಳಿತತಾಂಗಕ್ಕೆ ಸಲ್ಲಿಸಲಾಗಿರುತ್ತದೆ.ಈ ವಿಚಾರಣಾ ವರದಿಯ ಪ್ರಕಾರ ಅಮಾನತು ಆದೇಶ ಹಿಂಪಡೆಯಲಾಗಿರುತ್ತದೆ. ಆದೇಶ ಸಂಖ್ಯೆ:ಕ.ವಿ.ಹಂ.ಕು.ಸಿ.ಭೋಕೆಸಿ **ಅಮಾನತು:ಹಿಂ.2014-15/202 ದಿನಾಂಕ:23-05-2014 ಶ್ರೀ.ಯುತರನ್ನು** ಮುಖ್ಯ ಚುನಾವಣಾ ಅಧಿಕಾರಿಗಳು ತೆಗೆದು ಕೊಳ್ಳುವ ಅಂತಿಮ ನಿರ್ಣಯಕ್ಕೆ ಬದ್ಧರಾಗಿರಬೇಕೆಂಬ ಷರತ್ತಿನೊಂದಿಗೆ ಅಮಾನತು ಆದೇಶ ಹಿಂಪಡೆಯಲಾಗಿದೆ ಎಂದು ತಿಳಿಸಲಾಗಿದೆ.ಅಮಾನತ್ತಾದ ಅವಧಿಯ ವೇತನ ಬಿಲ್ಲು ಪರಿಶೀಲಿಸಿದಾಗ ಶೇ.50-ಕ್ಕಿಂತ ಹೆಚ್ಚು ವೇತನ ನೀಡಿರುವುದನ್ನು ಗಮನಿಸಲಾಗಿದೆ.

**ಕೆ.ಸಿ.ಎಸ್.ನಿಯಮ 98(1)ಪ್ರಕಾರ** ಅಮಾನತು ಸಮಯದಲ್ಲಿ **ಶೇ.50 ರಷ್ಟು** ವೇತನ ನೀಡಲು **ಅವಕಾಶವಿದೆ. ಕೆ.ಸಿ.ಎಸ್.98(2)**ರ ಪ್ರಕಾರ ಅಮಾನತುಗೊಂಡ ಸರ್ಕಾರಿ ನೌಕರನು ಬೇರೆ ಯಾವುದೇ ವೃತ್ತಿ ವ್ಯವಹಾರದಲ್ಲಿ ನಿರತನಾಗಿಲ್ಲವೆಂದು ಒಂದು ಪ್ರಮಾಣ ಪತ್ರವನ್ನು ನೀಡಬೇಕಾಗಿರುತ್ತದೆ. ಈ ಪ್ರಮಾಣ ಪತ್ರವನ್ನು ನೀಡಿದ ತರುವಾಯವೇ ಶೇ.50 ರಷ್ಟು ನಿಲಂಬನೆ ನಿರ್ವಹಣೆ ವೇತನ ಪಡೆಯಲು ಅರ್ಹನಾಗುತ್ತಾನೆ.ಆದರೆ ಈ ಪ್ರಮಾಣ ಪತ್ರವನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ.

**ಆಗಸ್ಟ-2014ರ ವೇತನ ಬಿಲ್ಲಿನಲ್ಲಿ ಉಳಿದ ಶೇ.50 ರಷ್ಟು ವೇತನವನ್ನು** ಸದ್ರಿಯವರಿಗೆ ನೀಡಲಾಗಿರುತ್ತದೆ. ಪೂರ್ತಿ ವೇತನವನ್ನು ಪಾವತಿಸುವಮೊದಲು ಕೆ.ಸಿ.ಎಸ್.ನಿಯಮ99(1)ರ ಪ್ರಕಾರ ಸಕ್ಷಮ ಪ್ರಾಧಿಕಾರಿಯು ಅಮನತ್ತಾದ ಅವಧಿಯನ್ನು ಕರ್ತವ್ಯದ ಅವಧಿಯೇ ಅಥವಾ ಬೇರೆ ರಜೆಗಳಿಗೆ ಪರಿವರ್ತಿಸಲಾಗಿದೆಯೆ ಎಂಬ ಕುರಿತು ನಿರ್ದಿಷ್ಟ ಆದೇಶವನ್ನು ಹೊರಡಿಸಿದ ತರುವಾಯವೇ ಉಳಿದ ಶೇ.50 ರಷ್ಟು ನಿಲಂಬನ ನಿರ್ವಹಣೆ ವೇತನವನ್ನು ನೀಡಬೇಕಾಗಿರುತ್ತದೆ. ಈ ರೀತಿಯ ನಿರ್ದಿಷ್ಟ ಆದೇಶಗಳನ್ನು ಕೆ.ಸಿ.ಎಸ್.ಆರ್.ನಿಯಮ 401ರ ಪ್ರಕಾರ ಸದರಿ ನೌಕರನ ಅಮಾನತು, ಕಡ್ಡಾಯ ನಿವೃತ್ತಿ, ಸೇವೆಯಿಂದ ತೆಗೆದುಕುವುದು. ಅಥವಾ ವಜಾ ಮಾಡವುದು ಇವುಗಳ ನಂತರ ಪುನ:ಸೇವೆಗೆ ನೇಮಕ ಮಾಡಿದ ಸಂದರ್ಭದಲ್ಲಿ ಆ ಸರ್ಕಾರಿ ನೌಕರನು ಸಲ್ಲಿಸಿದ ಹಿಂದಿನ ಸೇವೆಯು ನಿವೃತ್ತಿ ವೇತನಕ್ಕಾಗಿ ಗಣನೆಗೆ ಬರುವುದೋ ಅಥವಾ ಇಲ್ಲವೇ ಎಂಬುದರ ಬಗ್ಗೆ ವಿಶಿಷ್ಟ ಘೋಷಣೆಯನ್ನು ಸೇವಾ ಪುಸ್ತಕದಲ್ಲಿ ನಮೂದಿಸಬೇಕು ಎಂದು ಈ ನಿಯಮ ತಿಳಿಸುತ್ತದೆ. ಆದರೆ ಇದನ್ನು ಸೇವಾ ಸೇವಾ ಪುಸ್ತಕದಲ್ಲಿ ದಾಖಲಿಸಿಲ್ಲ. ಇದಕ್ಕೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನೆಗೆ ಅನುಪಾಲನೆ ಸಲ್ಲಿಸಲು ಲೆ.ಪ.ವಿ.ಪತ್ರ ಸಂಖ್ಯೆ:56 ದಿನಾಂಕ:24-06-2016 ರಂದು ನೀಡಲಾಗಿತ್ತು ಸದರಿ ವಿಚಾರಣೆ ಪತ್ರಕ್ಕೆ ಲೆಕ್ಕಪರಿಶೋಧನೆ ಸಮಯದಲ್ಲಿ ಹಾಗೂ **ಪುನರ್ ಪರಿಶೀಲನಾ** ಸಮಯದಲ್ಲಿ ನೀಡಿರುವ ಉತ್ತರದಲ್ಲಿ ಚುನಾವಣಾ ಕರ್ತವ್ಯ ಲೋಪ ಮತ್ತು ದುರ್ನಡತೆಗೆ ಸಂಬಂದಿಸಿದಂತೆ ಸದರಿ

ಯವರ ಮೇಲಿದ್ದ ಅಪಾದನೆಗೆ ಬಿ ರಿಪೋರ್ಟ್ ಸಲ್ಲಿಕೆಯಾಗಿರುವುದರಿಂದ ಈ ಕಂಡಿಕೆ ಕೈಬಿಡಲು ಕೋರಿರುತ್ತಾರೆ. ಪರಿಶೀಲಿಸಲಾಗಿ ಸದರಿಯವರು ಬಿ ರಿಪೋರ್ಟ್‌ನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿಲ್ಲ. ಅಲ್ಲದೇ ಮಾನ್ಯಉಚ್ಚ ನ್ಯಾಯಾಲಯದ ಅದೇಶ ದಿನಾಂಕ **13-02-2017** ರಲ್ಲಿ ಈ ದುರ್ನಡತೆಗೆ ಬಿ. ರಿಪೋರ್ಟ್ ಸಲ್ಲಿಕೆಯಾಗಿದೆ ಎಂದು ದಾಖಲಿಸಲಾಗಿರುತ್ತದೆ. ಯಾವುದೇ ಸರ್ಕಾರಿ ನೌಕರನು ಅಮಾನತ್ತುಗೊಂಡ ನಂತರ ಮನರ್‌ನೇಮಕ ಆದಾಗ ಅಮಾನತ್ತು ಗೊಂಡಾಗಿನಿಂದ ಮನರ್ ನೇಮಕ ಆದ ಅವಧಿಯನ್ನು ಸಕ್ಷಮ ಪ್ರಾಧೀಕಾರ **ಸಕ್ರಮ** ಮಾಡಬೇಕಾಗಿರುತ್ತದೆ. ಅನಂತರ ಮಾತ್ರ ಸದರಿಯವರಿಗೆ ಬರಬೇಕಾಗಿರುವ ಬಾಕಿ ವೇತನ ಪಾವತಿಸಬೇಕಾಗುತ್ತದೆ ಆದರೆ ಮೇಲೆ ತಿಳಿಸಿದಂತೆ ಸದರಿಯವರಿಗೆ ಸಂಬಂದಿ ಸಿದಂತೆ ಅಮಾನತ್ತಾದ ಅವಧಿ ಸಕ್ಷಮಪ್ರಾಧೀಕಾರದಿಂದ ಸಕ್ರಮ ಆದ ಬಗ್ಗೆ ದಾಖಲೆ ಸೇವಾ ಪುಸ್ತಕದಲ್ಲಿ ಲಭ್ಯವಿರುವುದಿಲ್ಲ. ಈ ಹಿನ್ನಲೆಯಲ್ಲಿ ಅಮಾನತ್ತಿನ ಅವಧಿಯಲ್ಲಿ ಪೂರ್ಣ ಪ್ರಮಾಣದ ವೇತನ ಪಾವತಿಸಿರುವುದನ್ನು ಒಪ್ಪಲಾಗುವುದಿಲ್ಲ.

## ಬಿ)ಒಂದೇ ದಿನದಲ್ಲಿ ಎರಡು ಹುದ್ದೆಗಳಿಗೆ ಬಡ್ತಿ ನೀಡಿರುವುದು:-

**ಶ್ರೀ.ಹೆಚ್.ಎಂ.ಸೋಮನಾಥ್** ಪ್ಯಾಕರ್ ಇವರ ಸೇವಾ ಪುಸ್ತಕವನ್ನು ಪರಿಶೀಲಿಸಲಾಗಿ ಈ ಕೆಳಕಂಡ ವಿವರಗಳು ಕಂಡು ಬಂದಿರುತ್ತವೆ.

**1)** ದಿನಾಂಕ:21-09-1994 ರಂದು ಪ್ರಸಾರಂಗದಲ್ಲಿ ಪ್ಯಾಕರ್ ಹುದ್ದೆಗೆ ಖಾಯಂ ನೇಮಕಾತಿ ಮಾಡಲಾಗಿದೆ. ವಿ.ವಿ.ಯ ಸಿ ಆಂಡ್ ಆರ್ ನಲ್ಲಿ ಪ್ಯಾಕರ್ ಹುದ್ದೆಯೇ ಇಲ್ಲದಿದ್ದರೂ ನೇಮಕಾತಿಗ ಮಾಡಿರುವುದು ತಪ್ಪಾಗಿದೆ.

**2)** ದಿನಾಂಕ:29-04-1997 ರಂದು ಪ್ಯಾಕರ್ ಹುದ್ದೆಯಿಂದ ಕಿರಿಯ ಸಹಾಯಕ ಹುದ್ದೆಗೆ ಪದನಾಮ ಬದಲಾವಣೆ ಮಾಡಲಾಗಿದೆ ಆದರೆ ಇಲ್ಲದಿರುವ ಪ್ಯಾಕರ್ ಹುದ್ದೆಯಿಂದ ಕಿರಿಯ ಸಹಾಯಕ ಹುದ್ದೆಗೆ ಪದನಾಮ ಬದಲಾವಣೆ ಮಾಡಿರುವುದು ನಿಯಮಬಾಹಿರವಾಗಿದ್ದು ಇದನ್ನು ಲೆಕ್ಕ ಪರಿಶೋಧನೆ ಮಾನ್ಯ ಮಾಡುವುದಿಲ್ಲ.

3) ದಿ:22-01-2015 ರಂದು ಕಿರಿಯ ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ ಹಾಗೂ ಅದೇದಿನ ಹಿರಿಯ ಸಹಾಯಕ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ ಪದೋನ್ನತಿ ನೀಡಿರುವುದು. ಈ ರೀತಿ ಒಂದೇ ದಿನ ಎರಡು ಪದೋನ್ನತಿ ಮಾಡಿರುವುದಕ್ಕೆ ಸೂಕ್ತ ಹಾಗೂ ಸಮಂಜಸ ಕಾರಣಗಳನ್ನು ನೀಡುವುದು. ಈ ಮೇಲಿನ ನ್ಯೂನತೆಗಳ ಕುರಿತಂತೆ ಲೆ.ಪ.ವಿ.ಪತ್ರ ಸಂಖ್ಯೆ:98 ದಿನಾಂಕ:06-08-2016ರಂದು ನೀಡಲಾಗಿದ್ದು ಸದರಿ ಸಂಸ್ಥೆಯವರು ಮನರ್ ಪರಿಶೀಲನಾ ಸಮಯದಲ್ಲಿ ನೀಡಿದ ಉತ್ತರದಲ್ಲಿ **ಘನ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ( W.P.No 106768/2016 S/RES)** ದಿನಾಂಕ **13-02-2017**ರ ಆದೇಶವನ್ನು ಸಲ್ಲಿಸಿ ನ್ಯಾಯಾಲಯದ ತೀರ್ಪಿನಂತೆ ಪರಿಶೀಲಿಸಲು ಕೋರಿರುತ್ತಾರೆ. ನ್ಯಾಯಾಲಯದ ಆದೇಶ ಪರಿಶೀಲಿಸಲಾಗಿ ಸದರಿಯವರಿಗೆ ವಿಶ್ವವಿದ್ಯಾಲಯವು ಹಿಂಬಡ್ತಿ ನೀಡುವ ಮುನ್ನ ನೈಸರ್ಗಿಕ ನ್ಯಾಯವನ್ನು ಪಾಲಿಸಿ ಅವರ ಅಹವಾಲನ್ನು ಕೇಳಲು ಅವಕಾಶ ನೀಡದೆ (ಹಿಂಬಡ್ತಿ ಆದೇಶ ದಿನಾಂಕ 09-08-2016) ಹಿಂಬಡ್ತಿ ಆದೇಶ ನೀಡಿರುವುದನ್ನು **ದೋಷಪೂರಿತ** ಹಾಗೂ **ತಳ್ಳಿಹಾಕಲು ಯೋಗ್ಯವೆಂದು** ತಿಳಿಸಿ 09-08-2016ರ ಆದೇಶವನ್ನು ರದ್ದು ಪಡಿಸಿರುತ್ತದೆ. ಸದರಿ ನ್ಯಾಯಾಲದಯ ಆದೇಶದಲ್ಲಿ ತಿಳಿಸಿರುವಂತೆ ಶ್ರೀಯುತರನ್ನು ಹಿಂಬಡ್ತಿ ನೀಡುವ ಮೊದಲು ಅವರಿಗೆ ಅಹವಾಲನ್ನು ಹೇಳಲು ಅವಕಾಶ ಕೊಟ್ಟು ಆದೇಶ ಮಾಡಬೇಕಾಗಿತ್ತು. ಆದರೆ ಈ ನಿಯಮ ಪಾಲಿಸದೆ ವಿಶ್ವವಿದ್ಯಾಲಯವು ನೈಸರ್ಗಿಕ ನ್ಯಾಯದ ನಿಯಮವನ್ನು ಉಲ್ಲಂಘಿಸಿದೆ. ಇದು ವಿಶ್ವವಿದ್ಯಾಲಯದ ಆಡಳಿತಾತ್ಮಕ ವಿಚಾರವಾಗಿರುತ್ತದೆ. ಈ ನ್ಯಾಯಾಲಯದ ಆದೇಶದಲ್ಲಿ ಎಲ್ಲಿಯೂ ಸದರಿಯವರಿಗೆ ಕೊಟ್ಟಿರುವ ಮುಂಬಡ್ತಿ ಸರಿ ಇರುತ್ತದೆಂದು ಹೇಳಿರುವುದಿಲ್ಲ. ಅಲ್ಲದೆ ಈ ಆದೇಶದಲ್ಲಿ ವಿಶ್ವವಿದ್ಯಾಲಯಕ್ಕೆ ಸದರಿಯವರ ಮೇಲೆ ನಿಯಮಾನುಸಾರ, ಕಾನೂನಾತ್ಮಕವಾಗಿ ಆದೇಶ ಹೊರಡಿಸಲು ಸ್ವಾತಂತ್ರ್ಯ ನೀಡಲಾಗಿದೆ.

ಅಲ್ಲದೆ ಈ **ಕ್ರಮಸಂಖ್ಯೆ** (ಬಿ)ಯಲ್ಲಿ ಸೂಚಿಸಿರುವಂತೆ ಸದರಿಯವರ ನೇಮಕಾತಿಗೆ ಸಂಬಂದಿಸಿದಂತೆ ಹಾಗೂ **ಪ್ಯಾಕರ್** ಹುದ್ದೆಯಿಂದ **ಕಿರಿಯ ಸಹಾಯಕ** ಹುದ್ದೆಗೆ ಪದನಾಮ ಬದಲಾವಣೆ ಮಾಡಿರುವುದಕ್ಕೆ ಸಂಬಂದಿಸಿದಂತೆ ಹಾಗೂ ಒಂದೇ ದಿನದಲ್ಲಿ ಎರಡು ಹುದ್ದೆ ಮುಂಬಡ್ತಿ ನೀಡಿರುವುದನ್ನು ಮಾತ್ರ ಆಕ್ಷೇಪಿಸಲಾಗಿದ್ದು, ಈ ಆಕ್ಷೇಪಣೆಗೆ ಉತ್ತರ ಕೊಟ್ಟಿರುವುದಿಲ್ಲ. ಆದ್ದರಿಂದ ಮಾನ್ಯ ನ್ಯಾಯಾಲಯದ ಆದೇಶವನ್ನು ಗೌರವಿಸುತ್ತಾ ಮೇಲಿನ ಆಕ್ಷೇಪಣೆಗೆ ಉತ್ತರ ನೀಡಲು ಸೂಚಿಸುತ್ತಾ ಅಲ್ಲಿಯವರೆಗೆ ಸದರಿಯವರಿಗೆ ಪಾವತಿಸಲಾಗಿರುವ ವೇತನ ಮತ್ತು ಭತ್ಯೆ ರೂ. **940291/-** ಆಕ್ಷೇಪಣೆಯಲ್ಲಿಡಲಾಗಿದೆ.

**2.4.6)ಭೋಧಕೇತರ ಸಿಬ್ಬಂದಿಗಳಿಗೆ ದಿ:22-01-2015ರಂದು ಬಡ್ತಿ ನೀಡಿದ್ದು ಕಾರ್ಯಕಾರಿಸಮಿತಿ ಸಭೆ ದಿನಾಂಕ:26-05-2015ರಲ್ಲಿ ಬಡ್ತಿ ಆದೇಶ ಹಿಂಪಡೆದು ತಿದ್ದುಪಡಿ ಆದೇಶ ಮಾಡಲು ಸೂಚಿಸಿದ್ದರೂ ಇದುವರೆಗೆ ಯಾವ ಕ್ರಮವನ್ನು ಕೈ ಗೊಂಡಿರುವುದಿಲ್ಲ.:-**

ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿಯ **22-01-15**ರಂದು **39** ಜನ ವಿವಿಧ ಬೋಧಕೇತರ ಸಿಬ್ಬಂದಿಗಳಿಗೆ ಬಡ್ತಿ ನೀಡಿರುತ್ತಾರೆ ಬಡ್ತಿ ನೀಡುವ ವಿಧಾನದ ಬಗ್ಗೆ ಲೆಕ್ಕ ತನಿಖಾ ವಿಚಾರಣೆ **ಪತ್ರ ಸಂಖ್ಯೆ:68ದಿನಾಂಕ:14-07-2016**ರಲ್ಲಿ ವಿವರ ಕೇಳಲಾಗಿತ್ತು ಅದಕ್ಕೆ ಸಿಬ್ಬಂದಿಗಳಿಗೆ ಜೇಷ್ಠತಾನುಸಾರ ಇಲಾಖಾ ಮುಂಬಡ್ತಿ ಸಮಿತಿ ಮತ್ತು ಕಾರ್ಯಕಾರಿ ಸಮಿತಿಯ ಸಭೆಯ ಅನಮೋದನೆ ಯೊಂದಿಗೆ ಮುಂಬಡ್ತಿ ನೀಡಲಾಗಿದೆಯೆಂದು ಬಡ್ತಿ ನೀಡಿದ ನೌಕರರ ವಿವರ ಹಾಗೂ ಸರ್ಕಾರದಿಂದ ಅನುಮೋದನೆಗೊಂಡು ಪತ್ರ **ಸಂಖ್ಯೆ:69:ಯು.ಎನ್.ಐ.93:ದಿನಾಂಕ:03-12-1993**ರಲ್ಲಿ ಅನುಮೋದಿಸಿದ ಭೋಧಕ ಮತ್ತು ಭೋಧಕೇತರ ವಿವರ ನೀಡಿರುತ್ತಾರೆ ಆದೇಶದಲ್ಲಿ ತಾಂತ್ರಿಕ ವಿಭಾಗದ ಕಿರಿಯ ಅಭಿಯಂತರರು ಸಹಾಯಕ ಅಭಿಯಂತರರ ನೇಮಕ ಅಥವಾ ಬಡ್ತಿಯ ಕಾರ್ಯ ವಿಧಾನ ನಮೂದಿಸಿಲ್ಲ.ಆದರೂ ಶ್ರೀ.ಚಂದ್ರಶೇಖರಪ್ಪ ಕಿರಿಯ ಅಭಿಯಂತರರಿಗೆ ಸಹಾಯಕ ಅಭಿಯಂತರರು, ಶ್ರೀ.ಸಿ.ಗುರುಮೂರ್ತಿ ಕಿರಿಯ ಸಹಾಯಕರಿಗೆ ಕಿರಿಯ ಅಭಿಯಂತರರಾಗಿ ಬಡ್ತಿ ನೀಡಲಾಗಿದೆ ಈ ಬಗ್ಗೆ ವಿಚಾರಣೆ **ಪತ್ರ ಸಂಖ್ಯೆ:94 ದಿನಾಂಕ:06-08-2016** ರಂದು ನೀಡಲಾಗಿತ್ತು ಮಹಾಲೇಖಪಾಲರು **2012-13ರಿಂದ2014-15ನೇ** ಸಾಲಿನ ತನಿಖಾವರದಿಯಲ್ಲಿ ಕಂಡಿಕೆ ಸಂಖ್ಯೆ:II(3)ರಲ್ಲಿ ಆಕ್ಷೇಪ ವ್ಯಕ್ತ ಪಡಿಸಿದ್ದಾರೆ. ತೋಟಗಾರಿಕೆ ಅಧಿಕಾರಿ ಹುದ್ದೆಯನ್ನು ಸಹಾಯಕ ಕುಲಸಚಿವ ಹುದ್ದೆಗೆ ಡೌನ್ ಗ್ರೇಡ್ ಮಾಡಿರುವ ಬಗ್ಗೆ ಸರ್ಕಾರದ ಅನುಮೋದಿತ ಪತ್ರದಲ್ಲಿ ಯಾವುದೇ ವಿವರ ಇರುವುದಿಲ್ಲ ಆದರೆ ಎಂ.ಎಂ.ಶಿವಪ್ರಕಾಶ್ ಅಧಿಕ್ಷರಿಗೆ ಮೇಲ್ಕಂಡ ಹುದ್ದೆಯನ್ನು ಡೌನ್ ಗ್ರೇಡ್ ಮಾಡಿನೀಡಿದ್ದಾರೆ.

**ದೂರ ಶಿಕ್ಷಣ ನಿರ್ದೇಶನಾಲಯ 5 ನೌಕರರಿಗೆ ಮುಂಬಡ್ತಿ ನೀಡಿದ್ದು ಸರ್ಕಾರದ ಅನುಮೋದಿತ ಪತ್ರದಲ್ಲಿ ಇರುವುದಿಲ್ಲ.**

1)ಮಹೇಶ್ ಉಣಕಲ್ ಯೋಜನಾಧಿಕಾರಿ ಹುದ್ದೆಯಿಂದ ಉಪನಿರ್ದೇಶಕರು ಹುದ್ದೆಗೆ ಬಡ್ತಿ ನೀಡಲಾಗಿದೆ.
2)ಲಕ್ಷ್ಮಣ ಮಹಾಮುನಿ ಶೀಘ್ರಲಿಪಿಗಾರರು ಹುದ್ದೆಯಿಂದ ಅಧೀಕ್ಷಕರು ಹುದ್ದೆಗೆ ಬಡ್ತಿ ನೀಡಲಾಗಿದೆ.
3)ರಾಮಾ ನಾಯ್ಕ ಕಿರಿಯ ಸಹಾಯಕ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಬಡ್ತಿ ನೀಡಲಾಗಿದೆ.
4)ಪಿ.ಎಸ್. ಕರುಣಾಕರ ಕಿರಿಯ ಸಹಾಯಕ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಬಡ್ತಿ ನೀಡಲಾಗಿದೆ.
5)ಕೆ.ಮರಿಸ್ವಾಮಿ ಕಿರಿಯ ಸಹಾಯಕ ಪ್ರಥಮ ಹುದ್ದೆಯಿಂದ ಪ್ರಥಮ ದರ್ಜೆ.ಸಹಾಯಕ ಹುದ್ದೆಗೆ ಬಡ್ತಿ ನೀಡಲಾಗಿದೆ.

**ಕಿರಿಯ ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕರ ಹುದ್ದೆಗೆ ಬಡ್ತಿ ನೀಡುವಾಗ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಜ್ಞಾನವಿರಬೇಕೆಂಬ ಸಿ ಆಂಡ್ ಆರ್ ನಿಯಮ ಉಲ್ಲಂಘಿಸಿರುವುದು.**

1)ಶ್ರೀಮತಿ.ದಿಲ್ ಖಾದ್ ಭಾನು ಖಾಜಿ
2)ಕೆ.ಎಸ್.ಮರಿಸ್ವಾಮಿ
3)ಸಿ.ವಾಗೀಶ್
4)ಎಂ.ಭರಂಲಿಂಗಪ್ಪ

ಸಂಬಂಧಿಸಿದ ನೌಕರರ ಸೇವಾ ಪುಸ್ತಕದಲ್ಲಿ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಜ್ಞಾನದ ಬಗ್ಗೆ ದಾಖಲೆ ಇರುವುದಿಲ್ಲ. ಈ ಬಗ್ಗೆ ಲೆಕ್ಕ ತನಿಖಾ ವಿಚಾರಣೆ ಪತ್ರ ಸಂಖ್ಯೆ:93:ದಿನಾಂಕ:06-08-2016 ರಂದು ನೀಡಿದ್ದು ಉತ್ತರ ನೀಡಿರುವುದಿಲ್ಲ. ಡಿ ದರ್ಜೆ ಹುದ್ದೆಯಿಂದ ಕಿರಿಯ ಸಹಾಯಕರಾಗಿ ಬಡ್ತಿ ನೀಡಿದ್ದು ಹುದ್ದೆಗೆ ಅರ್ಹವಿರುವ ಪಿಯುಸಿ ಪರೀಕ್ಷೆ ತೇರ್ಗಡೆಯಾದ ಬಗ್ಗೆ ಸೇವಾ ಪುಸ್ತಕದಲ್ಲಿ ದಾಖಲಿಸದಿರುವುದು

| | ಹಿಂದಿನ ಹುದ್ದೆ | ಬಡ್ತಿ ನೀಡಿದ ಹುದ್ದೆ |
|---|---|---|
| 1)ಎಫ್.ಡಿ.ನಧಾಫ್ | : ಕಾವಲುಗಾರ | : ಕಿರಿಯ ಸಹಾಯಕ |
| 2)ಗಾದಿಲಿಂಗ | : ತೋಟಮಾಲಿ | : ಕಿರಿಯ ಸಹಾಯಕ |
| 3)ಚಂದ್ರಪ್ಪ ಬಡಿಗೇರ | : ಕಾವಲುಗಾರ | : ಕಿರಿಯ ಸಹಾಯಕ |
| 4)ಹನುಮೇಶ್ ಪತ್ತಾರ್ | : ಪ್ಯಾಕರ್ | : ಕಿರಿಯ ಸಹಾಯಕ |

ಈ ವಿಷಯದ ಬಗ್ಗೆ ಲೆಕ್ಕ ತನಿಖಾ ವಿಚಾರಣೆ **ಪತ್ರ ಸಂಖ್ಯೆ:92 ದಿನಾಂಕ:06-08-2016**ರಂದು ವಿವರ ನೀಡಲು ಸೂಚಿಸಿದ್ದು ಉತ್ತರ ನೀಡಿರುವುದಿಲ್ಲ.

ದಿನಾಂಕ:22-01-2015 ರಂದು ಕಾರ್ಯಕಾರಿ ಸಮಿತಿ **ಸಭೆಯ 170ನೇ ನಡಾವಳಿಯಲ್ಲಿ ನಿರ್ಣಯ ಸಂಖ್ಯೆ:170.05ರಲ್ಲಿ** ವಿಶ್ವವಿದ್ಯಾಲಯದಲ್ಲಿ ಅರ್ಹಅಭ್ಯರ್ಥಿಗಳಿಗೆ ಪದೋನ್ನತಿ ನೀಡಲು ಹಾಗೂ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಸೃಜನೆಯಾಗಿರುವ ಹುದ್ದೆಗಳಿಗೆ ಅಂಗೀಕಾರ ನೀಡಲು ಅನುಶಾಸನವನ್ನು ಸಭೆಯು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ.ಸಾಧನಾ ತಂತ್ರಿ ಅವರು ಈ ತೀರ್ಮಾನಕ್ಕೆ ಸಮ್ಮತಿಯನ್ನು ಸೂಚಿಸಿಲ್ಲವೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.

ದಿನಾಂಕ:26-05-2015ರಂದು ನಡೆದ ಕಾರ್ಯಕಾರಿ ಸಮಿತಿಯ 174ನೇ ಸಭೆಯ ನಡಾವಳಿ ನಿರ್ಣಯ ಸಂಖ್ಯೆ:174.11ರಲ್ಲಿ ದಿನಾಂಕ:22-01-2015ರಂದು ನೀಡಿರುವ ಆದೇಶಗಳನ್ನು ಹಿಂಪಡೆದು ತಿದ್ದುಪಡಿ ಆದೇಶವನ್ನು ನೀಡಲು ಸಮಿತಿಯು ಸೂಚಿಸಿತು. ಸದರಿ ತಿದ್ದುಪಡಿ ಆದೇಶವು ಕಾರ್ಯಕಾರಿ ಸಮಿತಿಯ ಅನುಮೋದನೆಯ ದಿನಾಂಕದಿಂದ ಜಾರಿಗೆ ಬರುತ್ತದೆ ಹಾಗೂ ಸಂಬಂಧಿಸಿದ ಸಿಬ್ಬಂದಿಗಳಿಗೆ ಯಾವುದೇ ರೀತಿಯ ಹಣಕಾಸು ಸೌಲಭ್ಯಗಳನ್ನು ವಿಸ್ತರಿಸಲು ಸಾಧ್ಯವಿಲ್ಲವೆಂದು ಸಭೆಯು ತಿರ್ಮಾನಿಸಿತು**(ಅನುಬಂಧ-10 ರಲ್ಲಿ ಲಗತ್ತಿಸಿದೆ)**

ಅದರೆ ಕಾರ್ಯಕಾರಿ ಸಮಿತಿಯ ನಿರ್ಣಯದ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಲೆಕ್ಕ ತನಿಖಾ ವಿಚಾರಣೆ **ಪತ್ರ ಸಂಖ್ಯೆ:73.ದಿನಾಂಕ:02-08-2016ರಂದು** ನೀಡಿದ್ದು ಇದಕ್ಕೆ ಉತ್ತರ ನೀಡಿಲ್ಲ.39 ಜನರ ವೇತನ ಬಟವಾಡೆ ರಿಜಿಸ್ಟರ್ ಪರಿಶೀಲಿಸಲಾಗಿ. ಕ್ರಮ ಸಂಖ್ಯೆ:8ರ **ಶ್ರೀ.ಚಂದ್ರಶೇಖರಪ್ಪ ಹೊರತು ಪಡಿಸಿ ಉಳಿದ 38 ಜನರಿಗೆ ಫೆಬ್ರವರಿ 2015ರಿಂದ ಬಡ್ತಿ ಪಡೆದ ಹುದ್ದೆಯ ಸಂಬಳಕ್ಕೆ ನಿಗದಿಪಡಿಸಿ ಪಾವತಿಸಿದ್ದಾರೆ. ಕಾರಣ ಫೆಬ್ರವರಿ 2015ರಿಂದ ಮಾರ್ಚ್2016ರವರೆಗೆ ಹೆಚ್ಚಿಗೆ** ಪಾವತಿಸಿದ ಮೊತ್ತ ವನ್ನು ಸರ್ಕಾರದ ಅನುಮೋದನೆ ಪಡೆದು ವಿವರ ಲೆಕ್ಕ ತನಿಖೆಗೆ ಹಾಜರುಪಡಿಸುವವರೆಗೆ **ರೂ:1240541/-**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು **ಅನುಬಂಧ.11ರಲ್ಲಿ** ಲಗತ್ತಿಸಿದೆ.

ಪುನರ್‌ಪರಿಶೀಲನಾ ಸಮಯದಲ್ಲಿ ಈ ಮೇಲಿನ ಆಕ್ಷೇಪಣೆಗೆ ಈ ಕೆಳಗಿನಂತೆ ಉತ್ತರ ನೀಡಿರುತ್ತಾರೆ "ಕನ್ನಡ ವಿ.ವಿ.ಯಲ್ಲಿ ಸೇವೆ ಸಲ್ಲಿಸುತ್ತಿದ್ದ ಭೋಧಕೇತರ ಸಿಬ್ಬಂದಿಗಳಿಗೆ ಸೂಕ್ತ ಪ್ರಾಧೀಕಾರಗಳಾದ **ಇಲಾಖಾ ಮುಂಬಡ್ತಿ ಸಮಿತಿ** ಶಿಫಾರಸ್ಸು ಮತ್ತು **ಕಾರ್ಯಕಾರಿ ಸಮಿತಿಯ** ಅನುಮೋದನೆಯಂತೆ ದಿ: 22-01-2015 ರಂದು ಮುಂಬಡ್ತಿ ಆದೇಶ ನೀಡಲಾಗಿದೆ." ಈ ಕಂಡಿಕೆಯಲ್ಲಿ ಮೇಲೆ ಸೂಚಿಸಿದಂತೆ ದಿ: **22-01-2015** ರಂದು ನಡೆದ **ಕಾರ್ಯಕಾರಿ ಸಮಿತಿ** ಸಭೆಯ **170ನೇ** ನಡವಳಿಯಲ್ಲಿ ನಿರ್ಣಯ ಸಂಖ್ಯೆ **170.05** ರಲ್ಲಿ 39 ಜನ ಭೋಧಕೇತರ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲಾಗಿರುತ್ತದೆ. ಈ ದಿನಾಂಕ 22-01-15 ರ ಕಾರ್ಯಕಾರಿ ಸಮಿತಿಯ ನಿರ್ಣಯವನ್ನು **ದಿ:26-05-2015** ರಂದು ನಡೆದ **174ನೇ ಕಾರ್ಯಕಾರಿ ಸಮಿತಿಯಲ್ಲಿ** ನಿರ್ಣಯ ಸಂಖ್ಯೆ **174.11** ರಲ್ಲಿ ಹಿಂದಿನ ನಡವಳಿಯಲ್ಲಿ ಮುಂಬಡ್ತಿ ನೀಡಿರುವುದನ್ನು ಹಿಂಪಡೆಯಲು, ತಿದ್ದುಪಡಿ ಆದೇಶ ಮಾಡಲು ಸೂಚಿಸಿ ಯಾವುದೇ ರೀತಿಯ ಆರ್ಥಿಕ ಸೌಲಭ್ಯಗಳನ್ನು ನೀಡಲು ಸಾಧ್ಯವಿಲ್ಲವೆಂದು ತೀರ್ಮಾನಿಸಲಾಗಿತ್ತು. ಆದರೆ ಇಲ್ಲಿಯವರೆಗೂ ದಿನಾಂಕ 26-05-2015ರ ಕಾರ್ಯಕಾರಿ ಸಮಿತಿ ಸಭೆಯ ತೀರ್ಮಾನವನ್ನು ಅನುಷ್ಠಾನಕ್ಕೆ ತಂದಿರುವುದಿಲ್ಲ. ಅಲ್ಲದೆ ಮೇಲೆ ತಿಳಿಸಿದಂತೆ ಆರ್ಥಿಕ ಸೌಲಭ್ಯವನ್ನು ವಿಸ್ತರಿಸಬಾರದೆಂದು ಸಭೆಯ ತೀರ್ಮಾನವಿದ್ದರೂ ಕೂಡ ವಿಸ್ತರಿಸಲಾಗಿದೆ. ಆದ್ದರಿಂದ ಸದರಿ ವಿವರಣೆಯನ್ನು ಒಪ್ಪಲಾಗುವುದಿಲ್ಲ.

ಅಲ್ಲದೆ **ಕಿರಿಯ ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕರ ಹುದ್ದೆಗೆ ಬಡ್ತಿ** ನೀಡುವಾಗ ಕನ್ನಡ ಮತ್ತು ಇಂಗ್ಲಿಷ್ ಬೆರಳಚ್ಚು ಜ್ಞಾನವಿರಬೇಕೆಂಬ ಸಿ.ಅಂಡ್ ಆರ್ ನಿಯಮ ಉಲ್ಲಂಘಿಸಿರುವ ಆಕ್ಷೇಪಣೆಗೆ ಸದರಿ ಸಂಸ್ಥೆಯವರು ಉತ್ತರ ನೀಡಿ ಈ ಸಿಬ್ಬಂದಿಗಳಿಗೆ ಬಹಳ ವರ್ಷಗಳಿಂದ ಮುಂಬಡ್ತಿ ಇಲ್ಲದಿದ್ದರಿಂದ ಇವರ ಸೇವೆಯನ್ನು ಪರಿಗಣಿಸಿ ಹಾಗೂ ವಿದ್ಯಾರ್ಹತೆಯನ್ನು ಪರಿಗಣಿಸಿ ಮುಂಬಡ್ತಿ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ ಕಾರ್ಯಕಾರಿ ಸಮಿತಿಯ ನಿರ್ಣಯದ ಮೇಲೆ ಮುಂಬಡ್ತಿ ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಯಾವುದೆ ಸಂಸ್ಥೆ ನೇಮಕಾತಿಗೆ ಸಂಬಂದಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಿಕೊಂಡಾಗ ಅದರಲ್ಲಿರುವ ಮಾನದಂಡಗಳನ್ನು ಪರಿಗಣಿಸಿ ಮುಂಬಡ್ತಿ ನೀಡಬೇಕಾಗುತ್ತದೆ. ಈ ರೀತಿ ಅನರ್ಹರಿದ್ದರೂ ಮುಂಬಡ್ತಿ ನೀಡಿರುವುದು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವಿರುದ್ಧವಾಗಿರುತ್ತದೆ. ಇನ್ನು ಈ ನೌಕರರಿಗೆ ಡಿ.ದರ್ಜೆ ಹುದ್ದೆಯಿಂದ ಕಿರಿಯ ಸಹಾಯಕರಾಗಿ ಬಡ್ತಿ ನೀಡಲು ಬೇಕಾಗಿದ್ದ ಪಿ.ಯು.ಸಿ ಪರೀಕ್ಷೆಯನ್ನು ತೇರ್ಗಡೆಯಾದ ಬಗ್ಗೆ ಸೇವಾ ಪುಸ್ತಕದಲ್ಲಿ ದಾಖಲಿಸದಿರುವ ಆಕ್ಷೇಪಣೆಗೆ ಈ ಸಂಸ್ಥೆಯವರು ಉತ್ತರ ನೀಡಿ ಈ ಸಿಬ್ಬಂದಿಗಳು ಮುಂಬಡ್ತಿಗೆ ಬೇಕಾದ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಿರುವುದರಿಂದ ಹಾಗೂ ಎಸ್.ಎಸ್.ಎಲ್.ಸಿ. ಉತ್ತೀರ್ಣ ರಾಗಿರುವುದರಿಂದ ಇವರ ಸೇವೆಯನ್ನು ಪರಿಗಣಿಸಿ ಮುಂಬಡ್ತಿ ನೀಡಲಾಗಿದೆಯೆಂದು ತಿಳಿಸಿರುತ್ತಾರೆ. ಆದರೆ ಈ ವಿ.ವಿ.ಯ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಡಿ.ದರ್ಜೆ ಯಿಂದ ಕಿರಿಯ ಸಹಾಯಕ ಹುದ್ದೆಗೆ ಮುಂಬಡ್ತಿ ನೀಡಲು ಪಿ.ಯು.ಸಿ. ತೇರ್ಗಡೆಯಾಗಿರಬೇಕಾಗುತ್ತದೆ. ಈ ರೀತಿ ಪಿ.ಯು.ಸಿ ತೇರ್ಗಡೆಯಾಗದಿರುವ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಿರುವುದು ನಿಯಮಬಾಹಿರವಾಗಿರುತ್ತದೆ.

ಇನ್ನು ಶ್ರೀ. ಸಿ.ಗುರುಮೂರ್ತಿ, **ಕಿರಿಯ ಸಹಾಯಕರು** ಇವರಿಗೆ ಕಿರಿಯ ಅಭಿಯಂತರರು (ವಿದ್ಯುತ್) ಹುದ್ದೆಗೆ ಮುಬಂಡ್ತಿ ನೀಡಿದ ಆಕ್ಷೇಪಣೆಗೆ ಸದರಿ ಸಂಸ್ಥೆಯವರು ಉತ್ತರ ನೀಡಿ ಸದರಿಯವರು ದಿನಾಂಕ 29-12-2005 ರಿಂದ ಕಿರಿಯ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ಹುದ್ದೆಯಲ್ಲಿ 11 ವರ್ಷಗಳ ಸೇವಾನುಭವ ಹೊಂದಿರುತ್ತಾರೆ ಇವರು ಸ್ನಾತಕೋತ್ತರ ಪದವಿ ಹಾಗೂ ಎಲೆಕ್ಟ್ರಿಕಲ್ ವಿದ್ಯಾರ್ಹತೆ ಹೊಂದಿದ್ದಾರೆ. ಇಲಾಖಾ ಪರೀಕ್ಷೆಯನ್ನು ಪೂರೈಸಿದ್ದಾರೆ. ವಿಶ್ವವಿದ್ಯಾಲಯಕ್ಕೆ ಅಗತ್ಯ ಹುದ್ದೆಯನ್ನು ಭರ್ತಿಮಾಡಬೇಕಾಗಿರುವುದರಿಂದ ಅಗತ್ಯ ವಿದ್ಯಾರ್ಹತೆ ಮತ್ತು ಸೇವಾನುಭವ ಇರುವ ಇವರ ಸೇವೆಯನ್ನು ಬಳಸಿಕೊಳ್ಳಲು ಕಿರಿಯ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ. ಪರಿಶೀಲಿಸಲಾಗಿ ಶ್ರೀ. ಸಿ.ಗುರುಮೂರ್ತಿ ಇವರು **ತಾಂತ್ರಿಕೇತರ ಹುದ್ದೆಯಾದ** ಕಿರಿಯ ಸಹಾಯಕರಾಗಿದ್ದು ಇವರನ್ನು **ತಾಂತ್ರಿಕ ಹುದ್ದೆಯಾದ** ಕಿರಿಯ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡಲು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಆದ್ದರಿಂದ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅವಕಾಶವಿಲ್ಲದ ತಾಂತ್ರಿಕೇತರ ಹುದ್ದೆಯಿಂದ ತಾಂತ್ರಿಕ ಹುದ್ದೆಗೆ ಮುಂಬಡ್ತಿ ನೀಡಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ.

## 2.4.7)ಕನ್ನಡ ವಿಶ್ವವಿದ್ಯಾಲಯವು 105 ಜನ ಸಿಬ್ಬಂದಿಯನ್ನು ಸಂಚಿತ ವೇತನ/ ಗುತ್ತಿಗೆ / ಅರೆಕಾಲಿಕ ತಾತ್ಕಾಲಿಕ ಆಧಾರದ ಮೇರೆಗೆ ಕರ್ತವ್ಯಕ್ಕೆ ತೆಗೆಕೊಂಡಿದ್ದು ಸರ್ಕಾರದ ಮಂಜೂರಾತಿ ಇಲ್ಲದೆ ಸಿ ಆಂಡ್ ಆರ್ ನಲ್ಲಿ ಮಂಜೂರಾತಿ ಹುದ್ದೆಗಳಲ್ಲಿದೆ ನೇಮಕ ಮಾಡಿರುವುದು:-

ಆಡಳಿತ ವಿಭಾಗದ ಕಡತ ಪರಿಶಿಲಿಸಲಾಗಿ **ವಿಶ್ವವಿದ್ಯಾಲಯವು 105ಜನ ಸಂಚಿತ ವೇತನ/ಗುತ್ತಿಗೆ/ಅರೆಕಾಲಿಕ/ತಾತ್ಕಾಲಿಕ/** ಆಧಾರದ **ಮೇರೆಗೆ ಸರ್ಕಾರದ** ಮಂಜೂರಾತಿ ಇಲ್ಲದೆ ಸಿ ಆಂಡ್ ಆರ್‌ನಲ್ಲಿ ಮಂಜೂರಾದ ಹುದ್ದೆಗಳಿಲ್ಲದೆ ನೇಮಕ ಮಾಡಿರುವುದು ಕಾನೂನಿಗೆ ವಿರುದ್ಧವಾಗಿರುತ್ತದೆ. ಈ ಬಗ್ಗೆ ಲೆಕ್ಕ ತನಿಖಾ ವಿಚಾರಣಾ **ಪತ್ರ ಸಂಖ್ಯೆ:67:ದಿನಾಂಕ:14-07-2016**ರಲ್ಲಿ ವಿವರ ನೀಡಲು ಸೂಚಿಸಲಾಗಿ ವಿಶ್ವವಿದ್ಯಾಲಯದ ಕಛೇರಿ **ಪತ್ರ ಸಂಖ್ಯೆ:ಕ.ವಿ.ಹಂ.ಹ.ವಿ:2016-17:ದಿನಾಂಕ:28-07-2016ರಂದು** ಉತ್ತರ ನೀಡಿದ್ದು, ಪ್ರಾರಂಭದಲ್ಲಿ ಮಾತ್ರ ಹುದ್ದೆಗಳು ಮಂಜೂರಾಗಿದ್ದು ಭರ್ತಿಮಾಡಲಾಗಿದೆ. ನಂತರ ಸರ್ಕಾರದಿಂದ ಹುದ್ದೆಗಳು ಮಂಜೂರಾಗಿರುವುದಿಲ್ಲ. ವಿಶ್ವವಿದ್ಯಾಲಯ ದಿನೇ ದಿನೇ ಬೆಳೆದಂತೆ ಕೆಲಸ ಕಾರ್ಯಗಳನ್ನು ಸರಿದೂಗಿಸುವುದಕ್ಕಾಗಿ ಕುಲಪತಿಗಳು ಪ್ರದತ್ತವಾದ ಅಧಿಕಾರ ಬಳಿಸಿ ವಿದ್ಯಾರ್ಹತೆಗೆ ತಕ್ಕಂತೆ ತಾತ್ಕಾಲಿಕ, ದಿನಗೂಲಿ ಹಾಗೂ ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ನಿಯೋಜಿಸಿದ್ದು ಸರ್ಕಾರಕ್ಕೆ ಮಂಜೂರಾತಿಗೆ ಪತ್ರ ಬರೆದಿದೆ ಎಂದು ಉತ್ತರಿಸಿದ್ದಾರೆ.ವಿಶ್ವವಿದ್ಯಾಲಯ ಮಂಜೂರಾದ ಹುದ್ದೆಇದ್ದಲ್ಲಿ ಮಾತ್ರ ಕುಲಪತಿಗಳು ಕೆಲಸಕ್ಕೆ ನಿಯೋಜಿಸಬೇಕು.ಮೇಲ್ಕಂಡ ಉತ್ತರ/ಅನುಸರಣೆ ಅಸಮರ್ಪಕವಾಗಿದ್ದು ಲೆಕ್ಕ ತನಿಖೆಯಲ್ಲಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಸಿ ಆಂಡ್ ಆರ್ ಪರಿಷ್ಕೃತಗೊಳಿಸಿ ಸರ್ಕಾರದಿಂದ ಹೆಚ್ಚು ಹುದ್ದೆಗಳನ್ನು ಅನುಮೋದನೆ ಪಡೆದ ನಂತರವೇ ಕುಲಪತಿಗಳು ಅರ್ಹತೆಗೆ ತಕ್ಕಂತೆ ನೌಕರರನ್ನು ನೇಮಕ ಮಾಡಿಕೊಳ್ಳಬೇಕು.

**2014-15ನೇ & 2015-15ನೇ ಸಾಲಿನಲ್ಲಿ 105 ಜನಗಳಿಗೆ ಪಾವತಿಸಿದ ಮೊತ್ತ(ಏಪ್ರಿಲ್ 2014ರಿಂದ ಮಾರ್ಚ 2016ರ ವರೆಗೆ ವಿವರಗಳನ್ನುಅನುಬಂದ-12ರಲ್ಲಿ ಲಗತ್ತಿಸಿದೆ) ರೂ:18479873/- ಆಕ್ಷೇಪಣೆಯಲ್ಲಿಡಲಾಗಿದೆ. ಸಂಕ್ಷಿಪ್ತ ವಿವರ ಕೆಳಗಿನಂತಿವೆ.**

| | | |
|---|---|---|
| 1 | ವಿವಿಧ ವಿಭಾಗಗಳಲ್ಲಿ ಹಾಗೂ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ | 12987652/- |
| 2 | ದೂರ ಶಿಕ್ಷಣ ನಿರ್ದೇಶನಾಲಯ | 1435919/- |
| 3 | ದೂರ ಶಿಕ್ಷಣ ನಿರ್ದೇಶನಾಲಯ | 269464/- |
| 4 | ಬಾದಾಮಿ ಕೇಂದ್ರ | 2357115/- |
| 5 | ಸಂತೋಷ್ ಎನ್ | 79320/- |
| 6 | ನಂದಿನಿ .ಬಿ | 59600/- |
| 7 | ಕೆ.ಗಂಗಾಧರ್ ಡಾಟಾ ಎಂಟ್ರಿ ಆಪರೇಟರ್ | 85450/- |
| 8 | ದೃಶ್ಯಕಲಾ ವಿಭಾಗದ ತಾತ್ಕಾಲಿಕ ಅಧ್ಯಾಪಕರು | 1060663/- |
| 9 | ಹಾಲು ಮತ ಅಧ್ಯಮನ ಪೀಠ | 144690/- |
| | **ಒಟ್ಟು** | **18479873/-** |

## 2.4.8)ನೂತನ ನಿವೃತ್ತಿ ವೇತನ ಯೋಜನೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸದಿರುವುದು:-

ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ: ಎಫ್.ಡಿ.(ಎಸ್.ಪಿ.ಎಲ್.)209 ಪಿಇಎನ್:2012.ಬೆಂಗಳೂರು ದಿನಾಂಕ:21-02-2015 ರಲ್ಲಿ ಕ್ರಮಸಂಖ್ಯೆ: 2ರಲ್ಲಿ ರಾಜ್ಯ ಸ್ವಾಯತ್ತ ಸಂಸ್ಥೆಗಳು ಬೋರ್ಡ್ಸ್/ಕಾರ್ಪೊರೇಷನ್‌ಗಳು/ಸೊಸೈಟಿಗಳು ಯೂನಿವರ್ಸಿಟಿಗಳು ರಾಜ್ಯ ಅನುದಾನ ಸಂಸ್ಥೆಗಳು 01-04-2006ರಿಂದ ಕೆಲಸಕ್ಕೆ ಸೇರಿದವರ ಪಿಂಚಣಿ ವಂತಿಕೆ ಹಾಗೂ ಎಂಪ್ಲಾಯರ್ ವಂತಿಕೆಯನ್ನು ಸಂಸ್ಥೆಯ ಮೂಲ ಆದಾಯಗಳಿಂದ ಭರಿಸತಕ್ಕದೆಂದು ಸ್ಪಷ್ಟವಾಗಿ ಆದೇಶ ನೀಡಿದ್ದಾರೆ. ಸರ್ಕಾರಿ **ಆದೇಶ ಸಂಖ್ಯೆ:FD(S.P.L)04 Pension ಬೆಂಗಳೂರು ದಿನಾಂಕ:31-03-2006**ರಲ್ಲಿ ನೂತನ ನಿವೃತ್ತಿ ವೇತನ ಜಾರಿಗೊಳಿಸಲು ಸೂಚಿಸಿದ್ದಾರೆ. ಮಹಾಲೇಖಪಾಲರು ಬೆಂಗಳೂರು ಇವರ 2012-13ರಿಂದ 2014-15ನೇ ಸಾಲಿನ ಲೆಕ್ಕ ತನಿಖಾ ವರದಿಯಲ್ಲಿ Part-2 Section B ಕಂಡಿಕೆ ಸಂಖ್ಯೆ 23ರಲ್ಲಿ ವಂತಿಕೆಯನ್ನು ಫಿಕ್ಸಡ್ ಡೆಪಾಸಿಟ್ ಅಕೌಂಟನಲ್ಲಿ ತೊಡಗಿಸಿದ್ದಾರೆಂದು ತಿಳಿಸಿದ್ದಾರೆ.ಹಾಗೂ ಹೊಸ ಎನ್.ಪಿ.ಎಸ್ ಬ್ಯಾಂಕ್ ಖಾತೆಯನ್ನು ಪ್ರತ್ಯೇಕವಾಗಿ ನಿರ್ವಹಿಸಲು ಸೂಚಿಸಿದ್ದಾರೆ ಎಂಪ್ಲಾಯರ್ ಕಾಂಟ್ರಿಬ್ಯುಷನ್ ಜಮಾಮಾಡಿದ ಬಗ್ಗೆ ಯಾವ ದಾಖಲೆಗಳನ್ನು ನೀಡಿರುವುದಿಲ್ಲ. ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ:12/2016.17:ದಿನಾಂಕ:20-04-2016ರಲ್ಲಿ ಎನ್.ಪಿ.ಎಸ್ ನಿರ್ವಹಣೆ ಬಗ್ಗೆ ಪೂರ್ಣವರದಿ ನೀಡಲು ಸೂಚಿಸಿದ್ದರೂ ಸಹ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಇದರಿಂದ 01-04-2006ರ ನಂತರ ನೇಮಕವಾದ ಅಧಿಕಾರಿ/ನೌಕರರಿಗೆ ಎನ್.ಪಿ.ಎಸ್.ಸೌಲಭ್ಯದಿಂದ ವಂಚಿತರಾಗಿದ್ದಾರೆ ಕಾರಣ ಈ ವಿಷಯದ ಬಗ್ಗೆ ಆಡಳಿತ ವರ್ಗ ವಿಶೇಷ ಪ್ರಥಮ ಆದ್ಯತೆನೀಡಿ ಎನ್.ಪಿ.ಎಸ್ ಯೋಜನೆಯನ್ನು 01-04-2006ರಿಂದ ಯಥಾವತ್ತಾಗಿ ಜಾರಿಗೊಳಿಸಿ ಲೆಕ್ಕ ತನಿಖೆಗೆ ವರದಿ ನೀಡಲು ಸೂಚಿಸಿದೆ.

## 2.4.9)ಶ್ರೀ.ಬಿ.ಈರಪ್ಪ, ಡಿ ಗ್ರೂಪ್ ನೌಕರರಿಗೆ ಕಿರಿಯ ಸಹಾಯಕ ಹಾಗೂ ಹಿರಿಯಸಹಾಯಕ ಹುದ್ದೆ ಬಡ್ತಿ ನೀಡಿರುವ ಬಗ್ಗೆ:-

ಶ್ರೀ.ಬಿ.ಈರಪ್ಪ ಡಿ ಗ್ರೂಪ್ ನೌಕರರ ಸೇವಾ ಪುಸ್ತಕ ಪರಿಶೀಲಿಸಲಾಗಿ ವಿವರ ಈ ಕೆಳಕಂಡಂತಿದೆ:-

**ಜನ್ಮ ದಿನಾಂಕ:01-06-1974**
**ಡಿ ಗ್ರೂಪ್ ನೌಕರರಾಗಿ ಸೇವೆಗೆ ಸೇರಿದ್ದು:29-04-1997**
**ಕಿರಿಯ ಸಹಾಯಕರಾಗಿ ಬಡ್ತಿ:23-03-1998**
**ಹಿರಿಯ ಸಹಾಯಕರಾಗಿ ಬಡ್ತಿ:22-09-2003**

**03-12-1993ರ** ಸಿ ಆಂಡ್ ಆರ್ ಪ್ರಕಾರ ಕಿರಿಯ ಸಹಾಯಕರಿಂದ ಹಿರಿಯ ಸಹಾಯಕರಾಗಿ ಬಡ್ತಿ ನೀಡಬೇಕಾದರೆ ಅಂಗೀಕೃತ ವಿಶ್ವವಿಧ್ಯಾಲಯದಿಂದ ಪದವಿ ಹೊಂದಿರಬೇಕು.ಸದರಿ ನೌಕರನ ಸೇವಾ ಪುಸ್ತಕದಲ್ಲಿ ಪದವಿಯ ವಿವರ ಇರುವುದಿಲ್ಲ.ಹಾಗೂ ಕಿರಿಯ ಸಹಾಯಕರು ಬೆರಳಚ್ಚು ಜ್ಞಾನ ಹೊಂದಿರಬೇಕೆಂಬ ಷರತ್ತು ಇದ್ದು ಬೆರಳಚ್ಚು ಜ್ಞಾನ ಇರುವುದರ ಬಗ್ಗೆ ಸೇವಾ ಪುಸ್ತಕದಲ್ಲಿ ವಿವರ ನಮೂದಿಸಿರುವುದಿಲ್ಲ. ಇದರಿಂದ ಬಡ್ತಿ ನೀಡುವಾಗ ಸಿ ಆಂಡ್ ಆರ್ ನಿಯಮ ಪರಿಪಾಲಿಸದೆ ಇರುವುದು ಕಂಡುಬಂದಿದೆ. ಈ ಬಗ್ಗೆ ಪೂರ್ಣ ಮಾಹಿತಿ ಲೆಕ್ಕ ತನಿಖೆಗೆ ನೀಡಲು ಸೂಚಿಸಿದೆ. ಈ ಬಗ್ಗೆ ಮಹಾಲೇಖಪಾಲರು 2012-13ರಿಂದ2014 15ನೇ ಸಾಲಿನ ಲೆಕ್ಕ ತನಿಖಾವರದಿ **ಸೆಕ್ಷನ್.ಬಿ.2(2)**ರಲ್ಲಿ ತೀವ್ರವಾಗಿ ಆಕ್ಷೇಪಿಸಿದ್ದಾರೆ ಕಾರಣ ಈ ಕುರಿತು ತಕ್ಷಣ ಕ್ರಮ ಕೈಗೊಂಡು ಅನುಸರಣೆ ನೀಡುವುದು.

## 2.4.10)ಶ್ರೀ.ಕೆ.ಹೆಚ್.ಕಟ್ಟಿ ಪಿ.ಆರ್.ಓ ಇವರಿಗೆ ಸಿ ಆಂಡ್ ಆರ್ ನಿಯಮಗಳಿಗೆ ವ್ಯತಿರಿಕ್ತವಾಗಿ ಪದೋನ್ನತಿ ನೀಡಿರುವುದು:-

ಶ್ರೀ.ಕೆ.ಹೆಚ್.ಕಟ್ಟಿ ಪಿ.ಆರ್.ಓ ಇವರ ಸೇವಾ ಪುಸ್ತಕ ಪರಿಶೀಲಿಸಲಾಗಿ ವಿವರಗಳು ಈ ಕೆಳಕಂಡಂತಿವೆ

**ಹುಟ್ಟಿದ ದಿನಾಂಕ:19-01-1962**
**ಆಪ್ತಸಹಾಯಕ ಉಪಕುಲಪತಿ:01-05-1996**
**ಪ್ರವಾಚಕಾರಾಗಿ ಹಂಗಾಮಿ:31-10-1997**
**ಯೋಜನಾಧಿಕಾರಿಯಾಗಿ ನಿಯೋಜಿಸಿದ್ದು:29-10-1997**
**ಪಿ.ಆರ್.ಓ ಆಗಿ ಬಡ್ತಿ:07-05-2010**

ಆದರೆ ವಿಶ್ವವಿದ್ಯಾಲಯದ **03-12-1993ರ** ಸಿ ಆಂಡ್ ಆರ್ ಪ್ರಕಾರ ಯೋಜನಾಧಿಕಾರಿ ಹುದ್ದೆಗೆ ನಿಯೋಜಿಸಬೇಕಾದರೆ ಪಿ.ಜಿ.ಯಲ್ಲಿ ಕನಿಷ್ಟ ಎರಡನೆ ದರ್ಜೆ ವಿದ್ಯಾರ್ಹತೆ ಹಾಗೂ ಅಧೀಕ್ಷಕರಾಗಿ 8 ವರ್ಷ ಸೇವೆ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿರಬೇಕು. ಈ ಅರ್ಹತೆ ಇರವುದಿಲ್ಲ .8ವರ್ಷ ಸೇವೆಯನ್ನು ಪರಿಗಣಿಸದಿರುವುದಕ್ಕೆ ಮಹಾಲೇಖಪಾಲರು 2012-13ರಿಂದ2014-15ನೇ ಸಾಲಿನ ಸೆಕ್ಷನ್.ಬಿ.ವರದಿ ಕಂಡಿಕೆ II(1)ರಲ್ಲಿ ತೀವ್ರವಾಗಿ ಆಕ್ಷೇಪಿಸಿದ್ದಾರೆ. ಸೇವಾನುಭವವನ್ನು ಪರಿಗಣಿಸದಿರುವುದಕ್ಕೆ ಸೂಕ್ತ ವಿವರಣೆ ನೀಡಲು ಸೂಚಿಸಿದೆ.

## 2.4.11)ಶ್ರೀ.ಬಿ.ಸುಜ್ಞಾನ ಮೂರ್ತಿ ಪ್ರಸಾರಾಂಗ ಸಹಾಯಕ ನಿರ್ದೇಶಕರು ಪ್ರಿಂಟಿಂಗ್ ಮತ್ತು ಗ್ರಂಥ ಸಂಪಾದನೆ ಅರ್ಹತೆ ಇಲ್ಲದಿದ್ದರೂ ಬಡ್ತಿ ನೀಡಿರುವುದು:-

ಶ್ರೀ.ಬಿ.ಸುಜ್ಞಾನ ಮೂರ್ತಿ ಹಂಗಾಮಿ ಉಪನ್ಯಾಸಕರ ಸೇವಾ ಪುಸ್ತಕ ಪರಿಶೀಲಿಸಲಾಗಿ ಗ್ರಂಥ ಸಂಪಾದನೆ ಅರ್ಹತೆ, ಪ್ರಿಂಟಿಂಗ್ ಮತ್ತು ಈ ಕ್ಷೇತ್ರದಲ್ಲಿ ಹಿಂದಿನ ಅನುಭವ ಪರಿಗಣಿಸದೇ ಪ್ರಸಾರಾಂಗ ಸಹಾಯಕ ನಿರ್ದೇಶಕರಾಗಿ ಬಡ್ತಿ ನೀಡಿರುವುದು ಸಿ ಆಂಡ್ ಆರ್ 03-12-1993ಕ್ಕೆ ವಿರುದ್ಧವಾಗಿರುತ್ತದೆ.

ಜನ್ಮ ದಿನಾಂಕ:06-07-1960
ಹಂಗಾಮಿಉಪನ್ಯಾಸಕ:31-08-1994
ಸಹಾಯಕ ನಿರ್ದೇಶಕರು:03-09-1996

ಈ ಕುರಿತಂತೆ ಸೆಕ್ಷನ್.ಬಿ.II ಮಹಾಲೇಖಪಾಲರು **2012-13ರಿಂದ2014-15** ಸಾಲಿನ ಲೆಕ್ಕ ತನಿಖಾ ವರದಿ **ಕಂಡಿಕೆ ಸಂಖ್ಯೆ(6)**ರಲ್ಲಿ ಈ ಬಗ್ಗೆ ತೀವ್ರವಾಗಿ ಆಕ್ಷೇಪ ವ್ಯಕ್ತ ಪಡಿಸಿದ್ದಾರೆ. ಸಿ ಆಂಡ್ ಆರ್ ನಿಯಮದಲ್ಲಿ ಸೂಚಿಸಿದ ಅರ್ಹತೆ ಅನುಭವಗಳನ್ನು ಪರಿಗಣಿಸದೆ ಬಡ್ತಿ ನೀಡಿರುವುದು ನಿಯಮಗಳಿಗೆ ವ್ಯತಿರಿಕ್ತವಾಗಿದ್ದು ತಕ್ಷಣ ಈ ಬಡ್ತಿಯನ್ನು ಹಿಂದಕ್ಕೆ ಪಡೆದು ಹೆಚ್ಚುವರಿ ಪಾವತಿಸಲಾದ ವೇತನ ಭತ್ಯೆಗಳನ್ನು ಲೆಕ್ಕ ಹಾಕಿ ವಸೂಲಿ ಮಾಡಿ ಅನುಸರಣೆ ನೀಡಲು ಸೂಚಿಸಿದೆ.

## 2.4.12)ಶ್ರೀ.ಹೆಚ್.ಬಿ.ರವೀಂದ್ರ ಪ್ರಸಾರಾಂಗ ಸಹಾಯಕ ನಿರ್ದೇಶಕರು ಅನುಭವದ ಅರ್ಹತೆಯನ್ನು ಪರಿಗಣಿಸದೇ ಬಡ್ತಿ ನೀಡಿರುವುದು:-

ಶ್ರೀ.ಹೆಚ್.ಬಿ.ರವೀಂದ್ರ ಸಹಾಯಕ ನಿರ್ದೇಶಕರು ಇವರು ಸೇವಾಪುಸ್ತಕ ಪರಿಶೀಲಿಸಲಾಗಿ ಸಿ ಆಂಡ್ ಆರ್ ನಲ್ಲಿ ನಿರ್ದಿಷ್ಟ ಪಡಿಸಿದ ಅರ್ಹತೆ ಇಲ್ಲದಿದ್ದರೂ ಬಡ್ತಿ ನೀಡಿರುವುದು ಲೆಕ್ಕ ತನಿಖೆಯಲ್ಲಿ ಕಂಡು ಬಂದಿದೆ.

ಹುಟ್ಟಿದ ದಿನಾಂಕ:04-07-1973
ಕಿರಿಯ ಸಹಾಯಕ:03-07-1993
ಸಹಾಯಕ ನಿರ್ದೇಶಕರು:24-09-1994,

**03-12-1993ರ** ಸಿ **ಅಂಡ್ ಆರ್ ಪ್ರಕಾರ** ಸಹಾಯಕ ನಿರ್ದೇಶಕರು ಪ್ರಸಾರಾಂಗಕ್ಕೆ ಬಡ್ತಿ ನೀಡುವಾಗ ಪ್ರಿಂಟಿಂಗ್, ಗ್ರಂಥ ಸಂಪಾದನೆ (ಬುಕ್ಸ್ ಎಡಿಟಿಂಗ್)ಅನುಭವವಿರಬೇಕೆಂಬ ನಿಯಮವಿದ್ದು ಸೇವಾ ಪುಸ್ತಕದಲ್ಲಿ ಪ್ರಿಂಟಿಂಗ್, ಗ್ರಂಥ ಸಂಪಾದನೆ (ಬುಕ್ಸ್ ಎಡಿಟಿಂಗ್ ಅನುಭವ) ವಿವರ ಇರುವುದಿಲ್ಲ. ಹಾಗೂ ಸಂಬಂಧಿಸಿದ ಸೇವಾ ಕ್ಷೇತ್ರದಲ್ಲಿನ ಡಾಕ್ಯುಮೆಂಟ್ ಪ್ರೂಫ್ ಸೇವಾ ಪುಸ್ತಕದಲ್ಲಿ ನಮೂದು ಇರುವುದಿಲ್ಲ. ಈ ಬಗ್ಗೆ ಮಹಾಲೇಖಪಾಲರು **2012-13ರಿಂದ2014-15** ಸಾಲಿನ ತನಿಖಾ ವರದಿ **ಸೆಕ್ಷನ್.ಬಿ.ಕ್ರಮ ಸಂಖ್ಯೆ:5**ರಲ್ಲಿ ತೀವ್ರವಾಗಿ ಆಕ್ಷೇಪವ್ಯಕ್ತಪಡಿಸಿದ್ದಾರೆ.ಬಡ್ತಿ ನೀಡುವಾಗ ಮೇಲ್ಕಂಡ ಅರ್ಹತೆಗಳನ್ನು ಕೂಲಂಕುಷವಾಗಿ ಪರಿಗಣಿಸದಿರುವುದು ಲೆಕ್ಕ ತನಿಖೆಯಲ್ಲಿ ತೀವ್ರ ಆಕ್ಷೇಪಿಸಲಾಗಿದೆ.

## 2.4.13)ಶ್ರೀ ಚಂದ್ರಶೇಖರಪ್ಪ ಕಿರಿಯ ಅಭಿಯಂತರರು(ಸಿವಿಲ್)ಇವರಿಗೆ ಸಹಾಯಕ ಅಭಿಯಂತರರಾಗಿ ದಿನಾಂಕ:22-01-2015ರಂದು ಸರ್ಕಾರದ ಆದೇಶದ ವಿರುದ್ಧವಾಗಿ ಬಡ್ತಿ ನೀಡಿರುವುದು:-

**ಶ್ರೀ.ಚಂದ್ರಶೇಖರಪ್ಪ** ಕಿರಿಯ ಅಭಿಯಂತರರು(ಸಿವಿಲ್)ಇವರ ಸೇವಾ ಪುಸ್ತಕ ಹಾಗೂ ವೈಯುಕ್ತಿಕ ಕಡತ ಪರಿಶೀಲಿಸಲಾಗಿ ಸರ್ಕಾರದ ಅಧೀನ ಕಾರ್ಯದರ್ಶಿ ಶಿಕ್ಷಣ ಇಲಾಖೆ/ವಿಶ್ವವಿದ್ಯಾಲಯ ಬಹುಮಹಡಿ ಕಟ್ಟಡ ಬೆಂಗಳೂರು ಇವರ **ಪತ್ರ ಸಂಖ್ಯೆ:ಇಡಿ.12:ಕೆ.ವಿ.ವಿ:2008:ದಿನಾಂಕ:06-01-2009**ರಲ್ಲಿ ಕಿರಿಯ ಅಭಿಯಂತರರು (ಸಿವಿಲ್)ಹುದ್ದೆಯಿಂದ ಸಹಾಯಕ ಅಭಿಯಂತರ(ಸಿವಿಲ್)ಹುದ್ದೆಗೆ ಮೇಲ್ದರ್ಜೆಗೇರಿಸುವ ಅನುಶಾಸನಗಳಿಗೆ ಅನುಮೋದನೆ ನೀಡುವ ಬಗ್ಗೆ ಸಿ ಆಂಡ್ ಆರ್ ನಿಯಮಗಳನ್ವಯ ಮಂಜೂರಾಗಿರುವ 2 ಕಿರಿಯ ಇಂಜಿನಿಯರ್ ಹುದ್ದೆಗಳಲ್ಲಿ ಈಗಾಗಲೇ ಒಂದು ಹುದ್ದೆ ಖಾಲಿ ಇದ್ದು ಹಾಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ಇಂಜಿನಿಯರ್ ಹುದ್ದೆಯನ್ನು ಉನ್ನತೀಕರಸಿದಲ್ಲಿ ವಿಶ್ವವಿದ್ಯಾಲಯ ಜೂನಿಯರ್ ಇಂಜಿನಿಯರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುವವರೇ ಇಲ್ಲದಂತಾಗುತ್ತದೆ.ಇದರಿಂದಾಗಿ ವಿಶ್ವವಿದ್ಯಾಲಯದಲ್ಲಿ ಕೆಳ ಹಂತದಲ್ಲಿನ ಮೂಲ ಭೂತ ಕೆಲಸ ಕಾರ್ಯಗಳಿಗೆ ತೊಡಕುಂಟಾಗುವ ಸಾಧ್ಯತೆಯಿದೆ ಎಂದು ತಿಳಿಸಿದ್ದು, ಈ ಹಿಂದೆ ಅಸ್ತಿತ್ವದಲ್ಲಿದ್ದ ಸಹಾಯಕ ಇಂಜಿನಿಯರ್ ಹುದ್ದೆಯ ಅಗತ್ಯವಿಲ್ಲವೆಂದು ಆ ಹುದ್ದೆಯನ್ನು ಸಹಾಯಕ ಕಾರ್ಯಪಾಲಕ ಹುದ್ದೆಗೆ ಉನ್ನತೀಕರಿಸಿರುವುದರಿಂದ ಪ್ರಸ್ತುತ ಪುನ:ಜೂನಿಯರ್ ಇಂಜಿನಿಯರ್ ಹುದ್ದೆಯನ್ನು ಸಹಾಯಕ ಇಂಜಿನಿಯರ್ ಹುದ್ದೆಗೆ ಉನ್ನತೀಕರಿಸುವ ಅಗತ್ಯತೆ ಕಂಡು ಬರುವುದಿಲ್ಲ, ಉನ್ನತೀಕರಣದಿಂದಾಗಿ ಉಂಟಾಗುವ ಅಧಿಕ ವೆಚ್ಚವನ್ನು ವಿಶ್ವವಿದ್ಯಾಲಯವೇ ಭರಿಸುವುದಾರೂ ಅಸ್ತಿತ್ವದಲ್ಲಿರುವ ಹುದ್ದೆಗಳನ್ನು ಪದೇ ಪದೇ ಉನ್ನತೀಕರಿಸುವುದು, ರದ್ದು ಪಡಿಸುವುದು ಮೂಲ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗುತ್ತದೆ.ಆದ್ದರಿಂದ ವಿಶ್ವವಿದ್ಯಾಲಯ ಪರಿನಿಮಯಗಳಿಗೆ/ಅನುಶಾಸನಗಳಿಗೆ ಈ ರೀತಿ ಪದೇ ಪದೇ ತಿದ್ದುಪಡಿ ತರುವುದು ಸೂಕ್ತವಾಗುವುದಿಲ್ಲವೆಂದು ತಮಗೆ ತಿಳಿಸಲು ನಿರ್ದೇಶಿತನಾಗದ್ದೇನೆಂದು ಪತ್ರ ಬರೆದಿದ್ದಾರೆ.

ಆದರೆ ಈ ಆದೇಶಕ್ಕೆ ವಿರುದ್ಧವಾಗಿ ಕಛೇರಿ ಆದೇಶ ಸಂಖ್ಯೆ:ಕವಿಹಂ:ಕುಸ:ಇಮು:2014–15:ಸ್ಥ:14:ಜನವರಿ 22.2015ರಲ್ಲಿ ಶ್ರೀ.ಚಂದ್ರಶೇಖರಪ್ಪ ಕಿರಿಯ ಅಭಿಯಂತರರು(ಸಿವಿಲ್)ಹುದ್ದೆಯಿಂದ ಸಹಾಯಕ ಅಭಿಯಂತರರು(ಸಿವಿಲ್ ಹುದ್ದೆ ಸ್ಥಾನ ಪನ್ನ ಪದೋನ್ನತಿ ನೀಡಿ **22–01–2015** ರಿಂದ ಸಹಾಯಕ ಅಭಿಯಂತರರು(ಸಿವಿಲ್)ಹುದ್ದೆಯ ಮುಲ ವೇತನ **ರೂ:29600/–** ಮತ್ತಿತರ ಭತ್ಯೆಗಳನ್ನು ನಿಯಮಾನುಸಾರ ಪಡೆಯುತ್ತಾರೆಂದು ಆದೇಶಿಸಿದ್ದಾರೆ. ಈ ಬಗ್ಗೆ ಲೆಕ್ಕ ತನಿಖಾ ವಿಚಾರಣೆ ಪತ್ರ ಸಂಖ್ಯೆ:79:2016–17 ದಿನಾಂಕ:03–08–2016 ರಂದು ನೀಡಲಾಗಿ **ಪುನರ್‌ಪರಿಶೀಲನಾ** ಸಮಯದಲ್ಲಿ ಸದರಿ ಸಂಸ್ಥೆಯವರು "ಶ್ರೀಯುತರು 20 ವರ್ಷಗಳಿಂದ ಒಂದೇ ಹುದ್ದೆಯಲ್ಲಿದ್ದು ಮುಂಬಡ್ತಿ ದೊರಕಿರುವುದಿಲ್ಲ. ಲೋಕೋಪಯೋಗಿ ಇಲಾಖೆ ಆದೇಶದನ್ವಯ ಮುಂಬಡ್ತಿಗೆ ಅರ್ಹರಾಗಿವುದರಿಂದ ಮತ್ತು ಪದೋನ್ನತಿ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನಕ್ಕಿಂತ ಹೆಚ್ಚಿನ ವೇತನ ಪಡೆಯುತ್ತಿದ್ದರಿಂದ ಇವರ ಹುದ್ದೆಯನ್ನು ಪುನರ್ ಪದನಾಮಕರಿಸಿ ಸ್ಥಾನಪನ್ನ ಪದೋನ್ನತಿ ನೀಡಲಾಗಿದೆ. ಈ ಪದೋನ್ನತಿಯಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಹೆಚ್ಚಿನ ಆರ್ಥಿಕ ಹೊಣೆಯಾಗಿರುವುದಿಲ್ಲವೆಂದು" ತಿಳಿಸಿದ್ದಾರೆ. ಪರಿಶೀಲಿಸಲಾಗಿ ಸದರಿಯವರಿಗೆ ನೀಡಿರುವ ಮುಂಬಡ್ತಿಯಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಹೆಚ್ಚಿನ ಆರ್ಥಿಕ ಹೊಣೆಯಾಗದಿದ್ದರೂ ಕೂಡ ಈ ಮೇಲೆ ಸೂಚಿಸಿದಂತೆ ಸರ್ಕಾರದ ಅಧೀನ ಕಾರ್ಯದರ್ಶಿಗಳ ಆದೇಶಕ್ಕೆ ವಿರುದ್ಧವಾಗಿ ಹಾಗೂ ಮೂಲ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಈ ರೀತಿ ಪುನರ್‌ಪದನಾಮೀಕರಿಸಲು ಅವಕಾಶವಿಲ್ಲದಿದ್ದರು ಮುಂಬಡ್ತಿ ನೀಡುವುದು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವಿರುದ್ಧವಾಗಿರುತ್ತದೆ. ಸರ್ಕಾರದ ಅನುಮೋದನೆಯಿಲ್ಲದೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಅಧಿಕಾರ ವಿಶ್ವವಿದ್ಯಾಲಯಕ್ಕೆ ಇರುವುದಿಲ್ಲ. ಆದ್ದರಿಂದ ಈ ವಿವರಣೆಯನ್ನು ಒಪ್ಪಲಾಗುವುದಿಲ್ಲ.

## 2.4.14)ಡಿ.ದರ್ಜೆ ನೌಕರರಿಗೆ ನಿಯಮಗಳಿಗೆ ವ್ಯತಿರಿಕ್ತವಾಗಿ ಗಳಿಕೆ ರಜೆ ನಗದೀಕರಣ ಮಾಡಿ ಪಾವತಿಸಿರುವ ಬಗ್ಗೆ:–

ಕನ್ನಡ ವಿಶ್ವವಿದ್ಯಾಲಯದ ಹಂಪಿಯ **2014–15 ಮತ್ತು 2015–16ನೇ** ಸಾಲಿನ ಡಿ.ದರ್ಜೆ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಪರಿಶೀಲಿಸಲಾಗಿದ್ದು. ಸದರಿ 66 ಜನ ಡಿ.ಗ್ರೂಪ್ ನೌಕರರಿಗೆ ಕಛೇರಿ **ಆದೇಶ ಸಂಖ್ಯೆ:1.ಕ.ವಿ.ವಿ./ಕು.ಪ/ಗ.ರ.ನ/2015–16/107/ದಿನಾಂಕ:08–02–2016 ರಂದು** ಗಳಿಕೆ ರಜೆ ನಗದೀಕರಣ **ಸೌಲಭ್ಯವನ್ನು** ನೀಡಿ **ಚೆಕ್.ಸಂಖ್ಯೆ:068801 ದಿನಾಂಕ:17–02–2016 ರಂದು ರೂ:603365/–**ಗಳನ್ನು ಪಾವತಿಸಲಾಗಿದೆ. ಈ ಪಾವತಿಯಲ್ಲಿ ಶ್ರೀ.ಡಿ.ಖಾಸಿಂ ಬಾಷ ಜವಾನ ಇವರಿಗೆ **13** ದಿನಗಳಿಗೆ **(01–01–2016ರಿಂದ13–01–2016)**ಗಳಿಕೆ ರಜೆ ನಗದೀಕರಣ ಮಾಡಿ **ರೂ:7564/–**ಗಳನ್ನು ಪಾವತಿಸಲಾಗಿದೆ.ಸದರಿಯವರು ಸೇವಾ ಪುಸ್ತಕವನ್ನು ಪರಿಶೀಲಿಸಲಾಗಿದ್ದು.ಅವರ ರಜೆಯ ಖಾತೆಯಲ್ಲಿ **ಕೇವಲ 7** ದಿನಗಳು ಮಾತ್ರ ಲಭ್ಯವಿರುತ್ತವೆ. **ಮೂಲವೇತನ ರೂ:12250/–ತುಟಿಭತ್ಯೆ:–32.5% ಮ.ಬಾ.ಬ.ಶೇ.10%**

| ಪಾವತಿ ಮಾಡಿರುವುದು | |
|---|---|
| 13ದಿನಗಳಿಗೆ ಮೂಲವೇತನ | 5308 |
| ತುಟ್ಟಿಭತ್ಯೆ 32.5% | 1725 |
| ಮನೆ ಬಾಡಿಗೆ ಭತ್ಯೆ | 531 |
| ಒಟ್ಟು | **7564** |

**ರೂ:7564/–**ಗಳನ್ನು ಸದರಿ ನೌಕರರಿಂದ ವಸೂಲಿ ಮಾಡಿ ಕ.ವಿ.ವಿ.ಯದ ವೇತನ ಖಾತೆಗೆ ಜಮಾ ಮಾಡಿ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡುವುದು.

## 2.4.15)ನಿವೃತ್ತಿ ವೇತನ ಬ್ಯಾಂಕ್ ಖಾತೆಯ ಲೆಕ್ಕದ ವಿವರಗಳು:–

**2014–15ಮತ್ತು 2015–16ನೇ** ಸಾಲಿನ ನಿವೃತ್ತಿ ವೇತನ ಮತ್ತು ನಿವೃತ್ತಿ ವೇತನ ಸ್ವೀಕೃತಿ ವಹಿಯನ್ನು ಪರಿಶೀಲಿಸಲಾಗಿ ಅನುದಾನದ ಲಭ್ಯವಿರುವ ವಿವರಗಳನ್ನು**(ಬ್ಯಾಂಕ್ ಆಫ್ ಇಂಡಿಯಾ ಎಸ್.ಬಿ. ಅಕೌಂಟ್ ನಂ:842210100009367ಕಮಲಾಪುರ)**

**2014–2015**

| | |
|---|---|
| ದಿನಾಂಕ:01–04–2014ಕ್ಕೆ ಪ್ರರಂಭಿಕ ಶಿಲ | ರೂ:10388323=81 |
| 2014–2015ನೇ ಸಾಲಿನ ಸ್ವೀಕೃತಿ ಮೊತ್ತ | ರೂ:8592536=50 |
| ಒಟ್ಟು ಮೊತ್ತ | **ರೂ:18980860=31** |
| 2014–15ನೇ ಸಾಲಿನ ಪಾವತಿಗಳ ಮೊತ್ತ | ರೂ:16446284=07 |
| ದಿನಾಂಕ:31–03–2015ಕ್ಕೆ ಅಂತಿಮ ಶಿಲ್ಕು | ರೂ:2534576=24 |

**2015–16**

| | |
|---|---|
| ದಿನಾಂಕ:01-04-2014ಕ್ಕೆ ಪ್ರರಂಭಿಕ ಶಿಲ | ರೂ:2534576.24 |
| 2014-2015ನೇ ಸಾಲಿನ ಸ್ವೀಕೃತಿ ಮೊತ್ತ | ರೂ:9050482.00 |
| ಒಟ್ಟು ಮೊತ್ತ | **ರೂ:11585058.24** |
| 2014-15ನೇ ಸಾಲಿನ ಪಾವತಿಗಳ ಮೊತ್ತ | (–) 9577970.00 |
| ದಿನಾಂಕ:31-03-2015ಕ್ಕೆ ಅಂತಿಮ ಶಿಲ್ಕು | (–) 2007088.24 |

ವಿವರಗಳನ್ನು ಅನುಬಂಧ–13ರಲ್ಲಿ ಲಗತ್ತಿಸಿದೆ.

## 2.4.16)ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಸೇವಾಪುಸ್ತಕ ಪರಿಶೀಲಿಸಿದಾಗ ಕಂಡುಬಂದ ಸಾಮಾನ್ಯ ನ್ಯೂನತೆಗಳು:–

1) ವೇತನ ಶ್ರೇಣಿಗಳನ್ನು/ಪರಿಷ್ಕೃತ ವೇತನ ಶ್ರೇಣಿಗಳನ್ನು ಸಿಬ್ಬಂದಿಗಳಿಗೆ ನಿಗದಿಮಾಡುವಾಗ ಆಕುರಿತು ವಿವರವಾಗಿ ಸೇವಾ ಪುಸ್ತಕದಲ್ಲಿ ಬರೆಯದಿರುವುದು.

2) G.O.No.Ed37 UNE 2009 Dated 24-12-2009 ಅಪೆಂಡಿಕ್ಸ್ ರ ಕಂಡಿಕೆ 3ರ(i) ರಲ್ಲಿ ತಿಳಿಸಿರುವಂತೆ ವೇತನಶ್ರೇಣಿಯಲ್ಲಿ ಮೂಲವೇತನ ಲೆಕ್ಕ ಹಾಕುವಾಗ ಚಾಲ್ತಿ ಮೂಲವೇತನವನ್ನು ದಿನಾಂಕ:01-01-2006ರ ಪ್ಯಾಕ್ಟರ್ 1.8.6 ಗುಣಾಕಾರದೊಂದಿಗೆ ಲಭ್ಯವಾಗುವ ವೇತನವನ್ನು ಮುಂದಿನ ದಶಾಂಕಕ್ಕೆ ನಿಗದಿಪಡಿಸಬೇಕು.ಆದರೆ ಬೋಧಕ ಸಿಬ್ಬಂದಿಯ ಸೇವಾ ಪುಸ್ತಕ ಪರಿಶೀಲಿಸಿದಾಗ ಈ ಪ್ರಕಾರವಾಗಿ ಕ್ರಮ ಕೈ ಗೊಳ್ಳದಿರುವುದು ಕಂಡುಬಂದಿದ್ದು ಸರಿಪಡಿಸುವುದು.

3) G.O.No.Ed37 UNE 2009 Dated 24-12-2009 ಅಪೆಂಡಿಕ್ಸ್ (v) form of option ನಲ್ಲಿ ಸದರಿ ಬೋಧಕ ಸಿಬ್ಬಂದಿಗಳಿಂದ ಐಚ್ಛಿಕ ಆಯ್ಕೆ ಪತ್ರ ಪಡೆದಿರುವುದರ ಬಗ್ಗೆ ಮಾಹಿತಿಗಳನ್ನು ಲೆ.ಪ.ಗೆ ಹಾಜರುಪಡಿಸಿರುವುದಿಲ್ಲ.

4) Ph.D/NET/SET/SLET ಗಳನ್ನು ಹೊಂದಿದ ದಿನಾಂಕ ಸಹಿತ ಯಾವ ವಿಷಯದಲ್ಲಿ ಹೊಂದಿದ್ದಾರೆ ಎಂಬುದನ್ನು ಸೇವಾ ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ.ಕೂಡಲೇ ಇವುಗಳನ್ನು ಸಮರ್ಪಕವಾಗಿ ದಾಖಲಿಸಿ ಮುಂದಿನ ಲೆ.ಪ.ಗೆ ಹಾಜರುಪಡಿಸಿವುದು.

5) ಯಾವ ವಿಭಾಗದಲ್ಲಿ ಉಪನ್ಯಾಸಕರಾಗಿ ನೇಮಕ ಹೊಂದಿದ್ದಾರೆ ಎಂಬುದರ ಕುರಿತು ವಿವರಗಳನ್ನು ಸೇವಾ ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ. ಆದ್ದರಿಂದ ಸದ್ರಿ ವಿಷಯವನ್ನು ದಾಖಲಿಸಿ ಮುಂದಿನ ಲೆ.ಪ.ಗೆ ಹಾಜರುಪಡಿಸುವುದು.

6) Ph.D/ಪದೋನ್ನತಿ ವೇತನ ಬಡ್ತಿ ನೀಡಿದಾಗ ವಿವರವಾಗಿ fixation table ಹಾಕದೇ ಇರುವುದು.

7) ಸೇವಾ ಪುಸ್ತಕದ ಭಾಗ–3 ರಲ್ಲಿ ಆದೇಶಿತ ರಜೆಗಳು ಅನ್ಯಕಾರ್ಯನಿಮಿತ್ತಕರ್ತವ್ಯ ಈ ರೀತಿ ರಜೆಗಳನ್ನು ದಾಖಲಿಸಲು ಅವಕಾಶವಿರುವುದಿಲ್ಲ.ಕೂಡಲೇ ಇದನ್ನು ಸರಿಪಡಿಸುವುದು ಹಾಗೂ ಅನುಸರಣೆ ಸಲ್ಲಿಸುವುದು.

8) ಕೆಲವು ಪ್ರಕರಣಗಳಲ್ಲಿ ಜನ್ಮ ದಿನಾಂಕ ದೃಢೀಕರಣ ಮಾಡಿರುವುದಿಲ್ಲ.

9) ಗಳಿಕೆ ರಜೆ ನಗದೀಕರಣ ಮಾಡುವಾಗ ಸಿಬ್ಬಂದಿಯ ಹಕ್ಕಿನಲ್ಲಿರುವ ಗಳಿಕೆರಜೆಗಳನ್ನು ಸರಿಯಾಗಿ ಪರಿಶೀಲಿಸದೇ ಗಳಿಕೆ ರಜೆ ನಗದೀಕರಣಮಾಡಿ ಅನಂತರ ಗಳಿಕೆ ರಜೆಯ ಅಂತಿಮ ಶಿಲ್ಕನ್ನು ಋಣಾತ್ಮಕ ಎಂದು ದಾಖಲಿಸಿದ್ದು ಈ ರೀತಿ ಋಣಾತ್ಮಕ ಎಂದು ದಾಖಲಿಸಿದ ಸಿಬ್ಬಂದಿಗಳಿದ ಋಣಾತ್ಮಕ ಸಂಖ್ಯೆಯಲ್ಲಿ ಬಂದ ಗಳಿಕೆ ರಜೆಗಳಿಗೆ ಪ್ರತಿದಿನಕ್ಕೆ ದೊರೆಯುವ ವೇತನದಿಂದ ಗುಣಿಸಿ ಆ ಮೊತ್ತವನ್ನು ಸದರಿ ಸಿಬ್ಬಂದಿಗಳಿಂದ ವಸೂಲಿಸಿ ವಿ.ವಿ.ಖಾತೆಗೆ ಜಮಾ ಮಾಡಿ ಲೆಕ್ಕ ಪರಿಶೋಧನೆಗೆ ಅನುಸರಣೆ ಸಲ್ಲಿಸುವುದು.

10) ಹಲವಾರು ಸೇವಾ ಪುಸ್ತಕಗಳನ್ನು ಪರಿಶೀಲಿಸಲಾಗಿ ಸೇವಾ ವಿವರಗಳನ್ನು ಕಾಲಾನುಕ್ರಮದಲ್ಲಿ ದಾಖಲಿಸದೇ ಇರುವುದು ಇದನ್ನು ಸರಿಪಡಿಸಿ ಲೆ.ಪ.ಗೆ ಅನುಸರಣೆ ಸಲ್ಲಿಸುವುದು.

ಈ ಮೇಲಿನ ನ್ಯೂನತೆಗಳಿಗೆ ಲೆ.ಪ.ವಿ.ಪತ್ರ ಸಂಖ್ಯೆ:84–ದಿನಾಂಕ:04–08–2016ರಂದು ನೀಡಲಾಗಿದ್ದು ಅನುಸರಣೆ ನೀಡಿರುವುದಿಲ್ಲ.ಆದ್ದರಿಂದ ಅನುಸರಣೆ ನೀಡುವುದು ಹಾಗೂ ಮುಂದಿನ ಲೆಕ್ಕ ಪರಿಶೋಧನೆಗೆ ಸಮರ್ಪಕ ರೀತಿಯಲ್ಲಿ ಸೇವಾವಹಿ ನಿರ್ವಹಿಸಿ ಹಾಜರುಪಡಿಸುವುದು.

**2.4.17)ಶ್ರೀ.ಕಲವೀರ ಮನ್ವಾಚಾರ್.ಪ್ರಾಧ್ಯಾಪಕರು.ಶಾಸನಶಾಸ್ತ್ರ ವಿಭಾಗ ಇವರ ಸೇವಾ ಅವಧಿಯಲ್ಲಿ ಕಂಡುಬಂದ ನ್ಯೂನತೆಗಳು:–**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಯುತರು **ದಿನಾಂಕ:28-02-1996** ರಂದು ಅಧ್ಯಾಪಕ ಹುದ್ದೆಗೆ **ರೂ:2200/–ಮೂಲ ವೇತನ(2200–4000 ವೇತನ ಶ್ರೇಣಿಯಲ್ಲಿ) ನೇಮಕವಾಗಿತ್ತಾರೆ.ದಿನಾಂಕ:27-02-2001ರಂದು** ಹಿರಿಯ ವೇತನ **ಶ್ರೇಣಿಯಲ್ಲಿ(10000–15200)ರೂ:12175/– ಮೂಲ ವೇತನಕ್ಕೆ ನಿಗದಿಪಡಿಸಿದ್ದು .2006ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಯಲ್ಲಿ ದಿನಾಂಕ:01-01-2006ಕ್ಕೆ 7000 ಎ.ಜಿ.ಪಿಯಲ್ಲಿ ರೂ:28630/–ಕ್ಕೆ ಹಾಗೂ 26–02–2006 ರಂದು ಎ.ಜಿ.ಪಿ 8000ರಲ್ಲಿ ರೂ:31110/–ಗಳಿಗೆ** ನಿಗದಿಪಡಿಸಲಾಗಿದೆ.**ದಿನಾಂಕ:01–02–2009 ರಂದು ಪ್ರವಾಚಕ(Reader)ಹುದ್ದೆಗೆ ಪದೋನ್ನತಿ ನೀಡಿ ರೂ:46400/–** ವೇತನ ನಿಗದಿಪಡಿಸಿದ್ದು **ದಿನಾಂಕ:26–02–2012ಕ್ಕೆ ಪ್ರಾಧ್ಯಾಪಕ ಹುದ್ದೆಗೆ (ರೂ.10000 ಎ.ಜಿ.ಪಿ ಮೂಲ ವೇತನ ರೂ:51700/–)ಅದರಂತೆ** ಕ್ರಮವಾಗಿ **ಫೆಬ್ರವರಿ.2/13. 2/14 2/15 ಹಾಗೂ 2/16ರಲ್ಲಿ ಮೂಲ ವೇತನ 53250.54850.56495.ಹಾಗೂ 58190** ವೇತನ ನಿಗದಿಗೊಳಿಸಿದೆ ಶ್ರೀಯುತರ ಸೇವಾ ಅವಧಿಯಲ್ಲಿ ಕಂಡುಬಂದ ನ್ಯೂನತೆಗಳ ವಿವರ ಈ ಕೆಳಗಿನಂತಿದೆ.

1) ಶ್ರೀಯುತರ 1989ರಲ್ಲಿ ಸ್ನಾತಕೋತ್ತರ(ಕನ್ನಡವಿಭಾಗ)ದಲ್ಲಿ ಉತ್ತೀರ್ಣಗೊಂಡು ದಿನಾಂಕ:10–03–1996ರಂದು ಎಂ.ಫಿಲ್ ಅನ್ನು ಪುರಾತತ್ವ ವಿಭಾಗದಲ್ಲಿ ಉತ್ತೀರ್ಣರಾಗಿರುತ್ತಾರೆ.ಇವರು ಸೇವೆಗೆ ಸೇರುವುದಕ್ಕಿಂತ ಮುನ್ನ ಕೇವಲ ಸ್ನಾತಕೋತ್ತರ ಪದವಿ ಪಡೆದಿದ್ದು ವಿ.ವಿ.ಯ ಸಿ ಆಂಡ್ ಆರ್ ನಿಯಮಗಳಂತೆ ಎಂ.ಫಿಲ್/ಪಿ.ಹೆಚ್.ಡಿ ಪದವಿ ಹೊಂದದೇ ಇದ್ದಾಗ್ಯೂ ನೇಮಕ ಮಾಡಿಕೊಂಡಿರುವ ಬಗ್ಗೆ ಸ್ಪಷ್ಟೀಕರಣ ನೀಡುವುದು.

2) ಶ್ರೀಯುತರು ಸೇವಾ ಅವಧಿಯಲ್ಲಿ ಎಂ.ಫಿಲ್ ಪೂರ್ಣಗೊಳಿಸಿದ್ದಕ್ಕೆ ದಿನಾಂಕ:01–02–2002 ರಂದು 2.ಎಂಫಿಲ್ ಮುಂಗಡ ವೇತನ ಬಡ್ತಿಗಳನ್ನು 1996 ರ ಯು.ಜಿ.ಸಿ ವೇತನ ಶ್ರೇಣಿಯಡಿ ಮಂಜೂರು ಮಾಡಲಾಗಿದೆ. ಈ ಬಡ್ತಿ ಸೌಲಭ್ಯನೀಡಲು ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿ ಹಾಗೂ ರೆಗ್ಯೂಲೇಶನ್‌ಗಳಲ್ಲಿ ಅವಕಾಶ ಕಲ್ಪಿಸಿದ ಬಗ್ಗೆ ಮಾಹಿತಿ ನೀಡುವುದು.

3) ದಿನಾಂಕ:27–02–2001 ರಂದು ಹಿರಿಯವೇತನಶ್ರೇಣಿ(ಎಸ್.ಎಸ್.ಎಲ್.)10000–15200 ವೇತನ ಶ್ರೇಣಿಯಲ್ಲಿ 2.ಪಿ.ಹೆಚ್.ಡಿ.ಹಾಗೂ **2.ಎಂ.ಫಿಲ್.ಮುಂಗಡಉತ್ತೇಜನಬಡ್ತಿಗಳನ್ನುನೀಡಿ ರೂ:12175/–10000–15200**ರಲ್ಲಿ ನಿಗದಿ ಪಡಿಸಲಾಗಿತ್ತು.

ಈ ಮೇಲೆ ವಿವರಿಸಿದಂತೆ ದಿನಾಂಕ:27–02–2001 ರಂದು ಹಿರಿಯ ವೇತನ ಶ್ರೇಣಿಯಲ್ಲಿ ಕನಿಷ್ಠ ವೇತನ ರೂ:10000/–ಕ್ಕೆ ನಿಗದಿಪಡಿಸಬೇಕಾಗಿತ್ತು. ಅದರೆ ಅದರ ಅಧಾರದ ಮೇಲೆ ಯು.ಜಿ.ಸಿ.2006ರ ಪರೀಷ್ಕೃತ ವೇತನ ಶ್ರೇಣಿಯಲ್ಲಿ ರೂ:28020/–ಕ್ಕೆ ವೇತನ ನಿಗದಿಪಡಿಸಬೇಕಾಗಿತ್ತು.

4) ಸಕಾರದ ಆದೇಶ ಸಂಖ್ಯೆ ದಿನಾಂಕ:24–12–2009 ರ ಪ್ರಕಾರ All Other Allowances/Benefits Shall Be Extended From The Date Of Issue Of Go" ಎಂದು ತಿಳಿಸಿದ್ದು ಸದರಿ ಸ್ಥಾನೀಕರಣ ಸೌಲಭ್ಯ ಹಾಗೂ grade pay movement ದಿನಾಂಕ.24/12/2009ರಿಂದ ಅನ್ವಯಿಸುತ್ತದೆ. ಈ ಹಿನ್ನಲೆಯಲ್ಲಿ ರೂ:8000/–ಎ.ಜಿ.ಪಿಯಲ್ಲಿ ಮೂಲವೇತನ ರೂ:32670/–ಕ್ಕೆ ದಿನಾಂಕ:24–12–2009ರಂದು ನಿಗದಿಪಡಿಸಬೇಕಾಗಿತ್ತು.ಹಾಗೂ ದಿನಾಂಕ:24–12–2012ರಂದು ಪ್ರವಾಚಕ (Reader) ಹುದ್ದೆಗೆ ಬಡ್ತಿ ನೀಡಿ ಕನಿಷ್ಟ ವೇತನ ರೂ:46400/–(9000 ಎ.ಜಿ.ಪಿ)ಅದರಂತೆ 24/12/2015 ರಂದು ಪ್ರಾಧ್ಯಾಪಕ (professer)ಹುದ್ದೆಗೆ ಬಡ್ತಿ ನೀಡಿ ಮೂಲ ವೇತನ ರೂ:51702/–(10000ಎ.ಜಿ.ಪಿ)ಯಲ್ಲಿ ವೇತನ ನಿಗದಿಪಡಿಸಬೇಕಾಗಿತ್ತು.

ಈ ವಿಷಯಕ್ಕೆ ಸಂಬಂಧಿಸಿದಂತೆ ಲೆ.ಪ.ವಿ ಪತ್ರ ಸಂಖ್ಯೆ:90 ದಿನಾಂಕ:06/08/2016 ರಂದು ನೀಡಲಾಗಿದ್ದು ಸದರಿ ಸಂಸ್ಥೆಯವರು ಪುನರ್ ಪರಿಶೀಲನಾ ಸಮಯಲ್ಲಿ ನೀಡಿರುವ ಅನುಸರಣೆಯಲ್ಲಿ ಮೇಲೆ ಸೂಚಿಸಿದ ಕ್ರಮಸಂಖ್ಯೆ 1. 2& 3ರ ಆಕ್ಷೇಪಣೆಗಳಿಗೆ ಉತ್ತರ ನೀಡಿರುವುದಿಲ್ಲ. ಇನ್ನು ಸಹಪ್ರಾಧ್ಯಾಪಕ ಹುದ್ದೆಯ ಮುಂಬಡ್ತಿಗೆ ಸಂಬಂದಿಸಿದಂತೆ ದಿನಾಂಕ 24–12–2009 ರ ಸರ್ಕಾರ ಆದೇಶ ಬರುವ ಪೂರ್ವದಲ್ಲಿಯೇ ಅಂದರೆ ದಿನಾಂಕ 18–04–2007 ರಲ್ಲಿಯೇ CAS ಪರಿ ನಿಯಮ ಹಾಗೂ ಕಾರ್ಯಕಾರಿ ಸಮಿತಿ ನಿರ್ಣಯ ಪ್ರಕಾರ ಮುಂಬಡ್ತಿ ನೀಡಲಾಗಿದೆ ಎಂದು ಅನುಸರಣೆ ಸಲ್ಲಿಸಿರುತ್ತಾರೆ. ಆದರೆ 24–12–2009 ರ ಆದೇಶದಲ್ಲಿ ಸೂಚಿಸಿದಂತೆ ಈ ಸೌಲಭ್ಯವನ್ನು ದಿನಾಂಕ 24–12–2009 ರಿಂದಲೇ ಅನ್ವಯಿಸುವಂತೆ ನೀಡಬೇಕಾಗಿರುತ್ತದೆ. ಅಲ್ಲಿಂದ ದಿನಾಂಕ 24–12–2012ಕ್ಕೆ ಪ್ರವಾಚಕರ ಹುದ್ದೆಗೆ ಮುಂಬಡ್ತಿ ಮತ್ತು 24–12–2015 ರಿಂದ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ನೀಡಬೇಕಾಗುತ್ತದೆ. ಆದ್ದರಿಂದ ಈ ಅನುಸರಣೆ ಒಪ್ಪಲಾಗುವುದಿಲ್ಲ.

ಹಾಗಾಗಿ ಈ ಮೇಲೆ ಸೂಚಿಸಿರುವ ನ್ಯೂನತೆಗಳ ಹಿನ್ನಲೆಯಲ್ಲಿ ಶ್ರೀಯುತರಿಗೆ 2014–15 ಮತ್ತು 2015–16ನೇ ಸಾಲಿನಲ್ಲಿ ಹೆಚ್ಚುವರಿ ಸಂದಾಯಿಸಿದ ವೇತನ ಹಾಗೂ ಭತ್ಯಗಳ ಮೊತ್ತ:365026/–ಗಳನ್ನು ವಸೂಲಿಸುವುದು. ವಿವರಗಳನ್ನು **ಅನುಬಂಧ–14**ರಲ್ಲಿ ವರದಿಗೆ ಲಗತ್ತಿಸಿದೆ. ಹಾಗೂ ದಿನಾಂಕ:27/02/2001ರಿಂದ 31–03–2014 ರವರೆಗಿನ ವೇತನ ಹಾಗೂ ಭತ್ಯಗಳನ್ನು ಲೆಕ್ಕ

ಹಾಕಿ ಈ ಮೊತ್ತದೊಂದಿಗೆ ವಸೂಲಿಸುವುದು.ಹಾಗೂ ಒಟ್ಟಾರೆ ವಸೂಲಿಮಾಡಿರುವ ಮೊತ್ತ ಕುರಿತು ಅನುಪಾಲನಾ ವರದಿಯನ್ನು ಲೆಕ್ಕ ಪರಿಶೋಧನೆಗೆ ನೀಡುವುದು.ಸದರಿ ಪ್ರಕರಣದಲ್ಲಿ.M.Phil ಹಾಗೂ Ph.D ಗೆ ನೀಡಿದ ಉತ್ತೇಜನಾ ಬಡ್ತಿಗಳು ಹಾಗೂ ಸ್ಥಾನೀಕರಣ ಸೌಲಭ್ಯಗಳು ಹಾಗೂ ಗ್ರೇಡ್‌ಪೇ ಮೂವ್ ಮೆಂಟ್‌ಗಳು ಯು.ಜಿ.ಸಿ ಫೇಸ್ಕೇಲ್. ರೆಗ್ಯೂಲೇಶನ್ ನಿಯಮಾವಳಿಗಳು ಸರ್ಕಾರದ ಸುತ್ತೋಲೆ.ಆದೇಶಗಳು ನಡಾವಳಿಗಳ ಕುರಿತು.ವಿ.ವಿಯು ಪ್ರತ್ಯೇಕವಾಗಿ ರಚಿಸಿಕೊಂಡಿರುವ ಅನುಶಾಸನಗಳು/ಪರಿನಿಯಮಗಳು ಲಭ್ಯವಿದ್ದಲ್ಲಿ ಹಾಗೂ ಈ ಸೌಲಭ್ಯನೀಡುವಂತೆ ಉಲ್ಲೇಖಿತ ದಾಖಲೆಗಳಲ್ಲಿ ತಿಳಿಸಿದಲ್ಲಿ ಹಾಗೂ ಪಾವತಿಗಳು ಕ್ರಮಬದ್ಧವಿದ್ದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಲೆಕ್ಕ ಪರಿಶೋಧನೆಗೆ ಅನುಪಾಲನಾವರದಿ ನೀಡುವುದು.

## 2.4.18)ಡಾ:ಕಾಮಣ್ಣ ಮೈತ್ರಿ ಪ್ರಾಧ್ಯಾಪಕರು ಬುಡಕಟ್ಟು ಅಧ್ಯಯನ ವಿಭಾಗ ಇವರಿಗೆ ಪ್ರಾಧ್ಯಾಪಕ ಹುದ್ದೆಗೆ ಸಿ.ಎ.ಎಸ್–1996ರ ಅಡಿ ಪದೋನ್ನತಿ ನೀಡಿದ ನಂತರ ವಾರ್ಷಿಕ ವೇತನ ಬಡ್ತಿ ನೀಡಿ ರುವುದು.:–

ಡಾ:ಕಾಮಣ್ಣ ಮೈತ್ರಿ ಪ್ರಾಧ್ಯಾಪಕರು ಬುಡಕಟ್ಟು ಅಧ್ಯಯನ ವಿಭಾಗ ಇವರಿಗೆ ಸಿ.ಎ.ಎಸ್–1996ರ ಅಡಿ ಯು.ಜಿ.ಸಿ ವೇತನ ಶ್ರೇಣಿ 16400–22400ರಲ್ಲಿ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಿ ದಿನಾಂಕ:10/09/2004 ರಂದು ರೂ:16400/–ಗಳಿಗೆ (ಪದೋನ್ನತಿ ಹೊಂದಿದ ಹುದ್ದೆಯ ವೇತನ ಶ್ರೇಣಿಯ ಕನಿಷ್ಟ ವೇತನ) ನಿಗದಿಪಡಿಸಿ ದಿನಾಂಕ:01/02/2005 ರಂದು ವಾರ್ಷಿಕ ವೇತನ ಬಡ್ತಿ ನೀಡಿ **ರೂ:16850/–**ಗಳಿಗೆ ವೇತನ ನಿಗದಿಪಡಿಸಲಾಗಿರುತ್ತದೆ.

ಕೆ.ಸಿ.ಎಸ್ ನಿಯಮ 42(ಬಿ) ಪ್ರಕಾರ ಪದೋನ್ನತಿ ಹೊಂದಿದ ಹುದ್ದೆಯ ವೇತನ ಶ್ರೇಣಿಯ ಕನಿಷ್ಟ ವೇತನಕ್ಕೆ ವೇತನ ನಿಗದಿಗೊಂಡಾಗ ನಂತರದ ವಾರ್ಷಿಕ ವೇತನಬಡ್ತಿಯನ್ನು ಪದೋನ್ನತಿ ಹೊಂದಿದ ದಿನಾಂಕದಿಂದ 12 ತಿಂಗಳು(1 ವರ್ಷ)ನಂತರ ನೀಡಬೇಕು/ನಿಗದಿಪಡಿಸಬೇಕು ಎಂದು ತಿಳಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಪದೋನ್ನತಿ ಹೊಂದಿದ ಹುದ್ದೆಯ ವೇತನ ಶ್ರೇಣಿಯ ಕನಿಷ್ಟ ವೇತನಕ್ಕೆ ವೇತನ ನಿಗದಿಗೊಂಡ ನಂತರ ವಾರ್ಷಿಕ ವೇತನ ಬಡ್ತಿಯು ಹನ್ನೆರಡು ತಿಂಗಳೊಳಗೆ ಇದ್ದಾಗ ಅದೇ ದಿನಾಂಕದಂದು ವಾ.ವೇ.ಬಡ್ತಿ ನೀಡಲು ಯು.ಜಿ.ಸಿ ವೇತನ ಶ್ರೇಣಿಗಳಲ್ಲಿ ಅಥವಾ ನಿಯಮಗಳಲ್ಲಿ ಕಲ್ಪಿಸಿರುವ ಅವಕಾಶಗಳನ್ನು ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ದಿನಾಂಕ **06–08–2016** ರಂದು **ವಿಚಾರಣಾ ಪತ್ರ ಸಂಖ್ಯೆ 91** ನೀಡಲಾಗಿದ್ದು ಸದರಿ ಸಂಸ್ಥೆಯವರು **ಪುನರ್ ಪರಿಶೀಲನೆ** ಸಮಯದಲ್ಲಿ ಅನುಸರಣೆ ನೀಡಿ ಸದರಿಯವರ ವಾರ್ಷಿಕ ವೇತನ ಬಡ್ತಿ ಫೆಬ್ರವರಿಯಲ್ಲಿರುವುದರಿಂದ ಫೆಬ್ರವರಿಯಲ್ಲಿಯೇ ವಾರ್ಷಿಕ ವೇತನ ಬಡ್ತಿ ನೀಡಲಾಗಿದೆ ಎಂದು ತಿಳಿಸಿರುತ್ತಾರೆ.

ಆದರೆ ಮೇಲೆ ತಿಳಿಸಿದಂತೆ **ಕೆ.ಸಿ.ಎಸ್.ಅರ್ 42(ಬಿ)** ರನ್ವಯ ಯಾವುದೇ ಹುದ್ದೆಗೆ ಪದೋನ್ನತಿ ನೀಡಿ ವೇತನ ನಿಗದಿಮಾಡಿದಾಗ ಪದೋನ್ನತ ಹುದ್ದೆಯ ವೇತನ ಶ್ರೇಣಿಯ ಕನಿಷ್ಟ ವೇತನಕ್ಕೆ ವೇತನ ನಿಗದಿಯಾದಾಗ ಅಲ್ಲಿಂದ ಒಂದು ವರ್ಷಕ್ಕೆ ವಾರ್ಷಿಕ ವೇತನ ಬಡ್ತಿ ನೀಡಬೇಕಾಗುತ್ತದೆ. ಸದರಿಯವರಿಗೆ ಸಂಬಂದಿಸಿದಂತೆ **ದಿನಾಂಕ 01–09–2005 ಕ್ಕೆ** ವಾರ್ಷಿಕ ವೇತನ ಬಡ್ತಿ ನೀಡಬೇಕಾಗಿತ್ತು ಆದ್ದರಿಂದ ಈ ಅನುಸರಣೆಯನ್ನು ಒಪ್ಪಲಾಗುವುದಿಲ್ಲ.

ಆದ್ದರಿಂದ ಕೆ.ಸಿ.ಎಸ್. ಆರ್ ನಿಯಮ42(ಬಿ) ಪ್ರಕಾರ ಕ್ರಮಕೈಗೊಂಡು ದಿನಾಂಕ:01–09–2005ಕ್ಕೆ ಪ್ರಾಧ್ಯಾಪಕ ಹುದ್ದೆಯ ಪದೋನ್ನತಿ ನಂತರದ ವಾ.ವೇ.ಬಡ್ತಿಯನ್ನು ನೀಡಿ ರೂ:16850/–ಗಳಿಗೆ ನಿಗದಿಪಡಿಸಿ ನಂತರದ ಎಲ್ಲ ವಾರ್ಷಿಕ ವೇತನ ಬಡ್ತಿಗಳನ್ನು ಇದೇ ವೇತನದ ಆಧಾರದ ಮೇಲೆ ಸಕ್ರಮಗೊಳಿಸಿ 2014–15ಮತ್ತು2015–16ರಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವಸಿರುವ ಹೆಚ್ಚುವರಿ ವೇತನ ಭತ್ಯೆಗಳ ಮೊತ್ತ ರೂ:61530/–ಗಳನ್ನು ವಸೂಲಿಸಿ ಲೆಕ್ಕಪರಿಶೋಧನೆಗೆ ಅನುಸರಣೆ ಸಲ್ಲಿಸುವುದು. ವಸೂಲಾತಿ ಮೊತ್ತದ ವಿವರಗಳನ್ನು **ಅನುಬಂಧ–15**ರಲ್ಲಿ ವರದಿಗೆ ಲಗತ್ತಿಸಿದೆ.

ಸದರಿಯವರ ಪ್ರಕರಣವು ಉದಾಹರಣೆ ಮಾತ್ರ ಆಗಿದ್ದು ಇಂತಹ ಇನ್ನುಳಿದ ಎಲ್ಲ ಪ್ರಕರಣಗಳಲ್ಲಿಯೂ ಮೇಲೆ ಸೂಚಿಸಿದಂತೆ ಕ್ರಮ ಕೈ ಗೊಂಡು ಲೆಕ್ಕಪರಿಶೋಧನೆಗೆ ಅನುಸರಣೆ ಸಲ್ಲಿಸುವುದು.

**2.4.19) 2014-15 &2015-16ನೇ ಸಾಲಿನ ಬೋಧಕ ಸಿಬ್ಬಂದಿಗಳ ಸೇವಾದಾಖಲೆಗಳನ್ನು ಪರಿಶೀಲಿಸಲು ಅಗತ್ಯವಿರುವ ಸದರಿ ಸಿಬ್ಬಂದಿಗಳ ನೇಮಕಾತಿ ಸಮಯದಲ್ಲಿ ತಯಾರಿಸಿದ API Score Cards ಹಾಗೂ ಪ್ರಸ್ತುತ ಅವಧಿಗೆ ನಿರ್ವಹಿಸಿದ work load details ಮಾಹಿತಿ ನೀಡುವುದು:-**

2014-15 ಮತ್ತು 2015-16ನೇ ಸಾಲಿನ ಭೋಧಕ ಸಿಬ್ಬಂದಿಗಳ ಸೇವಾ ದಾಖಲೆಗಳ ಪರಿಶೀಲಿಸಲಾಗಿ ನೇಮಕಾತಿ ಸಮಯದಲ್ಲಿನ API Score Cards ಹಾಗೂ 2014-15 ಮತ್ತು 2015-16ನೆ ಸಾಲಿನಲ್ಲಿ ಸದರಿ ವಿ.ವಿ.ಯ ಬೋಧಕ ಸಿಬ್ಬಂದಿಗಳ ಯು.ಜಿ.ಸಿ ವೇತನ ಶ್ರೇಣಿ ಮತ್ತು ವೇತನ ಪಡೆಯುತ್ತಿದ್ದು ಯು.ಜಿ.ಸಿ Regulation 2010 ರ ಪ್ರಕಾರ ನಿರ್ವಹಿಸುತ್ತಿರುವ work load ವಿವರ ಹಾಜರುಪಡಿಸುವಂತೆ ತಿಳಿಸಲಾಗಿತ್ತು ಈವರೆಗೂ ವಿ.ವಿ.ಯ ಪ್ರಾಧಿಕಾರ ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿಲ್ಲ.ಆದ್ದರಿಂದ ಸದರಿ ಮಾಹಿತಿ ಅನುಪಸ್ಥಿತಿಯಲ್ಲಿ ಸೇವಾ ಪುಸ್ತಕ ಹಾಗೂ ದಾಖಲೆಗಳ ಪರಿಶೀಲನೆ ಅಪೂರ್ಣವಾಗಿರುತ್ತದೆ.ವಿ.ವಿ.ಯ 1991 ರ ಪ್ರಕಾರ ಸದರಿ ಲೆಕ್ಕ ಪರಿಶೋಧನೆ ಶಾಸನಬದ್ಧ ಅಧಿಕಾರ ಹೊಂದಿದ್ದು ಎಲ್ಲಾ ಅಗತ್ಯ ದಾಖಲೆಗಳನ್ನು ಸಕಾಲದಲ್ಲಿ ಪೂರೈಸುವುದು ವಿ.ವಿ.ಯ ಆದ್ಯ ಕರ್ತವ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಮತ್ತೊಮ್ಮೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪೂರ್ಣ ಪ್ರಮಾಣದಲ್ಲಿ ಅಗತ್ಯ ದಾಖಲೆಗಳನ್ನು ತಕ್ಷಣ ನೀಡುವಂತೆ.ಲೆ.ಪ.ವಿ ಪತ್ರ ಸಂಖ್ಯೆ:76 ದಿನಾಂಕ:03-08-2016ರಂದು ನೀಡಲಾಗಿತ್ತು. ಆದರೆ ವಿ.ವಿ.ಯು ಸಮರ್ಪಕ ಮಾಹಿತಿ ಹಾಜರುಪಡಿಸಿರುವುದಿಲ್ಲ. ಮಾನ್ಯ ಕುಲಾಧಿಪತಿಗಳಿಂದ ದಿನಾಂಕ:25-11-2013 ರಂದು ಅನುಶಾಸನ/ಪರಿನಿಯಮ ರಚಿಸಿದ್ದು(career advancement scheme for incumbent assistant proffessors /associate professor, professors and librarians" ಕ್ರಮ ಸಂಖ್ಯೆ:1.1ಇ 1.1ಎಫ್ 1.2 1.3 ಪ್ರಕಾರ ಸಹಾಯಕ ಪ್ರಾಧ್ಯಾಪಕರು(assistant professors) stage.1 to stage.2 to stage.3 ಹಾಗೂ associate professors (stage 4)to professor stage (5) ಮುಂದೆ ಹೋಗಲು API based Pbas Requirements Prescribed By Ugc Eligibility Verification ಕಡ್ಡಾಯ ಎಂದು ದಾಖಲಿಸಿದ್ದು ಈ ಬಗ್ಗೆ ಸೇವಾ ಪುಸ್ತಕದಲ್ಲಿ ಅಥವಾ ವೈಯಕ್ತಿಕ ಕಡತದಲ್ಲಿ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಮೇಲಿನ ಆಕ್ಷೇಪಣೆಗಳಿಗೆ **ಪುನರ್‌ಪರಿಶೀಲನಾ** ಸಮಯದಲ್ಲಿ ಉತ್ತರ ನೀಡಿದ್ದು ಪರಿಶೀಲಿಸಲಾಗಿ ಭೋಧಕ ಸಿಬ್ಬಂದಿ ಯು API ವಿವರ ಹಾಗೂ Work Load ಮಾಹಿತಿಯನ್ನು ನೀಡಿರುವುದಿಲ್ಲ. ಹಾಗೂ ಸೇವ ಪುಸ್ತಕದಲ್ಲಿ ಈ ವಿವರಗಳನ್ನು ದಾಖಲೆ ಮಾಡಿರುವ ಬಗ್ಗೆ ಮಾಹಿತಿಯನ್ನು ಹಾಜರು ಪಡಿಸಿಲ್ಲ.

**2.4.20)ಡಾ:ಎ.ಶ್ರೀಧರ ಪ್ರವಾಚಕರು ಅಭಿವೃದ್ಧಿ ಅಧ್ಯಯನ ವಿಭಾಗ ಇವರಿಗೆ ಒಂದುಹೆಚ್ಚುವರಿ M.Phil ಬಡ್ತಿ ಮತ್ತು ಯು.ಜಿ.ಸಿ 2006ರ ಆರ್ಥಿಕ ಸೌಲಭ್ಯವನ್ನು ದಿನಾಂಕ:24-12-2009ರಿಂದ ಅನ್ವಯಿಸಬೇಕಾಗಿತ್ತು ಹಾಗೂ ಪ್ರವಾಚಕ ಹುದ್ದೆ ಸ್ಥಾನಿಕರಣ ದಿನಾಂಕ:24-12-2012ರಿಂದ ನೀಡುವುದು:-**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಯುತರು ದಿನಾಂಕ:16-08-1997 ರಂದು ಉಪನ್ಯಾಸಕ ಎಂದು ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ನೇಮಕಗೊಂಡಿದ್ದು(8000-13500)ವೇತನ ಶ್ರೇಣಿಯಲ್ಲಿ ಮೂಲವೇತನರೂ:8000/-ಗಳಿಗೆ ನಿಗದಿಪಡಿಸಲಾಗಿದೆ.ದಿನಾಂಕ:16-08-1998 ರಂದು M.Phil.ಹೊಂದಿದ್ದಕ್ಕೆ ಒಂದು ಮುಂಗಡ ಬಡ್ತಿ ನೀಡಲಾಗಿದೆ. ಪುನ: ದಿನಾಂಕ:01-08-2002 ರಂದು M.Phil ಹೊಂದಿದ್ದಕ್ಕೆ ಒಂದು ಮುಂಗಡ ಬಡ್ತಿ ನೀಡಲಾಗಿದೆ. ಸದರಿ ಬಡ್ತಿಯನ್ನು ಒಪ್ಪಲಾಗುವುದಿಲ್ಲ.ಯು.ಜಿ.ಸಿ 2006ರ ವೇತನ ಶ್ರೇಣಿ ದಿನಾಂಕ:01-01-2006 ರಂದು ರೂ:27420/-ಗೆ ನಿಗದಿಪಡಿಸಲಾಗಿದೆ. ಮುಂದುವರೆದು ದಿನಾಂಕ:01-08-2007ರಂದು **ರೂ:8000/-A.G.P** ಯಲ್ಲಿ ರೂ:30320/-ಗಳಿಗೆ ನಿಗದಿಪಡಿಸಲಾಗಿದೆ.ಆದರೆ ಸರಕಾರದ ಆದೇಶ ಸಂಖ್ಯೆ:Ed 37une 2009 ಬೆಂಗಳೂರು ದಿನಾಂಕ:24-12-2009 ಕ್ರಮ ಸಂಖ್ಯೆ:10ರ ಪ್ರಕಾರ Date Of Effect Of This Order Is UGC Pay Scales Shall Be Effective From 01-01-2006 And All Other Allowances Benefits Prospectively From The Date Of Issue Of This Order"ಎಂದು ತಿಳಿಸಿದ್ದು 8000 UGC ಪ್ರಯೋಜನೆ ದಿನಾಂಕ:01-08-2007ರ ಬದಲಾಗಿ ದಿನಾಂಕ:24-12-2009ಕ್ಕೆ ನೀಡಬೇಕಾಗಿತ್ತು ಈ ಹಿನ್ನಲೆಯಲ್ಲಿ ಹೆಚ್ಚುವರಿ ಪಾವತಿಯನ್ನು ವಸೂಲಿಸಬೇಕು.ಮುಂದುವರೆದು ಸರ್ಕಾರದ ಆದೇಶ ದಿನಾಂಕ:24-12-2009 ಕ್ರಮ ಸಂಖ್ಯೆ:1.9 1.10 1.11 ಮತ್ತು 1.12 ರ ಪ್ರಕಾರ ರೂ:8000 UGC ಯಿಂದ ರೂ:9000 UGC ಗೆ ಸ್ಥಾನೀಕರಣ ಮಾಡಲು ಕನಿಷ್ಠ ಮೂರು ವರ್ಷ ಅವಧಿ ಇರುತ್ತದೆ.ಈ ಹಿನ್ನಲೆಯಲ್ಲಿ ಶ್ರೀಯುತರಿಗೆ ದಿನಾಂಕ:01-08-2010 ರಂದು ರೂ:9000/- **A.G.P** ನೀಡುವ ಬದಲಾಗಿ ದಿನಾಂಕ:24-12-2009ರಂದು 8000 **A.G.P** ಗೆ ಸ್ಥಾನೀಕರಣ ನೀಡಿದ ನಂತರ 3 ವರ್ಷದ ಅವಧಿಗೆ ಅಂದರೆ ದಿನಾಂಕ:

24-12-2012 ರಂದು ರೂ:9000/- **A.G.P** ಗೆ ನಿಗದಿಪಡಿಸಬೇಕಾಗಿತ್ತು.ಈ ಹಿನ್ನಲೆಯಲ್ಲಿ ಶ್ರೀಯುತರಿಗೆ ಒಂದು ಹೆಚ್ಚುವರಿ M.Phil ಬಡ್ತಿ ಪಾವತಿ ಹಾಗೂ UGC 2006 ರ ಸ್ಥಾನೀಕರಣ ಸೌಲಭ್ಯವನ್ನು ಅನಿಯಮಿತವಾಗಿ ಪಾವತಿಸಿದ ಮೊತ್ತ ಲೆಕ್ಕ ಹಾಕಿ ವಸೂಲಿ ಸುವುದು. ಅಲ್ಲದೇ ಈ ವಸೂಲಿ ಮೊತ್ತದೊಂದಿಗೆ 2014-15 ಮತ್ತು 2015-16ರಲ್ಲಿ ಹೆಚ್ಚುವರಿ ಪಾವತಿಸಿದ ಮೊತ್ತ ರು:161156/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸುವುದು.ಅಥವಾ ಈ ರೀತಿ ಅನಿಯಮಿತ ಪಾವತಿಸಲುಯಾವ ನಿಯಮಾವಳಿಗಳಲ್ಲಿ ಅವಕಾಶವಿದೆ ಎಂಬುದನ್ನು ದಾಖಲೆ ಸಮೇತ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡಲು ತಿಳಿಸಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಲೆ.ಪ.ವಿ ಪತ್ರ ಸಂಖ್ಯೆ:-80ಅನ್ನು ದಿನಾಂಕ:03-08-2016 ರಂದು ನೀಡಲಾಗಿದ್ದು ಸದರಿ ಸಂಸ್ಥೆಯವರು **ಪುನರ್ ಪರಿಶೀಲನಾ** ಸಮಯದಲ್ಲಿ ನೀಡಿದ ಅನುಸರಣೆಯಲ್ಲಿ ಹಿಂದಿನ ಕಂಡಿಕೆಗಳಲ್ಲಿ ಸೂಚಿಸಿ ದಂತೆ ದಿನಾಂಕ **24-12-2009ರ** ಆದೇಶದ ಪೂರ್ವದಲ್ಲಿಯೇ CAS ನಿಯಮಾವಳಿ ಪ್ರಕಾರ ಈ ಸೌಲಭ್ಯಗಳನ್ನು ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ದಿನಾಂಕ **24-12-2009ರ** ಆದೇಶದ **ಕ್ರಮ ಸಂಖ್ಯೆ 10** ರಲ್ಲಿ ಸೂಚಿಸಿದಂತೆ ಈ ಸೌಲಭ್ಯಗಳನ್ನು ಈ ಆದೇಶದ ದಿನಾಂಕದಿಂದಲೇ ನೀಡಬೇಕಾಗುತ್ತದೆ. ಆದ್ದರಿಂದ ಈ ವಿವರಣೆಯನ್ನು ಒಪ್ಪಲಾಗುವುದಿಲ್ಲ.

ಆದ್ದರಿಂದ ಶ್ರೀಯುತರಿಂದ **ರೂ:161156/-** ವಸೂಲಿಸುವುದು. ಶ್ರೀಯುತರಿಗೆ ಒಂದು ಹೆಚ್ಚುವರಿ M.Phil ಬಡ್ತಿ ಪಾವತಿ ಹಾಗೂ UGC 2006 ರ ಸ್ಥಾನೀಕರಣ ಸೌಲಭ್ಯವನ್ನು ಅನಿಯಮಿತವಾಗಿ ನೀಡಿರುವುದನ್ನು ವಿ.ವಿ.ಯೇ ಲೆಕ್ಕಾಚಾರ ಮಾಡಿ ವಸೂಲಿಸುವುದು ವಿವರಗಳನ್ನು **ಅನುಬಂಧ-16** ರಲ್ಲಿ ವರದಿಗೆ ಲಗತ್ತಿಸಿದೆ.

## 2.4.21)ವಿ.ವಿ.ಯ ಬೋಧಕ ಸಿಬ್ಬಂದಿಗಳಿಗೆ 2014-15 ಹಾಗೂ 2015-16 ನೇ ಸಾಲಿನಲ್ಲಿ ಬೋಧ ಕೇತರ ಹುದ್ದೆಗಳಿಗೆ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಯು.ಜಿ.ಸಿ ವೇತನ ಬಟವಾಡೆ ಮಾಡಿರುವುದು:-

2014-15ಮತ್ತು 2015-16ನೇ ಸಾಲಿನಲ್ಲಿ ವಿ.ವಿ.ಯ 10ಭೋಧಕ ಸಿಬ್ಬಂದಿಗಳಿಗೆ ವಿವಿಧ ಬೋಧಕೇತರ ಹುದ್ದೆಗಳಿಗೆ ಅಂದರೆ ಕುಲಸಚಿವರು, ಹಣಕಾಸು ಅಧಿಕಾರಿಗಳು,ನಿರ್ದೇಶಕರು,ಸಂಯೋಜನಾಧಿಕಾರಿಗಳು ಎಂದು ಕಾರ್ಯಭಾರವಹಿಸಿದ್ದು ಗಮನಿಸಿದೆ. ಸದರಿ ಸಿಬ್ಬಂದಿಗಳಿಗೆ ಏಪ್ರಿಲ್ 2014 ರಿಂದ ಮಾರ್ಚ್ 2016ರವರೆಗೆ ವೇತನ ಬಟವಾಡೆ ಮಾಡಲಾಗಿದೆ.ಯು.ಜಿ.ಸಿ ವೇತನ ಶ್ರೇಣಿ 2006ರ ಸರಕಾರದ ಆದೇಶ ಸಂಖ್ಯೆ:Ed37une2009 ಬೆಂಗಳೂರು ದಿನಾಂಕ:24-12-2009 ಕ್ರಮ ಸಂಖ್ಯೆ:21.7ರ ಪ್ರಕಾರ quality relevance.excellance & inclusiveness teachers going on depulation to other jobs except those related to education management and research cannot carry forword their ugc payscales.however they can do so by accepting the state payscalesಎಂದು ತಿಳಿಸಲಾಗಿದೆ.ಅಲ್ಲದೇ ಸರ್ಕಾರದ ಪತ್ರ ಸಂಖ್ಯೆ:ಇಡಿ190 ಯು.ಎನ್.ಇ 2007 ದಿನಾಂಕ:20-12-2007ರ ಪ್ರಕಾರ.as per ugc letter there is no provision in the ugc guidelines to allow the teachers to carry forword their pay scales to the other jobs joined in deputation"ಎಂದು ತಿಳಿಸಿದ್ದು ಕನ್ನಡ ವಿ.ವಿ.ಯಿಂದ ಈ ರೀತಿ ನಿಯೋಜನೆ ಮಾಡಿರುವುದು ಯು.ಜಿ.ಸಿ. regulations ಹಾಗೂ ಸರ್ಕಾರದ ಆದೇಶಕ್ಕೆ ವ್ಯತಿರಿಕ್ತವಾಗಿರುತ್ತದೆ. ಈ ಹಿನ್ನಲೆಯಲ್ಲಿ ಲೆ.ಪ.ವಿ.ಪತ್ರ ಸಂಖ್ಯೆ:86 ದಿನಾಂಕ:04-08-2016 ರಂದು ವಿವರಣೆ ಕೇಳಲಾಗಿ ಸದರಿ ಸಂಸ್ಥೆಯವರು **ಪುನರ್ ಪರಿಶೀಲನಾ** ಸಮಯದಲ್ಲಿ ನೀಡಿದ ಅನುಸರಣೆಯಲ್ಲಿ ಈ ಬೋಧಕ ಸಿಬ್ಬಂದಿಗಳಿಗೆ ತಮ್ಮ ಬೋಧನೆ ಮತ್ತು ಸಂಶೋದನೆ ಕೆಲಸಗಳ ಜೊತೆಗೆ ಹೆಚ್ಚುವರಿಯಾಗಿ ಆಡಳಿತಾಂಗದ ಹುದ್ದೆಗಳ ಕಾರ್ಯಬಾರ ನಿರ್ವಹಿಸಲು ಕಾರ್ಯ ನಿಯೋಜನೆ ಮಾಡಲಾಗಿದೆಯೆಂದು ತಿಳಿಸಿರುತ್ತಾರೆ. ಆದರೆ ಈ ಬೋಧಕ ಸಿಬ್ಬಂದಿಗಳು ಆಡಳಿತಾಂಗದ ಹುದ್ದೆಗಳ ಜೊತೆಗೆ ಭೋಧನೆ ಮಾಡಿದ ಬಗ್ಗೆ ಹಾಗೂ ಸಂಶೋಧನೆ ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ. ಆದ್ದರಿಂದ ಈ ವಿವರಣೆಯನ್ನು ಒಪ್ಪಲಾಗುವುದಿಲ್ಲ.

**2014-15 ಮತ್ತು 2015-16** ರಲ್ಲಿ ನಿಯೋಜನೆ ಮೇಲೆ ಭೋಧಕೇತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಸದ್ರಿ 2 ವರ್ಷಗಳಲ್ಲಿ ನೀಡಿರುವ ಒಟ್ಟು ಯು.ಜಿ.ಸಿ.ವೇತನ ರೂ:30121019/-ಗಳನ್ನು ಒಪ್ಪಲಾಗುವುದಿಲ್ಲ ಈ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.ವಿವರಗಳನ್ನು **ಅನುಬಂಧ-17**ರಲ್ಲಿ ಲಗತ್ತಿಸಿದೆ.

**2.4.22)ವಿ.ವಿ.ಯ ಯೋಜನಾ ಸಹಾಯಕರು ಹಾಗೂ ಪ್ರಕಟಣಾ ಸಹಾಯಕರು ಇವರಿಗೆ ಅವರು ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಅಧ್ಯಾಪಕರ ಹುದ್ದೆಗೆ ನೇಮಕಮಾಡಿದ್ದು ಹಾಗೂ ಯು.ಜಿ.ಸಿ 2006ರ ಪರಿಷ್ಕೃತ ವೇತನ ಶ್ರೇಣಿ ಸ್ಥಾನೀಕರಣ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಪೂರ್ವಾನ್ವಯವಾಗಿ ನೀಡಿರುವುದು:-**

2014-15 ಮತ್ತು 2015-16ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿನ ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕ ಪರಿಶೀಲಿಸ ಲಾಗಿ ಕೆಲವೊಂದು ಅಧ್ಯಾಪಕರಿಗೆ ಯೋಜನಾಸಹಾಯಕರು ಹಾಗೂ ಪ್ರಕಟಣಾ ಸಹಾಯಕರು ಎಂದು ಸೇವೆ ಸಲ್ಲಿಸಿದ ಅವಧಿ ಯನ್ನು ಪರಿಗಣಿಸಿ ನೇರವಾಗಿ ಅಧ್ಯಾಪಕರು ಎಂದು ನೇಮಕಮಾಡಿಕೊಂಡಿರುವುದು ಕಂಡುಬಂದಿರುತ್ತದೆ.ಸದರಿ ಸಿಬ್ಬಂದಿಗಳಸೇವೆ ಗಳಿಗೆ ಈ ಮೊದಲು ರಾಜ್ಯದ ವೇತನ ಶ್ರೇಣಿ ನೀಡಿದ್ದು ನಂತರ ಯು.ಜಿ.ಸಿ.ವೇತನ ಶ್ರೇಣಿ ನೀಡಲಾಗಿದೆ. ಈ ಬಗ್ಗೆ ಯಾವ ನಿಯಮಗಳಲ್ಲಿ ಅವಕಾಶ ಕಲ್ಪಸಲಾಗಿದೆ ಎಂದು ಸ್ಪಷ್ಟೀಕರಣ ನೀಡಿರುವುದಿಲ್ಲ .ಮುಂದುವರೆದು ಪಿ.ಹೆಚ್.ಡಿ ಪದವಿ ಹೊಂದಿರುವ ಪ್ರಯುಕ್ತ ಅವರುಗಳು ಸೇವೆಗೆ ಸೇರಿದ ದಿನಾಂಕದಿಂದ ಪಿ.ಹೆಚ್.ಡಿ.ಮುಂಗಡ ಬಡ್ತಿಗಳನ್ನು ನೀಡಿದ್ದು ಸರ್ಕಾರದ ಆದೇಶ ದಿನಾಂಕ:19-09-2007ರ ಪ್ರಕಾರ 2005ರ ಬದಲಾಗಿ ದಿನಾಂಕ:19-09-2007ರಿಂದ ನೀಡಬೇಕಾಗಿರುತ್ತದೆ.ಅಲ್ಲದೇ ಯು.ಜಿ.ಸಿ. 2006ರ ಪರಿಷ್ಕೃತ ಸ್ಥಾನೀಕರಣ ಸೌಲಭ್ಯವನ್ನು ದಿನಾಂಕ:24-12-2009ಕ್ಕಿಂತ ಮೊದಲೇ ನೀಡಿರುವುದನ್ನು ಲೆಕ್ಕ ಪರಿಶೋಧನೆ ಯಲ್ಲಿ ಒಪ್ಪಲಾಗುವುದಿಲ್ಲ.ಈ ಹಿನ್ನಲೆಯಲ್ಲಿ ಈಕೆಳಗೆ ಸೂಚಿಸಿದ ಸಿಬ್ಬಂದಿಗಳಿಂದ **ಅನುಬಂಧ-18ರಲ್ಲಿ** ತಿಳಿಸಿದಂತೆ **ರೂ:239010/-** ಗಳನ್ನು ವಸೂಲಿಸಲು ವಸೂಲಿಸಲು ಈ ಅನಿಯಮಿತ ಪಾವತಿಗಳಿಗೆ ನಿಯಮಾವಳಿಗಳಲ್ಲಿ ಅವಕಾಶ ಕಲ್ಪಿಸಿದ್ದಲ್ಲಿ ಲೆಕ್ಕ ಪರಿಶೋಧನೆಗೆ ವಿವರಿಸಲು **ದಿನಾಂಕ 04-08-2016** ರಂದು ವಿಚಾರಣಾ **ಪತ್ರ ಸಂಖ್ಯೆ 85** ನೀಡಲಾಗಿದ್ದು ಸದರಿ ಸಂಸ್ಥೆಯವರು **ಪುನರ್ ಪರಿಶೀಲನಾ** ಸಮಯದಲ್ಲಿ ನೀಡಿದ ಅನುಸರಣೆಯಲ್ಲಿ ಈ ಹುದ್ದೆಯ ಕಾರ್ಯ ಸ್ವರೂಪಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂದಿಸಿದ್ದು, ಇದನ್ನು ಗಮನಿಸಿದ ವಿಶ್ವವಿದ್ಯಾಲಯವು ಈ ಹುದ್ದೆಗಳನ್ನು ಪರಿವರ್ತಿಸುವ ಪರಿನಿಯಮಗಳನ್ನು ರಚಿಸಿತ್ತು. ಈ **ಪರಿವರ್ತಿತ ಪರಿನಿಯಮ 2003 ಕ್ಕೆ ದಿನಾಂಕ 11-10-2004** ರಂದು **ಕುಲಾಧಿಪತಿಗಳ ಅನುಮೋದನೆ ಪಡೆಯಲಾಗಿದೆ.** ಎಂದು ತಿಳಿಸಿರುತ್ತಾರೆ. ಕರ್ನಾಟಕ ಸರ್ಕಾರದ **ಪತ್ರ ಸಂಖ್ಯೆ :ಇಡಿ/25/2003 ದಿನಾಂಕ:26-10-2004** ರಲ್ಲಿ ಸದರಿ ಅಧ್ಯಾಪಕರಿಗೆ ಪರಿವರ್ತಿತ ಯು.ಜಿ.ಸಿ. ವೇತನ ಶ್ರೇಣಿ ನೀಡಲು ಆದೇಶಿಸಲಾಗಿದೆ. ಎಂದು ತಿಳಿಸಿರುತ್ತಾರೆ.

ಇನ್ನು ಪಿ.ಎಚ್.ಡಿ. ವೇತನ ಬಡ್ತಿಗಳಿಗೆ ಸಂಬಂದಿಸಿದಂತೆ **19-09-2007** ರ ಆದೇಶ ಬರುವ ಮುಂಚೆ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ .**ಸ್ಥಾನೀಕರಣ ಸೌಲಭ್ಯಕ್ಕೆ** ಸಂಬಂದಿಸಿದಂತೆ ನಿಯಮಾನುಸಾರ ಕೊಡಲಾಗಿದೆಯೆಂದು ತಿಳಿಸಿರುತ್ತಾರೆ. ಪರಿಶೀಲಿಸಲಾಗಿ ದಿನಾಂಕ **19-09-2007** ರಂದು ಕರ್ನಾಟಕ ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ಸೂಚಿಸಿದಂತೆ **01-01-1996** ರಂದು ಮತ್ತು **ಅದರ ನಂತರ** ಪಿ.ಎಚ್.ಡಿ. ಹೊಂದಿದ/ಹೊಂದಲಿರುವ ಅಧ್ಯಾಪಕರಿಗೆ ಪಿ.ಎಚ್.ಡಿ. ವೇತನ ಬಡ್ತಿ ನೀಡಲು ಅವಕಾಶ ಕಲ್ಪಿಸಿದ್ದು ಈ ಸೌಲಭ್ಯವನ್ನು ಈ ಸುತ್ತೋಲೆ ಹೊರಡಿಸಿದ ದಿನಾಂಕ 19-09-2007 ರಿಂದಲೇ ನೀಡಬೇಕಾಗಿತ್ತು.ಆದರೆ ಈ ಸಂಸ್ಥೆ ಯವರು ಈ ಸುತ್ತೋಲೆ ಬರುವ ಪೂರ್ವದಲ್ಲಿಯೇ ಕೊಟ್ಟಿರುವ ವಿವರಣೆಯನ್ನು ಒಪ್ಪಲಾಗುವುದಿಲ್ಲ. ಏಕೆಂದರೆ ಈ ಅದ್ಯಾಪಕರು **ಗಳು 1996ರ** ನಂತರ ಪಿ.ಎಚ್.ಡಿ ಮಾಡಿ ಕೊಂಡಿದ್ದು ಈ ಸುತ್ತೋಲೆಯಲ್ಲಿ ತಿಳಿಸಿದ ದಿನಾಂಕದಗಳಿಂದಲೇ ಮುಂಗಡ ವೇತನ ಬಡ್ತಿಗಳನ್ನು ನೀಡಬೇಕಾಗುತ್ತದೆ. ಇನ್ನು ಸ್ಥಾನೀಕರಣ ಸೌಲಭ್ಯಕ್ಕೆ ಸಂಬಂದಿಸಿದಂತೆ ಈ ವರದಿಗೆ ಲಗತ್ತಿಸಿರುವ **ಅನುಬಂಧ 18** ರಲ್ಲಿ ಸೂಚಿಸಿದಂತೆ **ದಿನಾಂಕ 24-12-2009ರ** ಪೂರ್ವದಲ್ಲಿಯೇ ಸ್ಥಾನೀಕರಣ ನೀಡಿರುವುದರಿಂದ ಈ ಅನುಸರಣೆಯನ್ನು ಕೂಡ ಒಪ್ಪ ಲಾಗುವುದಿಲ್ಲ.

**1)ಡಾ:ಹನುಮಂತಪ್ಪ ತಾರಿಹಳ್ಳಿ**
**2)ಡಾ:ಎಸ್.ವೈ.ಸೋಮಶೇಖರ್**
**3)ಡಾ:ಜನಾರ್ಧನ**
**4)ಡಾ:ಸು.ರಾ.ನವರತ್ನ**
**5)ಡಾ:ಮಲ್ಲಿಕಾರ್ಜುನ್ ಗೌಡ**
**6)ಡಾ:ಎಲ್.ಶ್ರೀನಿವಾಸ್**

2014-15 ಮತ್ತು 2015-16ನೆ ಸಾಲಿನಲ್ಲಿ ಈ ಮೇಲೆ ತಿಳಿಸಿದ ಸದರಿ ಸಿಬ್ಬಂದಿಗಳಿಗೆ ಅನಿಯಮಿತವಾಗಿ ಪಾವತಿಸಿದ ಹೆಚ್ಚುವರಿ ವೇತನ ಭತ್ಯಗಳನ್ನು ಮಾತ್ರ ಲೆಕ್ಕ ಹಾಕಲಾಗಿದೆ. 2005ರಲ್ಲಿ ನೀಡಿದ ಪಿ.ಹೆಚ್.ಡಿ ಉತ್ತೇಜನಾ ವೇತನ ಬಡ್ತಿಗಳನ್ನು ಹಾಗೂ 24-12-2009 ರಂದು ನೀಡಬೇಕಾಗಿದ್ದ ಸ್ಥಾನೀಕರಣ ಸೌಲಭ್ಯಗಳನ್ನು ಪೂರ್ವನ್ವಯವಾಗಿ ನೀಡಿರುವುದನ್ನು ವಿ.ವಿ.ಯೇ ಲೆಕ್ಕಾಚಾರ ಮಾಡಿ ವಸೂಲಿಸಿ.ವಿ.ವಿ.ನಿಧಿಗೆ ಜಮಾ ಮಾಡಿ ಲೆ.ಪ.ಗೆ.ಅನುಸರಣೆ ನೀಡುವುದು.

ಈ ಮೇಲಿನ 6 ಜನ ಬೋಧಕರ ನೇಮಕಾತಿ ಕುರಿತಂತೆ ಮಹಾಲೇಖಪಾಲರು ಬೆಂಗಳೂರು ಇವರ inspection ವರದಿ ದಿನಾಂಕ: 14-03-2016 ರ part-2 section'a' ಕ್ರಮ ಸಂಖ್ಯೆ: iv ರ ಪ್ರಕಾರ upgradation from post of publication assistants and planning assistants to the post of lecturers ಕುರಿತು excess pay drawn **ರೂ:9339912/-** ಬಗ್ಗೆ ಉಲ್ಲೇಖಿಸಲಾಗಿರುತ್ತದೆ.

**2.4.23)ಡಾ:ಬಿ.ಎಂ ಪುಟ್ಟಯ್ಯ ಪ್ರಾಧ್ಯಾಪಕರು ಇವರಿಗೆ ದಿನಾಂಕ:01-08-1999 ರಂದು ತಪ್ಪಾಗಿ ವೇತನ ನಿಗಧಿಕರಣ ಯು.ಜಿ.ಸಿ 2006 ಪರಿಷ್ಕೃತ ವೇತನ ಶ್ರೇಣಿ ಸೌಲಭ್ಯವನ್ನು ದಿನಾಂಕ:24-12-09 ರ ಬದಲಾಗಿ ದಿನಾಂಕ:01-08-2006ಕ್ಕೆ ವಿಸ್ತರಿಸಿದ್ದು ಅದರ ಆಧಾರದ ಮೇಲೆ 8000 ಎ.ಜಿ.ಪಿ ಯಿಂದ 9000 ಎ.ಜಿ.ಪಿ grade pay movement ದಿನಾಂಕ:24-12-2012ರ ಬದಲಾಗಿ ದಿನಾಂಕ: 01-08-2009ಕ್ಕೆ ನಿಗದಿ ಪಡಿಸಿರುವುದು:-**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಯುತರು ದಿನಾಂಕ:01-08-1996 ರಂದು ಉಪನ್ಯಾಸಕರು ಎಂದು ವೇತನ ಶ್ರೇಣಿ(8000-275-13500)ಮೂಲವೇತನ ರೂ:8000/-ಕ್ಕೆ ನಿಗದಿಪಡಿಸಲಾಗಿದೆ.ದಿನಾಂಕ:01-08-1998 ರಂದು m.phi. ಹೊಂದಿದ್ದಕ್ಕೆ ಒಂದು ಮುಂಗಡ ಬಡ್ತಿ ನೀಡಲಾಗಿದೆ. ಮುಂದುವರೆದು ಯು.ಜಿ.ಸಿ 2006ರ ಪರಿಷ್ಕೃತ ವೇತನ ಶ್ರೇಣಿ ಸೌಲಭ್ಯವನ್ನು ದಿನಾಂಕ:01-08-2006 ರಿಂದ ನೀಡಲಾಗಿದೆ ಹಾಗೂ ದಿನಾಂಕ:01-08-2009 ರಂದು ಪ್ರವಾಚಕ ಹುದ್ದೆಗೆ ಬಡ್ತಿ ನೀಡಿ ಮೂಲವೇತನ ರೂ:46400/-ಹಾಗೂ ಪ್ರಾಧ್ಯಾಪಕ ಹುದ್ದೆಗೆ ದಿನಾಂಕ:27-08-2012ರಿಂದ ನೀಡಿದ್ದು ಗಮನಿಸಿದೆ.ಶ್ರೀಯುತರ ಸೇವಾ ವಿವರ ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

**1)** ದಿನಾಂಕ:01-08-1998 ರಂದು ಶ್ರೀಯುತರ ವೇತನ ರೂ:8825/-ಇದ್ದು ದಿನಾಂಕ:01-08-1999 ರಂದು ಒಂದು ವಾರ್ಷಿಕ ವೇತನ ಬಡ್ತಿ ನೀಡಿ ರೂ:9100/-ಕ್ಕೆ ನಿಗದಿಪಡಿಸುವ ಬದಲಾಗಿ ತಪ್ಪಾಗಿ ರೂ:9375/-ಕ್ಕೆ ನಿಗದಿಪಡಿಸಲಾಗಿದೆ.

**2)** ಯು.ಜಿ.ಸಿ 2006ರ ಪರಿಷ್ಕೃತವೇತನ ಶ್ರೇಣಿ ಸರ್ಕಾರದ ಆದೇಶ ಸಂಖ್ಯೆ ಇಡಿ37 ಯುಎನ್‌ಇ2009 ಬೆಂಗಳೂರು ದಿನಾಂಕ:24-12-2009ರ ಪ್ರಕಾರ 2006ರ payscale benefit prospectively from the date of order ಎಂದು ತಿಳಿಸಿದ್ದು ದಿನಾಂಕ:01-08-2006 ರಂದು 8000 ಎ.ಜಿ.ಪಿಯ ಯು.ಜಿ.ಸಿ/ಸರ್ಕಾರದ ಆದೇಶದ ಮೇರೆಗೆ ದಿನಾಂಕ:24-12-2009ರಂದು ನಿಗದಿಪಡಿಸಬೇಕಾಗಿದ್ದು ದಿನಾಂಕ:24-12-2009 ರಂದು ಮೂಲವೇತನ ರೂ:33450/-(8000 ಎ.ಜಿ.ಪಿ)ಗೆ ನಿಗದಿಪಡಿಸಬೇಕಾಗಿದೆ.

**3)** ಸರ್ಕಾರದ ಆದೇಶ ದಿ:24-12-2009ರ ಪ್ರಕಾರ 8000ಎ.ಪಿ.ಜಿಯಿಂದ **ರೂ:9000/**-ಎ.ಪಿ.ಜಿ ಗೆ Grade Pay Movement ಗಾಗಿ ಕನಿಷ್ಠ 3 ವರ್ಷ ಎಂದು ತಿಳಿಸಿದ್ದು **ದಿ:01-08-2009** ರಂದು **9000** ಎ.ಪಿ.ಜಿ.ಗೆ ನಿಗದಿಪಡಿಸುವ ಬದಲಾಗಿ **ದಿ:24-12-2012** ರಂದು9000 ಎ.ಪಿ.ಜಿ.ಗೆ ಮೂಲವೇತನ **ರೂ:46400/**-ಕ್ಕೆ ನಿಗದಿಪಡಿಬೇಕಾಗಿತ್ತು.

ಈ ಹಿನ್ನಲೆಯಲ್ಲಿ ತಪ್ಪಾಗಿ ವೇತನ ನಿಗದೀಕರಣ ಹಾಗೂ ಯು.ಜಿ.ಸಿ2006 ರ ಪರಿಷ್ಕೃತ ವೇತನ ಶ್ರೇಣಿ ನಿಗಧಿಕರಣ ಸ್ಥಾನೀಕರಣ ಸೌಲಭ್ಯಗಳನ್ನು ತಪ್ಪಾಗಿ ನಿಗಧಿಪಡಿಸಿದ್ದಕ್ಕೆ 2014-15 ಮತ್ತು 2015-16ನೇ ಸಾಲಿನಲ್ಲಿ ಹೆಚ್ಚುವರಿ ಪಾವತಿ ಮೊತ್ತ **ರೂ:289278/-** ಹಾಗೂ ಹಿಂದೆ ನೀಡಿದ ಹೆಚ್ಚುವರಿ ವೇತನ ಭತ್ಯಗಳನ್ನು ವಿ.ವಿ.ಯೇ ಲೆಕ್ಕಾಚಾರ ಮಾಡಿ ಶ್ರೀಯುತರಿಂದ ವಸೂಲಿಸಿ ವಿ.ವಿ.ನಿಧಿಗೆ ಜಮಾ ಮಾಡುವುದು ಹಾಗೂ ಲೆ.ಪ.ಗೆ ಅನುಸರಣೆ ಸಲ್ಲಿಸುವುದು.ಅಥವಾ ಈ ಮೇಲೆ ತಿಳಿಸಿದಂತೆ ಅನಿಯಮಿತ ಪಾವತಿಗಳಿಗೆ ನಿಯಮಾನುಸಾರ ಕ್ರಮಬದ್ಧ ಇದೇ ಎಂದು ಸೂಕ್ತ ಅನುಸರಣೆ ನೀಡುವುದು.ಈ ಮೇಲ್ಕಂಡ ಎಲ್ಲ ವಿಷಯಕ್ಕೆ ಸಂಬಂಧಿಸಿದಂತೆ ಲೆ.ಪ.ವಿ **ಪತ್ರ ಸಂಖ್ಯೆ-82 ದಿನಾಂಕ:03-08-2016 ರಂದು** ನೀಡಲಾಗಿದ್ದು ಸದರಿ ಸಂಸ್ಥೆಯವರು **ಪುನರ್ ಪರಿಶೀಲನೆ** ಸಮಯದಲ್ಲಿ ನೀಡಿದ ಅನುಸರಣೆಯಲ್ಲಿ ಹಿಂದಿನ ಕಂಡಿಕೆಗಳಲ್ಲಿ ಸೂಚಿಸಿದಂತೆ **ದಿನಾಂಕ 24-12-2009**ರ ಆದೇಶ ಬರುವ ಪೂರ್ವದಲ್ಲಿಯೇ **ದಿನಾಂಕ 18-04-2007 ರಂದು** CAS ಪರಿನಿಯಮ ಹಾಗೂ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯದ ಪ್ರಕಾರ ನಿಡಲಾಗಿದೆಯೆಂದು ತಿಳಿಸಿರುತ್ತಾರೆ. ಇದು 24-12-2009ರ ಸರ್ಕಾರಿ ಆದೇಶಕ್ಕೆ ವಿರುದ್ದವಾಗಿದ್ದು ಈ ಅನುಸರಣೆ ಒಪ್ಪಲಾಗುವುದಿಲ್ಲ.

ಸದರಿಯವರಿಗೆ 24-12-2009ರ ಆದೇಶದಲ್ಲಿ ಸೂಚಿಸಿದಂತೆ 24-12-2009 ರಂದು 8000 AGP ಗೆ Grade pay Movement ನೀಡಿ ಅಲ್ಲಿಂದ 3 ವರ್ಷಗಳ ನಂತರ ಅಂದರೆ 24-12-2012ಕ್ಕೆ 9000 AGP ಗೆ ಮುಂಬಡ್ತಿ ನೀಡಬೇಕಾಗುತ್ತದೆ ಆದ್ದರಿಂದ ಸದರಿಯವರ ಅನುಸರಣೆ ಒಪ್ಪಲಾಗುವುದಿಲ್ಲ. ಹಾಗಾಗಿ **ರೂ:289278/-**ರ ವಸೂಲಿಗ ಸೂಚಿಸಿದೆ. ವಿವರಗಳನ್ನು **ಅನುಬಂಧ-19ರಲ್ಲಿ** ವರದಿಗೆ ಲಗತ್ತಿಸಿದೆ.

**2.4.24)ಡಾ:ಕೆ.ಸಿ.ಶಿವಾರೆಡ್ಡಿ ಸಹಪ್ರಾಧ್ಯಾಪಕರು.ಭಾಷಾಂತರ ಅಧ್ಯಯನ ವಿಭಾಗ ಇವರಿಗೆ ಹಾಗೂ ಇತರರಿಗೆ ಯು.ಜಿ.ಸಿ.–1996ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಅನಿಯಮಿತವಾಗಿ M.Phil ಗಾಗಿ ಎರಡುಬಾರಿ ಮುಂಗಡ ವೇತನ ಬಡ್ತಿಗಳನ್ನು ನೀಡಿರುವುದು.ಯು.ಜಿ.ಸಿ–2006 ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ತಪ್ಪಾಗಿ ವೇತನ ನಿಗದಿಪಡಿಸಿರುವುದು ಹಾಗೂ ಯು.ಜಿ.ಸಿ–2006 ರ ಪರಿಷ್ಕೃತ ವೇತನ ಶ್ರೇಣಿಯ ನಿಯಮಗಳಿಗೆ ವ್ಯತಿರಿಕ್ತವಾಗಿ ಪದೋನ್ನತಿ ನೀಡಿರುವುದು:–**

**(ಎ)ಯು.ಜಿ.ಸಿ–1996 ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಅನಿಯಮಿತವಾಗಿ M.Phil ಗಾಗಿ 2 ಬಾರಿ ಮುಂಗಡ ವೇತನ ಬಡ್ತಿಗಳನ್ನು ನೀಡಿರುವುದು.:–**

ಡಾ:ಕೆ.ಸಿ.ಶಿವಾರೆಡ್ಡಿಯವರು ಯು.ಜಿ.ಸಿ ವೇತನ ಶ್ರೇಣಿಯಲ್ಲಿ 2200–4000 ರಲ್ಲಿ ಉಪನ್ಯಾಸಕರಾಗಿ ನೇಮಕ ಹೊಂದಿ,ದಿ:21–08–1997 ರಂದು ಕರ್ತವ್ಯಕ್ಕೆ ವರದಿಮಾಡಿಕೊಂಡಿರುತ್ತಾರೆ.ಸದರಿಯವರು ಸೇವೆಗೆ ಸೇರುವುದಕ್ಕಿಂತ ಪೂರ್ವದಲ್ಲಿಯೇ M.Phil ಪದವಿ ಹೊಂದಿರುವುದರಿಂದ(ಸೇವಾ ಪುಸ್ತಕದಲ್ಲಿ ನಮೂದಿಸಿರುವಂತೆ 1990 ರಲ್ಲಿ ) ಸದರಿಯವರಿಗೆ ಕುಲಸಚಿವರು ಕನ್ನಡ ವಿ.ವಿ.ಹಂಪಿ ಇವರ ಆದೇಶ ಸಂಖ್ಯೆ:ಕ.ವಿ.ಹಂ:ಕು.ಸ.ವಾ.ವೇಬ.1998–1999 ದಿ:12–08–1998ರ ಪ್ರಕಾರ ಯು.ಜಿ.ಸಿ.ವೇತನ ಶ್ರೇಣಿ 2200–400 ರಲ್ಲಿ ದಿ:01–08–1998 ರಂದು ಒಂದು ಮುಂಗಡ ವೇತನ ಬಡ್ತಿ ನೀಡಿ ರೂ:2350/–ಗಳಿಗೆ ವೇತನ ನಿಗದಿಪಡಿಸಲಾಗಿರುತ್ತದೆ.

ಮುಂದುವರೆದು ಯು.ಜಿ.ಸಿ–1996 ರ ಪ.ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸುವಾಗ ವೇತನ ಶ್ರೇಣಿ ರೂ:8000–13500 ರಲ್ಲಿದಿ:01–08–1998ಕ್ಕೆ M.Philಗಾಗಿ ಒಂದು ಮುಂಗಡ ವೇತನ ಬಡ್ತಿ ನೀಡಿ ರೂ:8550/–ಗಳಿಗೆ ವೇತನ ನಿಗದಿಪಡಿಸಲಾಗಿರುತ್ತದೆ.(ಕ.ವಿ.ಹಂ.ಕು.ಸ ಯು.ಜಿ.ಸಿ ವೇತನ–1999–2000 ಸ್ಥ/5263 ದಿ:20–01–2000) ಹಾಗೂ ದಿ:01–08–2001 ರಂದು M.Phil+PH.D 3 ಮುಂಗಡ ವೇತನ ಬಡ್ತಿಗಳನ್ನು ನೀಡಿ ರೂ:10200/–ಗಳಿಗೆ ವೇತನ ನಿಗದಿಪಡಿಸಲಾಗಿರುತ್ತದೆ.( **M.Phil ಗಾಗಿ 1 ಸೇವೆಯಲ್ಲಿರುವಾಗ PH.D ಪದವಿ ಹೊಂದಿರುವುದಕ್ಕೆ 2 ಒಟ್ಟು 3 ಮುಂಗಡ ವೇತನ ಬಡ್ತಿ)** ಈ ಕುರಿತು ಪರಿಶೀಲಿಸಲಾಗಿ ಸದರಿಯವರಿಗೆ ಕ್ರಮವಾಗಿ ದಿ:01–08–1998 ರಂದು ಮತ್ತು 01–08–2001 ರಂದು **M.Phil** ಗಾಗಿ ಒಂದು ಮುಂಗಡ ವೇತನ ಬಡ್ತಿಯನ್ನು ಅನಿಯಮಿತವಾಗಿ 2 ಬಾರಿ ನೀಡಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ:Ed100 Une99 Dated 15-11-1999 ರ ಕಂಡಿಕೆ 7–ರಲ್ಲಿ"The Revised Ugc Pay Scales Shall Be Retrospectively effective From 01-01-1996 And All Other Allownces And Benefits Prospectively From The Dated Of Issue Of Order" ಎಂದು ತಿಳಿಸಿರುವಂತೆ ದಿ:01–08–1998 ರಂದು **M.Phil ಗಾಗಿ** ನೀಡಿರುವ 1 ಮುಂಗಡ ವೇತನ ಬಡ್ತಿಯನ್ನು ದಿ:15–11–1999ಕ್ಕೆ ನೀಡುವುದು ಹಾಗೂ ದಿನಾಂಕ:01–08–2001 ರಂದು ನೀಡಿರುವ ಮುಂಗಡ ವೇತನ ಬಡ್ತಿಯನ್ನು ಹಿಂಪಡೆದು ಈ ಕುರಿತು ಸದರಿಯವರಿಗೆ ಹೆಚ್ಚುವರಿಯಾಗಿ ಸಂದಾಯಿಸಿರುವ ವೇತನ ಭತ್ಯೆಗಳನ್ನು **(M.Phil ಗಾಗಿ 2ನೇ ಬಾರಿ)** ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡುವುದು.

**(ಬಿ)ಯು.ಜಿ.ಸಿ–2006ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿ:01–01–2006ಕ್ಕೆ ತಪ್ಪಾಗಿ ವೇತನ ನಿಗದಿ ಪಡಿಸಿರುವ ಕುರಿತು:–**

ಯು.ಜಿ.ಸಿ–2006ರ ಪರಿಷ್ಕೃತ ವೇತನ ಶ್ರೇಣಿ ರೂ:15600–39100+7000 ಎ.ಜಿ.ಪಿಯಲ್ಲಿ ದಿ:01–01–2006ಕ್ಕೆ ರೂ:29230/–ಕ್ಕೆ ವೇತನ ನಿಗದಿಪಡಿಸಿರುವುದನ್ನು ಪರಿಶೀಲಿಸಲಾಗಿದ್ದು.ಸದರಿಯವರ ವೇತನವನ್ನು ಯು.ಜಿ.ಸಿ–2006 ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸುವಾಗ ಯು.ಜಿ.ಸಿ–1996 ರ ವೇತನ ಶ್ರೇಣಿ ರೂ:10000–15200 ರಲ್ಲಿ ವೇತನ ರೂ:11625/–ಗಳನ್ನು ಪರಿಷ್ಕೃತ ಪೂರ್ವ ವೇತನವಾಗಿ ಪರಿಗಣಿಸದೆ ರೂ:11950/–ಗಳನ್ನು ತಪ್ಪಾಗಿ ಪರಿಗಣಿಸಿ ಅದಕ್ಕೆ ಸಂವಾದಿಯಾಗಿ ರೂ:7000/– ಎ.ಜಿ.ಪಿ ಯಲ್ಲಿ ರೂ:29230/–ಗಳಿಗೆ ತಪ್ಪಾಗಿ ವೇತನ ನಿಗದಿಪಡಿಸಿ ಅನಿಯಮಿತವಾಗಿ ಹೆಚ್ಚುವರಿ ವೇತನ ಭತ್ಯೆಗಳನ್ನು ಸಂದಾಯ ಮಾಡಲಾಗುತ್ತಿರುವುದನ್ನು ಲೆಕ್ಕ ಪರಿಶೋಧನೆಯು ಮಾನ್ಯ ಮಾಡುವುದಿಲ್ಲ. ಈ ಹಿನ್ನಲೆಯಲ್ಲಿ ಸದರಿಯವರ ದಿ:01–01–2006ರ ವೇತನ ನಿಗಧಿಕರಣವನ್ನು ಸರಿಪಡಿಸಿ ಹೆಚ್ಚುವರಿಯಾಗಿ ಸಂದಾಯಿಸಿರುವ ವೇತನ ಭತ್ಯೆಗಳನ್ನು ವಸೂಲಿ ಮಾಡಬೇಕಾಗುತ್ತದೆ.

**(ಸಿ)ಯು.ಜಿ.ಸಿ–2006ರ ಪರಿಷ್ಕೃತ ವೇತನಶ್ರೇಣಿಯ ನಿಯಮಗಳಿಗೆ ವ್ಯತಿರಿಕ್ತವಾಗಿ ಸಿ.ಎ.ಎಸ್ ಪದೋನ್ನತಿ ನೀಡಿರುವುದು.**

ಸದರಿಯವರಿಗೆ ಯು.ಜಿ.ಸಿ–2006ರ ಪ.ವೇ.ಶ್ರೇಣಿ ರೂ:15600–39100+ಎ.ಜಿ.ಪಿ7000 ದಿಂದ 8000 ಎ.ಜಿ.ಪಿ ಗೆ ಸ್ಥಾನೀಕರಣ ನೀಡಿ ದಿ:01–08–2006 ರಂದು ರೂ:30320/–ಗಳಿಗೆ ನಿಗದಿಪಡಿಸಲಾಗಿರುತ್ತದೆ.

G.O.No-Ed.37 Une2009 Dated-24-12-2009ರ ಕಂಡಿಕ್ಕೆ 10ರಲ್ಲಿ ." The Revised Uge Pay Scales Shall Be Effective From01-01-2006 And All Other Allowance And Benefits Prospectively From The Date Of Issue Of This Order"ಎಂದು ತಿಳಿಸಿರುವ ಹಿನ್ನಲೆಯಲ್ಲಿ ದಿ:01–08–2006ರಂದು ನೀಡಿರುವ ಎ.ಜಿ.ಪಿ 8000 ಸ್ಥಾನೀಕರಣವನ್ನು ದಿ:24–12–2009ಕ್ಕೆ ಹಾಗೂ ದಿ:01–08–2009ಕ್ಕೆ ಯು.ಜಿ.ಸಿ ವೇತನ ಶ್ರೇಣಿ 37400–67000+ಎ.ಜಿ.ಪಿ 9000ರಲ್ಲಿ ನೀಡಿರುವ ಸಹಪ್ರಾಧ್ಯಾಪಕ ಹುದ್ದೆಯ ಪದೋನ್ನತಿಯನ್ನು ದಿ:24–12–2012ಕ್ಕೆ ನಿಗದಿಪಡಿಸಿ ಯು.ಜಿ.ಸಿ–2006ರ ಪ.ವೇ.ಶ್ರೇಣಿಯ ನಿಯಮಗಳಿಗೆ ವ್ಯತಿರಿಕ್ತವಾಗಿ ನೀಡಿದ ಪದೋನ್ನತಿಯಿಂದುಂಟಾದ ಹೆಚ್ಚುವರಿ ವೇತನ ಭತ್ಯಗಳ ಸಂದಾಯವನ್ನು ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡುವುದು.

ಈ ಮೇಲೆ ವಿವರಿಸಿದ ಕಂಡಿಕೆಗಳಾದ ಎ.ಬಿಮತ್ತು ಸಿ ಯ ಆಕ್ಷೇಪಿತ ಅಂಶಗಳಿಂದಾಗಿ ಸದರಿಯವರಿಗೆ 2014–15ಮತ್ತು 2015–16ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ವೇತನ+ಭತ್ಯಗಳ ಮೊತ್ತ ರೂ:270252/–ಗಳನ್ನು ವಸೂಲಿಸಿ ಲೆ.ಪ.ಗೆ ಅನುಸರಣೆ ನೀಡುವಂತೆ ಲೆ.ಪ.ವಿ.ಪತ್ರ ಸಂಖ್ಯೆ:81 **ದಿ:03–08–2016ರಂದು** ನೀಡಿದ್ದು ಸದರಿ ಸಂಸ್ಥೆಯವರು **ಪುನರ್ ಪರಿಶೀಲನಾ** ಸಮಯದಲ್ಲಿ ನೀಡಿದ ಅನುಸರಣೆಯಲ್ಲಿ M.Phil ಗಾಗಿ 2 ವೇತನ ಬಡ್ತಿ ನೀಡುವುದಾಗಿ ತೀಳಿಸಿರುತ್ತಾರೆ. ಆದರೆ ಈ ಕಂಡಿಕೆಯ ಕ್ರಮ ಸಂಖ್ಯೆ ಎ ನಲ್ಲಿ ಸೂಚಿಸಿದಂತೆ **3 ಬಾರಿ** M.Phil ಗಾಗಿ ವೇತನ ಬಡ್ತಿ ನೀಡಲಾಗಿದೆ. ಕ್ರ. ಸಂಖ್ಯೆ ಬಿ. ಯ ಆಕ್ಷೇಪಣೆಗೆ ಸಮರ್ಪಕ ಉತ್ತರ ನೀಡಿರುವುದಿಲ್ಲ. ಕ್ರಮ ಸಂಖ್ಯೆ 3 ರ ಆಕ್ಷೇಪಣೆಗೆ ಸಮರ್ಪಕ ಉತ್ತರ ನೀಡಿರುವುದಿಲ್ಲ. **ಕ್ರಸ 3** ರ ಆಕ್ಷೇಪಣೆಗೆ ಹಿಂದಿನ ಕಂಡಿಕೆಗಳಲ್ಲಿ ಸೂಚಿಸಿದಂತೆ ದಿನಾಂಕ 24–12–2009 ರ ಆದೇಶದ ಪೂರ್ವದಲ್ಲಿಯೇ CAS ನಿಯಮಾವಳಿ ಪ್ರಕಾರ ಸಹಪ್ರಾಧ್ಯಾಪಕ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ಹಿಂದಿನ ಕಂಡಿಕೆಗಳಲ್ಲಿ ಸೂಚಿಸಿದಂತೆ ಇದು 24–12–2009 ರ ಸರ್ಕಾರಿ ಆದೇಶದ ವಿರುದ್ಧವಾಗಿದ್ದು ಈ ಅನುಸರಣೆಯನ್ನು ಒಪ್ಪಲಾಗುವುದಿಲ್ಲ.

ಮೂಲಕ ತಿಳಿಸಲಾಗಿದ್ದರೂ, ವಸೂಲಾತಿ ಮೊತ್ತದ ವಿವರಗಳನ್ನು ಈ ಕಂಡಿಕೆಗೆ ಲಗತ್ತಿಸಿದ **ಅನುಬಂಧ–20**(ಎ)ರಲ್ಲಿ ವಿವರಿಸಿದೆ. 2014–15 ಮತ್ತು 2015–16ರಲ್ಲಿ ಹೆಚ್ಚುವರಿಯಾಗಿ ಸಂದಾಯಿಸಿರುವ ವೇತನ+ಭತ್ಯಗಳನ್ನು ಮಾತ್ರ ಲೆಕ್ಕ ಪರಿಶೋಧನೆಯಲ್ಲಿ ಲೆಕ್ಕ ಹಾಕಿ ವಸೂಲಿಗೆ ಸೂಚಿಸಿದ್ದು ಹಿಂದಿನ ಸಾಲುಗಳಲ್ಲಿ ಹೆಚ್ಚುವರಿಯಾಗಿ ಸಂದಾಯಿಸಿರುವ ವೇತನ+ಭತ್ಯಗಳನ್ನು ವಿ.ವಿ.ಯೇ ಲೆಕ್ಕ ಹಾಕಿ ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡುವುದು.

ಸದರಿಯವರ ಪ್ರಕರಣವನ್ನು ಉದಾಹರಣೆಗೆ ಮಾತ್ರ ವಿವರಿಸಲಾಗಿದ್ದು ಇಂತಹ ಇನ್ನುಳಿದ ಎಲ್ಲ ಪ್ರಕರಣಗಳಲ್ಲಿ ಮೇಲೆ ಸೂಚಿಸಿದಂತೆ ಕ್ರಮ ಕೈ ಗೊಂಡು ಲೆ.ಪ.ಗೆ ಅನುಸರಣೆನೀಡುವುದು. ಈ ಹಿನ್ನಲೆಯಲ್ಲಿ ಸದರಿಯವರಿಂದ ರೂ:270252/–ಗಳನ್ನು ಈ ಪ್ರಕರಣದಂತೆಯೆ ಇರುವ **ಶ್ರೀ.ಗಂಗಾಧರ ದೈವಜ್ಞ** ಅವರಿಂದ **ರೂ:231144/–( ಅನುಬಂಧ–20.ಬಿ),ಶ್ರೀ ವೆಂಕಟೇಶ್ ಇಂಡ್ವಾಡಿ** ಇವರಿಂದ **ರೂ:270600/**–ಗಳನ್ನು **(ಅನುಬಂಧ–20(ಸಿ))** ವಸೂಲಿಸುವುದು.ಶ್ರೀ ವೆಂಕಟೇಶ್ ಇವರಿಂದ ರೂ:171215/– **ಗಳನ್ನು** (ಅನುಬಂಧ–20(ಡಿ)) ವಸೂಲಿಸುವುದು. ಲೆಕ್ಕ ಪರಿಶೋಧನೆಯಲ್ಲಿ **2014–15** ಮತ್ತು **2015–16ನೇ** ಸಾಲಿನಲ್ಲಿ ಹೆಚ್ಚುವರಿಯಾಗಿ ಸಂದಾಯಿಸಿದ ವೇತನ ಭತ್ಯಗಳನ್ನು ಮಾತ್ರ ಲೆಕ್ಕ ಹಾಕಲಾಗಿದ್ದು ಹಿಂದೆ ನೀಡಿದ ಎಲ್ಲಾ ಅನಿಯಮಿತ ವೇತನ ಭತ್ಯಗಳನ್ನು ವಿ.ವಿ.ಯೇ ಲೆಕ್ಕ ಹಾಕಿ ಸದ್ರಿ ಸಿಬ್ಬಂದಿಗಳಿಂದ ವಸೂಲಿಸಿ ಲೆ.ಪ.ಗೆ ಅನುಸರಣೆ ಸಲ್ಲಿಸುವುದು.

ಶ್ರೀ.ಕೆ.ಸಿ.ಶಿವಾರೆಡ್ಡಿ ಪ್ರಕರಣದಂತೆಯೆ ಇರುವ ಶ್ರೀ.ರಮೇಶ್ ನಾಯ್ಕ ಅಧ್ಯಾಪಕರು ಹಾಗೂ ಶ್ರೀ.ಯು.ಮಲ್ಲಿಕಾರ್ಜುನ್ ಗ್ರಂಥಾಲಯ ಸಹಾಯಕರು ಎಲ್ಲ ವರ್ಷಗಳಲ್ಲಿ **(ಅಂದರೆ ನೇಮಕಾತಿಯಿಂದ ಹಿಡಿದು 31–03–2016ರ ವರೆಗಿನ)** ಹೆಚ್ಚವರಿಯಾಗಿ ನೀಡಿದ ವೇತನ ಭತ್ಯಗಳನ್ನು ವಿ.ವಿ.ಯೇ ಲೆಕ್ಕ ಹಾಕಿ ವಸೂಲಿಸುವುದು ಹಾಗೂ ಲೆಕ್ಕ ಪರಿಶೋಧನೆಗೆ ಅನುಪಾಲನೆ ನೀಡುವುದು.

**2.4.25)ಡಾ:ಮೋಹನ್ ಕೃಷ್ಣ ರೈ.ಕೆ ಪ್ರಾಧ್ಯಾಪಕರು ಇತಿಹಾಸ ವಿಭಾಗ ಇವರಿಗೆ ಹಾಗೂ ಇತರರಿಗೆ PH.D ಹೊಂದಿರುವ ಪ್ರಯುಕ್ತ 2 ಮುಂಗಡ ಬಡ್ತಿಗಳನ್ನು ನಿಗದಿತ ಸಮಯಕ್ಕಿಂತ ಪೂರ್ವದಲ್ಲಿ ನೀಡಿದ್ದು ಹಾಗೂ ಯು.ಜಿ.ಸಿ–2006 ರ ಪರಿಷ್ಕೃತ ವೇತನ ಶ್ರೇಣಿಯ ಸ್ಥಾನೀಕರಣ ಸೌಲಭ್ಯವನ್ನು ದಿ:24–12–2009ರ ಪೂರ್ವದಲ್ಲಿ ನೀಡಿರುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಾ:ಮೋಹನ್ ಕೃಷ್ಣ.ರೈ.ಕೆ ಇವರು ದಿ:06–03–1996 ರಂದು ಅಧ್ಯಾಪಕರೆಂದು ಇತಿಹಾಸ ವಿಭಾಗಕ್ಕೆ ವೇತನ ಶ್ರೇಣಿ 2200–4000ರಲ್ಲಿ ಮೂಲವೇತನ ರೂ:2200ಕ್ಕೆ ವೇತನ ನಿಗದಿಪಡಿಸಲಾಗಿದ್ದು.1996ರ ಯು.ಜಿ.ಸಿ ಪ.ವೇ.ಶ್ರೇಣಿಯಲ್ಲಿ ದಿ:06–03–1996ಕ್ಕೆ ಮೂಲವೇತನ ರೂ:8000ಕ್ಕೆ ನಿಗದಿಪಡಿಸಿದ್ದು NET/U.G.C 1993-94ರಲ್ಲಿ ಉತ್ತೀರ್ಣರಾಗಿದ್ದು 5 ವರ್ಷಗಳ ನಂತರ 01–03–2002ಕ್ಕೆ ಹಿರಿಯ ವೇತನ ಶ್ರೇಣಿ(ಎಸ್.ಎಸ್.ಎಲ್)10000–15200 ಮೂಲವೇತನ ರೂ:10000/–ಕ್ಕೆ ನಿಗದಿಪಡಿಸಲಾಗಿದೆ.ದಿ:01–03–2005 ರಂದು 1996ರ ಯು.ಜಿ.ಸಿ ವೇತನ ಶ್ರೇಣಿಯಲ್ಲಿ 2ವಾರ್ಷಿಕ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಿ ಮೂಲವೇತನ ರೂ:11300/–ಕ್ಕೆ ನಿಗದಿಪಡಿಸಿದ್ದು ಗಮನಿಸಿದೆ.

2006ರ ಯು.ಜಿ.ಸಿ ಪ.ವೇ.ಶ್ರೇಣಿಯಲ್ಲಿ ಶ್ರೀಯುತರಿಗೆ ದಿ:01–01–2006ರಿಂದ ಜಾರಿಗೆ ಬರುವಂತೆ.7000 ಎ.ಜಿ.ಪಿಯಲ್ಲಿ ಮೂಲವೇತನ 28630/–ಕ್ಕೆ ಕ್ರಮೇಣ 01–03–2007 ರಂದು 8000 ಎ.ಜಿ.ಪಿ.ಯಲ್ಲಿ ಮೂಲವೇತನ ರೂ: 31110/–ಕ್ಕೆ ದಿ:06–03–2010 ರಂದು 9000ಎ.ಜಿ.ಪಿಯಲ್ಲಿ ಮೂಲವೇತನ 40400/–ಹಾಗೂ ದಿ:06–03–2013 ರಂದು 10000 A.G.P(ಪ್ರಾಧ್ಯಾಪಕ ಹುದ್ದೆ ಪದೋನ್ನತಿ)ಮೂಲವೇತನ ರೂ:51700/–ನೀಡಿದ್ದು ಪ್ರಸ್ತುತ ಸಾಲಿನಲ್ಲಿ ದಿ:01–03–2016 ರಂದು ಇವರ ಮೂಲವೇತನ 56495/– ಇರುತ್ತದೆ.ಶ್ರೀಯುತರಿಗೆ PH.D ಮುಂಗಡ ಬಡ್ತಿಗಳು ಪರಿಷ್ಕೃತ ವೇತನ ಶ್ರೇಣಿಯ ಸ್ಥಾನೀಕರಣ ಸೌಲಭ್ಯಗಳು.ಎ.ಜಿ.ಪಿ ಮೂವ್‌ಮೆಂಟ್ ಇನ್‌ಗ್ರೇಡ್ ಪೇ ಪಾವತಿಗಳಲ್ಲಿ ಕಂಡುಬಂದ ನ್ಯೂನತೆಗಳು ಈ ಕೆಳಗಿನಂತಿವೆ.

**(1)ಪಿ.ಹೆಚ್.ಡಿ. ಹೊಂದಿದ ಪ್ರಯುಕ್ತ 2 ಮುಂಗಡ ವೇತನ ಬಡ್ತಿ ಮಂಜೂರಾತಿ ಕುರಿತು:–**

ದಿನಾಂಕ:01–03–2005 ರಂದು **PH.D.** ಮುಂಗಡ ಬಡ್ತಿ ನೀಡಿ ಮೂಲವೇತನ ರೂ:11300/–ಕ್ಕೆ ನಿಗದಿಪಡಿಸಿದ್ದು ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ200 ಯು.ಎನ್.ಇ–2007 ದಿನಾಂಕ:19–09–2007 ರ ಪ್ರಕಾರ ದಿನಾಂಕ:01–01–1996 ರಂದು ನಂತರ **PH.D** ಹೊಂದಿರುವ/ಹೊಂದಲಿರುವ ಉಪನ್ಯಾಸಕರಿಗೆ 2 ಮುಂಗಡವೇತನ ಬಡ್ತಿಗಳನ್ನು ಸರ್ಕಾರದ ಆದೇಶ ದಿನಾಂಕದಿಂದ ನೀಡತಕ್ಕದ್ದು ಎಂದು ತಿಳಿಸಿದ್ದು ದಿನಾಂಕ:01–03–2005 ರ ಬದಲಾಗಿ ದಿನಾಂಕ:19–09–2007ಕ್ಕೆ ಪಾವತಿಸಬೇಕಾಗಿದೆ.ಪೂರ್ವಾನ್ವಯವಾಗಿ ಹೆಚ್ಚವರಿ ಪಾವತಿಸಿದ ಈ ಸೌಲಭ್ಯದ ವೇತನ ಮತ್ತು ಭತ್ಯಗಳನ್ನು ವಸೂಲಿಸುವುದು.

**(II)ಯು.ಜಿ.ಸಿ.2006 ರ ಪರಿಷ್ಕೃತ ವೇತನ ಶ್ರೇಣಿ ಸ್ಥಾನೀಕರಣ ಹಾಗೂ ಇನ್ನಿತರ ಸೌಲಭ್ಯಗಳನ್ನು ದಿನಾಂಕ:24–12–2009ರಿಂದ ನೀಡುವುದು:–**

ಶ್ರೀಯುತರಿಗೆ 2006 ರ ಪ.ವೇ.ಶ್ರೇಣಿಯಲ್ಲಿ ದಿನಾಂಕ:01–01–2006ರಿಂದ ಪರಿಷ್ಕೃತವೇತನ 7000 AGPಯಲ್ಲಿ ರೂ:28630/–ವೇತನ ನಿಗದಿಪಡಿಸಲಾಗಿತ್ತು.ದಿನಾಂಕ:01–03–2007 ರಂದು 8000/–AGP ಯಲ್ಲಿ ಗ್ರೇಡ್ ಫೇ.ಮೂವ್‌ಮೆಂಟ್ ಸೌಲಭ್ಯವನ್ನು ನೀಡಿದ್ದು ಸದರಿ ಸೌಲಭ್ಯ ಸರ್ಕಾರದ ಆದೇಶ ಸಂಖ್ಯೆ:ED37UNE 2009 ಬೆಂಗಳೂರು ದಿನಾಂಕ:24–12–2009ರ ಕ್ರಮ ಸಂಖ್ಯೆ:10ರ ಪ್ರಕಾರ Date Of Effect Of Revised Ugc Pay Scales Shall Be Effective From 01-01-2006 And All Other Allowance/Benefits From Porospectively Issue Of This Order" ಎಂದು ತಿಳಿಸಲಾಗಿದ್ದು. Gradepay Movement Benefit ಆಗಿರುವುದರಿಂದ ದಿನಾಂಕ:24–12–2009ಕ್ಕೆ ನೀಡಬೇಕಾಗಿದೆ. ಇದಕ್ಕನು ಗುಣ ವಾಗಿ ಪ್ರವಾಚಕ (READER) ಗುದ್ದೆಗೆ ಪದೋನ್ನತಿ ದಿನಾಂಕ:24–12–2012ಕ್ಕೆ (9000AGP) ಹಾಗೂ ಪ್ರಾಧ್ಯಾಪಕ .ಹುದ್ದೆಗೆ ಪದೋನ್ನತಿ ದಿನಾಂಕ:24–12–2015ಕ್ಕೆ (10000 AGP)ಯನ್ನು ನೀಡಬೇಕಾಗಿದ್ದು.ಈ ಅವಧಿಗೆ ಹೆಚ್ಚುವರಿ ಪಾವತಿಸಿದ ವೇತನ ಹಾಗೂ ಭತ್ಯಗಳನ್ನು ವಸೂಲಿಸುವುದು ಹಾಗೂ ಲೆ.ಪ.ಗೆ ಅನುಸರಣೆ ನೀಡುವುದು.

ಈ ಮೇಲೆ ವಿವರಿಸಿದ ಕಂಡಿಕೆ 1.11 ಆಕ್ಷೇಪಿತ ಅಂಶಗಳಿಂದಾಂಗಿ ಸದರಿಯವರಿಗೆ 2014-15 ಮತ್ತು 2015-16ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಸಂದಾಯಿಸಿರುವ ವೇತನ+ಭತ್ಯಗಳ ಮೊತ್ತ **ರೂ:273708/-**ಗಳನ್ನು ವಸೂಲಿಸಿ ಲೆ.ಪ.ಗೆ ಅನುಸರಣೆ ನೀಡುವಂತೆ ಲೆ.ಪ.ವಿ.ಪತ್ರ ಸಂಖ್ಯೆ:-87ನ್ನು ದಿನಾಂಕ:04-08-2016ರ ಮೂಲಕ ತಿಳಿಸಲಾಗಿತ್ತು ಈ **ಮೇಲಿನ ಆಕ್ಷೇಪಣೆಗಳಿಗೆ** ಸದರಿ ಸಂಸ್ಥೆಯವರು **ಪುನರ್ ಪರಿಶೀಲನಾ** ಸಮಯದಲ್ಲಿ ಅನುಸರಣೆ ನೀಡಿ ಕ್ರ.ಸಂ. 1 ರ ಅಕ್ಷೇಪಣೆಗೆ ಸದರಿಯವರು **2004**ರಲ್ಲಿ ಪಿ.ಎಚ್.ಡಿ ಪಡೆದಿರುವುದರಿಂದ **19-09-2007**ರ ಸರ್ಕಾರದ ಆದೇಶ ಬರುವ ಪೂರ್ವದಲ್ಲಿಯೇ ಅಂದರೆ **01-03-2005** ರಲ್ಲಿಯೇ ಪಿ.ಎಚ್.ಡಿ ವೇತನ ಬಡ್ತಿ ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ಇದು ತಪ್ಪಾಗಿದ್ದು ದಿನಾಂಕ **19-09-2007**ರ ಸುತ್ತೋಲೆಯಲ್ಲಿರುವಂತೆ ದಿನಾಂಕ **01-01-1996** ರಂದು ಅಥವಾ ನಂತರ ಪಿ.ಎಚ್.ಡಿ ಹೊಂದಿದ ಭೋಧಕ ಸಿಬ್ಬಂದಿಗೆ ಈ ಆದೇಶ ಬಂದ ದಿನಾಂಕ **19-09-2007** ರಿಂದಲೇ ಪಿ.ಎಚ್.ಡಿ. ಬಡ್ತಿ ನೀಡಬೇಕಾಗುತ್ತದೆ.

ಇನ್ನು ಕ್ರಮ ಸಂಖ್ಯೆ 2 ರ ಆಕ್ಷೇಪಣೆಗೆ ಸದರಿಯವರಿಂಗೆ ದಿನಾಂಕ **24-12-2009**ರ ಸರ್ಕಾರದ ಆದೇಶ ಬರುವ ಪೂರ್ವದಲ್ಲಿಯೇ ಅಂದರೆ ದಿನಾಂಕ **18-04-2007** ರಲ್ಲಿ **CAS** ಮುಂಬಡ್ತಿ ನೀಡಿರುವುದಾಗಿ ತಿಳಿಸಿರುತ್ತಾರೆ. ಇದು ಹಿಂದಿನ ಕಂಡಿಕೆಗಳಲ್ಲಿ ತಿಳಿಸಿದಂತೆ **24-12-2009**ರ ಸರ್ಕಾರಿ ಆದೇಶಕ್ಕೆ ವಿರುದ್ದವಾಗಿದ್ದು ಇದನ್ನು ಒಪ್ಪಲಾಗುವುದಿಲ್ಲ. ಸದರಿಯವರಿಗೆ ದಿನಾಂಕ **24-12-2009** ರಿಂದ **8000 AGP** ಯಲ್ಲಿ ಗ್ರೇಡ್ ಪೇ ಮೂವ್‌ಮೆಂಟ್ ನೀಡಿ ಅಲ್ಲಿಂದ **24-12-2012**ಕ್ಕೆ **9000 AGP** ಗೆ ಹಾಗೂ **24-12-2015** ಕ್ಕೆ **10000 AGP** ಗೆ ಮುಂಬಡ್ತಿ ನೀಡಬೇಕಾಗಿತ್ತು.

ವಸೂಲಾತಿ ಮೊತ್ತದ ವಿವರಗಳನ್ನು ಈ ಕಂಡಿಕೆಗೆ ಲಗತ್ತಿಸಿದ.ಅನುಬಂಧ-21(ಎ)ರಲ್ಲಿ ವಿವರಿಸಿದೆ.2014-15&2015-16ರಲ್ಲಿ ಹೆಚ್ಚವರಿಯಾಗಿ ಸಂದಾಯಿಸಿದ ವೇತನ+ಭತ್ಯಗಳನ್ನು ಮಾತ್ರ ಲೆ.ಪ.ದಲ್ಲಿ ಲೆಕ್ಕಹಾಕಿ ವಸೂಲಿಗೆ ಸೂಚಿಸಿದ್ದು ಹಿಂದಿನ ಸಾಲುಗಳಲ್ಲಿ ಹೆಚ್ಚವರಿಯಾಗಿ ಸಂದಾಯಿಸಿರುವ ವೇತನ+ಭತ್ಯಗಳನ್ನು ವಿ.ವಿ.ಯೇ ಲೆಕ್ಕ ಹಾಕಿ ವಸೂಲಿಸಿ ಲೆ.ಪ.ಗೆ ಅನುಸರಣೆ ನೀಡುವುದು.

ಸದರಿಯವರ ಪ್ರಕರಣವನ್ನು ಉದಾಹರಣೆಗೆ ಮಾತ್ರ ವಿವರಿಸಲಾಗಿದ್ದು.ಇನ್ನುಳಿದ ಎಲ್ಲ ಪ್ರಕರಣಗಳಲ್ಲಿ ಮೇಲೆ ಸೂಚಿಸಿದಂತೆ ಕ್ರಮ ಕೈಗೊಂಡು ಲೆ.ಪ.ಗೆ ಅನುಸರಣೆ ನೀಡುವುದು.ಈ ಹಿನ್ನಲೆಯಲ್ಲಿ ಶ್ರೀಯುತರಿಂದ **ರೂ:273708/-**ಗಳನ್ನು ಈ ಪ್ರಕರಣದಂತೆಯೆ ಇರುವ ಡಾ:ಎಸ್.ಆರ್ ಚನ್ನವೀರಪ್ಪ **ಅನುಬಂದ-21(ಬಿ)** ಸಹ ಪ್ರಾಧ್ಯಾಪಕರಿಂದ **ರೂ:104597/-**ಗಳನ್ನು ಡಾ:ಸಿದ್ದಗಂಗಮ್ಮ ಸಹ ಪ್ರಾಧ್ಯಾಪಕರು ಇವರಿಂದ ಅನುಬಂದ-**21(ಸಿ)** **ರೂ:104597/-**ಗಳನ್ನು ಡಾ:ಎಂ.ಸಿ.ಗಣೇಶ್ ಪ್ರಧ್ಯಾಪಕರು ಇವರಿಂದ **ಅನುಬಂದ-21(ಡಿ)**ರೂ:148130/-ಗಳನ್ನು ಡಾ:ಸಿ.ಟಿ.ಗುರುಪ್ರಾಸಾದ್ ಸಹ ಪ್ರಾಧ್ಯಾಪಕರು ಇವರಿಂದ **ಅನುಬಂದ-21(ಇ)** ರೂ:148130/-ಗಳನ್ನು ವಸೂಲಿಸುವುದು.ಲೆಕ್ಕಪರಿಶೋಧನೆಯಲ್ಲಿ 2014-15&2015-16ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಸಂದಾಯಿಸಿದ ವೇತನ ಭತ್ಯೆಗಳನ್ನು ಮಾತ್ರ ಲೆಕ್ಕ ಹಾಕಲಾಗಿದ್ದು.ಹಿಂದೆ ನೀಡಿದ ಎಲ್ಲಾ ಅನಿಯಮಿತ ವೇತನ ಭತ್ಯಗಳನ್ನು ವಿ.ವಿ.ಯೇ ಲೆಕ್ಕಹಾಕಿ ಸದ್ರಿ ಸಿಬ್ಬಂದಿಗಳಿಂದ ವಸೂಲಿಸಿ ಲೆ.ಪ.ಗೆ ಅನುಸರಣೆ ಸಲ್ಲಿಸುವುದು.ವಿವರಗಳನ್ನು **ಅನುಬಂಧ-25.ಎ.ಬಿ.ಸಿ.ಡಿ.ಇ**.ರಲ್ಲಿ ವರದಿಗೆ ಲಗತ್ತಿಸಿದೆ.

ಶ್ರೀ.ಕೆ.ಮೋಹನಕೃಷ್ಣ ರೈ ಪ್ರಕರಣದಂತೆಯೆ ಇರುವ ಡಾ:ಹೆಚ್.ಡಿ.ಪ್ರಶಾಂತ್‌ಅಧ್ಯಾಪಕರು. ಶ್ರೀ.ಹೆಚ್.ಕೆ.ನಾಗೇಶ್, ಶ್ರೀ.ಎನ್. ಚಿನ್ನಸ್ವಾಮಿ ಸೋಸಲೆ, ಡಾ:ಚೆಲುವ ರಾಜು ಪ್ರಾಧ್ಯಾಪಕರು ಇವರುಗಳಿಗೆ ಅನಿಯಮಿತವಾಗಿ ಹೆಚ್ಚುವರಿಯಾಗಿ ನೀಡಿದ ಎಲ್ಲ ವರ್ಷಗಳ(**ಅಂದರೆ ನೇಮಕಾತಿಯಿಂದ 31-03-2016**) ನೀಡಿದ ವೇತನ ಭತ್ಯಗಳನ್ನು ವಿ.ವಿ.ಯೇ ಲೆಕ್ಕ ಹಾಕಿ ವಸೂಲಿಸುವು ಹಾಗೂ ಲೆಕ್ಕ ಪರಿಶೋಧನೆಗೆ ಅನುಪಾಲನೆ ನೀಡುವುದು.(273708+104597+104597+148130+148130+779162).

## 2.4.26)ಡಾ:ಪಿ.ಮಹದೇವಯ್ಯ ಪ್ರಾಧ್ಯಾಪಕರು ಕನ್ನಡ ಭಾಷಾ ಅಧ್ಯಯನ ವಿಭಾಗ ಇವರಿಗೆ ಹಾಗೂ ಇತರರಿಗೆ 01-01-2006 ರ ಯು.ಜಿ.ಸಿ ಪರಿಷ್ಕೃತ.ವೇತನ ಶ್ರೇಣಿಯಲ್ಲಿ ತಪ್ಪಾಗಿ ವೇತನ ನಿಗದಿಪಡಿಸಿರುವುದು ಹಾಗೂ ವೇತನ ಶ್ರೇಣಿ ದಿನಾಂಕವನ್ನು ಸರ್ಕಾರದ ಆದೇಶದ ದಿನಾಂಕಕ್ಕೆ ಅನುಗುಣವಾಗಿ ನಿಗದಿಪಡಿಸದೇ ಪೂರ್ವಾನ್ವವಾಗಿ ನೀಡಿರುವುದು:-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಾ:ಪಿ.ಮಹದೇವಯ್ಯ ಪ್ರಾಧ್ಯಾಪಕರು ಕನ್ನಡ ಭಾಷಾ ಅಧ್ಯಯನ ವಿಭಾಗ ಇವರ ಸೇವಾಪುಸ್ತಕವನ್ನು ಪರಿಶೀಲಿಸಲಾಗಿ ಶ್ರೀಯುತರು 1992ರಲ್ಲಿ ಭಾಷಾ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು.ಜನವರಿ-2000 ರಲ್ಲಿ ಪಿ.ಹೆಚ್.ಡಿ. ಪದವಿ ಪಡೆದಿರುತ್ತಾರೆ .ದಿನಾಂಕ:22-08-1997 ರಂದು ಉಪನ್ಯಾಸಕರೆಂದು ಕರ್ತವ್ಯಕ್ಕೆ ಹಾಜರಾಗಿದ್ದು.ಶ್ರೀಯುತರ ವೇತನವನ್ನು ದಿನಾಂಕ:22-08-1997ಕ್ಕೆ 8000-13500 ವೇತನ ಶ್ರೇಣಿಯಲ್ಲಿ ರೂ:8000/- ಮೂಲವೇತನಕ್ಕೆ ನಿಗದಿಪಡಿಸಲಾಗಿದೆ.ಮುಂದುವರೆದು 22-08-2001 ರಂದು ಹಿರಿಯ ವೇತನ ಶ್ರೇಣಿಗೆ (ಎಸ್.ಎಸ್.ಎಲ್.) ಗೆ ಬಡ್ತಿನೀಡಿ ವೇತನ ಶ್ರೇಣಿ 10000-15200ರಲ್ಲಿ ರೂ:10000/-ಮೂಲ ವೇತನಕ್ಕೆ ನಿಗದಿಪಡಿಸಲಾಗಿದೆ.ಶ್ರೀಯುತರ ಸೇವಾ

ಪುಸ್ತಕದಲ್ಲಿ ದಾಖಲಿಸಿದಂತೆ ದಿನಾಂಕ:01-08-2005ಕ್ಕೆ ವೇತನ ರೂ:11300/-ಆಗಿದ್ದು ಯುಜಿಸಿ ಫಿಟ್‌ಮೆಂಟ್ ಟೇಬಲ್-2ರ ಪ್ರಕಾರ ರೂ:11300/-ಕ್ಕೆ ಎದುರಾಗಿ ರೂ:28020/-ಕ್ಕೆ ನಿಗದಿಪಡಿಸಬೇಕಾಗಿತ್ತು.ಆದರೆ ದಿ:01-01-2006ಕ್ಕೆ ತಪ್ಪಾಗಿ ವೇತನವನ್ನು ರು:28630/-ಗಳಿಗೆ ನಿಗದಿಪಡಿಸಲಾಗಿದೆ. ಮುಂದುವರೆದು ಶ್ರೀಯುತರು ಧಿ:01-08-2009 ರಂದು ಸಹ ಪ್ರಾಧ್ಯಾಪಕರೆಂದು ಬಡ್ತಿಹೊಂದಿದ್ದು ವೇತನ ಶ್ರೇಣಿ 7400-67000+9000 AGP ಯಲ್ಲಿ ಮೂಲ ವೇತನ ರೂ:46400/-ಕ್ಕೆ ನಿಗದಿಪಡಿಸಲಾಗಿದೆ. ಆದರೆ ಸರ್ಕಾರಿ ಆದೇಶ ಸಂಖ್ಯೆ:ED37UNE 2009 ಬೆಂಗಳೂರು ದಿನಾಂಕ:24-12-2009 ರ ಕ್ರಮ ಸಂಖ್ಯೆ:10ರ ಪ್ರಕಾರ Date Of Effect Of Ugc Payscales Shall Be Effctive From 01-01-2006 And All Other Allowance/Benefits Prospectively From The Date Of Issue Of This Order" ಎಂದು ತಿಳಿಸಿರುವ ಹಿನ್ನಲೆಯಲ್ಲಿ ದಿನಾಂಕ:24-12-2009ಕ್ಕೆ ಪದೋನ್ನತಿ ಹಾಗೂ ವೇತನ ನಿಗದಿಪಡಿಸುವ ಬದಲಾಗಿ ದಿನಾಂಕ:01-08-2009 ರಂದು ನಿಗದಿಪಡಿಸಿದ್ದನ್ನು ಒಪ್ಪಲಾಗುವುದಿಲ್ಲ. ಈ ಹಿನ್ನಲೆಯಲ್ಲಿ ದಿನಾಂಕ:01-08-2015ಕ್ಕೆ ಶ್ರೀಯುತರು ವೇತನವನ್ನು ರೂ:56495/-ರ ಬದಲಾಗಿ ರೂ:52120/-ಗಳಿಗೆ ನಿಗದಿಪಡಿಸಲಾಗಿದೆ. ದಿ:01-04-2014ರಿಂದ31-03-2016ರವರೆಗೆ ಶ್ರೀಯುತರಿಗೆ ಅನಿಯಮಿತವಾಗಿ ನೀಡಿದ ಹೆಚ್ಚವರಿ ವೇತನ+ಭತ್ಯಗಳನ್ನು ಮಾತ್ರ ಲೆಕ್ಕಪರಿಶೋಧನೆಯು ಲೆಕ್ಕ ಹಾಕಿದ್ದು ಒಟ್ಟು ರೂ:291420/-ಗಳನ್ನು ಶ್ರೀಯುತರಿಂದ ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡುವಂತೆ ಲೆ.ಪ.ವಿ.ಪತ್ರ ಸಂಖ್ಯೆ:66 ನ್ನು ದಿನಾಂಕ **13-07-2016** ರಂದು ನೀಡಲಾಗಿತ್ತು ಸದರಿ ಸಂಸ್ಥೆಯವರು ಮನರ್ ಪರಿಶೀಲನಾ ಸಮಯದಲ್ಲಿ ನೀಡಿದ ಅನುಸರಣೆಯಲ್ಲಿ ದಿನಾಂಕ **01-01-2006ಕ್ಕೆ** ತಪ್ಪಾಗಿ ವೇತನ ನಿಗದಿ ಪಡಿಸಲಾಗಿದ್ದು ವ್ಯತ್ಯಾಸದ ಮೊತ್ತವನ್ನು ವಸೂಲಿ ಮಾಡುವುದಾಗಿ ತಿಳಿಸಿರುತ್ತಾರೆ. ದಿನಾಂಕ **01-08-2009** ರಂದು ನೀಡಿರುವ ಸ್ಥಾನೀಕರಣಕ್ಕೆ ಸಂಬಂದಿಸಿದಂತೆ ದಿನಾಂಕ **24-12-2009ರ** ಆದೇಶ ಬರುವ ಪೂರ್ವದಲ್ಲಿಯೇ **CAS ಪರಿನಿಯಮ** ಹಾಗೂ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯದ ಪ್ರಕಾರ ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ **24-12-2009ರ** ಆದೇಶದ **ಕ್ರಮ ಸಂಖ್ಯೆ 10** ರಲ್ಲಿ ಸೂಚಿಸಿದಂತೆ CAS ಪದನ್ನೋತಿ ವೇತನ ನಿಗದಿಯನ್ನು ಮತ್ತು ಅದರ ಆರ್ಥಿಕ ಸೌಲಭ್ಯವನ್ನು ದಿನಾಂಕ **24-12-2009** ರಿಂದಲೇ ಕೊಡಬೇಕಾಗಿದ್ದು ಅದಕ್ಕಿಂತ ಮುಂಚಿತವಾಗಿ ಕೊಟ್ಟಿರುವುದನ್ನು ಒಪ್ಪಲಾಗುವುದಿಲ್ಲ.

ವಸೂಲಾತಿ ಮೊತ್ತದ ವಿವರಗಳನ್ನು ಈ ಕಂಡಿಕೆಗೆ ಲಗತ್ತಿಸಿದೆ **ಅನುಬಂಧ-22(ಎ)**ರಲ್ಲಿ ವಿವರಿಸಿದೆ.2014-15&2015-16ನೇ ಸಾಲಿನಲ್ಲಿ ಹೆಚ್ಚವರಿಯಾಗಿ ಸಂದಾಯಿಸಿದ ವೇತನ+ಭತ್ಯಗಳನ್ನು ಮಾತ್ರ ಲೆ.ಪ.ಯಲ್ಲಿ ಲೆಕ್ಕ ಹಾಕಿ ವಸೂಲಿಗೆ ಸೂಚಿಸಿದ್ದು .ಹಿಂದಿನ ಸಾಲುಗಳಲ್ಲಿ ಹೆಚ್ಚುವರಿಯಾಗಿ ಸಂದಾಯಿಸಿರುವ ವೇತನ+ಭತ್ಯಗಳನ್ನು ವಿ.ವಿ.ಯೇ ಲೆಕ್ಕ ಹಾಕಿ ವಸೂಲಿಸಿ ಲೆ.ಪ.ಗೆ ಅನುಸರಣೆ ನೀಡುವುದು.

ಸದರಿಯವರ ಪ್ರಕರಣವನ್ನು ಉದಾಹರಣೆಗೆ ಮಾತ್ರ ವಿವರಿಸಲಾಗಿದ್ದು.ಇನ್ನುಳಿದ ಎಲ್ಲ ಪ್ರಕರಣಗಳಲ್ಲೂ ಮೇಲೆ ಸೂಚಿಸಿದಂತೆ ಕ್ರಮ ಕೈಗೊಂಡು ಲೆ.ಪ.ಗೆ ಅನುಸರಣೆ ನೀಡುವುದು. ಈ ಹಿನ್ನಲೆಯಲ್ಲಿ ಶ್ರೀಯುತರಿಂದ ರೂ:291420/-ಗಳನ್ನು, **ಅನುಬಂದ-22(ಬಿ)**ಈ ಪ್ರಕರಣದಂತೆಯೆ ಇರುವ ಡಾ:ವಿರೂಪಾಕ್ಷಿ ಪೂಜಾರಹಳ್ಳಿ ಪ್ರಾಧ್ಯಾಪಕರು ಇವರಿಂದ ರೂ:291420/-ಗಳನ್ನು **ಅನುಬಂದ-22(ಸಿ)** ಡಾ:ಎ.ಎಸ್. ಪ್ರಭಾಕರ್ ಪ್ರಾಧ್ಯಾಪಕರು ಇವರಿಂದ ರೂ:149226/-ಗಳನ್ನು **ಅನುಬಂದ-22(ಡಿ)**ಡಾ:ಅಶೋಕ್ ಕುಮಾರ್ ರಂಜೆರೆ ಪ್ರಾಧ್ಯಾಪಕರಿಂದ ರೂ:108142/- ಗಳನ್ನು **ಅನುಬಂದ-22(ಇ)**ಡಾ:ಎಸ್.ಎಸ್.ಅಂಗಡಿ ಪ್ರಾಧ್ಯಪಕರು ಹತ್ತವೃತಿಶಾಸ್ತ್ರವರಿಂದ ರೂ:309403/-ಗಳನ್ನು ವಸೂಲಿ ಸುವುದು. ಲೆ.ಪ.ದಲ್ಲಿ 2014-15&2015-16ನೇ ಸಾಲಿನಲ್ಲಿ ಹೆಚ್ಚವರಿಯಾಗಿ ಸಂದಾಯಿಸಿದ ವೇತನ+ಭತ್ಯಗಳನ್ನು ಮಾತ್ರ ಲೆಕ್ಕ ಹಾಕಲಾಗಿದ್ದು ಹಿಂದೆ ನೀಡಿದ ಎಲ್ಲಾ ಅನಿಯಮಿತ ವೇತನ+ಭತ್ಯಗಳನ್ನು ವಿ.ವಿ.ಯೇ ಲೆಕ್ಕ ಹಾಕಿ ಸದರಿ ಸಿಬ್ಬಂದಿಗಳಿಂದ ವಸೂಲಿಸಿ ಲೆ.ಪ.ಗೆ ಅನುಪಾಲನೆ ಸಲ್ಲಿಸುವುದು. ವಿವರಗಳನ್ನು ಅನುಬಂಧ-21.ಎ.ಬಿ.ಸಿ.ಡಿ&ಇ ರಲ್ಲಿ ವರದಿಗೆ ಲಗತ್ತಿಸಿ (291420+291420+149226+108142+309403) ಶ್ರೀ.ಪಿ.ಮಹದೇವಯ್ಯ ಪ್ರಾಧ್ಯಾಪಕರ ಪ್ರಕರಣದಂತೆಯೇ ಇರುವ ಡಾ:ಅಮರೇಶ್. ಎನ್. ಪ್ರಾಧ್ಯಾಪಕರಿಗೆ ಅನಿಯಮಿತವಾಗಿ ಹೆಚ್ಚುವರಿಯಾಗಿ ಸಂದಾಯಿಸಿದ ಎಲ್ಲ ವರ್ಷಗಳ(ಅಂದರೆ ನೇಮಕಾತಿಯಿಂದ ಇಲ್ಲಿಯವರೆಗೆ)ನೀಡಿದ ವೇತನ ಮತ್ತು ಭತ್ಯಗಳನ್ನು ವಿ.ವಿ.ಯೇ ಲೆಕ್ಕ ಹಾಕಿ ವಸೂಲಿಸುವುದು ಹಾಗೂ ಲೆಕ್ಕ ಪರಿಶೋಧನೆಗೆ ಅನುಪಾಲನೆ ನೀಡುವುದು.

**2.4.27) ಆಯ್ಕೆಶ್ರೇಣಿ ಅಧ್ಯಾಪಕರಾದ ಶ್ರೀರಮೇಶ್ ನಾಯಕ್ ಮತ್ತು ಶ್ರೀ.ಸಿ.ವೆಂಕಟೇಶ್ ಅವರು ಪಿ.ಹೆಚ್.ಡಿ.ಮಾಡಲು ವಿಫಲರಾಗಿದ್ದು ಈವರೆಗೂ ಪಡೆದಿರುವ ಹೆಚ್ಚುವರಿ ವೇತನವನ್ನು 60 ಕಂತು ಗಳಲ್ಲಿ ವೇತನದಲ್ಲಿ ಮರುಭರಿಸುವಂತೆ ಸಿಂಡಿಕೇಟ್ ಶಿಫಾರಸ್ಸು ಮಾಡಿದ್ದು ಈ ಕುರಿತು ಕ್ರಮ ಕೈ ಗೊಳ್ಳದಿರುವುದು.**

ದಿನಾಂಕ:3/10-07-2014 ರಂದು ನಡೆದ ಸಭೆಯಲ್ಲಿ ಶ್ರೀ.ವೆಂಕಟೇಶ್ ಮತ್ತು ಶ್ರೀ.ರಮೇಶ್ ನಾಯಕ್ ಇವರು ನಿಗಧಿತ ಅವಧಿಯಲ್ಲಿ ಪಿ.ಹೆಚ್.ಡಿ.ಮಾಡಲು ವಿಫಲರಾಗಿದ್ದು,ಪಿ.ಹೆಚ್.ಡಿ ಅನ್ನು ಪೂರ್ಣಗೊಳಿಸುವವರೆಗೆ ಯಾವುದೇ ರೀತಿಯ ವಾರ್ಷಿಕ ವೇತನ ಬಡ್ತಿ ಹಾಗೂ ಇತರೆ ಯು.ಜಿ.ಸಿ ಸೌಲಭ್ಯಗಳನ್ನು ವಿಸ್ತರಿಸಬಾರದು.ಹಾಗೂ 01-08-2010ರಿಂದ ಈ ವರೆಗೆ ಪಡೆದಿರುವ ಹೆಚ್ಚುವರು ವೇತನವನ್ನು 60 ಕಂತಗಳಲ್ಲಿ ವೇತನದಲ್ಲಿ ವಿ.ವಿ.ನಿಧಿಗೆ ಜಮಾ ಮಾಡಲು ನಿರ್ಣಯ ಕೈಗೊಂಡಿದ್ದು.ವೇತನದಲ್ಲಿ ವಸೂಲು ಮಾಡಿದ ವಿವರಗಳನ್ನು ಲೆ.ಪ.ಗೆ ಹಾಜರುಪಡಿಸಲು ಲೆ.ಪ.ವಿ.ಪತ್ರ ಸಂಖ್ಯೆ:-10 ದಿ:18-04-2016ರಂದು ನೀಡಲಾಗಿದ್ದು **ಪುನರ್**ಪರಿಶೀಲನಾ ಸಮಯದಲ್ಲಿ ಮೇಲಿನ ವಿಚಾರಣಾ ಪತ್ರಕ್ಕೆ ಅನುಪಾಲನಾ ವರದಿ ಸಲ್ಲಿಸಿ ಸದರಿಯವರು ಪಿ.ಹೆಚ್.ಡಿ. ಮಾಡಲು ವಿಪರಾಗಿದ್ದಕ್ಕಾಗಿ ಸದರಿಯವರಿಗೆ ಕೊಟ್ಟಿರುವ ವಾರ್ಷಿಕ ವೇತನ ಬಡ್ತಿಯನ್ನು ಹಿಂಪಡೆಯಲಾಗಿದೆಯೆಂದು ತಿಳಿಸಿರುತ್ತಾರೆ. ಆದರೆ ದಿನಾಂಕ **10-07-2014** ರಂದು ನಡೆದ ಸಭೆಯಲ್ಲಿ ಸೂಚಿಸಿದಂತೆ ಸದರಿಯವರಿಗೆ ಹೆಚ್ಚುವರಿಯಾಗಿ ಪಾವತಿಸಿದ ವೇತನವನ್ನು ವಸೂಲಿ ಮಾಡಿರುವುದಿಲ್ಲ. ಆದ್ದರಿಂದ ಈ ಅನುಪಾಲನಾ ವರದಿಯನ್ನು ಒಪ್ಪಲಾಗುವುದಿಲ್ಲ.

**2.4.28)ಡಾ:ಎಂ ಉಷಾ ಪ್ರಾಧ್ಯಾಪಕರು ಭಾಷಾಂತರ ವಿಭಾಗ ಇವರ ಪದೋನ್ನತಿ ಹಾಗೂ 01-01-06 ರ ಯು.ಜಿ.ಸಿ ಪರಿಷ್ಕೃತ ವೇತನಶ್ರೇಣಿಯಲ್ಲಿ ವೇತನವನ್ನು ತಪ್ಪಾಗಿ ನಿಗಧೀಕರಣ ಮಾಡಿರುವುದು:- (ಎ)ಅರ್ಹತಾ ಅವಧಿಗಿಂತ ಮೊದಲೇ ಉಪನ್ಯಾಸಕರು ಹಿರಿಯ ಶ್ರೇಣಿ(ಎಸ್.ಎಸ್.ಎಲ್)ಹುದ್ದೆಗೆ ಪದೋನ್ನತಿ ನೀಡಿರುವುದು:-**

**ಡಾ:ಎಂ.ಉಷಾ** ಇವರು ಭಾಷಾಂತರ ವಿಭಾಗದಲ್ಲಿ ಉಪನ್ಯಾಸಕರಾಗಿ ದಿ:30-08-1997ರಂದು ಯು.ಜಿ.ಸಿ ವೇತನ ಶ್ರೇಣಿ 2200-4000ರಲ್ಲಿ ನೇಮಕಗೊಂಡು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.ಸದರಿಯವರಿಗೆ ದಿ:08-06-2000 ರಂದು ಯು.ಜಿ.ಸಿ ವೇತನ ಶ್ರೇಣಿ 10000-15200ರಲ್ಲಿ ಉಪನ್ಯಾಸಕರು ಹಿರಿಯವೇತನ ಶ್ರೇಣಿ(ಎಸ್.ಎಸ್.ಎಲ್)ಹುದ್ದೆಗೆ ಸಿ.ಎ.ಎಸ್ ಅಡಿ ಪದೋನ್ನತಿ ನೀಡಿರುವುದನ್ನು ಸದರಿಯವರ ಸೇವಾ ಮುಸ್ತಕದಲ್ಲಿ ಪರಿಶೀಲಿಸಲಾಗಿದೆ.(ಆದೇಶ ಸಂಖ್ಯೆ:ಕವಿಹಂ/ಕುಸ/ಸಿಎಎಸ್/ಆ/2002-03/5082 ದಿ:28-03-2003.

g.o.no ed 100 une 99 dated 15-11-1999 ರ ಕಂಡಿಕೆ 13 Career Advancement ನಲ್ಲಿ" 1)the Minimum Length Of Service For Eligibility To Move In To The Grade Of Lecture(Senior Scale)Would Be Four Years For Those Holding Ph.D, 5years for those With M.Phil ,And 6 Years For Others At The Level Of Lecturer" ಎಂದು ತಿಳಿಸಲಾಗಿದೆ.ಈ ಹಿನ್ನಲೆಯಲ್ಲಿ ಸದರಿಯವರ ಪ್ರಕರಣ ಪರಿಶೀಲಿಸಲಾಗಿ ಸದರಿಯವರು ನೇಮಕಾತಿ ಸಮಯದಲ್ಲಿ Ph.D ಹೊಂದಿರುವುದರಿಂದ ಮೇಲೆ ತಿಳಿಸಿದ ನಿಯಮಗಳ ಅವಕಾಶಗಳಡಿ 4ವರ್ಷಗಳಿಗೆ ಅಂದರೆ 30-08-2001 ಉಪನ್ಯಾಸಕರು ಹಿರಿಯ ವೇತನಶ್ರೇಣಿ(ಎಸ್.ಎಸ್.ಎಲ್)ಹುದ್ದೆಗೆ ಪದೋನ್ನತಿ ನೀಡುವುದು ವಿದಿಬದ್ಧವಾಗಿತ್ತು. ಆದರೆ ಸದರಿಯವರಿಗೆ ದಿ:06-08-2000ಕ್ಕೆ ಅರ್ಹತಾ ಅವಧಿ ಪೂರ್ವ ಸದರಿ ಪದೋನ್ನತಿ ನೀಡಿರುವುದು ಯು.ಜಿ.ಸಿ ನಿಯಮಗಳಿಗೆ ವ್ಯತಿರಿಕ್ತವಾಗಿರುವುದರಿಂದ ಸದರಿ ಪದೋನ್ನತಿಯನ್ನು ಸರಿ ಎಂದು ಲೆಕ್ಕ ಪರಿಶೋಧನೆಯು ಮಾನ್ಯ ಮಾಡುವುದಿಲ್ಲ.ಈ ಹಿನ್ನಲೆಯಲ್ಲಿ ಸದರಿಯವರಿಗೆ ಅರ್ಹತಾ ಅವಧಿಗಿಂತ ಪೂರ್ವದಲ್ಲಿಯೇ ನೀಡಿರುವ ಸದರಿ ಪದೋನ್ನತಿಯನ್ನು ಹಿಂಪಡೆದು ಅರ್ಹತಾ ದಿನಾಂಕದಂದು ಪದೋನ್ನತಿ ನೀಡಿ ಹೆಚ್ಚುವರಿಯಾಗಿ ಸಂದಾಯಿಸಿರುವ ವೇತನಭತ್ಯಗಳನ್ನು ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡುವುದು.

**(ಬಿ)ಯು.ಜಿ.ಸಿ ವೇತನ ಶ್ರೇಣಿ 2006ರಲ್ಲಿ ತಪ್ಪಾಗಿ ವೇತನ ನಿಗದಿಪಡಿಸಿದ ಕುರಿತು:-.**

ಸದರಿಯವರಿಗೆ ದಿನಾಂಕ:01-01-2006ರಿಂದ ಪ.ವೇತನ ಶ್ರೇಣಿಯಲ್ಲಿ ರೂ:11625/-ಕ್ಕೆ ಸಂವಾದಿಯಾಗಿ ರೂ:28630/-ಕ್ಕೆ ವೇತನ ನಿಗದಿಪಡಿಸದೇ ರೂ:29230/-ಗಳನ್ನು ನಿಗದಿಪಡಿಸಿ ಅದೇ ಆಧಾರದ ಮೇಲೆ ಮುಂದಿನ ಎಲ್ಲ ವಾರ್ಷಿಕ ವೇತನ ಬಡ್ತಿಗಳನ್ನು ಹಾಗೂ ಪದೋನ್ನತಿಗಳನ್ನು ಸಕ್ರಮ ಗೊಳಿಸಲಾಗಿರುವುದನ್ನು ಪರಿಶೀಲಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಯು.ಜಿ.ಸಿ **2006**ರ ಪ.ವೇ.ಶ್ರೇಣಿ ರೂ:**15600/-39100+7000** ಎ.ಜಿ.ಪಿಯಲ್ಲಿ ದಿನಾಂಕ:**01-01-2006**ಕ್ಕೆ **28630/-**ಗಳಿಗೆ ವೇತನ ನಿಗದಿಪಡಿಸಿ ನಂತರ ಎಲ್ಲ ವಾರ್ಷಿಕ ವೇತನ ಬಡ್ತಿಗಳನ್ನು ಸಕ್ರಮಗೊಳಿಸಿ ದಿನಾಂಕ:**01-01-2006**ರಿಂದ **31-03-2016**ರ ವರೆಗೆ ಹೆಚ್ಚುವರಿಯಾಗಿ ಸಂದಾಯಿಸಿರುವ ವೇತನ ಭತ್ಯಗಳನ್ನು ವಸೂಲಿಸಿ ಲೆ.ಪ.ಗೆ ಅನುಸರಣೆ ನೀಡುವುದು.

**(ಸಿ)ಯು.ಜಿ.ಸಿ2006ರ ಪರಿಷ್ಕೃತ ವೇತನ ಶ್ರೇಣಿಯ ನಿಯಮಗಳಿಗೆ ವ್ಯತಿರಿಕ್ತವಾಗಿ ಸಿ.ಎ.ಎಸ್ ಅಡಿ ಎ.ಜಿ.ಪಿ. ರೂ:8000/ ಗಳಿಗೆ ಸ್ಥಾನೀಕರಣ ಹಾಗೂ ಸಹಪ್ರಾಧ್ಯಾಪಕರನ್ನಾಗಿ ಮತ್ತು ಪ್ರಾಧ್ಯಾಪಕರನ್ನಾಗಿ ಪದೋನ್ನತಿ ಗೊಳಿಸಿರುವ ಕುರಿತು:-**

I) ಸದರಿಯವರಿಗೆ **ದಿನಾಂಕ:01-08-2006ರಂದು ರು:15600-39100+700ಎ.ಜಿ.ಪಿಯಿಂದ ಎ.ಜಿ.ಪಿ.ರೂ:8000/-ಗಳಿಗೆ** ಸ್ಥಾನೀಕರಣ ನೀಡಿ **ರೂ:30230/-ಗಳಿಗೆ** ವೇತನ ನಿಗದಿಪಡಿಸಲಾಗಿರುತ್ತದೆ. G.O.No:Ed-37 Une 2009 Dated 24-12-2009 ರ ಕಂಡಿಕೆ 10 ರ Date Of Effect ಪ್ರಕಾರ "The Revised Ugc Pay Scales Shall Be Effective From 01-01-2006 And All Other Allowance And Benefits Prospectively From The Date Of Issue Of This Order" ಎಂದು ತಿಳಿಸಿರುವ ಹಿನ್ನಲೆಯಲ್ಲಿ ಸದರಿಯವರಿಗೆ ದಿ:24-12-2009 ರಂದು ವೇತನ ಶ್ರೇಣಿ 15600-39100+ಎ.ಜಿ.ಪಿ 8000ರಲ್ಲಿ ರೂ:32670/-ಗಳಿಗೆ ನಿಗದಿಪಡಿಸಬೇಕಾಗಿತ್ತು.

II) ಸದರಿಯವರಿಗೆ ದಿ:24-12-2009 ರಂದು ರೂ:8000/- ಎ.ಜಿ.ಪಿ.ಗೆ ಸ್ಥಾನೀಕರಣ ನೀಡಿದ ನಂತರ ದಿನಾಂಕ:24-12-2012ಕ್ಕೆ ಸಹಾಯಕಪ್ರಾಧ್ಯಾಪಕರನ್ನಾಗಿ ಪದೋನ್ನತಿಗೊಳಿಸಿ. ವೇತನ ಶ್ರೇಣಿ 37400-67000+ಎ.ಜಿ.ಪಿ 9000 ರಲ್ಲಿ ರೂ:46400/-ಗಳಿಗೆ ನಿಗದಿ ಪಡಿಸಿ ನಂತರ ದಿನಾಂಕ:24-12-2015 ರಂದು ವೇತನ ಶ್ರೇಣಿ 37400-6700+ಎ.ಜಿ.ಪಿ 10000ರಲ್ಲಿ ಪದೋನ್ನತಿ ನೀಡಿ ರೂ:52120/-ಗಳಿಗೆ ವೇತನ ನಿಗದಿಪಡಿಸಿ ಹೆಚ್ಚುವರಿಯಾಗಿ ಸಂದಾಯಿಸಿರುವ ವೇತನ ಭತ್ಯಗಳನ್ನು ವಸೂಲಿಸುವುದು.

ಈ ಮೇಲೆ ವಿವರಿಸಿದ ಕಂಡಿಕೆ **ಎ .ಬಿ ಮತ್ತು ಸಿ ಗಳ ಆಕ್ಷೇಪಿತ** ಅಂಶಗಳಿಗೆ ಸಂಬಂಧಿಸಿದಂತೆ **2014-15ಮತ್ತು 2015-16ರಲ್ಲಿ** ಸದರಿಯವರಿಗೆ ಹೆಚ್ಚುವರಿಯಾಗಿ ಸಂದಾಯಿಸಿರುವ ವೇತನ ಭತ್ಯಗಳ ಮೊತ್ತ ರೂ:327836/-ಗಳನ್ನು ಸದ್ರಿಯವರಿಂದ ವಸೂಲಿಸಿ ಲೆ.ಪ.ಗೆ ಅನುಸರಣೆ ನೀಡುವಂತೆ ಲೆ.ಪ.ವಿ **ಪತ್ರ ಸಂಖ್ಯೆ:75ನ್ನು ದಿನಾಂಕ:02-08-2016ರ ಮೂಲಕ** ತಿಳಿಸಲಾಗಿತ್ತು ಆದರೆ ಈ ವರೆಗೂ ಯಾವುದೇ ಅನುಸರಣೆ ನೀಡಿರುವುದಿಲ್ಲ.

ಲೆಕ್ಕ ಪರಿಶೊಧನೆಯಲ್ಲಿ ಸದ್ರಿಯವರಿಗೆ 2014-15 ಮತ್ತು 2015-16ರಲ್ಲಿ ಹೆಚ್ಚುವರಿಯಾಗಿ ನೀಡಿದ ವೇತನ ಭತ್ಯಗಳನ್ನು ಮಾತ್ರ ಲೆಕ್ಕ ಹಾಕಿ ವಸೂಲಿಗೆ ಸೂಚಿಸಿದ್ದು.ಹಿಂದಿನ ಸಾಲುಗಳಲ್ಲಿ ಸಂದಾಯಿಸಿರುವ ಹೆಚ್ಚುವರಿ ವೇತನ ಭತ್ಯಗಳನ್ನು ವಿ.ವಿ.ಯೇ ಲೆಕ್ಕಚಾರ ಮಾಡಿ ವಸೂಲಿಸಿ ಲೆ.ಪ.ಗೆ ಅನುಪಾಲನೆ ನೀಡುವುದು.

ಸದ್ರಿಯವರ ಪ್ರಕರಣವು ಉದಾಹರಣೆ ಮಾತ್ರ ವಾಗಿದ್ದು ಇನ್ನುಳಿದ ಎಲ್ಲ ಪ್ರಕರಣಗಳಲ್ಲಿ ಯೂ ವಿ.ವಿ.ಯೇ ಮೇಲೆ ತಿಳಿಸಿದಂತೆ ಕ್ರಮ ಕೈಗೊಂಡು ಲೆ.ಪ.ಗೆ ಅನುಸರಣೆ ಸಲ್ಲಿಸುವುದು ವಸೂಲಾತಿ ಮೊತ್ತ ರು:327836/-ಗಳ ವಿವರಗಳನ್ನು **ಅನುಬಂಧ-23ರಲ್ಲಿ** ವರದಿಗೆ ಲಗತ್ತಿಸಿದೆ.

# 2.5.1

# ಇಂಜಿನಿಯರಿಂಗ್ ವಿಭಾಗದಲ್ಲಿ ನಿರ್ವಹಿಸಲಾದ ಕಾಮಗಾರಿ ಟೆಂಡರ್ ಪ್ರಕ್ರಿಯೆಗಳಲ್ಲಿ ಕಂಡಬಂದ ನ್ಯೂನತೆಗಳು

## 2.5.1)ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು ನಿಯಮ2000ರ ಅಡಿಯಲ್ಲಿ ಪೂರ್ಣವಾಗಿ ನಿಯಮಗಳನ್ನು ಪಾಲಿಸದಿರುವುದು:-

ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿಯ 2014-15&2015-16ನೇ ಸಾಲಿನ ಸಿವಿಲ್ ಕಾಮಗಾರಿಗಳ ಬಿಲ್ಲುಗಳನ್ನು ಪರಿಶೀಲಿಸಿದಾಗ ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮಗಳು 2000 ಅಡಿಯಲ್ಲಿ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಮಾಡಿರುವುದಿಲ್ಲ.ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000 **ಸೆಕ್ಷನ್ 23**ಡಿಯಲ್ಲಿ ಸದರಿ ನಿಯಮಗಳನ್ನು ಉಲ್ಲಂಘಿಸಿದವರಿಗೆ 3ವರ್ಷ ಜೈಲು ಶಿಕ್ಷೆ ಮತ್ತು ರೂ:5000/-ದಂಡ ವಿಧಿಸಲು ನಿಯಮ ವಿರುತ್ತದೆ.ಒಟ್ಟು 16ಟೆಂಡರ್ ಕಾಮಗಾರಿಗಳನ್ನು ಪರಿಶೀಲಿಸಿದಾಗ ಕಡತದಲ್ಲಿ ಸ್ಟಾಂಡರ್ಡ್ ಟೆಂಡರ್ ಡಾಕ್ಯು ಮೆಂಟ್ ಇರುವುದಿಲ್ಲ.ಅಂದಾಜು ಪಟ್ಟಿ ಪೂರ್ಣಪ್ರಮಾಣದಲ್ಲಿ ಇರುವುದಿಲ್ಲ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ಪಡೆದಿಲ್ಲ.ಟೆಂಡರ್ ಪ್ರಕ್ರಿಯ ನಿಯಮಾನುಸಾರ ಮಾಡಿರುವುದಿಲ್ಲ.ಜಿಲ್ಲಾ ಟೆಂಡರ್ ಬುಲೆಟನ್ ಹಾಗೂ ರಾಜ್ಯ ಟೆಂಡರ್ ಬುಲೆಟಿನ್‌ಗೆ ನೀಡಿರುವುದಿಲ್ಲ. wide publicity ಇರುವುದಿಲ್ಲ.ಸ್ಥಳೀಯ ದಿನ ಪತ್ರಿಕೆ ಹಾಗೂ ಒಂದು ರಾಜ್ಯದಿನ ಪತ್ರಿಕೆಯಲ್ಲಿ ಟೆಂಡರ್ ಪ್ರಕಟಣೆ ಯಾಗಿದ್ದು ಟೆಂಡರ್ ಪಾರದರ್ಶಕತೆ ಕಂಡು ಬಂದಿರುವುದಿಲ್ಲ ಕರ್ನಾಟಕ ಸರ್ಕಾರದ ನಡಾವಳಿ ಆದೇಶ ಸಂಖ್ಯೆ:ಎಫ್‌ಡಿ:9ಪಿಸಿಎಲ್:2004(1) ಬೆಂಗಳೂರು ದಿ:06-08-2005 ರ ಪ್ರಕಾರ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿರ್ವಹಿಸಿಲ್ಲ. ಅಳತೆ ಪುಸ್ತಕದಲ್ಲಿ ದಿನಾಂಕಗಳನ್ನು ನಮೂದಿಸಿಲ್ಲ ಕ್ವಾಲಿಟಿ ಟೆಸ್ಟ್ ರಿಪೋರ್ಟ್ ಇರುವುದಿಲ್ಲ.

ಅಂದಾಜು ಪಟ್ಟಿಯನ್ನು ತಯಾರಿಸಿದಾಗ ಅಂದಾಜುಪಟ್ಟಿ ಸಂಕ್ಷಿಪ್ತ ವರದಿ ಲೈನ್ ಎಸ್ಟಿಮೀಟ್ ಡ್ರಾಯಿಂಗ್ಸ್(ಕೆಪಿಡಬ್ಲುಡಿ volume 1-paragraph104 ಪ್ರಕಾರ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ವಿವರ ನಮೂದಿಸ ಬೇಕಾಗಿರುತ್ತದೆ. ಕಡತದಲ್ಲಿ ಕೇವಲ ಷೆಡ್ಯೂಲ್ ಬಿ ಇರುತ್ತದೆ.**ಅಳತೆಪುಸ್ತಕದಲ್ಲಿ ಸ.ಕಾ.ಅಲೋಇಬ ಹೊಸಪೇಟೆ ಚೆಕ್ ಮೆಸರ್‌ಮೆಂಟ್ ಮಾಡಿದಾಗ ಬರಿ ಸಹಿ ಮಾಡಿದ್ದು ಯಾವ ಐಟಂ ಪರಿಶೀಲಿಸಿದ್ದೇನೆ ಎಂದು, ಯಾವ ದಿನಾಂಕದಂದು ಪರಿಶೀಲಿಸಿದ್ದೇನೆ ಎಂದು ದೃಢೀಕರಿಸಿಲ್ಲ.** ಕಾಮಗಾರಿಗಳ ವಿವಿಧ ಹಂತಗಳ ವಾಯಾಚಿತ್ರಗಳನ್ನು ಕಡತದಲ್ಲಿರಿಸಿದ್ದು ವಾಯಾ ಚಿತ್ರದ ಹಿಂದೆ ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಭೌತಿಕಾವಾಗಿ ಪರಿಶೀಲಿಸಿದ ಬಗ್ಗೆ ದೃಢೀಕರಣವಿದ್ದು ಛಾಯಾ ಚಿತ್ರಿ ಗಳಿರುವುದಿಲ್ಲ. ಟೆಂಡರ್ ಸ್ಕೂಟಿನಿ ಕಮಿಟಿ ವರದಿ ಇರುವುದಿಲ್ಲ. ಕೆಟಿಪಿಪಿ ನಿಯಮ 20(2) ಟೆಂಡರ್ ಎವಾಲ್ಯುಯೇಷನ್ ಕಮಿಟಿ ವರದಿ ಇರುವುದಿಲ್ಲ .ಕೆಟಿಪಿಪಿ ನಿಯಮ (26) ಕಾಮಗಾರಿ ಮುಗಿದಿದ್ದರೂ ಅಂತಿಮ ಬಿಲ್ಲನ್ನು ಪಾವತಿಸದಿರುವುದು ವೃತ್ತ ಪತ್ರಿಕೆಗಳಿಗೆ ಟೆಂಡರ್ ಪ್ರಕಟಣಗೆ ಪಾವತಿಸಿದ ಬಗ್ಗೆ ವಿವರ ಕಡತದಲ್ಲಿ ಇರುವುದಿಲ್ಲ.

Checking of estimate kpwd code volume 1-paragraph 133(1) ಪ್ರಕಾರ ಅಂದಾಜು ಪಟ್ಟಿಗಳನ್ನು ಉನ್ನತ ತಾಂತ್ರಿಕ ಅಧಿಕಾರಿಯು ಚೆಕ್ಕು ಮಾಡಿರುವುದಿಲ್ಲ. ಮೂರನೇ ಪಕ್ಷತಪಾಸಣೆ ಮಾಡಿದ ವರದಿ ಭಾಗಶ: ಕಾಮಗಾರಿ ಬಿಲ್ಲುಗಳಲ್ಲಿ ಇರುತ್ತದೆ. ಆರ್ಕಿಟೆಕ್ಟ್ ಸರ್ಕಾರದಿಂದ ಅನುಮೋದನೆ ಆಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿರುದಿಲ್ಲ. ಒಟ್ಟಾರೆಯಾಗಿ ಕೆಟಿಪಿಪಿ ನಿಯಮಗಳನ್ನು ಪೂರ್ಣವಾಗಿ ಪಾಲಿಸದಿರುವುದರಿಂದ ಬೃಹತ್ ಮೊತ್ತದ ಕಾಮಗಾರಿಗಳ ಪಾರದರ್ಶವಾಗಿ ಟೆಂಡರ್‌ನಲ್ಲಿ ನಡೆದಿವೆ ಎಂದು ಲೆಕ್ಕ ತನಿಖೆಯಲ್ಲಿ ಖಚಿತಪಡಿಸಲು ಸಾಧ್ಯವಾಗಿಲ್ಲ. ಕೆಪಿಡಬ್ಲುಡಿ ಕೋಡ್ ವಾಲ್ಯು-01 ಪ್ಯಾರಾಗ್ರಾಫ್ 184(ಎ) ಮತ್ತು(ಬಿ)185(ಎ)ರಿಂದ(ಬಿ) ಮತ್ತು 262 ಪ್ಯಾರಾಗ್ರಾಫ್ ಪ್ರಕಾರ ಕಾಮಗಾರಿ ಪೂರ್ಣಗೊಂಡ ನಂತರ ಎಲ್ಲಾ ಅಳತೆಗಳನ್ನು ಅಳತೆ ಪುಸ್ತಕ ಹಾಗೂ ಬಿಲ್ಲಿನಲ್ಲಿ ನಮೂದಿಸಿ ಸಂಬಂಧಿಸಿದ ಗುತ್ತಿಗೆದಾರರಿಂದ " accepted in full and final settlement " ದೃಢೀಕರಣವನ್ನು ಅಳತೆ ಪುಸ್ತಕದಲ್ಲಿ ಹಾಗೂ ಬಿಲ್ಲಿನಲ್ಲಿ ನಮೂದಿಸಿ ಅಂತಿಮ ಬಿಲ್ಲನ್ನು ಪಾವತಿಸಬೇಕಾಗುತ್ತದೆ.ಸಿವಿಲ್ ಗುತ್ತಿಗೆದಾರರಿಗೆ ವಿದ್ಯುತ್ ಗುತ್ತಿಗೆಯನ್ನು ನೀಡಿದ್ದು ಸದರಿ ಗುತ್ತಿಗೆದಾರರಿಗೆ ವಿದ್ಯುತ್ ಗುತ್ತಿಗೆ ನೋಂದಣಿಯಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿಲ್ಲ. ಕಡತದಲ್ಲಿ ವಿವರ ಲಭ್ಯವಾಗಿಲ್ಲ. ಈ ಕುರಿತು **ಅನುಬಂಧ-24(ಎ)&24(ಬಿ)** ವಿವರಣಾ ಪಟ್ಟಿಯಲ್ಲಿ ತಿಳಿಸಿದಂತೆ **ರೂ:81301587ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಕಾರಣ ಒಟ್ಟು **21 ಕಾಮಗಾರಿಗಳಿಗೆ ವೆಚ್ಚವಾಗಿರುವ ಮೊತ್ತ ರೂ:78784633** ಗಳನ್ನು **ಆಕ್ಷೇಪಣೆಯಲ್ಲಡಲಾಗಿದೆ.**ವಿವರಗಳನ್ನು ಅನುಬಂಧ- 24(ಎ)&24(ಬಿ)ವರದಿಗೆ ಲಗತ್ತಿಸಿದೆ. **ಸಂಕ್ಷಿಪ್ತ ವಿವರ ಈ ಕೆಳಕಂಡಂತಿವೆ.**

| ಕ್ರ ಸಂ | ವಿವರಗಳು | ಮೊತ್ತ ರೂ |
|---|---|---|
| 1 | ಪ.ಜಾ.ಪ.ಪಂವಿದ್ಯಾರ್ಥಿನಿಲಯದ ಸುತ್ತ ಕಾಂಪೌಂಡ್ ಗೋಡೆ ನಿರ್ಮಾಣ | 2245956/- |
| 2 | ಚರಿತ್ರೆ ವಿಭಾಗದ ವಿಸ್ತರಣಾ ಕಟ್ಟಡ ನಿರ್ಮಿಸುವುದು | 5627301 |
| 3 | ಬುಡಕಟ್ಟು ಅಧ್ಯಯನ ವಿಭಾಗ ಕಟ್ಟಡ ನಿರ್ಮಿಸುವುದು | 1881175 |
| 4 | ಹಳೇ ಕ್ಯಾಂಟೀನ್ ನವೀಕರಣ | 2962816 |
| 5 | ಬೋಧಕ ಮತ್ತು ಬೋಧಕೇತರ ವಸತಿ ಗೃಹಗಳಿಗೆ ಪೇಂಟಿಂಗ್ ಮಾಡುವುದು | 1344025 |
| 6 | ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಕ್ರೀಡಾ ಸಂಕೀರ್ಣ ಕಟ್ಟಡ ನಿರ್ಮಿಸುವುದು | 7109360 |
| 7 | ಗಿರಿಜನ ಮಹಿಳಾ ವಸತಿನಿಲಯ ಕಟ್ಟಡ ನಿರ್ಮಿಸುವುದು | 7383559 |
| 8 | ಕನ್‌ವೆನ್ಷನ್ ಸೆಂಟರ್ ಕಟ್ಟಡ ನಿರ್ಮಿಸುವುದು | 13318389 |
| 9 | ಬೋಧಕರ ವಸತಿ ಗೃಹಗಳ ಛಾವಣಿಗೆ ಯಲಹಂಕ ಟೈಲ್ಸ್ ಅಳವಡಿಸುವುದು | 1637649 |
| 10 | ಆಡಳಿತ ಸಿಬ್ಬಂದಿ ವಸತಿ ಗೃಹಗಳ ಮುಂದಿನ ಹಾಗೂ ಹಿಂದಿನ ಬಾಗಿಲುಗಳಿಗೆ ಕಬ್ಬಿಣದ ಬಾಗಿಲು ಅಳವಡಿಸುವುದು | 749682 |
| 11 | ಅಕ್ಷರ ಗ್ರಂಥಾಲಯ ಉತ್ತರದಿಕ್ಕಿನ ಗೋಪುರದ ಕಡೆ ಯಲಹಂಕ ಟೈಲ್ಸ್ ಹಾಕುವುದು | 459112 |
| 12 | ದೂರ ಶಿಕ್ಷಣ ನಿರ್ದೇಶನಾಲಯ ಕಟ್ಟಡ ನಿರ್ಮಿಸುವುದು | 6262543 |
| 13 | ಕನ್‌ವೆನ್ಷನ್ ಸೆಂಡರ್ ಕಟ್ಟಡದ ಇಂಟೀರಿಯರ್ ಪರ್ನಿಷಿಂಗ್ ಕೆಲಸ ನಿರ್ಮಿಸುವುದು | 15451085 |
| 14 | ಕನವೆನ್ಷನ್ ಸೆಂಟರ್ ಕಟ್ಟಡಕ್ಕೆ ರಸ್ತೆ ನಿರ್ಮಿಸುವುದು | 3614303 |
| 15 | ಸಿದ್ದಿಮಠ ಗುಡಿಸಲು ನವೀಕರಣ ಮಾಡುವುದು | 262956 |
| 16 | ಆಡಳಿತ ಸಿಬ್ಬಂದಿ ವಸತಿಗೃಹಗಳ ಸುತ್ತ ಚೈನ್ ಲಿಂಕ್ ಮೆಸ್ ಹಾಗೂ ಗೇಟ್‌ಗೆ ಕ್ಯಾಟಲ್ ಗಾರ್ಡ್ ಅಳವಡಿಸುವುದು | 271628 |
| 17 | ಮಾಹಿತಿ ಕೇಂದ್ರದಲ್ಲಿ ದುರಸ್ಥಿ ಕೆಲಸ ಮತ್ತು ಅಲ್ಯುಮಿನಿಯಂ ಪಾರ್ಟಿಷನ್ ಕೆಲಸ ನಿರ್ವಹಿಸುವುದು | 342231 |
| 18 | ಕ್ರಿಯಾಶಕ್ತಿ ಕಟ್ಟಡದ ಪೂರ್ವಭಾಗದಲ್ಲಿ ಸುಟ್ಟಕಲ್ಲಿನ ಪಾಥ್‌ವೇ ನಿರ್ಮಿಸುವುದು | 128702 |
| 19 | ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಸತಿ ನಿಲಯದ ಮೊದಲ ಮಹಡಿ ಕಟ್ಟಡ ನಿರ್ಮಿಸುವುದು | 5838918 |
| 20 | ಪ್ರಸಾರಾಂಗ ಕಟ್ಟಡ ಪಕ್ಕದಲ್ಲಿ ವಾಹನ ಷೆಡ್ ನಿರ್ಮಿಸುವುದು | 281223 |
| 21 | ಶ್ರೀ ಶೈಲ ಅತಿಥಿಗೃಹ ಪಕ್ಕದಲ್ಲಿ ನೀರಿನ ಟ್ಯಾಂಕ್ ನಿರ್ಮಿಸಿ ಪೈಪ್ ಲೈನ್ ಮಾಡುವುದು. | 1612020 |
| | **ಒಟ್ಟು** | **78784633** |
| | **ವಿದ್ಯಾತ್ ಕಾಮಗಾರಿ** | |
| 1 | ಗಿರಿಜನ ವಸತಿ ನಿಲಯ ಕಟ್ಟಡಕ್ಕೆ ವಿದ್ಯುತ್ತೀಕರಣ | 326619 |
| 2 | ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕ್ರೀಡಾ ಸಂಕೀರ್ಣ ಕಟ್ಟಡದ ವಿದ್ಯುತ್ತೀಕರಣ | 478841 |
| 3 | ಕನ್‌ವೆನ್ಷನ್ ಸೆಂಟರ್ ಕಟ್ಟಡದ ಹತ್ತಿರ ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ | 426720 |
| 4 | ಕನ್‌ವೆನ್ಷನ್ ಸೆಂಟರ್ ಕಟ್ಟಡದ ಹತ್ತಿರ ಆಂತರಿಕ ವಿದ್ಯುತ್ತೀಕರಣ ಫಿಕ್ಚರ್ಸ್ ಅಳವಡಿಸುವುದು | 1284774 |
| | ಒಟ್ಟು | **2516954** |
| | **ಘೋಷ್ವರೆ** | |
| 1 | ಸಿವಿಲ್ ಕಾಮಗಾರಿ | 78784633 |
| 2 | ವಿದ್ಯುತ್ ಕಾಮಗಾರಿ | 2516954 |
| | **ಒಟ್ಟು** | **81301587** |

## 2.5.2)ಕನ್‌ವೆನ್‌ಷನ್ ಕಟ್ಟಡ ಇಂಟೀರೀಯರ್ ಪರ್ನಿಷಿಂಗ್ ಮಾಡುವುದು:-

| ಕ್ರ ಸಂ | ವಿವರಗಳು | ಮೊತ್ತ |
|---|---|---|
| | ಒಟ್ಟು ಕಾಮಗಾರಿ ಅಂದಾಜು ಮೊತ್ತ | 17065903 |
| | ಟೆಂಡರ್‌ಗಿಟ್ಟ ಮೊತ್ತ | 17065000 |
| | ಟೆಂಡರ್ ಕಾಲಾವಧಿ | 31-03-2015<br>25-04-2015 |
| | ಟೆಂಡರ್ ತೆರೆಯುವ ದಿನಾಂಕ | 28-04-2015 |

ಗುತ್ತಿಗೆದಾರರ ಹೆಸರು **ಶ್ರೀ ಗಂಗಾಧರ** ಸೆಂಟರ್ ಸ್ಟೇಜ್ ಬೆಂಗಳೂರು 0.33% ಕಡಿಮೆ ಅವಾರ್ಡ್ ಆಫ್ ಕಾಂಟ್ರಾಕ್ಟ್ 17006113 ಫರ್‌ಫಾರ್‌ಮೆನ್ಸ್ ಸೆಕ್ಯುರಿಟಿ ರೂ:835295/-ಪಡೆದಿಲ್ಲ. unbalanced amount ರೂ:58887/-ಕ್ಕೆ ಡಿ.ಡಿ.ಪಡೆದಿಲ್ಲ.

ವರ್ಕ್ ಆರ್ಡರ್ ಸಂಖ್ಯೆ:**343/08-05-2015**

ಕೇಲಸದ ಆದೇಶ್ ಮತ್ತು ಒಪ್ಪಿಗೆ ಪತ್ರ **08-05-2015**

ಕಾಮಗಾರಿ ಪ್ರಾರಂಭ ದಿನಾಂಕ:**10-08-2015**

ಅವದಿ **3 ತಿಂಗಳು**

ಕಾಮಗಾರಿ ಮುಕ್ತಾಯ ದಿನಾಂಕ:**10-08-2015**

ವಿಜಯವಾಣಿ ದಿನ ಪತ್ರಿಕೆಯಲ್ಲಿ ದಿನಾಂಕ:**31-03-2015** ರಂದು ಟೆಂಡರ್ ಪ್ರಕಟಣೆಯಾಗಿದೆ.ಸರ್ಕಾರದ ಅಧೀನ ಕಾರ್ಯದರ್ಶಿ ಶಿಕ್ಷಣ ಇಲಾಖೆ (ಸಾಮಾನ್ಯ) ಬಹುಮಹಡಿ ಕಟ್ಟಡ ಬೆಂಗಳೂರು ಪತ್ರ ಸಂಖ್ಯೆ:ಇಡಿ.11:ವಿವಿಧ 2004 ದಿನಾಂಕ:20-10-2004ರಲ್ಲಿ ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ ಇವರಿಗೆ ಟೆಂಡರ್ ಅಧಿಸೂಚನೆ ಹೊರಡಿಸುವ ಬಗ್ಗೆ ಇದೇ ಸಮಸಂಖ್ಯೆ ಸುತ್ತೋಲೆ ದಿನಾಂಕ:01-10-2004ರಲ್ಲಿ ಸಂಗ್ರಹಣೆಗಳ ಮೌಲ್ಯ ಒಂದು ಕೋಟಿ ರೂಪಾಯಿಗಳು ಅಥವಾ ಅದಕ್ಕೆ ಹೆಚ್ಚಿದ್ದಾಗ ಅದನ್ನು ರಾಜ್ಯ ಟೆಂಡರ್‌ಬುಲೆಟಿನ್‌ನಲ್ಲಿ ಪ್ರಕಟಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ.ಆದ್ದರಿಂದ ಸುತ್ತೋಲೆ ಪ್ರಕಾರ ಮುಂದಿನ ಕ್ರಮ ಕೈಗೊಳಬೇಕೆಂದು ನಿರ್ದೇಶಿಸಿದ್ದು ಈ ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಮಾಹಿತಿ ಕಳುಹಿಸಿರುವುದಿಲ್ಲ. ಇದರಿಂದ ಟೆಂಡರ್ ಪಾದದರ್ಶಕತೆ ಕಂಡು ಬಂದಿರುವುದಿಲ್ಲ.

ಮೂರನೇ ಪಕ್ಷದ ತಪಾಸಣೆಯನ್ನು **ಮೇ:ಸುಲೇಖಾ ಇನ್‌ಸ್ಪೆಕ್ಷನ್ ಅಂಡ್ ಸರ್ಟಿಪೀಕೇಷನ್ ಬೆಂಗಳೂರು** ಇವರಿಗೆ ಕಛೇರಿ ಆದೇಶ ಸಂಖ್ಯೆ:ಕುಸ:115:2015-16.62.3ದಿನಾಂಕ:31-07-2015 ಮಾಡಿಸಿದ್ದಾರೆ. ಸದರಿ ಮೂರನೇ ತಪಾಸಣೆ ಸಂಸ್ಥೆಯು ಸರ್ಕಾರದಿಂದ ಮಾನ್ಯತೆ ಪಡೆದ ಬಗ್ಗೆ ವಿವರ ಇರುವುದಿಲ್ಲ.

ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆಯಲ್ಲಿ ದಿನಾಂಕ:31-03-2015 ಕನ್ನಡಪ್ರಭ ದಿನಪತ್ರಿಕೆಯಲ್ಲಿ ದಿನಾಂಕ:31-03-2015 ಟೆಂಡರ್ ಪ್ರಕಟಣೆಯಾಗಿದೆ.ದಿನಾಂಕ:10-02-2015ರಲ್ಲಿ ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ ಇವರು ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಬಳ್ಳಾರಿ ವಿಭಾಗ.ಬಳ್ಳಾರಿ ನಾನ್ ಡಿ.ಎಸ್.ಆರ್ ದರಗಳಾಗಿರುವುದರಿಂದ ಅಂದಾಜುಪಟ್ಟಿಯ ದರಗಳಿಗೆ ಒಪ್ಪಿಗೆ ನೀಡಲು ಪತ್ರ ಬರೆದಿದ್ದಾರೆ. .ಒಪ್ಪಿಗೆ ಪತ್ರ ಕಡತದಲ್ಲಿ ಲಭ್ಯವಿರುವುದಿಲ್ಲ.ಅಕೌಸ್ಟಿಕ್ ತಜ್ಞರಿಂದ ಮಾಹಿತಿ ಪಡೆದು ಅಂದಾಜುಪಟ್ಟಿ ಸಿದ್ದಪಡಿಸಲಾಗಿದೆ ಎಂದು ತಿಳಿಸಿದ್ದು ಅಕೌಸ್ಟಿಕ್ ತಜ್ಞರ ಮಾಹಿತಿ ವಿವರ ಕಡತದಲ್ಲಿರುವುದಿಲ್ಲ.

ಮೊದಲನೆ ಮತ್ತು ಭಾಗಶ:ಬಿಲ್ಲು ರೂ:**1545105/-**

ಚೆಕ್ ಸಂಖ್ಯೆ:**063844/-**

**04-07-2015** ಕಾಮಗಾರಿ ಮುಗಿದಿದ್ದರು ಸಹ ಇದುವರೆಗೆ ಅಂತಿಮ ಬಿಲ್ಲು ಪಾವತಿಸದಿರುವ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ:29:2016-17:ದಿನಾಂಕ:12-05-2016ರಲ್ಲಿ ಕೆಪಿಡಬ್ಲುಡಿ ಕೋಡ್ ವಾಲ್ಯೂಂ ಪ್ಯಾರಾಗ್ರಾಫ್ **184(ಎ) ಮತ್ತು (ಬಿ)185(ಎ)ರಿಂದ (ಇ)ಮತ್ತು 262** ಪ್ಯಾರಾಗ್ರಾಫ್ ಪ್ರಕಾರ ಕಾಮಗಾರಿಯ್ಯೂ ಪೂರ್ಣಗೊಂಡ ನಂತರ ಎಲ್ಲ ಅಳತೆಗಳನ್ನು ಅಳತೆಪುಸ್ತಕ ಹಾಗೂ ಬಿಲ್ಲಿನಲ್ಲಿ ನಮೂದಿಸಿ ಸಂಬಂಧಿಸಿದ ಗುತ್ತಿಗೆದಾರರಿಂದ "accepted in full and final settlement " ದೃಢೀಕರಣವನ್ನು ಅಳತೆ ಮಸ್ತಕದಲ್ಲಿ ಹಾಗೂ ಬಿಲ್ಲಿನಲ್ಲಿ ನಮೂದಿಸಿ ಅಂತಿಮ ಬಿಲ್ಲನ್ನು ಪಾವತಿಸಿ ವಿಶ್ವವಿದ್ಯಾಲಯಕ್ಕೆ ಕಾಮಗಾರಿ ಪೂರ್ಣಗೊಂಡ ವರದಿ ನೀಡಬೇಕಾಗಿದ್ದು ಇದುವರೆವಿಗೂ ಗುತ್ತಿಗೆದಾರರಿಗೆ ಭಾಗಶ:ಪಾವತಿ ಮಾಡಿರುವ ಬಗ್ಗೆ ವಿವರ ನೀಡಲು ಕೇಳಿದ್ದು ವಿಶ್ವವಿದ್ಯಾಲಯ **ಪತ್ರ ಸಂಖ್ಯೆ:ಕವಿಹಂ ಹವಿ:2016-17 ದಿನಾಂಕ:25-05-2016ರಲ್ಲಿ** ಕಾಮಗಾರಿಯ ಅಂತಿಮ ಬಿಲ್ಲು ಸಿದ್ದಪಡಿಸಲಾಗಿದೆ.ಗುತ್ತಿಗೆದಾರರಿಗೆ ಅಂತಿಮ ಬಿಲ್ಲು ಪಾವತಿಸಿರುವುದಿಲ್ಲ.ಕೆಲಸ ಪೂರ್ಣಗೊಂಡ ಪ್ರಮಾಣ ಪತ್ರಸಿದ್ದಪಡಿಸಲಾಗಿದೆ. ಅಂತಿಮ ಬಿಲ್ಲು ಪಾವತಿಸುವಾಗ ಎಲ್ಲಾ ಅಳತೆಗಳು ಬಂದಿರುವ ಬಗ್ಗೆ ಗುತ್ತಿಗೆದಾರರಿಂದ ಒಪ್ಪಿಗೆ ಪತ್ರ ಪಡೆದು ಅಂತಿಮ ಬಿಲ್ಲು ಪಾವತಿಸಲಾಗುವುದು ಎಂದು ತಿಳಿಸಿದ್ದಾರೆ. ಅಂತಿಮ ಬಿಲ್ಲು ಪಾವತಿಸದೇ ಇದ್ದ ಪಕ್ಷದಲ್ಲಿ ಗುತ್ತಿಗೆದಾರರು ನ್ಯಾಯಾಲಯಕ್ಕೆ ದಾವೆ ಹೂಡಿದರೆ ತಾಂತ್ರಿಕ ಅಧಿಕಾರಿಗಳು ಪೂರ್ಣ ಜವಾಬ್ದಾರರಾಗಿರುತ್ತಾರೆ.ಸರ್ಕಾರದಿಂದ ಬಂದ ಅನುದಾನದ ಸಫಲತೆ ಕಾಣುವುದಿಲ್ಲ.ವಿವರಗಳನ್ನು ಅನುಬಂಧ-24(ಎ)ರಲ್ಲಿ ಲಗತ್ತಿಸಿದೆ ಮೇಲಿನ ನ್ಯೂನ್ಯತೆಗಳಿಗೆ ರೂ:15451085/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಆಕ್ಷೇಪಣೆ ಮೊತ್ತ ಕಂಡಿಕೆ 2.5.1ರಲ್ಲಿ ಸೇರಿದೆ.

## 2.5.3)ಗಿರಿಜನ ಮಹಿಳಾ ವಸತಿನಿಲಯ ನಿರ್ಮಾಣ:-

ಕಾಮಗಾರಿಯ ಅಂದಾಜು ಮೊತ್ತ ರೂ :9420000/-
ಟೆಂಡರ್‌ಗಿಟ್ಟ ಮೊತ್ತ ರೂ: 8102694/-
ಟೆಂಡರ್ ನೀಡಲು ಕಾಲಾವಾಕಾಶ: 06-12-2012 ರಿಂದ 05-01-2013
ಟೆಂಡರ್ ತೆರೆಯುವ ದಿನಾಂಕ: 09-01-2013
ಕೆಲಸದ ಆದೇಶ ದಿನಾಂಕ: 05-04-2013

**Agreement No:-11/2013-14**
**Date:21-05-2013**
ಗುತ್ತಿಗೆದಾರರ ಹೆಸರು:ಶ್ರೀಪೋಲಾಲಕ್ಷ್ಮಿ ರೆಡ್ಡಿ ಶೇ.7.52 ಕಡಿಮೆ
ಟೆಂಡರ್ ಆವಾರ್ಡ್ ಮೊತ್ತ :7493263/-

unbalanced amount ರೂ:**609431/-**ಕ್ಕೆ ಡಿ.ಡಿ.ಯನ್ನು ಗುತ್ತಿಗೆದಾರರಿಂದ ಪಡೆದಿರುವುದಿಲ್ಲ.
ಫರ್‌ಫಾರ್‌ಮೆನ್ಸ್ ಸೆಕುರಿಟಿ **ರೂ:471000/-**
ಬ್ಯಾಂಕ್‌ಗ್ಯಾರಂಟಿ ನೀಡಿದ್ದು ರೂ:370000/-
ಕಡಿಮೆ ಮೊತ್ತ **ರೂ:101000/-**
ಕಾಮಗಾರಿ ಪ್ರಾರಂಭ ದಿನಾಂಕ:28-10-2013 ಕಾಲಾವಧಿ 6ತಿಂಗಳು
ವಾಸ್ತವಿಕ ಮುಕ್ತಾಯ ದಿನಾಂಕ:30-03-2015 ವಿಳಂಬದ ಅವಧಿ: 335ದಿನ

ಈ ಬಗ್ಗೆ ಲೆಕ್ಕ ತನಿಖಾವಿಚಾರಣಾ ಪತ್ರ ಸಂಖ್ಯೆ:27/12-05-2016ರಲ್ಲಿ ವಿವರ ನೀಡಲು ಸೂಚಿಸಲಾಗಿ ಪತ್ರ ಸಂಖ್ಯೆ: ಕವಿಹಂ:ಹವಿ.2016.17 25-05-2016ರಲ್ಲಿ ಲಿಕ್ವಿಡಿಟಿ ಡ್ಯಾಮೇಜ್ :2.9.20040ರ ಕಟ್ಟಡ ಸಲಹಾ ಸಮಿತಿ ಸಭೆಯ ಕ್ರಮ ಸಂಖ್ಯೆ:9ರಲ್ಲಿ ಕಾಮಗಾರಿ ವಿಳಂಬಕ್ಕೆ ದಿನಕ್ಕೆ ರೂ:10ರಂತೆ ದಂಡ ವಿಧಿಸುವುದು ತೀರ್ಮಾನ ವಾಗಿದ್ದು 335 ದಿನಕ್ಕೆ 3350/- ಇಎಂಡಿ ಮೊತ್ತದಲ್ಲಿ ಕಡಿತಗೊಳಿಸಿ ಪಾವತಿಸಲಾಗುವುದೆಂದು ತಿಳಿಸಿದ್ದಾರೆ.ಆದರೆ ಟೆಂಡರ್ ಪ್ರಕ್ರಿಯೆ ಸ್ಟಾಂಡರ್ಡ್ ಡಾಕ್ಯುಮೆಂಟ್ ಟೆಂಡರ್ ಅನ್ವಯ ನಡೆಸುತ್ತಿರುವುದರಿಂದ ಲಿಕ್ವಡಿಟಿ ಡ್ಯಾಮೇಜಸ್ ಅನ್ನು ಕಾಲಾವಧಿ ಮುಗಿದ ನಂತರ ಬಿಲ್ಲುಗಳ ಮೊತ್ತಕ್ಕೆ ಶೇ.0.1 ರಷ್ಟು ಲಿಕ್ವಿಡಿಟಿ ಡ್ಯಾಮೇಜ್ ವಸೂಲಿ ಮಾಡ ಬೇಕಾಗುತ್ತದೆ.

| ಕ್ರ ಸಂ | ವಿವರ | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ರೂ |
|---|---|---|---|---|
| 1 | ಮೊದಲನೆ ಮತ್ತು ಭಾಗಶ:ಬಿಲ್ಲು | 023316 | 27-12-2013 | 2327258 |
| 2 | ಎರಡನೆ ಮತ್ತು ಭಾಗಶ:ಬಿಲ್ಲು | 023351 | 09-07-2014 | 2424375 |
| 3 | ಮೂರನೆ ಮತ್ತು ಭಾಗಶ:ಬಿಲ್ಲು | 23401 | 20-01-2015 | 2179585 |
| 4 | ನಾಲ್ಕನೆ ಮತ್ತು ಅಂತಿಮ:ಬಿಲ್ಲು | 054144 | 27-04-2015 | 452341 |
| | ಒಟ್ಟು | | | **7383559** |

**7383559 ಶೇ.0.1% ರೂ:7383** ಪ್ರತಿ ದಿನಕ್ಕೆ **335ದಿನಕ್ಕೆ ರೂ:2473305/-ಅಥವಾ** ಗರಿಷ್ಟ **ಶೇ.10** ಕಾಂಟ್ಯಾಕ್ಟ್‌ಪ್ರೈಸ್ ರೂ:942000/-ರೂ:942000ರಲ್ಲಿ 3350/-ಕಡಿತ ಗೊಳಿಸಿ ರೂ:938650/-ಗುತ್ತಿಗೆದಾರರಿಂದ ವಸೂಲಿ ಮಾಡಿ ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಲು ಸೂಚಿಸಿದೆ. ಮೂರನೇ ಪಾರ್ಟಿ ಇನ್‌ಸ್ಪೆಕ್ಷನ್ ಟಿಎಂಎಇ ಪಾಲಿಟೆಕ್ನಿಕ್ ಕಾಲೇಜ್ ಹೊಸಪೇಟೆ ಇವರು ದಿನಾಂಕ:18-04-2015ರಂದು ಕಟ್ಟಡವನ್ನು ಭೌತಿಕವಾಗಿ ಪರಿಶೀಲಿಸಿ ವರದಿ ನೀಡಿರುತ್ತಾರೆ ನ್ಯೂನ್ಯತೆ ಈ ಕೆಳಕಂಡಂತಿವೆ.

1)dummy columns with finish above the roof level is required to construct

2)some parts of the floor tiles of passage are not properly finished at the edge and is required to fill with cement marter ಈ ನ್ಯೂನ್ಯತೆ ಸರಿಪಡಿಸಿರುವ ಬಗ್ಗೆ ದಾಖಲೆ ಇರುವುದಿಲ್ಲ. ಸದರಿ ಕಾಮಗಾರಿಯಲ್ಲಿ ಕಾಮಗಾರಿ ನಿರ್ವಹಿಸುವಾಗ ಅಂದಾಜು ಪಟ್ಟಿಯಲ್ಲಿದ ರೂ:433838/-ಮೊತ್ತದ ಎಕ್ಸ್‌ಟ್ರಾ ಐಟಂ ನಿರ್ವಹಿಸಿದ್ದು **ಪಿಡಬ್ಲುಜಿ 71** ತಯಾರಿಸಿ ಸಕ್ಷಮ ಪ್ರಾಧೀಕಾರದಿಂದ ಅನುಮೋದನೆ ಪಡೆದ ಬಗ್ಗೆ ಮಾಹಿತಿ ಕಡತದಲ್ಲಿರುವುದಿಲ್ಲವೆಂದು ವಿಚಾರಣೆ ಪತ್ರ ಸಂಖ್ಯೆ:28/2016-17ರಲ್ಲಿ ದಿನಾಂಕ:18-04-2016ರಲ್ಲಿ ವಿವರ ನೀಡಲು ಸೂಚಿಸಿದ್ದು ವಿ.ವಿ.ಕಛೇರಿ ಪತ್ರ ಸಂಖ್ಯೆ:ಕವಿಹಂ:ಹವಿ:2016-17:ದಿನಾಂಕ:25-05-2016 ಕಟ್ಟಡ ಸಲಹಾಸಮಿತಿ ಸಭೆ ದಿನಾಂಕ:06-05-2015 ಕ್ರಮ ಸಂಖ್ಯೆ:1 ರಲ್ಲಿ ಘಟನೋತ್ತರ ಅನುಮೋದನೆ ನೀಡಿರುತ್ತದೆಂದು ವರದಿ ಮಾಡಿದ್ದಾರೆ.ಆದರೆ ನಿಗದಿತ ಪಿಡಬ್ಲುಜಿ 71 ತಯಾರಿಸಿ ಸಕ್ಷಮ ಪ್ರಾಧೀಕಾರದಿಂದ ಅನುಮೋದಿಸಿ ಕಡಿತದಲ್ಲಿರಿಸಿರುವುದಿಲ್ಲ.ವಿವರಗಳನ್ನು ಅನುಬಂಧ-24(ಎ)ರಲ್ಲಿ ಲಗತ್ತಿಸಿದೆ ಮೇಲಿನ ನ್ಯೂನ್ಯತೆಗಳಿಗಾಗಿ ರು:7383559/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ಈ ಆಕ್ಷೇಪಣೆ ಮೊತ್ತ **ಕಂಡಿಕೆ.2.5.1**ರಲ್ಲಿ ಸೇರಿದೆ.

## 2.5.4)ದೂರ ಶಿಕ್ಷಣ ನಿರ್ದೇಶನಾಲಯದ ಕಟ್ಟಡ ನಿರ್ಮಾಣ:-

ಒಟ್ಟು ಅಂದಾಜು ಮೊತ್ತ ರೂ:8358006/-
ಸಿವಿಲ್ ಕಾಮಗಾರಿ ರೂ:7500000/-
ವಿದ್ಯುತ್ ಕಾಮಗಾರಿ ರೂ:638201/-
ಟೆಂಡರ್ ಕಾಲಾವದಿ ದಿನಾಂಕ:01-01-2015ರಿಂದ07-02-2015
ಟೆಂಡರ್ ತೆರೆಯುವ ದಿನಾಂಕ:11-02-2015
ಗುತ್ತಿಗೆದಾರರ ಹೆಸರು:ಶ್ರೀ ಪಿ.ಲಕ್ಷ್ಮಿ ರೆಡ್ಡಿ ಸಿವಿಲ್.ಶೇ.2.517 ಕಡಿಮೆ 7315643/-
ವಿದ್ಯುತ್ ಶೇ.8.00 ಕಡಿಮೆ 587144/-

unbalanced amount ಸಿವಿಲ್ ಕಾಮಗಾರಿ ರೂ:184357/- ಮತ್ತು ವಿದ್ಯುತ್ ಕಾಮಗಾರಿ.ರೂ:51057 ರೂ:235414/-ಡಿ.ಡಿ.ಯನ್ನು ಗುತ್ತಿಗೆದಾರರಿಂದ ಪಡೆದಿಲ್ಲ.

ಅಗ್ರಿಮೆಂಟ್ ಡೇಟ್:21-02-2014
ಕಾಮಗಾರಿ ಆದೇಶ ದಿನಾಂಕ:537/27-05-2015
ಕಾಮಗಾರಿ ಪ್ರಾರಂಭ ದಿನಾಂಕ:30-07-2015

ಅವಧಿ :11 ತಿಂಗಳು ಮುಕ್ತಾಯ ದಿನಾಂಕ:30-06-2016 ಇಎಂಡಿ ಮೊತ್ತರೂ:210000/-agreement no:15/2015-16 ದಿನಾಂಕ:27-05-2015 ಲೆಟರ್ ಆಫ್‌ಕ್ಸೆಪ್ಟೆನ್ಸ್ 10-06-2015
ಗುತ್ತಿಗೆದಾರರು ನಾಗಮಲ್ಲೇಶ ಗಂಗಾವತಿ
ಫರ್‌ಫಾರ್‌ಮೆನ್ಸ್ ಸೆಕುರಿಟಿ ರೂ:417900/-
ಆಂದ್ರಾ ಬ್ಯಾಂಕ್‌ಗ್ಯಾರಂಟಿ ಡಿಪಾಸಿಟ್ ರೂ:400000/-
ಕಡಿಮೆ 17900/-

ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ದಿನಾಂಕ:18-12-2014ರಂದು ಟೆಂಡರ್ ಪ್ರಕಟಣೆಯಾಗಿದೆ.ಜಿಲ್ಲಾ ಟ್ಂಡರ್ ಬುಲೆಟಿನ್‌ನಲ್ಲಿ ಪ್ರಕಟಣೆ ನೀಡಿರುವುದಿಲ್ಲ. ಕಟ್ಟಡದ ನೀಲಿನಕ್ಷೆ ಹಾಗೂ ಅಂದಾಜು ವೆಚ್ಚಗಳನ್ನು ಸಿದ್ದ ಪಡಿಸಿದ ವಾಸ್ತು ಶಿಲ್ಪ ರಚನೆಯನ್ನು ಮೇ:ರಚನಾ ಆರ್ಕಿಟೆಕ್ಟ್ ಅಂಡ್ ಇಂಜಿನಿಯರ್ಸ್ ಬೆಂಗಳೂರು ಇವರಿಗೆ ಕೊಟೇಷನ್ ಮೂಲಕ ನೀಡಿದ್ದು ರೂ:150000/- ಶೇ.2ರ ಆದಾಯತೆರಿಗೆ ರೂ:3000/-ಕಡಿತಗೊಳಿಸಿ ರೂ:147000/-ಚೆಕ್ಕು ಸಂಖ್ಯೆ:057757/07-01-2015 ಪಾವತಿಸಲಾಗಿದೆ.

ಕೆಟಿಪಿಪಿ ನಿಯಮ 4(2)(ಇ)ರಲ್ಲಿ ರೂ: ಒಂದು ಲಕ್ಷಕ್ಕಿಂತ ಹೆಚ್ಚಿಗೆ ಸೇವೆ ಪಡೆಯುವ ಎಲ್ಲಾ ಮೊತ್ತಗಳಿಗೆ ಟೆಂಡರ್ ಕಡ್ಡಾಯವಾಗಿ ಮಾಡಬೇಕಾಗಿದ್ದು ಕೆಟಿಪಿಪಿ ನಿಯಮ ಉಲ್ಲಂಘಿಸಿದ್ದಾರೆ. ಪ್ರೋಫೆಷನಲ್ ಸರ್ವಿಸಸ್ ಆದಾಯತೆರಿಗೆ 194(ಜೆ) ಪ್ರಕಾರ ಶೇ.10ರಷ್ಟು ಆದಾಯತೆರಿಗೆ ಕಡಿತಗೊಳಿಸಬೇಕಾಗಿದ್ದು ಶೇ.2ರಷ್ಟು ಆದಾಯ ತೆರಿಗೆ ಕಡಿತಗೊಳಿಸಿದ್ದು ಉಳಿದ ಶೇ.8ರಷ್ಟು ಅಂದರೆ(150000x8%)ರೂ:12000 ಸಂಬಂಧಿಸಿದ ಗುತ್ತಿಗೆದಾರರಿಂದ ವಸೂಲಿ ಮಾಡಿ ಆದಾಯ ತೆರಿಗೆ ಇಲಾಖೆಗೆ ಜಮಾ ಮಾಡುವುದು. ಸದರಿ ಸಂಸ್ಥೆಯು ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆ ಎಂಬುದಕ್ಕೆ ಕಡತದಲ್ಲಿ ಮಾಹಿತಿ ಇರುವುದಿಲ್ಲ.

ಟೆಂಡರ್ ಪ್ರಕ್ರಿಯೆಯಲ್ಲಿ ಒಬ್ಬರೇ ಟೆಂಡರುದಾರರು ಭಾಗವಹಿಸಿದ್ದಾರೆ. ಸರ್ಕಾರದ ಕಾರ್ಯದರ್ಶಿಲೋಕೋಪಯೋಗಿ ಇಲಾಖೆ ವಿಕಾಸ ಸೌಧ ಬೆಂಗಳೂರು ಇವರ ಕಛೇರಿ ಸುತ್ತೋಲೆ ಸಂಖ್ಯೆ:ಪಿಡಬ್ಲುಡಿ.230.ಸಿ ಆರ್ ಎಂ 06:14-08-2006ರಲ್ಲಿ ಕ್ರಮ ಸಂಖ್ಯೆ 1ರಲ್ಲಿ ಮೊದಲನೆ ಕರೆಗೆ ಏಕೈಕ ಗುತ್ತಿಗೆ ಸ್ವೀಕೃತವಾಗಿದಲ್ಲಿ ಅಂತಹ ಗುತ್ತಿಗೆಯನ್ನು ತಿರಸ್ಕರಿಸಿ ಮರುಗುತ್ತಿಗೆ ಕರೆಯಲು ಕ್ರಮ ಕೈಗೊಳ್ಳದೆ ಅನುಮೋದನೆ ಶಿಫಾರಸ್ಸು ಮಾಡಲಾಗುತ್ತದೆ.ಗುತ್ತಿಗೆಯ ಮೊದಲ ಹಾಗೂ ಎರಡನೇ ಕರೆಗೆ ಏಕೈಕ ಗುತ್ತಿಗೆಗಳು ಸ್ವೀಕೃತವಾದಲ್ಲಿ ಅಂತಹ ಗುತ್ತಿಗೆಗಳನ್ನು ತಿರಸ್ಕರಿಸಿ ಮೂರನೇ ಬಾರಿಗೆ ಗುತ್ತಿಗೆ ಕರೆಯಬೇಕಾಗಿದ್ದು, ಮೂರನೆ ಗುತ್ತಿಗೆ ಕರೆಗೂ ಏಕೈಕ ಗುತ್ತಿಗೆಯೇ ಸ್ವೀಕೃತವಾಗಿ ಆರ್ಥಿಕ ಇಲಾಖೆಯ ದಿನಾಂಕ:03-12-2002ರ ಸುತ್ತೋಲೆಯಲ್ಲಿ ಸೂಚಿಸಿರುವ ಪ್ರತಿಶತಗಿಂತ ಹೆಚ್ಚಿನದಾಗಿದ್ದಲ್ಲಿ ಅಂತಹ ಗುತ್ತಿಗೆದಾರರೊಡನೆ ಕಡ್ಡಾಯವಾಗಿ ಸಂಧಾನ ನಡೆಸಿ ಕಡಿಮೆ ಗುತ್ತಿಗೆ ದರಗಳನ್ನು ಪಡೆಯಲು ಪ್ರಯತ್ನ ಮಾಡಬೇಕಿದೆ. ಅನಿವಾರ್ಯ ಕಾರಣಗಳಿಂದಾಗಿ ಏಕೈಕ ಗುತ್ತಿಗೆ ಮಾತ್ರ ಸ್ವೀಕೃತವಾಗಿದ್ದು ಮರು ಗುತ್ತಿಗೆ ಕರೆದರೂ ಹೆಚ್ಚಿನ ಗುತ್ತಿಗೆದಾರರು ಭಾಗವಹಿಸುವ ಸಾಧ್ಯತೆ ಇಲ್ಲವಾದಲ್ಲಿ ಅದನ್ನು ಸ್ಪಷ್ಟವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಅನುಮೋದನಾ ಪ್ರಾಧೀಕಾರಕ್ಕೆ ಸಲ್ಲಿಸುವುದು ಹಾಗೂ ಅನುಮೋದನಾ ಪ್ರಾಧೀಕಾರವು ಈ ಸಂಬಂಧ ತಮ್ಮ ಸೂಕ್ತ ಅಭಿಪ್ರಾಯ ದಾಖಲಿಸಿ ಗುತ್ತಿಗೆಯನ್ನು ಅನುಮೋದಿಸಲು/ತಿರಸ್ಕರಿಸಲು ಕ್ರಮ ಕೈಗೊಳ್ಳುವುದು.

ಮೇಲ್ಕಂಡ ಕಾಮಗಾರಿ ಟೆಂಡರ್ ಪ್ರಕ್ರಿಯೆಯಲ್ಲಿ ಸುತ್ತೋಲೆಯಲ್ಲಿ ತಿಳಿಸಿದ ಯಾವ ಪ್ರಕ್ರಿಯನ್ನು ಕೈ ಗೊಳ್ಳದೆ ಒಬ್ಬರೆ ಟೆಂಡರುದಾರಿಗೆ ಕಾಮಗಾರಿ ನೀಡಿರುವುದು ಸರ್ಕಾರದ ಸುತ್ತೋಲೆಗೆ ವಿರುದ್ದವಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಸಂಬಂದಪಟ್ಟವರ ಮೇಲೆ ಸೂಕ್ತ ವಿಚಾರಣೆ ನಡೆಸಿ ಶಿಸ್ತಿನ ಕ್ರಮ ಕೈ ಗೊಳ್ಳಲು ಸೂಚಿಸಿದೆ. ದೂರ ಶಿಕ್ಷಣ ನಿರ್ದೇಶನಾಲಯದ ಸಿವಿಲ್ ಕಾಮಗಾರಿ ಮತ್ತು ವಿದ್ಯುತ್ ಕಾಮಗಾರಿಯನ್ನು ಒಬ್ಬರೇ ಟೆಂಡರ್‌ದಾರರಿಗೆ ನೀಡಿದ್ದು ಸದರಿ ಗುತ್ತಿಗೆದಾರರು ವಿದ್ಯುತ್ ಗುತ್ತಿಗೆದಾರರಾಗಿ ನೊಂದಣಿ ಮಾಡಿಸಿದಲ್ಲಿ ನೊಂದಣಿ ಸಂಖ್ಯೆ ಹಾಗೂ ನವೀಕರಣ ದಿನಾಂಕ ಕಡಿತದಲ್ಲಿ ಇರುವುದಿಲ್ಲ.ನೊಂದಣಿಯಾಗದಿದ್ದಲ್ಲಿ ವಿದ್ಯುತ್ ಕಾಮಗಾರಿಯನ್ನು ಕಾಮಗಾರಿ ನಿರ್ವಹಿಸಬೇಕಾಗುತ್ತದೆ.ಸಬ್‌ಲೀಸ್‌ಗೆ ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಲೆಕ್ಕ ತನಿಖೆಗೆ ಈ ಬಗ್ಗೆ ಪೂರ್ಣಮಾಹಿತಿ ನೀಡಿರುವುದಿಲ್ಲ.

ಪಾವತಿಯಾದ ವಿವರ

| ಕ್ರ ಸಂ | ವಿವರ | ಚೆಕ್ ಸಂಖ್ಯೆ | ದಿನಾಂಕ | ಮೊತ್ತ |
|---|---|---|---|---|
| 1 | ಮೊದಲನೆ ಬಿಲ್ಲು | 63617 | 08-12-2015 | 3058373 |
| 2 | ಎರಡನೆ ಬಿಲ್ಲು | 063945 | 30-01-2016 | 3204170 |
| | | | ಒಟ್ಟು | **6262543** |

ಅಂತಿಮ ಬಿಲ್ಲು ಪಾವತಿಸಿರುವುದಿಲ್ಲ.

ದೂರ ಶಿಕ್ಷಣ ನಿರ್ದೇಶನಾಲಯ ಕಟ್ಟಡ ಕೇಂದ್ರ ಕಾಮಗಾರಿ ನಿರ್ವಹಿಸುವಾಗ ಅಂದಾಜುಪಟ್ಟಿಯಲ್ಲಿದ ಎಕ್ಸ್‌ಟ್ರಾ ಐಟಂಗಳನ್ನು ನಿರ್ವಹಿಸಿ ರೂ:35317/-ಮೊತ್ತ ಪಾವತಿಸಿದ್ದು ವಿಚಾರಣೆ ಪತ್ರ ಸಂಖ್ಯೆ:28/ದಿ:2016-17:ದಿ:18-04-2016ರಲ್ಲಿ P.W.G 71/ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದ ವಿವರ ಕೇಳಲಾಗಿ ವಿ.ವಿ.ಪತ್ರ ಸಂಖ್ಯೆ:ಕವಿಹಂ:ಹವಿ:2016-17:ದಿ:25-05-2016ರಲ್ಲಿ ದೂರ ಶಿಕ್ಷಣ ಕೇಂದ್ರ ಕಟ್ಟಡ ಪೂರ್ಣಗೊಳಿಸಲು ಟೆಂಡರ್ ಕಾಲಾವಧಿ ಇನ್ನು ಮುಗಿದಿರುವುದಿಲ್ಲ.ಅಂತಿಮ ಬಿಲ್ಲು ಪಾವತಿಸುವಾಗ ಎಲ್ಲಾ ಹೆಚ್ಚುವರಿ ಐಟಂಗಳ ಪಟ್ಟಿಯನ್ನು ಸಿದ್ದಪಡಿಸಿ ಅನುಮೋದನೆ ಪಡೆದು ಅಂತಿಮ ಬಿಲ್ಲನ್ನು ಪಾವತಿಸಲಾಗುವುದು ಎಂದು ಉತ್ತರ ನೀಡಿದ್ದಾರೆ. ಗುತ್ತಿಗೆದಾರರು ಪಾವತಿಗಾಗಿ ಕೋರ್ಟ್‌ನಲ್ಲಿ ದಾವೆ ಹೂಡಿದರೆ ಇದಕ್ಕೆ ಸಂಬಂಧಿಸಿದ ಕೋರ್ಟ್ ವೆಚ್ಚಕ್ಕೆ ತಾಂತ್ರಿಕ ಅಧಿಕಾರಿಗಳು ಪೂರ್ಣ ಜವಾಬ್ದಾರರಾಗಿರುತ್ತಾರೆ. ವಿವರಗಳನ್ನು ಅನುಬಂಧ-24(ಎ)ರಲ್ಲಿ ಲಗತ್ತಿಸಿದೆ ಮೇಲಿನ ನ್ಯೂನ್ಯತೆಗಳಿಗಾಗಿ ರೂ:62.62.543/-ಆಕ್ಷೇಪಣೆಯಲ್ಲಿಡಲಾಗಿದೆ. ಈ ಆಕ್ಷೇಪಣೆ ಮೊತ್ತವನ್ನು 2.5.1ರಲ್ಲಿ ಸೇರಿದೆ.

## 2.5.5)ಚರಿತ್ರೆ ವಿಭಾಗದ ವಿಸ್ತರಣೆ ಕಟ್ಟಡ ನಿರ್ಮಿಸುವುದು:-

ಅಂದಾಜು ಮೊತ್ತ

ಪಾರ್ಟ್.ಎ. ಸಿವಿಲ್ ವರ್ಕ್ಸ್ ರು:**12180000/-**

ಪಾರ್ಟ್.ಬಿ.ವಾಟರ್ ಸಪ್ಲೈ ಮತ್ತು ಸ್ಯಾನಿಟರಿ ವರ್ಕ್ಸ್ ರೂ:**584424/-**

ಪಾರ್ಟ್.ಸಿ.ವಿದ್ಯುದೀಕರಣ ಮತ್ತು ಫಿಕ್ಚರ್ಸ್ ಅಳವಡಿಸುವುದು ರೂ:**752454/-**

ಟೆಂಡರ್ ಸಲ್ಲಿಸುವ ಅವಧಿ :**08-12-2014ರಿಂದ07-02-2015**

ಟೆಂಡರ್ ತೆರೆಯುವ ದಿನಾಂಕ:**10-02-2015**

ಭಾಗವಹಿಸಿದ ಗುತ್ತಿಗೆದಾರರು:**ಶ್ರೀ.ಜಿ.ಮುರುಳಿಧರ ರೆಡ್ಡಿ**

ಸಿವಿಲ್ ಕಾಮಗಾರಿ ಶೇ.1.105 ಕಡಿಮೆ ಟೆಂಡರ್ ಅವಾರ್ಡ್ ಮೊತ್ತ ರೂ:**12161079/-**

ವಿದ್ಯುತ್ ಕಾಮಗಾರಿ ಶೇ.10ರಷ್ಟು ಕಡಿಮೆ ಟೆಂಡರ್ ಅವಾರ್ಡ್ ಮೊತ್ತ ರೂ:**678603/-**

**ಕ್ಲಾಸ್ 25.5 ರ ಪ್ರಕಾರ** unbalanced amount ಆವಾರ್ಡ್ ಆಫ್ ಕಾಂಟ್ರಾಕ್ಟ್ ಕ್ಲಾಸ್ 29.1 ರ ಪ್ರಕಾರ(12180000-12161079)=ರೂ

18921/- ಮತ್ತು ವಿದ್ಯುತ್ ಕಾಮಗಾರಿ(**752454-678603**) **ರೂ:73851 ಒಟ್ಟು ರೂ:92772/-ಡಿ.ಡಿ.ಯನ್ನು** ಗುತ್ತಿಗೆದಾರರಿಂದ ಪಡೆದಿರುವುದಿಲ್ಲ.

ಕಾಮಗಾರಿ ಪ್ರಾರಂಭ ದಿನಾಂಕ:**31-03-2015**

ಅವಧಿ **11 ತಿಂಗಳು**

ಕಾಮಗಾರಿ ಮುಕ್ತಾಯಗೊಂಡ:**20-06-2016**

ವಿಳಂಬ ದಿನಗಳು: **4 ತಿಂಗಳು 8 ದಿನ**

| ಕ್ರ ಸಂ | ವಿವರ | ಚೆಕ್ ಸಂಖ್ಯೆ | ದಿನಾಂಕ | ಮೊತ್ತ |
|---|---|---|---|---|
| 1 | ಮೊದಲನೆ ಬಿಲ್ಲು | 020090 | 04-07-2015 | 3418672 |
| 2 | ಎರಡನೇ ಬಿಲ್ಲು | 020127 | 26-12-2015 | 2208629 |
| | | | ಒಟ್ಟು | **5627301** |

ವಿವರಗಳನ್ನು **ಅನುಬಂಧ-24(ಎ)**ರಲ್ಲಿ ಲಗತ್ತಿಸಿದೆ ಅಂತಿಮ ಬಿಲ್ಲು ಪಾವತಿಸಲಾಗಿಲ್ಲ. ಮೇಲಿನ ನ್ಯೂನ್ಯಗಳಿಗಾಗಿ **ರೂ:5627301/-**ಆಕ್ಷೇಪಣೆಯಲ್ಲಿಡಲಾಗಿದೆ.ಈ ಆಕ್ಷೇಪಣೆ ಮೊತ್ತ ಕಂಡಿಕೆ:2.5.1ರಲ್ಲಿ ಸೇರಿದೆ

## 3(ಎ)ಬುಡಕಟ್ಟು ವಿಭಾಗ ಕಟ್ಟಡ ನಿರ್ಮಾಣ ಮಾಡುವುದು:-

ಅಂದಾಜು ವೆಚ್ಚ ರೂ:11157163/-
ಟೆಂಡರ್‌ಗಿಟ್ಟ ಮೊತ್ತ ರೂ:10144681/-
ಗುತ್ತಿಗೆದಾರರು :ಶ್ರೀ.ಜಿ.ಮುರುಳಿಧರ ರೆಡ್ಡಿ ಶೇ.1.454% ಕಡಿಮೆ
ಟೆಂಡರ್ ಆವಾರ್ಡ್ ಮೊತ್ತ 9997100/-
ವಿದ್ಯುತ್ ಕಾಮಗಾರಿ ರೂ:600206/-ಶೇ.10 ಕಡಿಮೆ
ಟೆಂಡರ್ ಆವಾರ್ಡ್ ರೂ:540185/-

performance security deposit "1185000/-ಬ್ಯಾಂಕ್ ಗ್ಯಾರಂಟಿ ಎರಡು ಕಾಮಗಾರಿ ಸೇರಿ

ಕ್ಲಾಸ್ 25.5ರ ಪ್ರಕಾರ unbalanced amount ಸಿವಿಲ್ ಕಾಮಗಾರಿ ರೂ:**147581/-**ಮತ್ತು ವಿದ್ಯುತ್ ಕಾಮಗಾರಿ ರೂ:**60021/-**ಕ್ಕೆ ಡಿ.ಡಿಯನ್ನು ಗುತ್ತಿಗೆದಾರರಿಂದ ಪಡೆದಿಲ್ಲ.

ಒಟ್ಟು ಚರಿತ್ರೆ ವಿಭಾಗ ಮತ್ತು ಬುಡಕಟ್ಟು ಅಧ್ಯಯನ ವಿಭಾಗ ಒಬ್ಬರೇ ಗುತ್ತಿಗೆದಾರರಾಗಿದ್ದು ರೂ:**23793**ಲಕ್ಷಕ್ಕೆ **ಶೇ.5** ರಂತೆ ಫರ್‌ಫಾರ್‌ಮೆನ್ಸ್ ಸೆಕ್ಯುರಿಟಿ ಡಿಪಾಸಿಟ್ **ರೂ:1189650/-**ಕ್ಕೆ ಬ್ಯಾಂಕ್ ಗ್ಯಾರಂಟಿ ರೂ:**1185000**/-ಕಡಿಮೆ **4650/-** ಡಿಪಾಸಿಟ್ ತೆಗೆದುಕೊಂಡಿದ್ದಾರೆ.

## 2.5.6)ಬುಡಕಟ್ಟು ಅಧ್ಯಯನ ವಿಭಾಗದ ಪಾವತಿ ವಿವರ:-

ಮೊದಲನೆ ಬಿಲ್ಲು 20089/-24-07-2015 ರೂ: 1389053/-
ಎರಡನೇ ಬಿಲ್ಲು 020126/26-12-2015 ರೂ: 492122/-
**ರೂ: 1881175/-**

ಅಂತಿಮ ಬಿಲ್ಲು ಪಾವತಿಯಾಗಿಲ್ಲ. ಟೆಂಡರ್ ಪ್ರಕಿಮೆಯಲ್ಲಿ ಒಬ್ಬರೇ ಟೆಂಡರುದಾರರು ಭಾಗವಹಿಸಿದ್ದಾರೆ. ಸರ್ಕಾರದ ಕಾರ್ಯದರ್ಶಿ ಲೋಕೋಪಯೋಗಿ ಇಲಾಖೆ ವಿಕಾಸಸೌಧ ಬೆಂಗಳೂರು ಇವರ ಕಛೇರಿ ಸುತ್ತೋಲೆ ಸಂಖ್ಯೆ: ಪಿಡಬ್ಲುಡಿ.230:ಸಿಆರ್‌ಎಂ:06:ದಿನಾಂಕ:14-08-2006ರಲ್ಲಿ ಕ್ರಮ ಸಂಖ್ಯೆ 1 ರಲ್ಲಿ ಮೊದಲನೆ ಕರೆಗೆ ಏಕೈಕ ಗುತ್ತಿಗೆ ಸ್ವೀಕೃತವಾಗಿದ್ದಲ್ಲಿ ಅಂತಹ ಗುತ್ತಿಗೆಯನ್ನು ತಿರಸ್ಕರಿಸಿ ಮರು ಗುತ್ತಿಗೆ ಕರೆಯಲು ಕ್ರಮ ಕೈಗೊಳ್ಳದೆ ಅನುಮೋದನೆ ಶಿಫಾರಸ್ಸು ಮಾಡಲಾಗುತ್ತಿದೆ. ಗುತ್ತಿಗೆಯ ಮೊದಲ ಹಾಗೂ ಎರಡನೇ ಕರೆಗೆ ಏಕೈಕ ಗುತ್ತಿಗೆಗಳು ಸ್ವೀಕೃತವಾದಲ್ಲಿ ಅಂತಹ ಗುತ್ತಿಗೆಗಳನ್ನು ತಿರಸ್ಕರಿಸಿ ಮೂರನೇ ಬಾರಿಗೆ ಗುತ್ತಿಗೆ ಕರೆಯಬೇಕಿದ್ದು ಮೂರನೆ ಗುತ್ತಿಗೆ ಕರೆಗೂ ಏಕೈಕ ಗುತ್ತಿಗೆ ಯೇ ಸ್ವೀಕೃತವಾಗಿ ಅರ್ಥಿಕ ಇಲಾಖೆಯ ದಿನಾಂಕ:03-12-2002ರ ಸುತ್ತೋಲೆಯಲ್ಲಿ ಸೂಚಿಸಿರುವ . ಪ್ರತಿ ಶತಗಳಿಗಿಂತ ಹೆಚ್ಚಿನದಾಗಿದಲ್ಲಿ ಅಂತಹ ಗುತ್ತಿಗೆದಾರರೊಡನೆ ಕಡ್ಡಾಯವಾಗಿ ಸಂದಾಯ ನಡೆಸಿ ಕಡಿಮೆ ಗುತ್ತಿಗೆಧರಗಳನ್ನು ಪಡೆಯಲು ಪ್ರಯತ್ನಮಾಡಬೇಕಿದೆ. ಅನಿವಾರ್ಯ ಕಾರಣಗಳಿಂದಾಗಿ ಏಕೈಕ ಗುತ್ತಿಗೆ ಮಾತ್ರ ಸ್ವೀಕೃತವಾಗಿದ್ದು ಮರುಗುತ್ತಿಗೆ ಕರೆದರೂ ಹೆಚ್ಚಿನ ಗುತ್ತಿಗೆದಾರರು ಭಾಗವಹಿಸುವ ಸಾಧ್ಯತೆ ಇಲ್ಲವಾದಲ್ಲಿ ಅದನ್ನು ಸ್ಪಷ್ಟವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಅನುಮೋದನಾ ಪ್ರಾಧೀಕಾರಕ್ಕೆ ಸಲ್ಲಿಸುವುದು ಹಾಗೂ ಅನುಮೋದನಾ ಪ್ರಾಧೀಕಾರವು ಈ ಸಂಬಂದ ತಮ್ಮ ಸೂಕ್ತ ಅಭಿಪ್ರಾಯ ದಾಖಲಿಸಿ ಗುತ್ತಿಗೆಯನ್ನು ಅನುಮೋದಿಸಲು/ತಿರಸ್ಕರಿಸಲು ಕ್ರಮ ಕೈಗೊಳ್ಳುವುದು.ಮೇಲ್ಕಂಡ ಕಾಮಗಾರಿ ಟೆಂಡರ್ ಪ್ರಕ್ರಿಯೆಯಲ್ಲಿ ಸುತ್ತೋಲೆಯಲ್ಲಿ ತಿಳಿಸಿದ ಯಾವ ಪ್ರಕ್ರಿಯೆಯನ್ನು ಕೈಗೊಳ್ಳದೆ ಒಬ್ಬರೇ ಟೆಂಡರುದಾರರಿಗೆ ಕಾಮಗಾರಿ ನೀಡಿರುವುದು ಸರ್ಕಾರದ ಸುತ್ತೋಲೆಗೆ ವಿರುದ್ದವಾಗಿರುತ್ತದೆ. ಟೆಂಡರ್ ಪ್ರಕಿಯೆ ಸಂಬಂಧಪಟ್ಟವರ ಮೇಲೆ ಸೂಕ್ತ ವಿಚಾರಣೆ ನಡೆಸಿ ಶಿಸ್ತಿನ ಕ್ರಮ ಜರುಗಿಸಲು ಸೂಚಿಸಿದೆ.ವಿಜಯ ಕರ್ನಾಟಕ ದಿನ ಪತ್ರಕೆಯಲ್ಲಿ ದಿನಾಂಕ:18-12-2014ರಲ್ಲಿ ಟೆಂಡರ್ ಪ್ರಕಟಣೆಯಾಗಿದೆ.

ಸರ್ಕಾರದ ಅಧೀನ ಕಾರ್ಯದರ್ಶಿ ಶಿಕ್ಷಣ ಇಲಾಖೆ(ಸಾಮಾನ್ಯ)ಬಹುಮಹಡಿ ಕಟ್ಟಡ ಬೆಂಗಳೂರು ಪತ್ರ ಸಂಖ್ಯೆ:ಇಡಿ:11:ವಿವಿಧ 2004ರಲ್ಲಿ ದಿನಾಂಕ:20-10-2004ರಲ್ಲಿ ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ ಇವರಿಗೆ ಟೆಂಡರ್ ಅಧಿಸೂಚನೆ ಹೊರಡಿಸುವ ಬಗ್ಗೆ ಇದೇ ಸಮ ಸಂಖ್ಯೆ ಸುತ್ತೋಲೆ ದಿನಾಂಕ:01-10-2004ರಲ್ಲಿ ಸಂಗ್ರಹಣೆಗಳ ಮೌಲ್ಯ ಒಂದು ಕೋಟಿ ರೂಪಾಯಿಗಳು ಅಥವಾ ಅದಕ್ಕೂ ಹೆಚ್ಚಿದ್ದಾಗ ಅದನ್ನು ರಾಜ್ಯ ಟೆಂಡರ್ ಬುಲೆಟಿನಲ್ಲಿ ಪ್ರಕಟಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ.ಆದ್ದರಿಂದ ಸುತ್ತೋಲೆ ಪ್ರಕಾರ ಮುಂದಿನ ಕ್ರಮ ಕೈಗೊಳ್ಳರೆಂದು ನಿರ್ದೇಶಿಸಿದ್ದು ಈ ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ರಾಜ್ಯ ಟೆಂಡರ್ ಬುಲೆಟಿನಲ್ಲಿ ಪ್ರಕಟಿಸಲು ಮಾಹಿತಿ ಕಳುಹಿಸಿರುವುದಿಲ್ಲ.ಇದರಿಂದ ಪಾರದರ್ಶಕತೆ ಕಂಡು ಬಂದಿರುವುದಿಲ್ಲ.ಚರಿತ್ರೆ ವಿಭಾಗದಲ್ಲಿ ವಿದ್ಯುಧೀಕರಣ ಮತ್ತು ಫಿಕ್ಚರ್ಸ್ ಅಳವಡಿಸುವುದು ರು:734000/-ಬಡಕಟ್ಟು ಅಧ್ಯಯನ ವಿಭಾಗ ವಿದ್ಯುತ್ ಕಾಮಗಾರಿಗೆ ರು:540185/-ಸಿವಿಲ್ ಗುತ್ತಿಗೆದಾರರಿಗೆ ನೀಡಿದ್ದು ಸದರಿ ಗುತ್ತಿಗೆದಾರರು ವಿದ್ಯುತ್ ಗುತ್ತಿಗೆದಾರರ ನೋಂಣಿ ಸಂಖ್ಯೆ:ಹಾಗೂ ನವೀಕರಣ ದಿನಾಂಕ ಕಡತದಲ್ಲಿರುವುದಿಲ್ಲ. ಸಿವಿಲ್ ಗುತ್ತಿಗೆದಾರರು ವಿದ್ಯುತ್‌ಗುತ್ತಿಗೆ ನೊಂದಣಿಯಾಗಿದಿಲ್ಲಿ ವಿದ್ಯುತ್ ಗುತಿಗೆಯನ್ನು ಟೆಂಡರ್ ಕರೆದು ಕೆಲಸ ಮಾಡಿಸಬೇಕಾಗಿರುತ್ತದೆ.ಸಬ್‌ಲೀಸ್ ಕೊಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಲೆಕ್ಕ ತನಿಖೆಗೆ ಸದರಿ ಸಿವಿಲ್ ಗುತ್ತಿಗೆದಾರರು ವಿದ್ಯುತ್ ಗುತ್ತಿಗೆದಾರರ ನೊಂದಣಿಯಾದ ಬಗ್ಗೆ ಮಾಹಿತಿ ನೀಡಿರುವುದಿಲ. ವಿವರಗಳನ್ನು **ಅನುಬಂಧ-24(ಎ)**ರಲ್ಲಿ ಲಗತ್ತಿಸಿದೆ ಮೇಲಿನ ನ್ಯೂನ್ಯತೆಗಳಿಗಾಗಿ **ರೂ:1881175/-ನ್ನು** ಆಕ್ಷೇಪಣೆಯಲ್ಲಿಡಲಾಗಿದೆ.ಈ ಆಕ್ಷೇಪಣೆ **ಮೊತ್ತ 2.5.1** ರಲ್ಲಿ ಸೇರಿದೆ.

## 2.5.7)ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕ್ರೀಡಾ ಸಂಕೀರ್ಣ ನಿರ್ಮಾಣ:-

ಅಂದಾಜು ಮೊತ್ತ ರೂ:81.85/-ಲಕ್ಷ

ಟೆಂಡರ್ ಗಿಟ್ಟ ಮೊತ್ತ ರೂ:6787874/-

ಅವಾರ್ಡ್‌ಮೊತ್ತ ರೂ:6278782/-

ಶೇ.7.5ಕಡಿಮೆದರ

ಟೆಂಡರ್ ಕಾಲಾವಧಿ 06-12-2012 ರಿಂದ 05-01-2013

ಟೆಂಡರ್ ತೆರೆದ ದಿನಾಂಕ:09-01-2013

ಕಾಲಾವಧಿ: 6 ತಿಂಗಳು

ಗುತ್ತಿಗೆದಾರರ ಹೆಸರು:ಶ್ರೀ.ಪೋಲಾಲಕ್ಷ್ಮಿ ರೆಡ್ಡಿ

ಕಾಮಗಾರಿ ಪ್ರಾರಂಭ ದಿನಾಂಕ:11-10-2013

ಕಾಮಗಾರಿ ಮುಕ್ತಾಯ **ದಿನಾಂಕ:07-04-2015** ವಿಳಂಬದ ದಿನಗಳು 1 ವರ್ಷ

ಈ ಕಛೇರಿ ವಿಚಾರಣೆ ಪತ್ರ ಸಂಖ್ಯೆ27/2016-17:ದಿನಾಂಕ:18-04-2016 ವಿವರ ನೀಡಲು ಸೂಚಿಸಿದಾಗ ವಿಶ್ವವಿದ್ಯಾಲಯ ಕಛೇರಿ ಪತ್ರ ಸಂಖ್ಯೆ:ಕವಿಹಂ:ಹವಿ:2016-17ದಿನಾಂಕ:25-05-2016ರಲ್ಲಿ ಲಿಕ್ವಿಡಿಟ ಡ್ಯಾಮೇಜಸ್ 02-09-2004ರ ಕಟ್ಟಡ ಸಲಹಾ ಸಮಿತಿ ಸಭೆ ಕ್ರಮ ಸಂಖ್ಯೆ 9ರಲ್ಲಿ ಕಾಮಗಾರಿ ವಿಳಂಬವಾಗಿರುವುದಕ್ಕೆ ದಿನಕ್ಕೆ 10ರಂತೆ ದಂತ ವಿಧಿಸಲು ಸಭೆ ಸೂಚಿಸಿದ್ದು ಈ ಕಾಮಗಾರಿಗೆ 365ದಿನಗಳಿಗೆ ದಿನಕ್ಕೆ ರೂ:10ರಂತೆ ರೂ:3650/- ಅವರಿಗೆ ನೀಡಬೇಕಾದ ಇಎಂಡಿ ಮೊತ್ತದಲ್ಲಿ ಕಡಿತ ಗೊಳಿಸಿ ಪಾವತಿ ಮಾಡಲಾಗುತ್ತದೆಂದು ತಿಳಿಸಿದ್ದಾರೆ. ಆದರೆ ವಿಳಂಬದ ದಿನಗಳು 365 ದಿನವಾಗಿದ್ದು ಶೇ.0.1 ರಂತೆ

3) and part bill 50315/09-07-2014 ರೂ:2365364/-

4 1¸st and final bill 57814/27-04-2015 <u>673048/-</u>

3038412/-

3038412ಕ್ಕೆ ಶೇ.0.1ರಂತೆ ರೂ:3038*365ದಿನ 1108870/-ಅಥವಾ ಶೇ.10 ರಷ್ಟು ಕಾಂಟ್ರಾಕ್ಟ್ ಮೊತ್ತ 8185000/-ಗರಿಷ್ಟ ಮೊತ್ತ 818500(-)3650 ಈ ಗಾಗಲೇ ಕಡಿತಗೊಳಿಸಿದ್ದು ಉಳಿದ ರೂ:814850/- ಗುತ್ತಿಗೆದಾರರಿಂದ ವಸೂಲಿ ಮಾಡಿ ವಿಶ್ವವಿದ್ಯಾಲಯ ನಿಧಿಗೆ

ಜಮಾ ಮಾಡಲು ಸೂಚಿಸಿದೆ.

ಟಿ.ಎಂ.ಎ.ಇ ಸೊಸೈಟಿ ಪಾಲಿಟೆಕ್ನಿಕ್ ಹೊಸಪೇಟೆ ದಿನಾಂಕ:18-04-2015ರಂದು ಸದರಿ ಕಟ್ಟಡವನ್ನು ಪರಿಶೀಲಿಸಿದ್ದು ನ್ಯೂನ್ಯತೆಗಳನ್ನು ತಿಳಿಸಿದ್ದು.

1)front portion ನಿರ್ಮಾಣವಾಗಿಲ್ಲವೆಂದು ತಿಳಿಸಿದ್ದಾರೆ.

2)top roof of the building observed improper drain of water

3)dummy columns with finish above the roof level is required to construct store pillars of building have not cleared by the agency

ಪ್ಲಂಬಿಂಗ್ ಐಟಂ ಇ.ಐ.ಆರ್.ಎಲ್.ಅನುಮೋದನೆ ಪಡೆದಿರುವುದಿಲ್ಲ.

ಕಾಮಗಾರಿ ಪಾವತಿಸಿದ ವಿವರ ಈ ಕೆಳಗಿನಂತಿದೆ.

| ಕ್ರ.ಸ | ವಿವರ | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ರೂಗಳಲ್ಲಿ |
|---|---|---|---|---|
| 1 | ಮೊದಲನೇ ಭಾಗಶ: ಬಿಲ್ಲು | 031344 | 20-08-2013 | 1943409 |
| 2 | ಎರಡನೇ ಭಾಗಶ: ಬಿಲ್ಲು | 031401 | 27-12-2013 | 2127539 |
| 3 | ಮೂರನೇ ಭಾಗಶ: ಬಿಲ್ಲು | 50315 | 09-07-2014 | 2365364 |
| 4 | ನಾಲ್ಕನೇ ಅಂತಿಮ ಬಿಲ್ಲು | 57814 | 27-04-2015 | 673048 |
| | **ಒಟ್ಟು** | | | **7109360** |
| | **ಅವಾರ್ಡ ಅಮೌಂಟ್** | | | 6278782 |
| | **ಹೆಚ್ಚುವರಿ ಪಾವತಿ** | | | **830578** |

ಟೆಂಡರ್ ಡಾಕ್ಯುಮೆಂಟ್ ಮೊದಲನೆ ಪುಟದಲ್ಲಿ ಕುಲಸಚಿವರ ಸಹಿ ಮಾಡಿದ್ದು ಉಳಿದ ಪುಟಗಳಲ್ಲಿ ಸಹಿ ಮಾಡಿರುವುದಿಲ್ಲ. ವಿವರಗಳನ್ನು ಭರ್ತಿ ಮಾಡಿರುವುದಿಲ್ಲ.ಡಿಸ್ಟ್ರಿಕ್ಟ್ ಟೆಂಡರ್‌ಬುಲೆಟಿನ್ ಪ್ರಕಟಣೆಗೆ ನೀಡಿಲ್ಲ.ಟೆಂಡರ್ ಪ್ರಕಟಣೆಯಾದ ದಿನ ಪತ್ರಿಕೆಗಳ ಬಿಲ್ಲುಗಳು ಕಡತದಲ್ಲಿ ಇರುವುದಿಲ್ಲ.

ಈ ಕಾಮಗಾರಿಯಲ್ಲಿ ಅಂದಾಜು ಪಟ್ಟಿಯಲ್ಲಿಲ್ಲದ ಎಕ್ಸಟ್ರಾ ಐಟಂಗಳನ್ನು ನಿರ್ವಹಿಸಿ **ರೂ:352690/-ಪಾವತಿಸಿದ್ದು ಪಿಡಬ್ಲುಜಿ71ರಲ್ಲಿ** ಸದರಿ ಎಕ್ಸ್‌ಟ್ರಾ ಐಟಂಗಳನ್ನು ನಮೂದಿಸಿ ಸಕ್ಷಮಪ್ರಾಧಿಕಾರದಿಂದ ಅನುಮೋದನೆ ಪಡೆದು ವಿವರ ಸಲ್ಲಿಸಲು ವಿಚಾರಣಾ **ಪತ್ರ ಸಂಖ್ಯೆ:28:2016-17 ದಿ:18-04-2016ರಲ್ಲಿ** ಕೇಳಲಾಗಿ ವಿ.ವಿ.**ಪತ್ರ ಸಂಖ್ಯೆ:ಕವಿ.ಹಂ:ಹವಿ:2016-17:ದಿ:25-05-2016ರಲ್ಲಿ** ಕೇಳಲಾಗಿ ಎಲ್ಲಾ ಎಕ್ಸ್‌ಟ್ರಾಐಟಂಗಳಿಗೆ **ದಿ:06-05-2015ರ ಕಟ್ಟಡ** ಸಲಹಾಸಮಿತಿ **ಕ್ರಮ ಸಂಖ್ಯೆ:2** ರಲ್ಲಿ ಘಟನೋತ್ತರ ಅನುಮೋದನೆ ನೀಡಿರುತ್ತದೆಂದು ಉತ್ತರಿಸಿದ್ದಾರೆ.ಆದರೆ P.W.G 71ರಲ್ಲಿ ಎಲ್ಲಾ ಎಕ್ಸ್‌ಟ್ರಾ ಐಟಂಗಳನ್ನು ತಯಾರಿಸಿ ಸಕ್ಷಯ ಪ್ರಾಧಿಕಾರದ ಅನುಮೋದನೆ ಪಡೆದ ಬಗ್ಗೆ ಮಾಹಿತಿ ನೀಡಿರುವುದಿಲ್ಲ.ವಿವರಗಳನ್ನು **ಅನುಬಂಧ-24(ಎ)ರಲ್ಲಿ** ಲಗತ್ತಿಸಿದೆ.ಈ ಮೇಲ್ಕಂಡ ನ್ಯೂನ್ಯತೆಗಳಿಗಾಗಿ **ರೂ:7109360/-**ಆಕ್ಷೇಪಣೆಯಲ್ಲಿಡಲಾಗಿದೆ.ಈ ಆಕ್ಷೇಪಣೆ **ಮೊತ್ತ 2.5.1ರಲ್ಲಿ** ಸೇರಿದೆ.

## 2.5.8)ಕನ್‌ವೆನ್‌ಷನ್ ಸೆಂಟರ್ ಕಟ್ಟಡ ನಿರ್ಮಾಣ:-

ಕಾಮಗಾರಿಯ ಅಂದಾಜು ಮೊತ್ತ **ರೂ:150 ಲಕ್ಷ**
ಟೆಂಡರ್‌ಗಿಟ್ಟ ಮೊತ್ತ ರೂ: **12923908/-**
ಟೆಂಡರ್ ಆವಾರ್ಡ್ ರೂ:**12553632/-**
ಗುತ್ತಿಗೆದಾರರ ಹೆಸರು : **ಶ್ರೀ.ಜಿ.ಮುರುಳಿಧರ ರೆಡ್ಡಿ ಶೇ.2.94% ಕಡಿಮೆ**
unbalanced amount **ರೂ:370276/-**ಕ್ಕೆ ಗುತ್ತಿಗೆದಾರರಿಂದ ಡಿ.ಡಿ.ಪಡೆದಿರುವುದಿಲ್ಲ.

ಕಾಮಗಾರಿ ಆದೇಶ ದಿನಾಂಕ:**30-03-2012**
ಕೆಲಸ ಪ್ರಾರಂಭ ದಿನಾಂಕ:**06-06-2013**
ಅವಧಿ **15 ತಿಂಗಳು**
ಕೆಲಸ ಮುಕ್ತಾಯ ದಿನಾಂಕ:**05-02-2015**
ವಿಳಂಬದ ದಿನಗಳು : **5ತಿಂಗಳು**

agreement no:29/2012-13 ದಿನಾಂಕ:01-01-2013 ವಿಚಾರಣೆ ಪತ್ರ ಸಂಖ್ಯೆ:27/2016-17.ದಿನಾಂಕ:18-04-2016ರಲ್ಲಿ ವಿವರ ನೀಡಲು ಸೂಚಿಸಿದ್ದು.ವಿ.ವಿ **ಪತ್ರ ಸಂಖ್ಯೆ:ಕವಿಹಂ.ಹವಿ:2016-17:ದಿನಾಂಕ:25-05-2016ರಲ್ಲಿ ವಿಳಂಬದ 150 ದಿನಗಳಿಗೆ ವಿ.ವಿ.ಯ 02-09-2004ರ** ಕಟ್ಟಡ ಸಲಹಾಸಮಿತಿ ಸಭೆ ಕ್ರಮ ಸಂಖ್ಯೆ:9 ರಲ್ಲಿ ಕಾಮಗಾರಿ ವಿಳಂಬವಾಗಿರುವುದಕ್ಕೆ **ದಿನಕ್ಕೆ 10** ರಂತೆ ದಂಡ ವಿಧಿಸಲು ಸಭೆ ಸೂಚಿಸಿದ ಪ್ರಕಾರ **150*10=1500/-**ಗಳು ಇಎಂಡಿ ಮೊತ್ತದಲ್ಲಿ ಮುರುವಳಿ ಮಾಡಿ ಉಳಿದ ಮೊತ್ತ ಪಾವತಿಸಲಾಗುವುದೆಂದು ಉತ್ತರ ನೀಡಿದ್ದಾರೆ.

ಟೆಂಡರ್ ಪ್ರಕ್ರಿಯೆಯನ್ನು ಲೋಕೋಪಯೋಗಿ ಇಲಾಖೆಯ ಟೆಂಡರ್ ಡಾಕ್ಯುಮೆಂಟನಲ್ಲಿ ನಡೆಸುತ್ತಿರುವುದರಿಂದ ಲಿಕ್ವಿಡಿಟಿ ಡ್ಯಾಮೇಜಸ್ 0.1% ಕಾಟ್ರಾಕ್ಟ್ ಪ್ರೈಜ್ ದಿನಕ್ಕೆ ದಂಡ ವಿಧಿಸಬೇಕಾಗಿದ್ದು ಕಾಲಾವಧಿ ಮುಗಿದನಂತರ ಪಾವತಿಸಿದ ಬಿಲ್ಲುಗಳ ಐದನೇ ಅಂತಿಮ ಬಿಲ್ಲು **ಚೆಕ್ಕು ಸಂಖ್ಯೆ:002952/24-02-2015 ರೂ:4378445/-**ಕ್ಕೆ 0.1 % ರೂ:4378x150ದಿನ ರೂ:656700 ರಲ್ಲಿ 1500/-ಕಳೆದು ರೂ:655200/- ಗುತ್ತಿಗೆದಾರರಿಂದ ವಸೂಲಿ ಮಾಡಿ ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಲು ಸೂಚಿಸಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ:ಇಡಿ:31:ಕೆವಿವಿ:2011: ದಿನಾಂಕ:10-02-2012ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ.

Ugc Commission New Delhi No.ino.87/1/2007(Su-1)March 2012 Extension Upto 31-03-2014 May Be Given For Completion Of Building Where Building Construction Has Started On Or Before 31-03-2012 ಆದರೆ ಸದರಿ ಕಾಮಗಾರಿಯು 06-06-2013ರಂದು ಪ್ರಾರಂಭವಾಗಿದ್ದು ಯು.ಜಿ.ಸಿ ಗೈಡ್‌ಲೈನ್‌ಗೆ ವಿರುದ್ಧವಾಗಿರುತ್ತದೆ.ಸ್ಟೇಟ್ ಟೆಂಡರ್ ಬುಲೆಟಿನ್‌ಗೆ ನೀಡಿರುವುದಿಲ್ಲ.ಕಡತದಲ್ಲಿ ಪತ್ರಿಕಾ ಪ್ರಕಟಣೆ ನೀಡಲು ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಇವರಿಗೆ ಬರೆದ ಪತ್ರ ಪೇಪರ್‌ಗಳಲ್ಲಿ ಪ್ರಕಟಣೆಯಾದ ಪೇಪರ್‌ಗಳ ವಿವರ ಇರುವುದಿಲ್ಲ. ಇ.ಐ.ಆರ್.ಎಲ್.ಅನುಮೋದನೆ ಆಗಿಲ್ಲ.

**ಕಾಮಗಾರಿ ಬಿಲ್ಲು ಪಾವತಿಯಾದ ವಿವರ ಈ ಕೆಳಕಂಡಂತಿವೆ.**

| ಕ್ರ ಸಂ | ವಿವರ | ಚೆಕ್ಕ ಸಂಖ್ಯೆ | ದಿನಾಂಕ | ಮೊತ್ತ ರೂ |
|---|---|---|---|---|
| 1 | ಮೊದಲನೆ ಮತ್ತು ಭಾಗಶ:ಬಿಲ್ಲು | 18173 | 20-05-2013 | 2907680 |
| 2 | ಎರಡನೆ ಮತ್ತು ಭಾಗಶ:ಬಿಲ್ಲು | 022855 | 04-01-2014 | 1583312 |
| 3 | ಮೂರನೆ ಮತ್ತು ಭಾಗಶ:ಬಿಲ್ಲು | 022890 | 07-03-2014 | 2324836 |
| 4 | ನಾಲ್ಕನೆ ಮತ್ತು ಭಾಗಶ:ಬಿಲ್ಲು | 022915 | 08-08-2014 | 2184116 |
| 5 | ಐದನೆ ಮತ್ತು ಅಂತಿಮ ಬಿಲ್ಲು | 002952 | 24-02-2015 | 4378445 |
| | | | ಒಟ್ಟು | **13378389** |

ಮೂರನೆ ಪಾರ್ಟಿ ತಪಾಸಣೆಯನ್ನು ಟಿ.ಎಂ.ಎ.ಇ. ಪಾಲಿಟೆಕ್ನಿಕ್ ಕಾಲೇಜು ಹೊಸಪೇಟೆ ಇವರು ಕಟ್ಟಡವನ್ನು ಪರಿಶೀಲಿಸಿ ದಿನಾಂಕ:19-02-2015ರಂದು ವರದಿ ನೀಡಿದ್ದು ಕಾಮಗಾರಿಯ ಬಗ್ಗೆ ಯಾವ ಆಕ್ಷೇಪಣೆಗಳನ್ನು ತೆಗೆದಿರುವುದಿಲ್ಲ.
ಈ ಕಾಮಗಾರಿಯನ್ನು ನಿರ್ವಹಿಸುವಾಗ ಅಂದಾಜು ಪಟ್ಟಿಯಲ್ಲಿಲ್ಲದ ಎಕ್ಸ್‌ಟ್ರಾ ಐಟಂಗಳನ್ನು ನಿರ್ವಹಿಸಿ ಕಾಮಗಾರಿ ನಿರ್ವಹಿಸಿದ್ದು ರೂ:956593/-ಎಕ್ಸ್‌ಟ್ರಾ ಐಟಂ ಕಾಮಗಾರಿಗೆ ಪಾವತಿಸಿದ್ದು ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ:28:ದಿನಾಂಕ:12-05-2016ರಲ್ಲಿ ಪಿಡಬ್ಲುಜಿ 71ರಲ್ಲಿ ಎಕ್ಸ್‌ಟ್ರಾ ಐಟಂಗಳನ್ನು ನಮೂದಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ವಿವರ ನೀಡಲು ಸೂಚಿಸಿದ್ದು ವಿ.ವಿ.ಕಛೇರಿ ಪತ್ರ ಸಂಖ್ಯೆ:ಕವಿಹಂ:ವಿ.2016-17 ದಿನಾಂಕ:25-05-2016ರಲ್ಲಿ ಕನ್‌ವೆನಷನ್ ಸೆಂಟರ್ ಕಟ್ಟಡದ ಎಕ್ಸ್‌ಟ್ರಾ ಐಟಂಗಳಿಗೆ ಕಟ್ಟಡ ಸಲಹಾ ಸಮಿತಿ ಸಭೆ ದಿನಾಂಕ:01-08-2015ರಲ್ಲಿ ಅನುಮೋದನೆ ಪಡೆಯಲಾಗಿದೆ ಎಂದು ಉತ್ತರ ನೀಡಿದ್ದಾರೆ.ಆದರೆ ಪಿಡಬ್ಲುಜಿ 71ರಲ್ಲಿ ಎಕ್ಸ್‌ಟ್ರಾ ಐಟಂ ನಮೂದಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದ ಬಗ್ಗೆ ಮಾಹಿತಿ ಕಡತದಲ್ಲಿ ಇರುವುದಿಲ್ಲ.ವಿವರಗಳನ್ನು ಅನುಬಂಧ-24(ಎ)ದಲ್ಲಿವಿವರಿಸಿದೆ.ಮೇಲ್ಕಂಡ ನ್ಯೂನ್ಯತೆಗಳಿಗೆ ರೂ:13318389/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ಆಕ್ಷೇಪಣೆ ಮೊತ್ತ 2.5.1ರಲ್ಲಿ ಸೇರಿದೆ

## 2.5.9)ಟೆಂಡರ್ ಕಾಮಗಾರಿ ಬಿಲ್ಲುಗಳಲ್ಲಿ ನಿಗದಿತ ಅವಧಿಗಿಂತ ವಿಳಂಬವಾಗಿ ಕಾಮಗಾರಿ ಪೂರ್ಣ ಗೊಂಡಿರುವುದಕ್ಕೆ ಲಿಕ್ವಿಡಿಟಿ ಡ್ಯಾಮೇಜ್ ಗುತ್ತಿಗೆದಾರರಿಂದ ವಸೂಲಿ ಮಾಡದಿರುವುದು:-

**2014-15&2015-16ನೆ ಸಾಲಿನ ಟೆಂಡರ್** ಕಾಮಗಾರಿ ಬಿಲ್ಲುಗಳನ್ನು ಸಂಬಂದಿಸಿದ ಕಡತದೊಂದಿಗೆ ಪರಿಶೀಲಿಸಿದಾಗ ಈ ಕೆಳಕಂಡ ಕಾಮಗಾರಿಗಳ ಬಿಲ್ಲುಗಳ ಟೆಂಡರ್ ಅವಧಿ ಮುಗಿದ ನಂತರ ಕಾಮಗಾರಿ ಪೂರ್ಣಗೊಂಡಿದ್ದರೂ ಲಿಕ್ವಿಡಿಟಿ ಡ್ಯಾಮೇಜ್‌ನ್ನು ಸಂಬಂದಿಸಿದ ಗುತ್ತಿಗೆದಾರರಿಂದ ವಸೂಲಿ ಮಾಡದಿರುವುದು ತನಿಖೆಯಲ್ಲಿ ಕಂಡುಬಂದಿದೆ. ಇದು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ **ಸೆಕ್ಷನ್-6** ಕಾಂಟ್ರಾಕ್ಟ್ ಡಾಟಾ(vii)ವಿರುದ್ಧವಾಗಿರುತ್ತದೆ.ಸರ್ಕಾರಿ ಆದೇಶ ಸಂಖ್ಯೆ:ಎಫ್.ಡಿ9ಪಿ.ಸಿ.ಎಲ್ **2004(1)**ಬೆಂಗಳೂರು ದಿನಾಂಕ:**06-08-2005ರ ಪ್ರಕಾರ ಸೆಪ್ಟೆಂಬರ್1.2005ರಿಂದ ಕಾಮಗಾರಿ** ಕೈಗೊಳ್ಳುವ ಪ್ರತಿಯೊಂದು ಇಲಾಖೆ ಯು standard tender document ಅನ್ನು ಉಪಯೋಗಿಸಲು ನಿರ್ದೇಶಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದಿಂದ ಕಾಮಗಾರಿ ನಿರ್ವಹಿಸುವಾಗ standard tender document ನಲ್ಲಿರುವ ಷರತ್ತುಗಳನ್ನು ಜಾರಿಗೊಳಿಸಿರುವುದಿಲ್ಲ.ಕಾಮಗಾರಿ ನಿರ್ವಹಿಸು ವಾಗ ಗುತ್ತಿಗೆದಾರರು ಕಾಮಗಾರಿ ವಿಳಂಬವಾದಾಗ ಅವಧಿ ವಿಸ್ತರಣೆಗೆ ಕೋರಿಕೆ ಪತ್ರ ನೀಡಿರುವುದಿಲ್ಲ. ವಿಳಂಬದ ಪ್ರಕ್ರಿಯೆಗೆ ಸಂಬಂದಪಟ್ಟಂತೆ ಗುತ್ತಿಗೆದಾರರಿಗೆ ನೋಟೀಸ್ ನೀಡಿರುವುದಿಲ್ಲ. ಹಾಗೂ ಕಟ್ಟಡ ಸಲಹಾಸಮಿತಿ ಸಭೆಯಲ್ಲಿ ನಡಾವಳಿ ಯಲ್ಲಿ ವಿಳಂಬದ ಅವಧಿಯ ಬಗ್ಗೆಯಾಗಲಿ ಅಥವಾ ಬಿಲ್ಲಿನ ಅಂತಿಮ ಪಾವತಿಗಾಗಿ ಪ್ರಸ್ತಾಪವಿರುವುದಿಲ್ಲ.ದಂಡ ವಿಧಿಸದೇ ಪಾವತಿಸಿರುವುದರಿಂದ ಗುತ್ತಿಗೆದಾರರಿಗೆ ಉದ್ದೇಶಪೂರ್ವಕಾವಾಗಿ ಆರ್ಥಿಕ ಲಾಭವಾಗುವಂತೆ ಕಾರ್ಯ ನಿರ್ವಹಿಸಿರುವುದು ಕಂಡು ಬಂದಿರುತ್ತದೆ. ಈ ಲೋಪದೋಷಕ್ಕೆ ಟೆಂಡರ್ ಪ್ರಕ್ರಿಯ ನಿರ್ವಹಿಸಿದ ಅಧಿಕಾರಿಗಳೆಲ್ಲರು ಜವಾಬ್ದಾರರಾಗಿರುತ್ತಾರೆ.

Contract data liquidity damages ಎಂದು ಶೇ.0.1 of contract prise per day and for the maximum amount for liquidated damages for the whole of the work is 10% of the final contract price liquidated damages ಸದರಿ ಕಾಮಗಾರಿಯ ವಿಳಂಜಿತ ಅವಧಿಗೆ ಕಂಡಿಕೆ ಸಂಖ್ಯೆ:2.11ರಲ್ಲಿ ಲೆಕ್ಕಚಾರ ಮಾಡಿದೆ.ಈ **ಕೆಳಕಂಡ ಕಾಮಗಾರಿಗಳ ವಿಳಂಬಿತ ಅವಧಿಯ ಲಿಕ್ವಿಡಿಟಿ ಡ್ಯಾಮೇಜ್ ಮೊತ್ತ:**

| ಕ್ರ ಸಂ | ವಿವರ | ಮೊತ್ತ ರೂ |
|---|---|---|
| 1 | ಪ.ಜಾತಿ.ಪ ವರ್ಗ ವಿದ್ಯಾರ್ಥಿನಿಯರ ವಸತಿ ನಿಲಯದ ಸುತ್ತ ಕಾಂಪೌಂಡ್ ಗೋಡೆ ನಿರ್ಮಾಣ | 225468 |
| 2 | ಹಳೇ ಕ್ಯಾಂಟೀನ್ ನವೀಕರಣ | 308600 |
| 3 | ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕ್ರೀಡಾ ಸಂಕೀರ್ಣ ನಿರ್ಮಾಣ | 814850 |
| 4 | ಕನ್‌ವೆನ್‌ಷನ್ ಸೆಂಟರ್ ಕಟ್ಟಡ ನಿರ್ಮಾಣ | 655200 |
| 5 | ಬೋಧಕರ ವಸತಿಗೃಹಗಳ ಛಾವಣಿ ಯಲಹಂಕ ಟೈಲ್ಸ್ ಹಾಕುವುದು | 149684 |
| 6 | ಗಿರಿಜನ ಮಹಿಳಾ ವಸತಿ ನಿಲಯ ನಿರ್ಮಾಣ | 938650 |
| 7 | ಕನ್‌ವೆನ್‌ಷನ್ ಕಟ್ಟಡಕ್ಕೆ ರಸ್ತೆ ನಿರ್ಮಿಸುವುದು ಮತ್ತು ಕಲ್ಲಿನ ದ್ವಾರಗಳನ್ನು ಕಟ್ಟುವುದು | 108420 |
| 8 | ಅಕ್ಷರ ಗ್ರಂಥಾಲಯ ಟೇರೇಸ್‌ನ ಉತ್ತರ ಗೋಪುರದ ಉಳಿದ ಭಾಗಕ್ಕೆ ಯಲಹಂಕ ಟೈಲ್ಸ್ ಅಳವಡಿಸುವುದು | 13770 |
| | **ಒಟ್ಟು** | **3214642** |
| | **ವಿದ್ಯುತ್ ಕಾಮಗಾರಿ** | |
| 1 | ಗಿರಜನ ವಸತಿ ನಿಲಯ ಕಟ್ಟಡಕ್ಕೆ ವಿದ್ಯುತ್ತೀಕರಣ ಮಾಡುವುದು | 19560 |
| 2 | ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕ್ರೀಡಾ ಸಂಕೀರ್ಣ ಕಟ್ಟಡದ ವಿದ್ಯುತ್ತೀಕರಣ | 49200 |
| 3 | ಕನ್‌ವೆನ್‌ಷನ್ ಸೆಂಟರ್ ಕಟ್ಟಡದ ಹತ್ತಿರ ವಿದ್ಯುತ್ ಪರಿವರ್ತಕವನ್ನು ಅಳವಡಿಸುವುದು | 50000 |
| 4 | ಕನ್‌ವೆನ್‌ಷನ್ ಸೆಂಟರ್ ಕಟ್ಟಡದ ಹತ್ತಿರ ಅಂತರಿಕ ವಿದ್ಯುತ್ತೀಕರಣ ಫಿಕ್ಚರ್ಸ್ ಅಳವಡಿಸುವುದು ಬಾಹ್ಯ ವಿದ್ಯುತ್ ಕಲ್ಪಿಸುವುದು. | 150000 |
| 5 | **ಒಟ್ಟು** | **160558** |
| | **ಸಿವಿಲ್ ಕಾಮಗಾರಿ** | 3214642 |
| | **ವಿದ್ಯುತ್ ಕಾಮಗಾರಿ** | 160558 |
| | **ಒಟ್ಟು ರೂ:** | **3375200** |

ಸಂಬಂದಿಸಿದ ಗುತ್ತಿಗೆದಾರರಿಂದ **ರೂ:3214642+160558=3375200/-**ಗಳನ್ನು ವಸೂಲು ಮಾಡಿ **ವಿ.ವಿ.ನಿಧಿಗೆ** ಜಮಾ ಮಾಡಲು ಸೂಚಿಸಿದೆ.ವಿವರಗಳನ್ನು **ಅನುಬಂಧ-24(ಎ)24(ಬಿ) ರಲ್ಲಿ ವರದಿಗೆ ಲಗತ್ತಿಸಿದೆ.**

ಈ ವಿಷಯದ ಬಗ್ಗೆ **ವಿವರಣೆ ಕೋರಿ ದಿನಾಂಕ 12-05-2016ರಂದು** ವಿಚಾರಣಾ ಪತ್ರ **ಸಂಖ್ಯೆ 27** ನೀಡಲಾಗಿದ್ದು ಈ ವಿಚಾರಣಾ ಪತ್ರಕ್ಕೆ ಪುನರ್ ಪರಿಶೀಲನಾ ಸಮಯದಲ್ಲಿ ಉತ್ತರ ನೀಡಿ ವಿಳಂಬವಾದ ಪ್ರತಿ ದಿನಕ್ಕೆ ರೂ. 10/- ರಂತೆ ಲಿಕ್ವಿಡಿಟಿ ಡ್ಯಾಮೇಜಸನ್ನು ಹಾಕಲಾಗಿದ್ದು ಈ ಮೊತ್ತವನ್ನು ಸದರಿ ಗುತ್ತಿಗೆದಾರನ ಇ.ಎಂ.ಡಿ. ಯಲ್ಲಿ ಮುರುವಳಿ ಮಾಡುವುದಾಗಿ ಹೇಳಿರುತ್ತಾರೆ .ಆದರೆ Standard tender Document ನಲ್ಲಿರುವಂತೆ ವಿಳಂಬವಾದ ಕಾಮಗಾರಿಗೆ ಪ್ರತಿ ದಿನಕ್ಕೆ ಗುತ್ತಿಗೆ ಮೊತ್ತದ ಶೇ 0.1 ಲಿಕ್ವಿಡಿಟಿ ಡ್ಯಾಮೇಜಸ್ (ಗುತ್ತಿಗೆ ಮೊತ್ತ ಗರಿಷ್ಟ ಶೇ 10 ರಷ್ಟ ಮೀರದಂತೆ) ವಸೂಲಿ ಮಾಡಲು ಅವಕಾಶವಿದ್ದು ಈ ಸಂಸ್ಥೆಯವರಿಗೆ ಪ್ರತಿ ವಿಳಂಬದ ದಿನಕ್ಕೆ ರೂ. 10/- ರಂತೆ ವಿಳಂಬ ಮೊತ್ತವನ್ನು ವಸೂಲಿ ಮಾಡುವುದಾಗಿ ಅನುಪಾಲನಾ ವರದಿಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಈ ವಿವರಣೆಯನ್ನು ಒಪ್ಪಲಾಗುವುದಿಲ್ಲ.

## 2.5.10)ಟೆಂಡರ್ ಮೊತ್ತಕ್ಕಿಂತ ಕಡಿಮೆ ಮೊತ್ತಕ್ಕೆ ಟೆಂಡರ್ ಅವಾರ್ಡ್ ಆದ ಕಾಮಗಾರಿಗಳಿಗೆ unbalanced amount ಗುತ್ತಿಗೆದಾರರಿಂದ ಪಡೆಯದಿರುವುದು:-

2014-15&2015-16ನೆ ಸಾಲಿನ ಸಿವಿಲ್ ಟೆಂಡರ್ ಕಾಮಗಾರಿ ಜಿಲ್ಲುಗಳ ಕಡತವನ್ನು ಪರಿಶೀಲಿಸಿದಾಗ ಟೆಂಡರ್ ಮೊತ್ತಕ್ಕಿಂತ ಕಡಿಮೆ ಮೊತ್ತಕ್ಕೆ ಟೆಂಡರ್ ಅವಾರ್ಡ್ ಆದ ಕಾಮಗಾರಿಗಳಿಗೆ Unbalanced Amount ಗುತ್ತಿಗೆದಾರರಿಂದ ಪಡೆಯದಿರುವುದು ಲೆಕ್ಕ ತನಿಖೆಯಲ್ಲಿ ಕಂಡುಬಂದಿದೆ.ವಿವರಗಳನ್ನು **ಅನುಬಂಧ-24(ಎ)&24(ಬಿ)ರಲ್ಲಿ** ಲಗತ್ತಿಸಿದೆ.Standard Tender Document Section-2f Award Of Contract 29.1 ರ ಪ್ರಕಾರ Additional Security For Unbalanced Tenders In Accordance With Clause 25.5 Of Itt And Clause 44 Of The Conditions Of Contract Unbalanced Amount ಕಡ್ಡಾಯವಾಗಿ ಗುತ್ತಿಗೆದಾರರಿಂದ ಡಿ.ಡಿ.ಮೂಲಕ ಪಡೆಯಬೇಕಾಗಿತ್ತು ಈ ಕೆಳಕಂಡ ಕಾಮಗಾರಿಗಳಲ್ಲಿ Unbalanced Amount ಗುತ್ತಿಗೆದಾರರರಿಂದ ಪಡೆದಿಲ್ಲ.

| ಕ್ರ ಸಂ | ಕಾಮಗಾರಿ ಹೆಸರು | unbalanced amount |
|---|---|---|
| 1 | ಪ.ಜಾ.ಪ.ಪಂ ವಿದ್ಯಾರ್ಥಿನಿಯರ ವಸತಿ ನಿಲಯದ ಸುತ್ತ ಕಾಂಪೌಂಡ್ ಗೋಡೆ ನಿರ್ಮಾಣ | 205230 |
| 2 | ಚರಿತ್ರೆ ವಿಭಾಗದ ವಿಸ್ತರಣಾ ಕಟ್ಟಡ ಹಾಗೂ ಬುಡಕಟ್ಟು ಅಧ್ಯಯನ ವಿಭಾಗ ಕಟ್ಟಡ ನಿರ್ಮಿಸುವುದು | 419459 |
| 3 | ಹಳೇ ಕ್ಯಾಂಟೀನ್ ನವೀಕರಣ | 268482 |
| 4 | ಭೋಧಕ ಮತ್ತು ಭೋಧಕೇತರ ವಸತಿ ಗೃಹಗಳಿಗೆ ಪೇಂಟಿಂಗ್ ಮಾಡುವುದು | 531216 |
| 5 | ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಕ್ರೀಡಾ ಸಂಕೀರ್ಣ ಕಟ್ಟಡ ನಿರ್ಮಿಸುವುದು | 613875 |
| 6 | ಗಿರಿಜನ ಮಹಿಳಾ ವಸತಿ ನಿಲಯ ಕಟ್ಟಡ ನಿರ್ಮಿಸುವುದು | 685824 |
| 7 | ಕನ್‌ವೆನ್‌ಷನ್ ಸೆಂಟರ್ ಕಟ್ಟಡ ನಿರ್ಮಿಸುವುದು | 441000 |
| 8 | ಭೋಧಕರ ವಸತಿ ಗೃಹಗಳ ಛಾವಣಿಗೆ ಯಲಹಂಕ ಟೈಲ್ಸ್ ಅಳವಡಿಸುವುದು | 291212 |
| 9 | ಆಡಳಿತ ಸಿಬ್ಬಂದಿ ವಸತಿ ಗೃಹಗಳ ಮುಂದಿನ ಹಾಗೂ ಹಿಂದಿನ ಬಾಗಿಲುಗಳಿಗೆ ಕಬ್ಬಿಣ ಬಾಗಿಲು ಅಳವಡಿಸುವದು | 113537 |
| 10 | ಅಕ್ಷರ ಗ್ರಂಥಾಲಯ ಉತ್ತರ ದಿಕ್ಕಿನ ಗೋಪುರದ ಕಡೆ ಯಲಹಂಕ ಟೈಲ್ಸ್ ಹಾಕುವುದು | 72318 |
| 11 | ದೂರಶಿಕ್ಷಣ ನಿರ್ದೇಶನಾಲಯ ಕಟ್ಟಡ ನಿರ್ಮಿಸುವುದು | 235414 |
| 12 | ಕನ್‌ವೆನ್‌ಷನ್ ಸೆಂಟರ್ ಕಟ್ಟಡ ಇಂಟೀರಿಯರ್ ಫರ್ನಿಷಿಂಗ್ ಕೆಲಸ ನಿರ್ಮಿಸುವುದು | 56314 |
| 13 | ಕನ್‌ವೆನ್‌ಷನ್ ಸೆಂಟರ್ ಕಟ್ಟಡಕ್ಕೆ ರಸ್ತೆ ನಿರ್ಮಿಸುವುದು | 52000 |
| 14 | ಪರಿಶಿಷ್ಟಜಾತಿ ವಿದ್ಯಾರ್ಥಿಗಳ ವಸತಿ ನಿಲಯದ ಮೊದಲ ಮಹಡಿ ಕಟ್ಟುವುದು | 254690 |
| 15 | ಶ್ರೀಶೈಲ ಅತಿಥಿ ಗೃಹ ಪಕ್ಕದಲ್ಲಿ ನೀರಿನ ಟ್ಯಾಂಕ್ ನಿರ್ಮಿಸಿ ಪೈಪ್ ಲೈನ್ ಮಾಡುವುದು | 1103099 |
| | **ಒಟ್ಟು** | **5343670** |
| | **ವಿದ್ಯುತ್ ಕಾಮಗಾರಿ** | |
| 1 | ಗಿರಿಜನ ವಸತಿ ಕಟ್ಟಡಕ್ಕೆ ವಿದ್ಯುತ್ತೀಕರಣ | 7670 |
| 2 | ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕ್ರೀಡಾ ಸಂಕೀರ್ಣ ಕಟ್ಟಡದ ವಿದ್ಯುತ್ತೀಕರಣ ಬಾಹ್ಯ ವಿದ್ಯುತ್ ಸಂಪರ್ಕ ಫಿಕ್ಚರ್ಸ್ ಅಳವಡಿಸುವುದು | 3788 |
| 3 | ಕನ್‌ವೆನ್‌ಷನ್ ಸೆಂಟರ್ ಕಟ್ಟಡದ ಹತ್ತಿರ ವಿದ್ಯುತ್ ಸಂಪರ್ಕವನ್ನು ಅಳವಡಿಸುವ ಕಾಮಗಾರಿ | 8850 |
| 4 | ಕನ್‌ವೆನ್‌ಷನ್ ಸೆಂಟರ್ ಕಟ್ಟಡದ ಹತ್ತಿರ ಆಂತರಿಕ ವಿದ್ಯುತ್ತೀಕರಣ ಫಿಕ್ಚರ್ಸ್ ಅಳವಡಿಸುವುದು ಬಾಹ್ಯ ವಿದ್ಯುತ್ ಕಲ್ಪಿಸುವುದು | 140250 |
| | **ಒಟ್ಟು** | **160558** |
| | **ಘೋಷ್ವಾರೆ** | |
| 1 | ಸಿವಿಲ್ ಕಾಮಗಾರಿ | 5343670 |
| 2 | ವಿದ್ಯುತ್ ಕಾಮಗಾರಿ | 160558 |
| | **ಒಟ್ಟು** | **5504228** |

**ರೂ: 5343670/-**ಸಂಬಂದಿಸಿದ ಗುತ್ತಿಗೆದಾರರಿಂದ ಪಡೆದಿದ್ದರೆ ಈ ಗುತ್ತಿಗೆದಾರರು ಮೇಲಿನ ಕಾಮಗಾರಿಗಳನ್ನು ಕಳಪೆಯಾಗಿ ನಿರ್ವಹಿಸಿದ್ದರೆ ಈ ಮೇಲಿನ ಮೊತ್ತದಿಂದ ಆ ಕಾಮಗಾರಿಗಳನ್ನು ಸರಿಪಡಿಸಬಹುದಾಗಿತ್ತು. ಗುತ್ತಿಗೆದಾರರಿಂದ ಅನ್‌ಬ್ಯಾಲೆನ್ಸಡ್ ಮೊತ್ತಕ್ಕೆ ಸೆಕ್ಯೂರಿಟಿ ಪಡೆಯದಿರುವುದರಿಂದ ವಿಶ್ವವಿದ್ಯಾಲಯವು ಇದರಿಂದ ಆಗುವ ಅನುಕೂಲದಿಂದ ತಪ್ಪಿಸಿಕೊಂಡಂತಾಗಿದೆ. ಆದ್ದರಿಂದ ಇನ್ನುಮುಂದೆ ಟೆಂಡರ್ ನಿಯಮಾನುಸಾರ ಅನ್‌ಬ್ಯಾಲೆನ್ಸಡ್ ಮೊತ್ತಕ್ಕೆ ಸೆಕ್ಯೂರಿಟಿ ಡೆಪಾಜಿಟ ಪಡೆಯಲು ಸೂಚಿಸಿದೆ. ವಿವರಗಳನ್ನು **ಅನುಬಂಧ-24(ಎ)ಮತ್ತು (ಬಿ)ರಲ್ಲಿ** ನೀಡಲಾಗಿದೆ.

## 2.5.11)ಟೆಂಡರ್ ಕಾಮಗಾರಿ ಬಿಲ್ಲುಗಳಲ್ಲಿ ಅವಾರ್ಡ್ ಆದಗುತ್ತಿಗೆದಾರರಿಂದ ಶೇ.5 ರಷ್ಟು ಫರ್‌ಫಾರ್ ಮೇನ್ಸ್ ಸೆಕ್ಯುರಿಟಿ ಡಿಪಾಸಿಟ್ ಪಡೆಯದಿರುವುದು ಹಾಗೂ ಕಡಿಮೆ ಪಡೆದಿರುವುದು:-

2014-15&2015-16ನೇ ಸಾಲಿನ ವಿವಿಧ ಟೆಂಡರ್ ಕಾಮಗಾರಿಗಳ ಬಿಲ್ಲುಗಳನ್ನು ಪರಿಶೀಲಿಸಿದಾಗ ಅವಾರ್ಡ್ ಆದ ಗುತ್ತಿಗೆ ದಾರ ರಿಂದ ಶೇ.5ರಷ್ಟು ಫರ್‌ಫಾರ್‌ಮೆನ್ಸ್ ಸೆಕ್ಯುರಿಟಿ ಡಿಪಾಸಿಟ್ ಪಡೆಯದಿರುವುದು ಹಾಗೂ ಕಡಿಮೆ ಪಡೆದಿರುವುದು ಲೆಕ್ಕ ತನಿಖೆಯಲ್ಲಿ ಕಂಡು ಬಂದಿದೆ. ವಿವರ ಅನುಬಂದ-24(ಎ)&24(ಬಿ)ರಲ್ಲಿ ಲಗತ್ತಿಸಿದೆ. Standard Tender Document Section-2f Award Of Contract Clause 29.1ರ ಪ್ರಕಾರ ಶೇ.5 ರಷ್ಟು ಫರ್‌ಫಾರ್‌ಮೆನ್ಸ್ ಸೆಕ್ಯುರಿಟಿ ಡಿಪಾಸಿಟ್ ಗುತ್ತಿಗೆದಾರರಿಂದ ಪಡೆಯಬೇಕಾಗಿರುತ್ತದೆ.ಆದರೆ ಈ ಕೆಳಕಂಡ ಕಾಮಗಾರಿ ಬಿಲ್ಲುಗಳಲ್ಲಿನ ಗುತ್ತಿಗೆದಾರರಿಂದ ಶೇ.5 ರಷ್ಟು ಫರ್‌ಫಾರ್‌ಮೆನ್ಸ್ ಸೆಕ್ಯುರಿಟಿ ಡಿಪಾಸಿಟ್ ಪಡೆಯದಿರುವುದು ಹಾಗೂ ಕಡಿಮೆ ಪಡೆದಿದ್ದಾರೆ.

### ಸಿವಿಲ್ ಕಾಮಗಾರಿ

| ಕ್ರ ಸಂ | ಕಾಮಗಾರಿ ಹೆಸರು | ಶೇ.5ಫರ್‌ಫಾರ್‌ಮೆನ್ಸ್‌ಸೆಕ್ಯುರಿಟಿ ಡಿಪಾಸಿಟ್ ಪಡೆಯದಿರುವುದು ಹಾಗೂ ಕಡಿಮೆ ಪಡೆದಿದ್ದಾರೆ |
|---|---|---|
| 1 | ಚರಿತ್ರೆ ವಿಭಾಗದ ವಿಸ್ತರಣಾ ಕಟ್ಟಡ ಹಾಗೂ ಬುಡಕಟ್ಟು ಅಧ್ಯಯನ ವಿಭಾಗ ಕಟ್ಟಡ ನಿರ್ಮಿಸುವುದು 1189650 118500 | 4650 |
| 2 | ಹಳೇ ಕ್ಯಾಂಟೀನ್ ನವೀಕರಣ 91610 76800 | 14810 |
| 3 | ಬೋಧಕ ಮತ್ತು ಬೋಧಕೇತರ ವಸತಿ ಗೃಹಗಳಿಗೆ ಪೇಂಟಿಂಗ್ ಮಾಡುವುದು 124000 97500 | 26500 |
| 4 | ಗಿರಿಜನ ಮಹಿಳಾ ವಸತಿ ನಿಲಯ ಕಟ್ಟಡ ನಿರ್ಮಾಣ 471000 370000 | 101000 |
| 5 | ಭೋಧಕರ ವಸತಿ ಗೃಹಗಳ ಛಾವಣಿಗೆ ಯಲಹಂಕ ಟೈಲ್ಸ್ ಅಳವಡಿಸುವುದು | 87241 |
| 6 | ಆಡಳಿತ ಸಿಬ್ಬಂದಿ ವಸತಿ ಗೃಹಗಳ ಮುಂದಿನ ಹಾಗೂ ಹಿಂದಿನ ಬಾಗಿಲುಗಳಿಗೆ ಕಬ್ಬಿಣದ ಬಾಗಿಲು ಅಳವಡಿಸುವುದು 40290 20500 | 19790 |
| 7 | ಅಕ್ಷರ ಗ್ರಂಥಾಲಯ ಉತ್ತರ ದಿಕ್ಕಿನ ಗೋಪುರದ ಕಡೆ ಯಲಹಂಕ ಟೈಲ್ಸ್ ಹಾಕುವುದು 26626 115000 | 15126 |
| 8 | ದೂರ ಶಿಕ್ಷಣ ನಿದೇಶನಾಲಯದ ಕಟ್ಟಡ ನಿರ್ಮಿಸುವುದು 417900 400000 | 17900 |
| 9 | ಕನ್‌ವೆನ್‌ಷನ್ ಸೆಂಟರ್ ಕಟ್ಟಡದ ಇಂಟೀರಿಯರ್ ಫರ್ನಿಷಿಂಗ್ ಕೆಲಸ ನಿರ್ಮಿಸುವುದು | 835295 |
| 10 | ಶ್ರೀಶೈಲ ಅತಿಥಿ ಗೃಹ ಪಕ್ಕದಲ್ಲಿ ನೀರಿನ ಟ್ಯಾಂಕ್ ನಿರ್ಮಿಸಿ ಪೈಪ್ ಲೈನ್ ಮಾಡುವುದು 198900 98900 | 100000 |
| | ಒಟ್ಟು | **1222312** |

| ಕ್ರ ಸಂ | ವಿದ್ಯುತ್ ಕಾಮಗಾರಿ ಹೆಸರು | ಶೇ.5 ರಷ್ಟು ಫರ್‌ಫಾರ್ ಮೆನ್ಸ್ |
|---|---|---|
| 1 | ಗಿರಿಜನ ವಸತಿ ನಿಲಯ ಕಟ್ಟಡಕ್ಕೆ ವಿದ್ಯುತ್ತೀಕರಣ | 25000 |
| 2 | ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕ್ರೀಡಾ ಸಂಕೀರ್ಣ ಕಟ್ಟಡದ ವಿದ್ಯುತ್ತೀಕರಣ | 24600 |
| 3 | ಕನ್‌ವೆನ್‌ಷನ್ ಸೆಂಟರ್ ಕಟ್ಟಡದ ಹತ್ತಿರ ವಿದ್ಯುತ್ ಪರಿವರ್ತಕ ಅಳವಡಿಸುವುದು | 25000 |
| 4 | ಕನ್‌ವೆನ್‌ಷನ್ ಸೆಂಟರ್ ಕಟ್ಟಡದ ಹತ್ತಿರ ಆಂತರಿಕ ವಿದ್ಯುತ್ತೀಕರಣ | 75000 |
| | ಒಟ್ಟು | **149600** |
| 1 | ಸಿವಿಲ್ ಕಾಮಗಾರಿ | 222312 |
| 2 | ವಿದ್ಯುತ್ ಕಾಮಗಾರಿ | 149600 |
| | ಒಟ್ಟು | **1371912** |

ರೂ:**1371912**/-ನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲಿ ಮಾಡಿ ವಿ.ವಿ.ನಿಧಿಗೆ ಜಮಾ ಮಾಡಲು ಸೂಚಿಸಿದೆ.ವಿವರಗಳನ್ನು ಅನುಬಂಧ-24(ಎ)ಮತ್ತು(ಬಿ)ರಲ್ಲಿ ನೀಡಲಾಗಿದೆ.

## 2.5.12)ಕಾಮಗಾರಿ ಬಿಲ್ಲುಗಳಲ್ಲಿ ರಾಜಧನವನ್ನು ಹಳೇದರದಲ್ಲಿ ಕಡಿತ ಗೊಳಿಸಿರುವುದು:-

ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿಯ 2014-15&2015-16 ನೇ ಸಾಲಿನ ಸಿವಿಲ್ ಕಾಮಗಾರಿಗಳನ್ನು ಪರಿಶೀಲಿಸಿದಾಗ ರಾಜಧನ ಹಳೇದರದಲ್ಲಿ ಕಡಿತಗೊಳಿಸಿರುವುದು ಲೆಕ್ಕ ತನಿಖೆಯಲ್ಲಿ ಕಂಡು ಬಂದಿದೆ. ನಿರ್ದೇಶಕರ ಕಛೇರಿ ಗಣಿ ಭೂ ವಿಜ್ಞಾನ ಇಲಾಖೆ ಬೆಂಗಳೂರು ಇವರ ಕಛೇರಿ ಸುತ್ತೋಲೆ ಸಂಖ್ಯೆ:ಗಭೂ:ಇ:ಡಿಸಿಬ:ಕಗಗು:ರಾಪ ಕೋ: 2013-14 ದಿನಾಂಕ:13-03-2014ರಲ್ಲಿ 01-03-2014ರಿಂದ ಜಾರಿಗೆ ಬರುವಂತೆ ಉಪ ಖನಿಜಗಳ ಮೇಲಿನ ರಾಜಧನ ಮೊತ್ತವನ್ನು ಪರಿಷ್ಕರಿಸಲಾಗಿದೆ. ಈ ಬಗ್ಗೆ ಲೆಕ್ಕ ತನಿಖಾ **ವಿಚಾರಣೆ ಪತ್ರ ಸಂಖ್ಯೆ:30.2016.17:ದಿನಾಂಕ:12-05-2016**ರಲ್ಲಿ ರಾಜಧನದ ದರಗಳನ್ನು ಪರಿಷ್ಕೃತ ದರದಲ್ಲಿ ಕಡಿತಗೊಳಿಸಿ ಭೂ ವಿಜ್ಞಾನ ಇಲಾಖೆಗೆ ಪಾವತಿಸದಿರುವ ಬಗ್ಗೆ ಪೂರ್ಣ ವರದಿ ಲೆಕ್ಕ ತನಿಖೆಗೆ ನೀಡಲು ಸೂಚಿಸಿದ್ದು. ಪತ್ರ ಸಂಖ್ಯೆ:ಕವಿಹಂ:ಹವಿ:2016-17:ದಿನಾಂಕ:25-05-2016ರಲ್ಲಿ ಈಗ ನಡೆಯುತ್ತಿರುವ ಕಾಮಗಾರಿಗಳಲ್ಲಿ ಪರಿಷ್ಕೃತ ರಾಜಧನವನ್ನು ಮುರುವಳಿ ಮಾಡಲಾಗುತ್ತಿದೆ.ಕನ್ನಡ ವಿಶ್ವವಿದ್ಯಾಲಯಕ್ಕೆ ಸುತ್ತೋಲೆ ಬಂದಿರುವುದಿಲ್ಲ ಆದ್ದರಿಂದ ಕಾಮಗಾರಿ ಉಪಖನಿಜಗಳ ರಾಯಲ್ಟಿಯನ್ನು ಹಳೇ ದರದಲ್ಲಿ ಕಡಿತಗೊಳಿಸಲಾಗಿದೆಯೆಂದು ತಿಳಿಸಿದ್ದಾರೆ. ಈ ಉತ್ತರ ಸಮರ್ಪಕವಾಗಿರುವುದಿಲ್ಲ.ಈ ಬಗ್ಗೆ ಸಂಬಂಧಪಟ್ಟ ಸಹಾಯಕ ಅಭಿಯಂತರರನ್ನು ಮೌಖಿಕವಾಗಿ ವಿಚಾರಿಸಲಾಗಿ ಸಂಬಂಧಪಟ್ಟ ಅಳತೆಪುಸ್ತಕಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿಲ್ಲ, ಇದರಿಂದ ಹೊಸ ದರ ಮತ್ತು ಹಳೇದರದ ವ್ಯತ್ಯಾಸ ಲೆಕ್ಕಚಾರ ಮಾಡಿ ವಸೂಲಿಸಲು ಸೂಚಿಸಲು ಲೆಕ್ಕ ತನಿಖೆಯಲ್ಲಿ ಸಾಧ್ಯವಾಗಿಲ್ಲ.2014-15ಮತ್ತು2015-16ನೇ ಸಾಲಿನಲ್ಲಿ ಕಾಮಗಾರಿ ಬಿಲ್ಲುಗಳಲ್ಲಿ ಕಡಿತಗೊಳಿಸಿ ಭೂವಿಜ್ಞಾನ ಇಲಾಖೆ ಬಳ್ಳಾರಿಗೆ ಕಳುಹಿಸಿರುವ ಮೊತ್ತ ಈ ಕೆಳಕಂಡಂತಿವೆ.

| ವಿವರ | ರೂ |
|---|---|
| 2014-15 | 18057593 |
| 2015-16 | 28402112 |
| **ಒಟ್ಟು** | **46459705** |

ವಿವರಗಳನ್ನು ಅನುಬಂಧ-25(ಎ)-25(ಬಿ)ರಲ್ಲಿ ಲಗತ್ತಿಸಿದೆ. ಪರಿಷ್ಕೃತ ದರ 01-03-2014ರಿಂದ ಜಾರಿಗೆ ಬಂದಿರುವುದರಿಂದ 2014-15 ಹಾಗೂ 2015-16ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಸಂಬಂದಿಸಿದಂತೆ ಪರಿಷ್ಕೃತ ಧರದಲ್ಲಿ ಮುರುವಳಿ ಮಾಡಬೇಕಾಗಿರುವ ರಾಜಧನದ ಮೊತ್ತವನ್ನು ಲೆಕ್ಕಹಾಕಿ ಲೆಕ್ಕಪರಿಶೋಧನೆಗೆ ಅನುಸರಣೆ ಸಲ್ಲಿಸಲು ಸೂಚಿಸಿದೆ. ಆದ್ದರಿಂದ ಈ ಸಂಪೂರ್ಣ ವಿವರವನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸುವವರೆಗೆ 2014-15ಹಾಗೂ 2015-16 ನೇ ಸಾಲಿನಲ್ಲಿ ಇಲಾಖೆಗೆ ಪಾವತಿಸಿರುವ **ರೂ. 46459705/-**ನ್ನು ಆಕ್ಷೇಪಿಸಲಾಗಿದೆ.

## 2.5.13)ಗುತ್ತಿಗೆದಾರರು ಟೆಂಡರ್ ಕಾಮಗಾರಿಗೆ ಬ್ಯಾಂಕ್ ಗ್ಯಾರಂಟಿ ನೀಡಿದ್ದು ಇಂಟ್ರಸ್ಟ್ ಬಿಯರಿಂಗ್ ಸೆಕ್ಯುರಿಟೀಸ್‌ನ್ನು ಪಿಡಬ್ಲುಜಿ 3ರಲ್ಲಿ ನಿರ್ವಹಿಸದಿರುವುದು:-

**ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿಯ 2014-15&2015-16**ನೇ ಸಾಲಿನಲ್ಲಿ ಟೆಂಡರ್ ಗುತ್ತಿಗೆದಾರರು ವಿವಿಧ ಟೆಂಡರ್ ಕಾಮಗಾರಿಗಳಿಗೆ 5% ಫರ್‌ಫಾರ್‌ಮೇನ್ಸ್ ಸೆಕ್ಯುರಿಟಿ ಡಿಪಾಸಿಟನ್ನು ಡಿ.ಡಿ.ಮೂಲಕ ಬ್ಯಾಂಕ್ ಗ್ಯಾರಂಟಿ ಮೂಲಕ ನೀಡಿದ್ದು ಇದನ್ನು ಸಂಬಂದಿಸಿದ ತಾಂತ್ರಿಕ ವಿಭಾಗದವರು ಕಾಮಗಾರಿ ಕಡತದಲ್ಲಿ ಇಟ್ಟಿರುತ್ತಾರೆ. ಸದರಿ ಸೆಕ್ಯುರಿಟಿಗಳನ್ನು ಟೆಂಡರ್ ಪ್ರಕ್ರಿಯ ಮುಗಿದು ಕಾಮಗಾರಿ ಆದೇಶ ನೀಡಿದ ನಂತರ ಹಣಕಾಸು ವಿಭಾಗಕ್ಕೆ **ಪಿಡಬ್ಲುಜಿ.3 ರಿಜಿಸ್ಟರ್‌**ನಲ್ಲಿ ನಿರ್ವಹಿಸಿ ಮುಂದಿನ ಪತ್ರ ವ್ಯವಹರಿಸಲು ನೀಡಬೇಕಾಗುತ್ತಾದೆ.ಕೆಪಿಡಬ್ಲುಡಿ ಕೋಡ್ ವಾಲ್ಯುಂ-1 ಪ್ಯಾರಾ ಗ್ರಾಫ್ 403ರ ಪ್ರಕಾರ ಎಲ್ಲಾ ಫರ್‌ಫಾರ್‌ಮೆನ್ಸ್ ಸೆಕ್ಯುರಿಟಿಗಳನ್ನು ಪಿಡಬ್ಲುಜಿ-3 ರಿಜಿಸ್ಟರ್‌ನಲ್ಲಿ ನಿರ್ವಹಿಸಿ ಹಣಕಾಸು ಅಧಿಕಾರಿಗಳು ಭದ್ರತಾ ಕೊಠಡಿಯಲ್ಲಿ ಸದರಿ 5% ಫರ್‌ಫಾರ್‌ಮೆನ್ಸ್ ಸೆಕ್ಯುರಿಟಿಗಳನ್ನು ಗುತ್ತಿಗೆದಾರರ ಕಾಮಗಾರಿ ಮುಗಿದು ಅಂತಿಮ ಬಿಲ್ಲು ಪಾವತಿಯಾದ ನಂತರ ಅವರ ನಿರ್ವಹಣಾ ಅವಧಿ ಮುಗಿದ ನಂತರ 5% ಫರ್‌ಫಾರ್‌ಮೇನ್ಸ್ ಸೆಕ್ಯುರಿಟಿ ಡಿಪಾಸಿಟಗಳನ್ನು ಸಂಬಂದಿಸಿದ ಗುತ್ತಿಗೆದಾರರಿಗೆ ವಾಪಸ್ಸು ನೀಡಬೇಕು. ಈ ಪ್ರಕ್ರಿಯೆಯನ್ನು ಹಣಕಾಸು ಅಧಿಕಾರಿಗಳು ವೈಯಕ್ತಿಕ ಗಮನಹರಿಸಿ ನಿರ್ವಹಿಸಬೇಕು. ಸದರಿ ರಿಜಿಸ್ಟರ್‌ನ್ನು ನಿರ್ವಹಿಸದೇ ಇರುವುದರಿಂದ ಬ್ಯಾಂಕ್ ಗ್ಯಾರಂಟಿ ಮುಕ್ತಾಯಗೊಂಡಲ್ಲಿ ಮತ್ತು ಮರುನವೀಕರಣ ಮಾಡದೇ ಇದ್ದಲ್ಲಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹಾನಿ ಉಂಟಾಗಬಹುದಾಗಿದ್ದು. ಈ ಹಾನಿ ತಪ್ಪಿಸಲು ಸದರಿ ರಿಜಿಸ್ಟರ್ ನಿರ್ವಹಿಸುವುದು ವಿಶ್ವವಿದ್ಯಾಲಯದ ಕರ್ತವ್ಯವಾಗಿರುತ್ತದೆ.

## 2.5.14)ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿಯ ವಿದ್ಯುತ್ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇರೆಗೆ ಕಾಮಗಾರಿಗಳನ್ನು ನಿರ್ವಹಿಸಿರುವುದು:-

ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ 2014-15&2015-16ನೇ ಸಾಲಿನಲ್ಲಿ ವಿಶ್ವವಿದ್ಯಾಲಯ ವಿದ್ಯುತ್ ಕಾಮಗಾರಿಗಳನ್ನು ಅಂದಾಜು ವೆಚ್ಚ ರೂ:5.00ಲಕ್ಷದೊಳಗಿನ ಮೊತ್ತಕ್ಕೆ ಡಿ.ಎಸ್.ಆರ್.ದರದ ಮೇರೆಗೆ ತುಂಡು ಗುತ್ತಿಗೆ ಆಧಾರದಲ್ಲಿ ಕಾಮಗಾರಿಗಳನ್ನು ನಿರ್ವಹಿಸಿರುವುದು ತನಿಖೆಯಲ್ಲಿ ಕಂಡು ಬಂದಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಕಾಸ .ಸೌಧ ಬೆಂಗಳೂರು ಇವರ ಕಛೇರಿ ಸುತ್ತೋಲೆ ಸಂಖ್ಯೆ:ಲೋ.ಇ:178 ಡಿ.ಎಫ್.ಎ:2016:ದಿನಾಂಕ:25-06-2016ರಲ್ಲಿ ಸರ್ಕಾರದ ಹಿಂದಿನ ಸುತ್ತೋಲೆ ಸಂಖ್ಯೆ: ಲೋ.ಇ:112:ಸಿ.ಆರ್.ಎಂ.2012:ದಿನಾಂಕ:04-07-2012ರಲ್ಲಿ ಹೊರಡಿಸಿರುವುದನ್ನು ಮುಂದುವರೆಸಿ ನಿರ್ವಹಣೆ ಕಾಮಗಾರಿಗಳನ್ನು ಸಹ ಉಪ ವಿಭಾಗದ ವ್ಯಾಪ್ತಿಯಲ್ಲಿ ರಸ್ತೆ ಉದ್ದವನ್ನು ಒಳಗೊಂಡಂತೆ ಪ್ಯಾಕೇಜ್ ಮಾದರಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿ ಅರ್ಹಬಿಡ್ಡರ್/ಟೆಂಡರುದಾರು ಭಾಗವಹಿಸಲು ಅವಕಾಶ ಕಲ್ಪಿಸಿ ಅವಧಿಯೊಳಗೆ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸುತ್ತೋಲೆ ಸಂಖ್ಯೆ:ಲೋ.ಇ:07:ಐ.ಎಫ್ಎ:2013:ದಿನಾಂಕ:16-01-2013ರಲ್ಲಿ ಪುನ:ನಿರ್ದೇಶನ ನೀಡಲಾಗಿದೆ. ಲೋಕೋಪಯೋಗಿ ಇಲಾಖೆ ಸಂಹಿತೆಯ ಅನುಚ್ಛೇದ 85ರ ಉಪ ಬಂದ(6)ರಲ್ಲಿ ತಿಳಿಸಿರುವಂತೆ ಹಾಗೂ ಈ ಗಾಗಲೇ ಸರ್ಕಾರದಿಂದ ಹೊರಡಿಸಲಾದ ಸುತ್ತೋಲೆ ಮಾರ್ಗಸೂಚಿಯಂತೆ ಇನ್ನು ಮುಂದೆ ತುಂಡು ಗುತ್ತಿಗೆ ಮೂಲಕ ಕಾಮಗಾರಿಗಳನ್ನು ನಿರ್ವಹಿಸುವುದನ್ನು ನಿರ್ಬಂಧಿಸತಕ್ಕದ್ದು. ನಿಮಯ ಬಾಹಿರವಾಗಿ ತುಂಡು ಗುತ್ತಿಗೆ ಆಧಾರದ ಮೇಲೆ ಕಾಮಗಾರಿ ನಿರ್ವಹಣೆಗಾಗಿ ಆದೇಶ ನೀಡುವ ಅಧಿಕಾರಿ/ಇಂಜಿನಿಯರ್‌ರವರನ್ನೇ ಈ ಬಗ್ಗೆ ಹೊಣೆಗಾರರನ್ನಾಗಿಸಿ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು 1957ರನ್ವಯ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದೆಂದು ಸ್ಪಷ್ಟವಾಗಿ ತಿಳಿಸಿದ್ದು ಲೆಕ್ಕ ತನಿಖಾ ವಿಚಾರಣೆ ಪತ್ರ ಸಂಖ್ಯೆ:25ದಿನಾಂಕ:11-05-2016 ಈ ಬಗ್ಗೆ ಪೂರ್ಣಮಾಹಿತಿ ನೀಡಲು ಸೂಚಿಸಿದ್ದು ಉತ್ತರವಾಗಿ ಪತ್ರ ಸಂಖ್ಯೆ:ಕವಿಹಂ:ಹವಿ:2016-17.ದಿನಾಂಕ:04-07-2016ರಲ್ಲಿ ಕಟ್ಟಡ ಸಲಹಾ ಸಮಿತಿಸಭೆ ದಿನಾಂಕ:14-10-2014ರ ಕ್ರಮ ಸಂಖ್ಯೆ:7ರಲ್ಲಿ ತುರ್ತು ಸಂದರ್ಭದಲ್ಲಿ ಪಿಡಿಬ್ಲುಡಿ ಇಲಾಖೆಯಲ್ಲಿ 5.00ಲಕ್ಷವರೆಗಿನ ಕಾಮಗಾರಿಯನ್ನು ತುಂಡು ಗುತ್ತಿಗೆ ಆಧಾರದಲ್ಲಿ ಕೈಗೊಳ್ಳಲು ಸಮಿತಿಯು ಅನುಮೊದನೆ ನೀಡಿರುತ್ತದೆ.03-11-2014ರಂದು ಕಾರ್ಯ ಕಾರಿ ಸಮಿತಿ 168ನೇ ಸಭೆಯಲ್ಲಿ ಅನುಮೊದನೆ ನೀಡಲಾಗಿದೆ. ಸಮಿತಿಯ ತೀರ್ಮಾನದಂತೆ ತುರ್ತು ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲಾಗಿದೆಯೆಂದು ಉತ್ತರ ನೀಡಿದ್ದಾರೆ. ತುಂಡು ಗುತ್ತಿಗೆ ಕಾಮಗಾರಿಗಳನ್ನು ನಿರ್ವಹಿಸಬಾರದೆಂದು ಸರ್ಕಾರದ ಸ್ಪಷ್ಟ ಆದೇಶ ಇದ್ದರೂ ಸರ್ಕಾರದ ಆದೇಶ ಉಲ್ಲಂಘಿಸಿದಕ್ಕೆ ಕಾರ್ಯಕಾರಿ ಸಮಿತಿ ಸದಸ್ಯರು ಕಟ್ಟಡ ಸಲಹಾ ಸಮಿತಿ ಸದಸ್ಯರು ತಾಂತ್ರಿಕ ವಿಭಾಗದ ಎ.ಇ.ಇ, .ಜೆ.ಇ.,ಹಣಕಾಸು ಅಧಿಕಾರಿಗಳು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಈ ವಿಷಯದ ಬಗ್ಗೆ ಆಡಳಿತಾತ್ಮಕ ವಿಚಾರಣೆ ನಡೆಸಿ ತಪ್ಪಿತಸ್ಥ ವಿರುದ್ಧ ಸೂಕ್ತ ಕಠಿಣ ಕ್ರಮ ಕೈಗೊಂಡು ಲೆಕ್ಕ ತನಿಖೆಗೆ ವರದಿ ಮಾಡಲು ಸೂಚಿಸಿದೆ.ಅಲ್ಲಿಯವರೆಗೆ **ರೂ : 1039233/-**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ವಿವರ ಈ ಕೆಳಕಂಡಂತಿದೆ.

| ಕ್ರ ಸಂ | ಕಾಮಗಾರಿಯ ಹೆಸರು | ಚೆಕ್ಕು ಸಂಖ್ಯೆ | ದಿನಾಂಕ | ಮೊತ್ತ ರೂ |
|---|---|---|---|---|
| 1 | Renovation Of internel Electrification Work Meeting Hall And Rest Room At Kriyashakthi Building | 73263 | 03-03-2016 | 225056 |
| 2 | ಕುಲಪತಿಯವರ ಕಛೇರಿಗೆ ಹಾಗೂ ಕಾರ್ಯಕಾರಿ ಸಮಿತಿ ಸಭಾಂಗಣ ಕೊಠಡಿಗಳಿಗೆ ಹೊಸದಾಗಿ ಹವಾ ನಿಯಂತ್ರಣ ಅಳವಡಿಸುವ ಕುರಿತು | 20129<br>072129 | 01-01-2016<br>13-01-2016 | 401057<br>139639 |
| 3 | ಕುಲಸಚಿವರ ಕೊಠಡಿ ಮತ್ತು ಆಪ್ತ ಶಾಖೆ ವಿದ್ಯುತ್ ನವೀಕರಣ | 073261 | 03-03-2016 | 273481 |
| | | ಒಟ್ಟು | | **1039233** |

## 2.5.15)ಸಿವಿಲ್ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇರೆಗೆ ಡಿಎಸ್‌ಆರ್‌ದರದಲ್ಲಿ ಕಾಮ ಗಾರಿ ನಿರ್ವಹಿಸಿರುವ ಬಗ್ಗೆ:-

ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ 2014-15&2015-16ನೇ ಸಾಲಿನಲ್ಲಿ ವಿಶ್ವವಿದ್ಯಾಲಯ ವಿವಿಧ ಕಾಮಗಾರಿಗಳನ್ನು ಡಿಎಸ್‌ಆರ್‌ದರದಲ್ಲಿ ತುಂಡು ಗುತ್ತಿಗೆ ಆಧಾರದ ಮೇರೆಗೆ ನಿರ್ವಹಿಸಿದ್ದು ಸರ್ಕಾರದ ಪ್ರಧಾನ ಕಾರ್ಯದರ್ಶಿ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಕಾಸಸೌಧ ಬೆಂಗಳೂರು ಕಛೇರಿ ಸುತ್ತೋಲೆ ಸಂಖ್ಯೆ:ಲೋ.ಇ:178:ಐಎಫ್ಎ:2016:ದಿನಾಂಕ:25-06-2016ರಲ್ಲಿ ಸರ್ಕಾರದ ಹಿಂದಿನ ಸುತ್ತೋಲೆ ಸಂಖ್ಯೆ ಲೋ.ಇ.112:ಸಿ.ಆರ್ ಎಮ್.ದಿನಾಂಕ:04-07-2012 ಹೊರಡಿಸಿರುವುದನ್ನು ಮುಂದುವರೆಸಿ ನಿರ್ವಹಣೆ ಕಾಮಗಾರಿಗಳನ್ನು ಸಹ ಉಪ ವಿಭಾಗ ವ್ಯಾಪ್ತಿಯಲ್ಲಿ ರಸ್ತೆಉದ್ದವನ್ನು ಒಳಗೊಡಂತೆ ಪ್ಯಾಕೇಜ್ ಮಾದರಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿ ಅರ್ಹ ಬಿಡ್ಡರ್/ ಟೆಂಡರು

ದಾರರು ಭಾಗವಹಿಸಲು ಅವಕಾಶ ಕಲ್ಪಿಸಿ ಅವಧಿಯೊಳಗೆ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸುತ್ತೋಲೆ ಸಂಖ್ಯೆ:ಲೋಇ:07:ಐ.ಎಫ್.ಎ.2013 ದಿನಾಂಕ:16-01-2013ರಲ್ಲಿ ಪುನ:ನಿರ್ದೇಶನ ನೀಡಲಾಗಿದೆ.ಲೋಕೋಪಯೋಗಿ ಇಲಾಖಾ ಸಂಹಿತೆಯ ಅನುಚ್ಛೇದ 85ರ ಉಪಬಂಧ(6)ರಲ್ಲಿ ತಿಳಿಸಿರುವಂತೆ ಹಾಗೂ ಈ ಗಾಗಲೇ ಸರ್ಕಾರದಿಂದ ಹೊರಡಿಸಲಾದ ಸುತ್ತೋಲೆ ಮಾರ್ಗ ಸೂಚಿಗಳಂತೆ ಇನ್ನು ಮುಂದೆ ತುಂಡು ಗುತ್ತಿಗೆ ಮೂಲಕ ಕಾಮಗಾರಿಗಳನ್ನು ನಿರ್ವಹಿಸುವುದನ್ನು ನಿರ್ಬಂಧಿಸತಕ್ಕದ್ದು.ನಿಯಮಬಾಹಿರವಾಗಿ ತುಂಡು ಗುತ್ತಿಗೆ ಆಧಾರದ ಮೇರೆ ಕಾಮಗಾರಿ ನಿರ್ವಹಣೆಗಾಗಿ ಆದೇಶ ನೀಡುವ ಅಧಿಕಾರಿ/ಇಂಜಿನಿಯರವರನ್ನೇ ಈ ಬಗ್ಗೆ ಹೊಣೆಗಾರರನ್ನಾಗಿಸಿ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು 1957 ರನ್ವಯ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದೆಂದು ಸ್ಪಷ್ಟವಾಗಿ ತಿಳಿಸಿದ್ದು ಲೆಕ್ಕ ತನಿಖಾ ವಿಚಾರಣೆ ಪತ್ರ ಸಂಖ್ಯೆ:24:ದಿನಾಂಕ:11-05-2016ರಲ್ಲಿ ವಿಚಾರಣೆ ಪತ್ರ ನೀಡಿದ್ದು ಕಟ್ಟಡ ಸಲಹಾ ಸಮಿತಿ ಸಭೆ 14-10-2014ರ ಕ್ರಮ ಸಂಖ್ಯೆ 7ರಲ್ಲಿ ತುರ್ತುಸಂದರ್ಭದಲ್ಲಿ ಪಿಡಬ್ಲುಡಿ ಇಲಾಖೆಯಲ್ಲಿರುವಂತೆ ಸಮಿತಿಯು ತುಂಡು ಗುತ್ತಿಗೆ ಕಾಮಗಾರಿ ನಿರ್ವಹಿಸಲು ಅನುಮೋದನೆ ನೀಡಿದೆ.ಕಾರ್ಯಕಾರಿ ಸಮಿತಿ ಸಭೆ ದಿನಾಂಕ:03-11-2014ರಂದು 168ನೇ ಸಭೆಯಲ್ಲಿ ದಿನಾಂಕ:14-10-2014ರಂದು ನಡೆದ ಕಟ್ಟಡ ಸಲಹಾ ಸಮಿತಿ ನಡಾವಳಿಗೆ ಅನುಮೋದನೆ ನೀಡಿದ್ದು ಸಮಿತಿಯ ತೀರ್ಮಾನದಂತೆ ತುರ್ತು ಕಾಮಗಾರಿಗಳನ್ನು ತುಂಡುಗುತ್ತಿಗೆ ಆಧಾರದ ಮೇರೆಗೆ ನೀಡಲಾಗಿದೆ.ರೂಸಾ ಅನುದಾನವು 2015-16ನೇ ಸಾಲಿಗೆ ಮಂಜೂರಾಗಿದ್ದು 31-03-2016ರೊಳಗೆ ಕೆಲವು ಕಾಮಗಾರಿಗಳನ್ನು ಪೂರ್ಣಗೊಳಿಸಲು ಅನುದಾನ ನೀಡಿದ ಹಿನ್ನೆಲೆಯಲ್ಲಿ ತುರ್ತಾಗಿರುವ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಕೈ ಗೊಳ್ಳಲಾಗಿದೆ ಹಾಗೂ ಕರ್ನಾಟಕರಾಜ್ಯಪತ್ರ ಸಂಪುಟ:148ದಿನಾಂಕ:17-01-2013.ಕ್ರಮ ಸಂಖ್ಯೆ:72ರಲ್ಲಿ ಕನ್ನಡವಿಶ್ವವಿದ್ಯಾಲಯಕ್ಕೆ ತುರ್ತುಸಂಧರ್ಭಗಳಲ್ಲಿ ರೂ:5.00ಲಕ್ಷದವರೆಗೆ ಕಾಮಗಾರಿಗಳನ್ನು ನಿರ್ವಹಿಸಲು ಅವಕಾಶವಿದೆಯೆಂದು ತಿಳಿಸಿದ್ದಾರೆ.ಈ ಉತ್ತರವನ್ನು ತನಿಖೆಯಲ್ಲಿ ಒಪ್ಪಲಾಗಿಲ್ಲ. ಸರ್ಕಾರದ ಸ್ಪಷ್ಟ ನಿರ್ದೇಶನವಿದ್ದರೂ ತುರ್ತುಸಂದರ್ಭ ಎಂಬ ಕಾರಣ ನೀಡಿ ವಿಶ್ವವಿದ್ಯಾಲಯದ ಕಾಮಗಾರಿಗಳನ್ನು wide ಜಾಹಿರಾತು ಟೆಂಡರ್ ಪ್ರಕಟಣೆ ನೀಡದೆ, ಟೆಂಡರ್ ಪ್ರಕ್ರಿಯೆ ನಿರ್ವಹಿಸದೆ ಕಾಮಗಾರಿಗಳನ್ನು ನಿರ್ವಹಿಸಿರುವುದು ಸರ್ಕಾರದ ಆದೇಶದ ಉಲ್ಲಘನೆಯಾಗಿದೆ. ನಿಯಮ ಉಲ್ಲಂಘಿಸಿದಕ್ಕೆ ಕಾರ್ಯಕಾರಿ ಸಮಿತಿ ಸದಸ್ಯರು ,ಕಟ್ಟಡ ಸಲಹಾ ಸಮಿತಿ ಸದಸ್ಯರು, ತಾಂತ್ರಿಕ ವಿಭಾಗದ ಎ.ಇ.ಇ.,ಜೆ.ಇ,ಹಣಕಾಸು ಅಧಿಕಾರಿಗಳು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಈ ವಿಷಯದ ಬಗ್ಗೆ ಆಡಳಿತಾತ್ಮಕ ವಿಚಾರಣೆ ನಡೆಸಿ ತಪ್ಪಿಸ್ಥರ ವಿರುದ್ಧ ಸೂಕ್ತ ಕಠಿಣ ಕ್ರಮಕೈಗೊಂಡು ಲೆಕ್ಕತನಿಖೆಗೆ ವರದಿ ಮಾಡಲುಸೂಚಿಸಿದೆ.**ರೂ:6579854/-**ಮೊತ್ತವನ್ನು ಆಕ್ಷೇಪಣೆಯಲ್ಲಿ ಡಲಾಗಿದೆ. ವಿವರಗಳನ್ನು ಅನುಬಂಧ-**26**ರಲ್ಲಿ ಲಗತ್ತಿಸಿದೆ.

## 2.5.16)2010-11ರಿಂದ 2012-13ನೆ ಸಾಲಿನ ಕನ್ನಡ ವಿಶ್ವವಿದ್ಯಾಲಯ ಕಾಮಗಾರಿಗಳ ವ್ಯವಹಾರ ದಲ್ಲಿ ನಷ್ಟವಾಗಿರುವ ರೂ:8.00ಲಕ್ಷಗಳನ್ನು ಶ್ರೀ.ಜೆ.ಎನ್.ನಂಜಯ್ಯನವರ್. ಮುಖ್ಯಸ್ಥರು ತಾಂತ್ರಿಕ ವಿಭಾಗ ಶ್ರೀ.ಚಂದ್ರಶೇಖರಪ್ಪ ಅಭಿಯಂತರರು ಹಾಗೂ ಶ್ರೀಕುಬೇರಪ್ಪ ಅಭಿಯಂತರರು ಇವರ ವೇತನದಿಂದ 30 ಸಮಾನ ಕಂತುಗಳಲ್ಲಿ ಕಡಿತಗೊಳಿಸಿಲ್ಲದಿರುವುದು:-

ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ ಕಾರ್ಯಕಾರಿ ಸಮಿತಿ ಸಭೆಯ 163ರಿಂದ 180ನೇ ಸಭೆಯ ನಡವಳಿಗಳನ್ನು ಪರಿಶೀಲಿಸಿದಾಗ ಕನ್ನಡ ವಿಶ್ವವಿದ್ಯಾಲಯವು 2010-11ರಿಂದ2012-13ನೆ ಸಾಲಿನವರೆಗಿನ ಕೈಗೊಂಡ ಕಾಮಗಾರಿಗಳಲ್ಲಿ ಉಂಟಾಗಿರುವ ಆರ್ಥಿಕ ನಷ್ಟದ ಬಗ್ಗೆ **ಮೇ:ಸಿವಿಲ್ ಎಯ್ಡ್ ಟೆಕ್ನೋ ಕ್ಲಿನಿಕ್ ಪ್ರೈವೇಟ್ ಲಿಮಿಟೆಡ್** ಬೆಂಗಳೂರು ಹಾಗೂ ನಿವೃತ್ತ ನ್ಯಾಯಾಧೀಶರಾದ ಶ್ರೀ.ದೇಶಪಾಂಡೆ ಇವರಿಗೆ ಪೂರ್ಣವರದಿ ನೀಡಲು ಸೂಚಿಸಿದ್ದು ಸಿವಿಲ್ ಎಯ್ಡ್ ಟೆಕ್ನೋ ಕ್ಲಿನಿಕ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇವರು ದಿನಾಂಕ:03-01-2014 ಮತ್ತು ದಿನಾಂಕ:29-01-2014ರಂದು ಸದರಿ 3 ಕಟ್ಟಡಗಳ ಭೌತಿಕಪರಿಶೀಲನೆ ಮಾಡಿ ವರದಿಯ ಕಂಡಿಕೆ 3ರಲ್ಲಿ ಕಾಮಗಾರಿ ಗುಣಮಟ್ಟ ತೃಪ್ತಿಕರವಾಗಿಲ್ಲ ಕಟ್ಟಡಗಳು ಉತ್ತಮವಾಗಿ ನಿರ್ಮಾಣವಾಗಿಲ್ಲ.ಆದ್ದರಿಂದ ಆಸ್ಥೆಟಿಕ್ ಫ್ಯಾಕ್ಟರ್‌ಗಳು ನಾಶವಾಗಿರುತ್ತದೆ.ಮೇಲಾಗಿ ಖಾಯಂ ಆಕ್ಸೆಸ್ ಇಲ್ಲದಿರುವುದರಿಂದ ಒಣಗಿದ ಎಲೆ ಸ್ಟಾರ್ಮ್‌ಡಸ್ಟ್ ಮೇಲ್ಛಾವಣಿ ಮೇಲಿದ್ದು ನೀರು ಸರಾಗವಾಗಿ ಹರಿಯುವುದಿಲ್ಲ ಹಾಗೂ ಇನ್ನು 6 ಲೋಪದೋಷಗಳನ್ನು ಪಟ್ಟಿಮಾಡಿವರದಿ ನೀಡಿದ್ದಾರೆ. ವಿವರಗಳನ್ನು 2010-11ನೇ ಸಾಲಿನಿಂದ 2012-13ನೇ ಸಾಲಿನವರೆಗಿನ ವಿಶೇಷ ಲೆಕ್ಕ ತನಿಖಾ ವರದಿಯಲ್ಲಿ ವಿವರಿಸಲಾಗಿದೆ.

ಶ್ರೀ.ಜೆ.ಎಸ್.ದೇಶಪಾಂಡೆ ನಿವೃತ್ತ ಜಿಲ್ಲಾ ನ್ಯಾಯಾಧೀಶ ಧಾರವಾಡ ಇವರು ದಿನಾಂಕ:19-06-2014ಮತ್ತು01-07-2014ರಂದು ಕಟ್ಟಡಗಳನ್ನು ಭೌತಿಕವಾಗಿ ಪರಿಶೀಲಿಸಿ ಕಟ್ಟಡಗಳನ್ನು ಕ್ಯಾಂಟೀನ್ ಗೋಡೆಗಳಲ್ಲಿ ಕ್ರ್ಯಾಕ್ ಕಂಡು ಬಂದಿದೆ ಹಾಗೂ ಸ್ಟೋನ್ ಕಾಲಂ ಬೀಮ್ಸ್ ತೃಪ್ತಿಕರವಾಗಿಲ್ಲ ಒಟ್ಟಾರೆಯಾಗಿ ಮೆಜಾರಿಟಿ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ಹೆಚ್ಚಿನ ಟೆಂಡರ್ ಮೊತ್ತಕ್ಕೆ ಪಾವತಿಸಿದ್ದು ಹೆಚ್ಚಿಗೆ ಪಾವತಿಸಿವುದಕ್ಕೆ ಕಾರ್ಯಕಾರಿ ಸಮಿತಿಯ ಸಭೆ ಒಪ್ಪಿಗೆ ಅಥವಾ ಕಟ್ಟಡ ಸಲಹಾ ಸಮಿತಿಯ ಸಭೆಯ ಅನುಮೋದನೆ ಪಡೆದಿಲ್ಲ. ವಿವರಗಳನ್ನು 2010-11ನೆ ಸಾಲಿನಿಂದ 2012-13ನೇ ಸಾಲಿನವರೆಗಿನ ವಿಶೇಷ ಲೆಕ್ಕ ತನಿಖಾವರದಿಯಲ್ಲಿ ವಿವರಿಸಲಾಗಿದೆ.60ದಿನಗಳ ಕಾಲಮಿತಿಯನ್ನು ತಾಂತ್ರಿಕ ವಿಭಾಗದ ಮುಖ್ಯಸ್ಥರಾದ ಜೆ.ಎಸ್.ನಂಜಯ್ಯನವರ್

ಹಾಗೂ ಅದೇ ವಿಭಾಗದ ಅಭಿಯಂತರರುಗಳಾದ ಶ್ರೀ.ಚಂದ್ರಶೇಖರಪ್ಪ ಮತ್ತು ಕುಬೇರಪ್ಪ ಇವರುಗಳು ತಮ್ಮ ಅಭಿಪ್ರಾಯವನ್ನು ವಿಶ್ವವಿದ್ಯಾಲಯಕ್ಕೆ ಮಂಡಿಸಲು ಸಭೆಯು ಸೂಚಿಸಿತ್ತು.ಅಲ್ಲಿಯವರೆಗೆ ಯಥಾ ಸ್ಥಿತಿಯನ್ನು ಕಾಪಾಡಲು ಕಾರ್ಯಕಾರಿ ಸಮಿತಿಯು ತೀರ್ಮಾನಿಸಿತ್ತು.

**ದಿನಾಂಕ:27-11-2015ರಂದು** ನಡೆದ ಕಾರ್ಯಕಾರಿ ಸಮಿತಿಯ 180ನೇ ಸಭೆಯ ನಡಾವಳಿಯಲ್ಲಿ 180.42 ನಿರ್ಣಯದಲ್ಲಿ ಪಿಡಬ್ಲುಡಿ ಜಿಲ್ಲಾ ಮುಖ್ಯ ಇಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ಮತ್ತು ಜಿಲ್ಲಾ ಕಾನೂನು ಸಲಹೆಗಾರರನ್ನು ಒಳಗೊಂಡತೆ ಕುಲಸಚಿವರ ಸಂಚಾಲಕತ್ವದಲ್ಲಿ ವಿಚಾರಣಾ ಸಮಿತಿಯನ್ನು ರಚಿಸಿ ಮೂರು ತಿಂಗಳ ಒಳಗಾಗಿ ವರದಿಯನ್ನು ಪಡೆಯಲು ಮತ್ತು ಅಲ್ಲಿಯವರೆಗೆ ಸದರಿಯವರ ವೇತನವನ್ನು ಪಾವತಿಸಲು ಸಮಿತಿಯು ಅನುಮತಿ ನೀಡಿದ್ದು.27-11-2015ರಿಂದ ಮೂರು ತಿಂಗಳು ಅವಧಿ ಅಂದರೆ26-01-2016ರ ಮುಗಿದಿದ್ದು ವಿಶ್ವವಿದ್ಯಾಲಯವು ಯಾವ ಕ್ರಮ ಕೈ ಗೊಂಡಿದೆ ಎಂಬುದರ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ:8:2016-17ದಿನಾಂಕ:18-04-2016ರಂದು ವಿಚಾರಣೆ ಪತ್ರ ನೀಡಿದ್ದು ಇದುವರೆಗೆ ಉತ್ತರ ನೀಡಿರುವುದಿಲ್ಲ.ಕಾರ್ಯಕಾರಿ ಸಮಿತಿಯ ನಿರ್ಣಯನ್ನು ಇದುವರೆಗೂ ಕಾರ್ಯರೂಪಕ್ಕೆ ತಾರದಿರುವ ಕುರಿತು ವಿಶ್ವವಿದ್ಯಾಲಯದ ಜವಾಬ್ದಾರಿಯುತ ಆಡಳಿತ ವರ್ಗ ಶ್ರೀಘ್ರವಾಗಿ ಉತ್ತರಿಸಬೇಕಾಗಿದೆ.

## 2.5.17)ವಿ.ವಿ ಯಲ್ಲಿ ಭದ್ರತಾ ಸಿಬ್ಬಂದಿ ಗುತ್ತಿಗೆ ನೇಮಕಾತಿಯಲ್ಲಿ ಕ.ಸಾ.ಸಂ.ಪಾ.ಅಧಿನಿಯಮ ಹಾಗೂ ಗುತ್ತಿಗೆ ಕಾರ್ಮಿಕರ(ನಿಯಂತ್ರಣ ಮತ್ತು ನಿಷೇಧ)ಅಧಿನಿಯಮಗಳನ್ನು ಉಲ್ಲಂಘಿಸಿರುವುದು:-

ಕನ್ನಡ ವಿ.ವಿ.ಯ ವಿವಿಧ ವಿಭಾಗಗಳಿಗೆ ಚರ ಮತ್ತು ಸ್ಥಿರಾಸ್ತಿ ರಕ್ಷಣೆಮಾಡಲು ಗುತ್ತಿಗೆ ಅಧಾರದ ಮೇಲೆ ಭದ್ರತಾ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಂಡಿದ್ದು ಪರಿಶೀಲಿಸಲಾಗಿ.ಈ ಕೆಳಗಿನಂತೆ ನಿಯಮಗಳನ್ನು ಉಲ್ಲಂಘಿಸಲಾಗಿದೆ.

**1)** ಕ.ಸಾ.ಸಂ ಪಾರದರ್ಶಕ **ಅಧಿನಿಯಮ-1999ರ ಅನುಚ್ಛೇದ 4ಇ(2)ರ** ಪ್ರಕಾರ ಯಾವ ಸರಕು/ಸೇವೆಗಳ ಮೌಲ್ಯವು ರೂ 1 ಲಕ್ಷ ಮೀರುತ್ತದೆಯೋ ಅಂತಹ ಸರಕು ಮತ್ತು ಸೇವೆಗಳನ್ನು ಟೆಂಡರ್ ಮೂಲಕ ಮಾತ್ರವೇ ಪಡೆಯಬೇಕೆಂದು ತಿಳಿಸುತ್ತದೆ.ಆದರೆ ವಿ.ವಿ.ಯು ಏಪ್ರಿಲ್-2014ರಿಂದಸೆಪ್ಟಂಬರ್-2014ರವರೆಗೆ ಟೆಂಡರ್ ಕರೆಯದೇ ಗುತ್ತಿಗೆ ಕಾರ್ಮಿಕರ ಸೇವೆಯನ್ನು ಪಡೆದು **ಶ್ರೀ.ವಿರೂಪಾಕ್ಷೇಶ್ವರ ಸೆಕ್ಯುರಿಟಿ ಸರ್ವಿಸ್ ಹೊಸಪೇಟೆ** ಇವರಿಗೆ **ರೂ:943950/-**ಪಾವತಿಸಿರುವುದು ನಿಯಮ ಬಾಹಿರ. ಇದೇ ರೀತಿ 2015-16ನೆ ಸಾಲಿನಲ್ಲಿ **ಗ್ರೀನ್‌ಬರ್ಡ್ ಡಿಟೆಕ್ಟಿವ್ ಏಜೆನ್ಸಿ ಬಳ್ಳಾರಿ** ಇವರಿಗೆ ಟೆಂಡರ್ ನೀಡಿದ್ದು ಸದ್ರಿರವರ ಟೆಂಡರ್ ಅವಧಿ ಜುಲೈ-2015ಕ್ಕೆ ಮುಕ್ತಾಯವಾಗಿದ್ದು.ಸದ್ರಿಯವರಿಗೆ ಅಗಸ್ಟ ಮತ್ತು ಸೆಪ್ಟಂಬರ್2015 ರಂದು ಸೇವೆಯನ್ನು ನೀಡಲು ತಿಳಿಸಿದ್ದು. ರೂ:643824/-ಗಳನ್ನು ಪಾವತಿಸಿರುವುದು **ಕೂಡ ಕೆ.ಟಿ.ಪಿ.ಪಿ ಆಕ್ಟ್-1999 ಅನುಚ್ಛೇದ 4ಇ(2)**ಯ ಉಲ್ಲಂಘನೆಯಾಗಿರುತ್ತದೆ.

2) 2015-16ನೆ ಸಾಲಿನಲ್ಲಿ ಭದ್ರತಾ ರಕ್ಷಕರ ಸೇವೆ ಪಡೆಯಲು ಟೆಂಡರ್ ಕರೆಯಲಾಗಿದೆ.ಇದರಲ್ಲಿ ಎಲ್.5 ಆಗಿರುವಂತಹ **ಕೆ.ಬಿ.ಪಿ ಸೆಕ್ಯೂರಿಟಿ ಸರ್ವಿಸ್ ಅಂಡ್ ಲೇಬರ್ ಕಾಂಟ್ರಾಕ್ಟರ್ ಹೊಸಪೇಟೆ** ಇವರಿಗೆ ನೀಡಿರುವುದು ಕಂಡು ಬಂದಿದೆ.ಇದಕ್ಕೆ ಸೂಕ್ತ ಕಾರಣ ತಿಳಿಸಿರುವುದಿಲ್ಲ. ಈ ಟೆಂಡರ್‌ಗೆ ಸಂಬಂಧಿಸಿದ technical evalution committees ನಡಾವಳಿಗಳನ್ನು ಹಾಜರು ಪಡಿಸಿರು ವುದಿಲ್ಲ.

3) ಕೆ.ಬಿ.ಪಿ ಸೆಕ್ಯುರಿಟಿ ಸರ್ವಿಸ್ ಇವರು ಕಾರ್ಮಿಕರ ಇಎಸ್‌ಐ ಅನ್ನು ಕಾರ್ಮಿಕರ ಖಾತೆಗೆ ಜಮಾ ಮಾಡಿದ ಕುರಿತು ದಾಖಲೆ ಗಳನ್ನು ಹಾಜರುಪಡಿಸಿಲ್ಲ. ವೇತನದಲ್ಲಿ ಇಎಸ್‌ಐ ಅನ್ನು 4.75% of the basic+vda ನೀಡಿರುವುದು ಕಂಡುಬಂದಿರುತ್ತದೆ.ಪ್ರತಿ ತಿಂಗಳು ಗುತ್ತಿಗೆದಾರನ್ನು ಕಾರ್ಮಿಕರ ವೇತನ EPF.ESI ಪಾವತಿಸಿದ್ದನ್ನು ಖಚಿತ ಪಡಿಸಿಕೊಂಡ ನಂತರವೇ ಮುಂದಿನ ತಿಂಗಳ ವೇತನವನ್ನು ಗುತ್ತಿಗೆದಾರನಿಗೆ ಸಂದಾಯ ಮಾಡಬೇಕೆಂದು ಷರತ್ತನ್ನು ಕರಾರಿನಲ್ಲಿ ಆಳವಡಿಸಿಕೊಳ್ಳಲಾಗಿದೆ.ಆದರೆ ಇದನ್ನು ಪಾಲಿಸಿರುವುದಿಲ್ಲ. ESI ನ್ನು ಗುತ್ತಿಗೆದಾರನು ಕಾರ್ಮಿಕರ ಖಾತೆಗೆ ಜಮಾ ಮಾಡದಿದ್ದಲ್ಲಿ ಅದನ್ನು ಸದ್ರಿ ಗುತ್ತಿಗೆದಾರರಿಂದ ವಸೂಲಿಸಿ ವಿ.ವಿ.ಖಾತೆಗೆ ಜಮಾ ಮಾಡುವುದು.

4) ಕೆ.ಟಿ.ಪಿ.ಪಿ ನಿಯಮಗಳು 2000 ರ ನಿಯಮ 17(ಎ)ಪ್ರಕಾರ ರೂ:ಎರಡು ಕೋಟಿ ಮೊತ್ತದವರೆಗಿನ ಟೆಂಡರ್‌ಗಳನ್ನು ಸಲ್ಲಿಸಲು ಕನಿಷ್ಠ 30ದಿನಗಳ ಕಾಲಾವಕಾಶ ನೀಡಬೇಕಾಗಿರುತ್ತದೆ.ಆದರೆ ಈ ಟೆಂಡರಿನಲ್ಲಿ ಕೇವಲ 16ದಿನ(**ಟೆಂಡರ್ ಫಾರಂಗಳನ್ನು ವೆಬ್‌ಸೈಟಿನಲ್ಲಿ ಪಡೆಯಲು ಪ್ರಾರಂಭ ದಿನಾಂಕ:24-08-2015 ಮತ್ತು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:09-09-2015**) ನೀಡಿರುವುದು ನಿಯಮ ಉಲ್ಲಂಘನೆಯಾಗಿರುತ್ತದೆ.

5) ಭದ್ರತಾ ಸಿಬ್ಬಂದಿಯ ಗುತ್ತಿಗೆ ನೇಮಕಾತಿಯು ನಿಯಮಬಾಹಿರವಾಗಿರುತ್ತದೆ.ಯಾವುದೇ ಒಂದು ಹುದ್ದೆಗೆ ಖಾಯಂ ಆಗಿ/ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಸರ್ಕಾರದಿಂದ ಮಂಜೂರಾದ ಹುದ್ದೆಗಳು ಇರಬೇಕು, ಆಗ ಮಂಜೂರಾದ

ಹುದ್ದೆಗಳಿಗೆ ಎದುರಾಗಿ ಗುತ್ತಿಗೆ ಆಧಾರದಲ್ಲಿ/ಖಾಯಂ ಆಗಿ ನೇಮಕಾತಿ ಮಾಡಿಕೊಳ್ಳಲು ಅವಕಾಶವಿರುತ್ತದೆ.ಆದರೆ ವಿ.ವಿಯಲ್ಲಿ ಭದ್ರತಾ ಸಿಬ್ಬಂದಿಯ ಯಾವ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿರುವುದಿಲ್ಲ.

6) the contract labour (regulation and abolition) act 1970 ಅನುಚ್ಛೇದ 7ರ ಪ್ರಕಾರ ಪ್ರಧಾನ ಉದ್ಯೋಗದಾತರು (ಹಂಪಿ ಕನ್ನಡ ವಿ.ವಿ.ಯು) ನೊಂದಣಿ ಆದ ಕುರಿತು ಲೆಕ್ಕ ತನಿಖೆಗೆ ದಾಖಾಲೆಗಳನ್ನು ಹಾಜರುಪಡಿಸಿರುವುದಿಲ್ಲ.

7) contract labour (regulation and abolition)Karnataka rules 1974 ರ ನಿಯಮ 72ರ ಪ್ರಕಾರ ಹಂಪಿ ಕನ್ನಡ ವಿ.ವಿ.ಯು ಗುತ್ತಿಗೆದಾರನು ಕಾರ್ಮಿಕರಿಗೆ ವೇತನ ವಿತರಿಸುವ ಸಮಯದಲ್ಲಿ ವಿ.ವಿ.ಯ ಒಬ್ಬ ಅಧಿಕಾರಿಯನ್ನು ತನ್ನ ಪ್ರತಿನಿಧಿಯಗಿ ನೇಮಿಸಿ ಕಾರ್ಮಿಕರಿಗೆ ತನ್ನ ಪ್ರತಿನಿಧಿಯ ಸಮ್ಮುಖದಲ್ಲಿ ವೇತನವನ್ನು ಸಮರ್ಪಕವಾಗಿ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಂಡ ಕುರಿತು ದಾಖಲೆ ಹಾಜರುಪಡಿಸದಿರುವುದು.

8) contract labour (regulation and abolition)Karnataka rules 1974 ರ ನಿಯಮ 73ರ ಪ್ರಕಾರ ವಿ.ವಿ.ಯು ನೇಮಿಸಿದ ಪ್ರತಿನಿಧಿಯು register of wages/register of wages cum muster roll ಗೆ ಸಹಿಮಾಡಿದ ಕುರಿತು ಪ್ರಮಾಣ ಪತ್ರ ಹಾಕಿರುವುದಕ್ಕೆ ಸಂಬಂಧಿಸಿದ ದಾಖಲೆ ನೀಡಿರುವುದಿಲ್ಲ.

9) contract labour (regulation and abolition)Karnataka rules 1974 ರ ನಿಯಮ 65ರ ಪ್ರಕಾರ ಪ್ರತಿ ತಿಂಗಳು ಕಾರ್ಮಿಕರ ಕೂಲಿಯು 10ನೇ ತಾರೀಖಿನ ಒಳಗಡೆಯೆ ವಿತರಿಸಲಾಗಿದೆಯೆ ಎಂಬ ಕುರಿತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

10) the contract labour (regulation and abolition act) Karnataka rules 1974 ರ ನಿಯಮ 74ರ ಪ್ರಕಾರ– register of contractors-every principal employer shall maintain in respect of each registered establishment a register of contractors in from-12 ಅನ್ನು ಹಾಜರುಪಡಿಸಿರುವುದಿಲ್ಲ.

ಈ ಮೇಲಿನ ನ್ಯೂನತೆಗಳಿಗೆ ಸಂಬಂಧಿಸಿದಂತೆ ವಿವರಣೆ ನೀಡಲು ಲೆ.ಪ.ವಿ.ಪತ್ರ ಸಂಖ್ಯೆ:59 ದಿನಾಂಕ:28–06–2016 ರಂದು ನೀಡಲಾಗಿತ್ತು ಯಾವುದೇ ಅನುಸರಣೆ ನೀಡಿರುವುದಿಲ್ಲ.ಈ ಮೇಲಿನ ನ್ಯೂನತೆಗಳಿಗಾಗಿ 2014–15 ಮತ್ತು 2015–16ರಲ್ಲಿ ಭದ್ರತಾ ಸಿಬ್ಬಂದಿಗೆ ಪಾವತಿಸಿದ ಒಟ್ಟಾರೆ ಮೊತ್ತ ರೂ:6531093/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. **ಪುನರ್‌ಪರಿಶೀಲನಾ** ಸಮಯದಲ್ಲಿ ಸಂಸ್ಥೆಯವರು ನೀಡಿದ ಉತ್ತರದಲ್ಲಿ **ಕ್ರಮ ಸಂಖ್ಯೆ 1** ರ ಆಕ್ಷೇಪಣೆಗೆ ಕಾರ್ಮಿಕ ಇಲಾಖೆಯ ಕನಿಷ್ಠ ವೇತನಗಳ ದರಗಳನ್ವಯ ಗುತ್ತಿಗೆದಾರರಿಗೆ ನೀಡಲಾಗಿದೆ ಎಂದು ತಿಳಿಸಿರುತ್ತಾರೆ ಆದರೆ ಮೇಲೆ ಸೂಚಿಸಿದಂತೆ **ರೂ. 1.00** ಲಕ್ಷ ಮೌಲ್ಯ ಮೀರುವ ಎಲ್ಲಾ ಸೇವೆಗಳನ್ನು ಟೆಂಡರ್ ಮೂಲಕವೇ ಪಡೆಯಬೇಕಾಗಿರುವುದರಿಂದ ಈ ವಿವರಣೆಯನ್ನು ಒಪ್ಪಲಾಗುವುದಿಲ್ಲ.

**ಕ್ರಮ ಸಂಖ್ಯೆ 2ರ ಆಕ್ಷೇಪಣೆಗೆ ಸಮರ್ಪಕವಾದ ಉತ್ತರ ನೀಡಿರುವುದಿಲ್ಲ.**

**ಕ್ರಮ ಸಂಖ್ಯೆ 3ರ** ಆಕ್ಷೇಪಣೆಯಲ್ಲಿ ಸೂಚಿಸಿದಂತೆ **ಇ.ಎಸ್.ಐ.** ಮತ್ತು **ಪಿ.ಎಫ್** ನ್ನು ಸಂಬಂದಿಸಿದವರ ಖಾತೆಗೆ ಜಮಾ ಮಾಡಿರುವ ಬಗ್ಗೆ ಚಲನ್ ಹಾಜರು ಪಡಿಸಿಲ್ಲ.

**ಕ್ರಮ ಸಂಖ್ಯೆ 5ರಲ್ಲಿ** ಸೂಚಿಸಿದಂತೆ ಮಂಜೂರಾದ ಹುದ್ದೆ ಇಲ್ಲದಿದ್ದರೂ ಕೂಡ ಭದ್ರತಾ ಸಿಬ್ಬಂದಿ ನೇಮಕ ಮಾಡಿ ಕೊಂಡಿರುವ ಆಕ್ಷೇಪಣೆಗೆ ಉತ್ತರ ನೀಡಿರುವುದಿಲ್ಲ.

ಆದ್ದರಿಂದ ಸದರಿಯವರು ನೀಡಿದ ವಿವರಣೆಯನ್ನು ಒಪ್ಪಲಾಗುವುದಿಲ್ಲ ಈ ಮೇಲಿನ ನ್ಯೂನ್ಯತೆಗಳಿಗಾಗಿ **2014–15** ಮತ್ತು **2015–16ನೇ** ಸಾಲಿನಲ್ಲಿ ಈ ಗುತ್ತಿಗೆಗೆ ಪಾವತಿಸಿದ ಒಟ್ಟು ಮೊತ್ತ **ರೂ. 6531093/–ನ್ನು** ಆಕ್ಷೇಪಿಸಲಾಗಿದೆ.ವಿವರಗಳನ್ನು **ಅನುಬಂಧ –27** ರಲ್ಲಿ ಈ ವರದಿಗೆ ಲಗತ್ತಿಸಲಾಗಿದೆ.

## 2.5.18)ಸ್ವಚ್ಛತಾ ಕೆಲಸಗಾರರ ಗುತ್ತಿಗೆ ನೇಮಕಾತಿಯಲ್ಲಿ ಕ.ಸಾ.ಸಂ.ಪಾ ಅಧಿನಿಯಮವನ್ನು ಹಾಗೂ ಗುತ್ತಿಗೆ ಕಾರ್ಮಿಕರ ನಿಯಂತ್ರಣ ಮತ್ತು ನಿಷೇದ ಅಧಿನಿಯಮವನ್ನು ಉಲ್ಲಂಘಿಸಿರುವುದು:–

**2014–15** ಮತ್ತು **2015–16ನೇ** ಸಾಲಿನ ಸ್ವಚ್ಛತಾ ಕೆಲಸಗಾರರ ಹೊರಗುತ್ತಿಗೆ ನೇಮಕಾತಿಗೆ ಸಂಬಂಧಿಸಿದ ದಾಖಾಲೆಗಳನ್ನು ಪರಿಶೀಲಿಸಲಾಗಿದ್ದು.ಈ ಕೆಳಗಿನಂತೆ ನಿಯಮ ಉಲ್ಲಂಘಿಸಲಾಗಿದೆ

1) ದಿನಾಂಕ:10-09-2013ರಿಂದ09-09-2014ರವರೆಗೆ11ಜನ ಸ್ವಚ್ಛತಾ ಕೆಲಸಗಾರರನ್ನು(sweepers)ಪೂರೈಸುವುದಕ್ಕೆ ಸಂಬಂಧಿಸಿದಂತೆ **ಶ್ರೀ.ದಾವಲ್‌ಸಾಬ್ ಹುಲಿಗಿ** ಸಿವಿಲ್ ಗುತ್ತಿಗೆದಾರರಿಂದ ದರಪಟ್ಟಿ ಕರೆಯುವ ಮೂಲಕ(quotation)ಅತ್ಯಂತ ಕಡಿಮೆ ಅಂದರೆ ತಿಂಗಳಿಗೆ ರೂ:40000/- 11ಜನ ಕಾರ್ಮಿಕರಿಗೆ ವೇತನ ಪಾವತಿಸಲು ಕರಾರುಮಾಡಿ ಕೊಂಡಿರುವುದು ಕನಿಷ್ಟ ಕೂಲಿಕಾಯ್ದೆಯ ಉಲ್ಲಂಘನೆಯಾಗಿರುತ್ತದೆ.ಕನಿಷ್ಟ ಕೂಲಿ ಕಾಯ್ದೆಯ ಪ್ರಕಾರ ಪ್ರತಿಯೊಬ್ಬರಿಗೂ ತಿಂಗಳಿಗೆ ಕನಿಷ್ಟ ರೂ:6345/- ಪಾವತಿಸಬೇಕಾಗಿರುತ್ತದೆ.

2) ಶ್ರೀ ದಾವಲ್‌ಸಾಬ್ ಹುಲಿಗಿ ಸಿವಿಲ್ ಗುತ್ತಿಗೆದಾರರು ಇವರಿಗೆ ದಿನಾಂಕ:10-09-2013ರಿಂದ09-10-2014 ರವರೆಗೆ ರೂ:605726/-ಗಳನ್ನು ಪಾವತಿಸಲಾಗಿರುತ್ತದೆ.ಕ.ಸಾ.ಸಂ.ಪಾ ಅಧಿನಿಯಮ 1999 ರ ಸೆಕ್ಷನ್ 4ಇ(2)ಪ್ರಕಾರ ಯಾವ ಸರಕು ಅಥವಾ ಸೇವೆಗಳ ಮೌಲ್ಯವು ಒಂದು ಲಕ್ಷ ಮೀರುತ್ತದೆಯೋ ಅಂತಹ ಸರಕು/ಸೇವೆಗಳನ್ನು ಟೆಂಡರ್ ಮಾಡಿಯೇ ಪಡೆಯಬೇಕಾಗಿರುತ್ತದೆ.ಸರ್ಕಾರಿ ಅಧಿಸೂಚನೆ ಸಂಖ್ಯೆ:ಸಿ ಅಸು ಇ 2 ಇಸಂಗ್ರಹ 2009 ಬೆಂಗಳೂರು ದಿನಾಂಕ:9ನೇ ಆಕ್ಟೋಬರ್ 2012ರ ಪ್ರಕಾರ ಕ.ಸಾ.ಸಂ.ಪಾ ಅಧಿನಿಯಮ 1999ರ ಮತ್ತು ನಿಯಮಗಳು-2000)(ಅಧಿನಿಯಮ ಸಂಖ್ಯೆ:29)18ಎ ಪ್ರಕರಣದ 2ನೇ ಉಪಪ್ರಕರಣದ ಪ್ರಕಾರ ರೂ:5.00ಲಕ್ಷಗಳಿಗೆ ಮೀರಿದ ಮೌಲ್ಯವನ್ನು ಹೊದಿರುವ ಪ್ರತಿಯೊಂದು ಸಂಗ್ರಹಣೆಯ ಸಂಬಂಧದಲ್ಲಿ ಎಲ್ಲಾ ಸಂಗ್ರಹಣಾ ಸಂಸ್ಥೆಗಳು 2012ರ ಡಿಸೆಂಬರ್ 3ನೇ ದಿನಾಂಕದಿಂದ ಜಾರಿಗೆ ಬರುವಂತೆ ವಿದ್ಯುನ್ಮಾನಸಂಗ್ರಹಣಾ ಮೇದಿಕೆಯ ಮೂಲಕವೇ ತಮ್ಮ ಸಂಗ್ರಹಣೆಗಳನ್ನು ಸಂಗ್ರಹಿಸತಕ್ಕದ್ದು ಎಂದಿರುತ್ತದೆ.ಈ ನಿಯಮಕ್ಕೆ ವ್ಯತಿರಿಕ್ತವಾಗಿ ಗುತ್ತಿಗೆದಾರರಾದ ಶ್ರೀದಾವಲ್ ಸಾಬ್ ಹುಲಿಗಿ ಇವರಿಗೆ ಒಟ್ಟು ರೂ:605726/-ರೂ: ಪಾವತಿಸಿದ್ದು ನಿಯಮ ಉಲ್ಲಂಘನೆಯಾಗಿರುತ್ತದೆ.

3) 2014-ರ ಮೇ ತಿಂಗಳಲ್ಲಿ ಸ್ವಚ್ಛತಾ ಕೆಲಸಕ್ಕೆ ಸಂಬಂದಿಸಿದಂತೆ ಹೊಸದಾಗಿ ಇ-ಟೆಂಡರ್ ಕರೆಯಲಾಗಿರುತ್ತದೆ.ಅಂದಾಜು ಮೊತ್ತ-1597024/-ಟೆಂಡರ್ ಅರ್ಜಿಗಳನ್ನು ವೆಬ್‌ಸೈಟ್ ಮೂಲಕ ಪಡೆಯಲು ಪ್ರಾರಂಭ ದಿನಾಂಕ:14-05-2014ಟೆಂಡರ್ ಅರ್ಜಿಗಳನ್ನು ವೆಬ್‌ಸೈಟ್‌ನಲ್ಲಿ ಪಡೆಯಲು ಕೊನಯ ದಿನಾಂಕ-06-06-2014ಒಟ್ಟು 24 ದಿನಗಳ ಸಮಯವನ್ನು ನಿಡಲಾಗಿರುತ್ತದೆ.ಕೆ.ಟಿ.ಪಿ.ಪಿ ಆ್ಯಕ್ಟ್ 1999ರ ನಿಯಮ 2000ರ ನಿಯಮ17(ಎ) ಪ್ರಕಾರ ರೂ:2.00ಕೋಟಿ ವರೆಗಿನ ಮೌಲ್ಯದ ಟೆಂಡರ್‌ಗಳನ್ನು ಸಲ್ಲಿಸಲು ಕನಿಷ್ಟ 30ದಿನಗಳ ಕಾಲಾವಕಾಶ ನೀಡಬೇಕಾಗಿರುತ್ತದೆ.ಆದರೆ ಸದ್ರಿ ಟೆಂಡರ್ ಪ್ರಕ್ರಿಯೆಯಲ್ಲಿ ಕೇವಲ 24 ದಿನಗಳನ್ನು ನೀಡಿರುವುದು ನಿಯಮಬಾಹಿರವಾಗಿರುತ್ತದೆ. ಈ ಟೆಂಡರ್ ಪ್ರಕ್ರಿಯೆಯಲ್ಲಿ ಎಲ್1.ಆಗಿರುವ ಶ್ರೀ.ಗಂಗಾ ಫೆಸಿಲಿಟಿ ಆಂಡ್ ಮ್ಯಾನೇಜ್‌ಮೆಂಟ್ ಸರ್ವಿಸ್ ಇವರಿಗೆ ಕಾರ್ಯಾದೇಶವನ್ನು ದಿನಾಂಕ:18-08-2014ರಂದು ನೀಡಲಾಗಿದೆ.ಆದೇಶ ಸಂಖ್ಯೆ:ಕ.ವಿ.ಹಂ:ಕು.ಸ.ರ.ಸಿ2014-15 ದಿನಾಂಕ:01-09-2014ರಿಂದ ಜಾರಿಗೆ ಬರುವಂತೆ 11 ತಿಂಗಳ ಅವಧಿಗೆ ಅಂದರೆ 31-07-2015ರವರೆಗೆ ಕರಾರು ಜಾರಿಯಲ್ಲಿರುತ್ತದೆ.ಟೆಂಡರ್ ಅವಧಿ(ಕರಾರು ಅವಧಿ)ಮುಗಿದ ನಂತರ 01-08-2015ರಿಂದ30-09-2015ರ ವರೆಗೆ ಸದ್ರಿ ಸಂಸ್ಥೆಗೆ ಗುತ್ತಿಗೆ ಮುಂದುವರಸಿ ಪಾವತಿ ಮಾಡಿದ ಮೊತ್ತ ರೂ:273312/- ನಿಯಮಬಾಹಿರವಾಗಿರುತ್ತದೆ.

4) ಶ್ರೀ ಗಂಗಾ ಫೆಸಿಲಿಟಿ ಮತ್ತು ಮ್ಯಾನೇಜ್‌ಮೆಂಟ್ ಸರ್ವಿಸ್ ಇವರಿಂದ ಆದಾಯ ತೆರಿಗೆಯನ್ನು ಕೇವಲ ಶೇ.1 ರ ದರದಲ್ಲಿ **ರೂ:16967/-**ಮುರುವಳಿ ಮಾಡಲಾಗಿರುತ್ತದೆ.ಶ್ರೀಗಂಗಾ ಫೆಸಿಲಿಟಿ ಅಂಡ್ ಮ್ಯಾನೇಜ್‌ಮೆಂಟ್ ಸರ್ವಿಸ್ ಇದು ಒಂದು ಫರ್ಮ್ ಆಗಿದ್ದು ಆದಾಯ ತೆರಿಗೆ ಅಧಿನಿಯಮ-1961ರ ಸೆಕ್ಷನ್ 194 ಸಿ ಯ ಪ್ರಕಾರ ಶೇ.2ರ ದರದಲ್ಲಿ ಮುರುವಳಿ ಮಾಡಬೇಕಾಗಿರುತ್ತದೆ.ಹಾಗಾಗಿ ಸದ್ರಿ ಸಂಸ್ಥೆಯಿಂದ **ರೂ:16967/-**ಗಳನ್ನು ವಸೂಲಿಸಿ ಆದಾಯ ತೆರಿಗೆ ಇಲಾಖೆಗೆ ಪಾವತಿಸಲು ಸೂಚಿಸಲಾಗಿದೆ.

5) 2015 ಅಕ್ಟೋಬರ್ ನಿಂದ E-Procurement ಮೂಲಕ ಹೊಸದಾಗಿ ಟೆಂಡರ್ ಕರೆಯಲಾಗಿದೆ. ಅಂದಾಜು **ಮೊತ್ತ-1937090/-**

ವೆಬ್‌ಸೈಟನಲ್ಲಿ ಟೆಂಡರ್ ಪಾರಂ ಪಡೆಯುವ ಪ್ರಾರಂಭ ದಿನಾಂಕ:24-08-2015 ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ:-09-09-2015 ಅಂದರೆ ಕೇವಲ 17 ದಿನ ಸಮಯ ನೀಡಿರುವುದು ಕೆ.ಟಿ.ಪಿ.ಪಿ. ಆ್ಯಕ್ಟ್ 1999 ನಿಯಮ 2000ರ ನಿಯಮ 17(ಎ)ರ ಉಲ್ಲಂಘನೆಯಾಗಿರುತ್ತದೆ.ಟೆಂಡರನ್ನು ಪ್ರಚುರ ಪಡಿಸಲು ಜಿಲ್ಲಾ ಟೆಂಡರ್‌ಬುಲೆಟಿನ್‌ನಲ್ಲಿ ಪ್ರಕಟಿಸಿದ ಕುರಿತು ವಿವರಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿಲ್ಲ.

6) The Contract Labours(Regulation And Abolition) Act 1970 ಸೆಕ್ಷನ್ 7 ರ ಪ್ರಕಾರ ಹಂಪಿ ಕನ್ನಡ ವಿ.ವಿ.ಯು ಪ್ರಧಾನ ಉದ್ಯೋಗದಾತ ಸಂಸ್ಥೆಯಾಗಿ ನೊಂದಣಿಯಾಗಬೇಕಿರುತ್ತದೆ ಆದರೆ ಈ ರೀತಿ ನೊಂದಣಿಯಾಗಿರುವುದಿಲ್ಲ.

7) The Contract Labours(Regulation And Abolition) Act 1970 ಸೆಕ್ಷನ್‌ನ 12 ರ ಪ್ರಕಾರ ಗುತ್ತಿಗೆ ಕಾರ್ಮಿಕರನ್ನು ಪೂರೈಸಲು ಗುತ್ತಿಗೆದಾರರು ಲೈಸೆನ್ಸ್ ಪಡೆಯಬೇಕಾಗಿರುತ್ತದೆ, ಆದರೆ ಶ್ರೀ ದಾವಲ್‌ಸಾಬ್ ಹುಲಿಗಿ ಇವರು ಸಿವಿಲ್ ಗುತ್ತಿಗೆದಾರರಾಗಿದ್ದು ಕಾರ್ಮಿಕರನ್ನು ಪೂರೈಸಲು ಲೈಸೆನ್ಸ್ ಪಡೆದಿರುವುದಿಲ್ಲ.

8) The Contract Labours(Regulation And Abolition) karnataka rules 1974 ರ ನಿಯಮ 72ರ ಪ್ರಕಾರ ಹಂಪಿ ಕನ್ನಡ ವಿ.ವಿ.ಯು ಗುತ್ತಿಗೆದಾರನು ಕಾರ್ಮಿಕರಿಗೆ ವೇತನ ವಿತರಿಸುವ ಸಮಯದಲ್ಲಿ ವಿ.ವಿ.ಯ ಒಬ್ಬ ಅಧಿಕಾರಿಯನ್ನು ಪ್ರತಿನಿಧಿಯಾಗಿ ನೇಮಿಸಿ ಕಾರ್ಮಿಕರಿಗೆ ತನ್ನ ಪ್ರತಿನಿಧಿಯ ಸಮ್ಮುಖದಲ್ಲಿ ವೇತನವನ್ನು ಸಮರ್ಪಕವಾಗಿ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಂಡ ಕುರಿತು ದಾಖಲೆ ನೀಡದಿರುವುದು ಮತ್ತು ನಿಯಮ 73 ರ ಪ್ರಕಾರ ಇದೇ ಪ್ರತಿನಿಧಿಯು Register Of

Wages)Register Of Wages Cum Muster Roll ಗೆ ಸಹಿ ಮಾಡಿದ ಕುರಿತು ಪ್ರಮಾಣ ಪತ್ರ ಹಾಕಿರುವುದಕ್ಕೆ ಸಂಬಂಧಿಸಿದಂತೆ ದಾಖಲೆ ನೀಡಿರುವುದಿಲ್ಲ .ಈ ಮೇಲಿನ ನ್ಯೂನತೆಗಳಿಗೆ ಸಂಬಂಧಿಸಿದಂತೆ ಲೆ.ಪ ವಿಚಾರಣಾ ಪತ್ರ ಸಂಖ್ಯೆ:62 ದಿನಾಂಕ:01-07-2016 ರಂದು ನೀಡಲಾಗಿದ್ದು ಯಾವುದೇ ವಿವರಣೆ ನೀಡಿರುವುದಿಲ್ಲ.

ಈ ಮೇಲಿನ ನ್ಯೂನತೆಗಳಿಗಾಗಿ 2014-15 ಮತ್ತು 2015-16ರಲ್ಲಿ ಸ್ವಚ್ಛತಾ ಕೆಲಸಗಾರರಿಗೆ ಪಾವತಿ ಮಾಡಿದ ಮೊತ್ತ **ರೂ:3179432/-ಗಳನ್ನು** ಆಕ್ಷೇಪಣೆಯಲ್ಲಿಡಲಾಗಿದೆ. ಹಾಗೂ ರೂ:16967/-ಗಳನ್ನು ವಸೂಲಿಸಿ ಆದಾಯ ತೆರಿಗೆ ಇಲಾಖೆಗೆ ಪಾವತಿಸಲು ಸೂಚಿಸಿದೆ. ವಿವರಗಳನ್ನು **ಅನುಬಂಧ-28** ರಲ್ಲಿ ಲಗತ್ತಿಸಿದೆ.

**ಪುನರ್‌ಪರಿಶೀಲನಾ** ಸಮಯದಲ್ಲಿ ಮೇಲಿನ ಆಕ್ಷೇಪಣೆಗೆ ವಿವರಣೆ ನೀಡಿರುತ್ತಾರೆ. ಪರಿಶೀಲಿಸಲಾಗಿ ಕಂಡಿಕೆ ಸಂಖ್ಯೆ **2.5.18** ರಲ್ಲಿ ತಿಳಿಸಿದಂತೆ ಅದೇ ಉತ್ತರವನ್ನು ಈ ಕಂಡಿಕೆಗೂ ಸಲ್ಲಿಸಿರುತ್ತಾರೆ. ಆದ್ದರಿಂದ ಈ ವಿವರಣೆಯನ್ನು ಒಪ್ಪಲು ಸಾಧ್ಯವಿಲ್ಲ ಆದ್ದರಿಂದ ಕಂಡಿಕೆಯನ್ನು ಮುಂದುವರೆಸಲಾಗಿದೆ.

## 2.5.19)ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧೀಕಾರದಿಂದ ಅನುಮತಿ ಪಡೆಯದಿರುವ ಬಗ್ಗೆ:-

ಕರ್ನಾಟಕ ರಾಜ್ಯ ಪತ್ರ ವಿಶೇಷ ಪತ್ರಿಕೆ ಬುಧವಾದ ಜೂನ್ 4.2003ರಲ್ಲಿ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧೀಕಾರ ಅಧಿನಿಯಮ 2003 ಸೆಕ್ಷನ್ 14ರನ್ವಯ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧೀಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಸ್ಥೆಗಳು ಕಾಮಗಾರಿ ಪ್ರಾರಂಭಿಸುವ ಮುನ್ನ ಸದರಿ ಪ್ರಾಧೀಕಾರದ ಪೂರ್ವಾನುಮತಿ ಪಡೆಯಬೇಕು ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ.ವಿಕಾಸ ಸೌಧ.ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:ನಅಇ:161:ಬೆಮಪ್ರಾ:2006:ದಿನಾಂಕ:04-01-2007ರಲ್ಲಿ ಷೆಡೂಲ್-1 ರಲ್ಲಿ ಕ್ರಮ ಸಂಖ್ಯೆ:10ರಲ್ಲಿ ಕಮಲಾಪುರ ಪಟ್ಟಣ ಪಂಚಾಯತಿ ವ್ಯಾಪ್ತಿಯ ಹಾಗೂ ಸುತ್ತಮುತ್ತಲ ಪ್ರದೇಶವನ್ನು ಕೋರ್ ಜೋನ್ ಎಂದು ಸರ್ಕಾರ ಘೋಷಿಸಲಾಗಿದೆ.

ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ:71:ದಿನಾಂಕ:22-07-2016ರಲ್ಲಿ 1991ರಿಂದ ಇದುವರೆಗಿನ ವಿಶ್ವವಿದ್ಯಾಲಯದ ಎಲ್ಲಾ ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ ಸದರಿ ಪ್ರಾಧೀಕಾರದ ಪೂರ್ವಾನುಮತಿ ಪಡೆದಿರುವ ಬಗ್ಗೆ ಲೆಕ್ಕ ತನಿಖೆಗೆ ವಿವರ ನೀಡಲು ಸೂಚಿಸಿತ್ತು. ಆದರೆ ಲೆಕ್ಕ ತನಿಖಾ ವಿಚಾರಣೆಗೆ ಯಾವುದೇ ಉತ್ತರ ನೀಡಿರುವುದಿಲ್ಲ, ಲೆಕ್ಕ ತನಿಖೆಯಲ್ಲಿ ಸದರಿ ಪ್ರಾಧೀಕಾರದ ಪೂರ್ವಾನುಮತಿ ಪಡೆದಿದಿರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿಲ್ಲ.ಹಂಪಿ ವಿಶ್ವ ಪರಂಪರೆ ಪ್ರದೇಶಾಭಿವೃದ್ಧಿ ಪ್ರಾಧೀಕಾರದ ಪೂರ್ವಾನುಮತಿ ಪಡೆದಿರುವ ವಿವರವನ್ನು ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸಲು ಸೂಚಿಸಿದೆ.

ಹಂಪಿ ವಿಶ್ವ ಪರಂಪರೆ ಪ್ರಾಧೀಕಾರದ ಅನುಮತಿ ಪಡೆಯದೆ ವಿಶ್ವವಿದ್ಯಾಲಯದ ಆವರಣದಲ್ಲಿ ಕೋಟಿಗಟ್ಟಲೆ ಮೊತ್ತದ ಹಲವಾರು ಕಟ್ಟಡಗಳನ್ನು ನಿರ್ಮಿಸಲಾಗಿದ್ದು ಹಾಗೂ ನಿರ್ಮಿಸಲಾಗುತ್ತಿದ್ದು ಒಂದು ವೇಳೆ ಹಂಪಿ ಪ್ರಾಧೀಕಾರದಿಂದ ಅನುಮತಿ ನಿರಾಕರಿಸಲ್ಪಟ್ಟಲ್ಲಿ ಈ ಕಟ್ಟಡಗಳ ಭವಿಷ್ಯ ಯಾರು ನಿರ್ಧಸುತ್ತಾರೆ.ಇದರಲ್ಲಿ ವಿ.ವಿ.ಯ ಆಡಳಿತ ವರ್ಗದ ಜವಾಬ್ದಾರಿ ಎಷ್ಟು ಮತ್ತು ಇದರಿಂದ ಉಂಟಾಗುವ ಆರ್ಥಿಕ ಹಾನಿಗೆ ಯಾರು ಜವಾಬ್ದಾರರು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಕಾರಣ ಹಂಪಿ ವಿಶ್ವ ಪರಂಪರೆ ಪ್ರದೇಶಾಭಿವೃದ್ಧಿ ಪ್ರಾಧೀಕಾರದಿಂದ ತಕ್ಷಣ ಘಟನೋತ್ತರ ಅನುಮತಿ ಪಡೆದುಕೊಳ್ಳಲು ಸೂಚಿಸಿದೆ.

## 2.5.20)ಕಾಮಗಾರಿ ಬಿಲ್ಲುಗಳಲ್ಲಿ ಶಾಸನಬದ್ಧ ತೆರಿಗೆಗಳ ಕಡಿತ ಬಗ್ಗೆ:-

**2014-15ಮತ್ತು2015-16ನೇ ವರ್ಷಗಳಲ್ಲಿ** ಕಾಮಗಾರಿ ಬಿಲ್ಲುಗಳಲ್ಲಿ ಈ ಕೆಳಕಂಡಂತೆ ಶಾಸನಬದ್ಧ ತೆರಿಗೆಗಳನ್ನು ಕಡಿತಗೊಳಿಸಿದ್ದು ಪಾವತಿಸಲಾಗಿರುತ್ತದೆ.

| ಶಾಸನಬದ್ಧ ತೆರಿಗೆ ವಿವರಗಳು | 2014-15ನೇ ಸಾಲಿನಲ್ಲಿ ಕಡಿತಗೊಳಿಸಿದ್ದನ್ನು ಪಾವತಿಸುವುದು | 2015-16ನೇ ಸಾಲಿನಲ್ಲಿ ಕಡಿತಗೊಳಿಸಿದನ್ನು ಪಾವತಿಸುವುದು |
|---|---|---|
| ಆದಾಯ ತೆರಿಗೆ | 513207 | 1077904 |
| ಮಾರಾಟ ತೆರಿಗೆ | 1038312 | 2740740 |
| ರಾಜಧನ | 144278 | 297746 |
| ಕ್ಷೇಮ ನಿಧಿ | 20266 | 54826 |
| ಕಾರ್ಮಿಕ ಕಲ್ಯಾಣ ನಿಧಿ | 202662 | 548153 |
| **ಒಟ್ಟು** | **1918725** | **5720669** |

**2014-15ಮತ್ತು 2015-16** ಕಡಿತಗೊಳಿಸಿದ ಶಾಸನಬದ್ಧ ಕಡಿತಗಳನ್ನು ಸಂಬಂಧಪಟ್ಟ ಸರ್ಕಾರದ ಲೆಕ್ಕ ಶೀರ್ಷಿಕೆಗಳಿಗೆ ಸಂದಾಯ ಮಾಡಿರುತ್ತಾರೆ.

**2.5.21)ಲ್ಯಾಪ್ಸ್ಡ್ ಮತ್ತು ಕಾನ್‌ಫಿಸ್‌ಕೇಟೆಡ್ ಡಿಪಾಸಿಟ್ಸ್ ಕ್ರಮ ತೆಗೆದುಕೊಂಡಿಲ್ಲ:-**

ಕೆಪಿಡಬ್ಲ್ಯು ಕೋಡ್ ವಾಲ್ಯೂಂ-1 ಪ್ಯಾರಾಗ್ರಾಫ್ 399 ಪ್ರಕಾರ ಪ್ರತಿ ವರ್ಷದ 31 ನೇ ಮಾರ್ಚ್ ಅಂತ್ಯಕ್ಕೆ 3 ವರ್ಷ ಮುಗಿದ ಕ್ಲೇಮ್ ಮಾಡದಿರುವ ಡಿಪಾಸಿಟ್ ಮೊತ್ತಗಳನ್ನು ಸರ್ಕಾರದ ಆದಾಯವೆಂದು ಪರಿಗಣಿಸಿ ಸದರಿ ಡಿಪಾಸಿಟ್‌ಗಳನ್ನು ನಗದುಪುಸ್ತಕದ ಮೂಲ ಎಂಟ್ರ ಮುಂದೆ ನಮೂದಿಸಿ ಸದರಿ ಮೂರು ವರ್ಷಮುಗಿದ ಗುತ್ತಿಗೆದಾರರು ಕ್ಲೇಮ್ ಮಾಡದಿರುವ ಡಿಪಾಸಿಟ್‌ಗಳನ್ನು ಲ್ಯಾಪ್ಸ್ಡ್ ಎಂದು ಪರಿಗಣಿಸಿ ವಿಶ್ವವಿದ್ಯಾಲಯದ ಆದಾಯವೆಂದು ಪರಿಗಣಿಸಬೇಕಾಗಿದ್ದು ಇದುವರೆವಿಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ನಿಯಮಾನುಸಾರ ಸೂಕ್ತ ಕ್ರಮ ಕೈಗೊಂಡು ಸಕ್ಷಮ ಪ್ರಾಧೀಕಾರದ ಅನುಮತಿ ಪಡೆದು ಈ ಮೊತ್ತವನ್ನು ವಿ.ವಿ.ನಿಧಿ ಖಾತೆಗೆ ಜಮೆ ಪಡೆದುಕೊಳ್ಳಲು ಸೂಚಿಸಿದೆ.2014-15ಮತ್ತು2015-16ನೇ ಸಾಲಿನ ವರ್ಷಾಂತ್ಯಕ್ಕೆ ಉಳಿದ ಠೇವಣಿಗಳ **ಮೊತ್ತ ರೂ:3312855/-ಆಗಿದ್ದು ಅನುಬಂಧ-29 ರಲ್ಲಿ** ವಿವರಿಸಿದೆ.

**2.5.22)ಕನ್ನಡ ವಿ.ವಿ. ವಿದ್ಯಾರಣ್ಯದಲ್ಲಿ ನಡೆದ ಶಿಲ್ಪಕಲಾ ಶಿಬಿರದಲ್ಲಿ ನಿಯಮಬಾಹಿರವಾಗಿ ವೆಚ್ಚ ಮಾಡಿರುವುದು ಹಾಗೂ ಟೆಂಡರ್ ನಿಯಮ ಪಾಲಿಸದಿರುವುದು:-**

ಚಿತ್ರಕಲಾ ವಿಭಾಗದ ಕಡತಗಳನ್ನು ಪರಿಶೀಲಿಸಲಾಗಿದ್ದು 2014-15ನೆ ಸಾಲಿನಲ್ಲಿ ಶಿಲ್ಪಕಲಾ ಶಿಬಿರವನ್ನು ನಡೆಸಲು ರೂ:1000000/-ಅಂದಾಜು ವೆಚ್ಚದ ವಿವರ ಪಟ್ಟಿ ತಯಾರಿಸಲಾಗಿರುತ್ತದೆ.ಆದರೆ ವಾಸ್ತವಿಕವಾಗಿ ರೂ:1020658/-ವೆಚ್ಚ ಮಾಡಲಾಗಿರುತ್ತದೆ. ಈ ಶಿಬಿರದ ಅಂದಾಜು ಪಟ್ಟಿ ವೋಚರುಗಳನ್ನು ಪರಿಶೀಲಿಸಲಾಗಿದ್ದು ಈ ಕೆಳಗಿನಂತೆ ನ್ಯೂನತೆಗಳು ಕಂಡುಬಂದಿರುತ್ತದೆ.

1)ಅಂದಾಜು ಪಟ್ಟಿಯಲ್ಲಿ ಶಿಬಿರದ ಉದ್ಘಾಟನೆ ಸಮಾರಂಭ ಹಾಗೂ ಸಮಾರೋಪಕ್ಕೆ ಆಗಮಿಸುವ 4 ಜನ ಅತಿಥಿಗಳ ಪ್ರಯಾಣ ಭತ್ಯೆಗೆ 4*5000=20000/-ನಿಗದಿಪಡಿಸಲಾಗಿರುತ್ತದೆ.ಆದರೆ ವಾಸ್ತವವಾಗಿ ಪ್ರೋ.ಹೆಚ್.ಎಸ್.ಶಿವಪ್ರಕಾಶ್ ನೆಹರು.ವಿ.ವಿ ನವದೆಹಲಿ ಇವರಿಗೆ ಸಮಾರೋಪ ಭಾಷಣದ ಸಂಭಾವನೆ ರೂ:2000/-ನೀಡಲಾಗಿದೆ. ಶ್ರೀ.ಯುತರಿಗೆ ಕರ್ನಾಟಕ ಹೋಟೆಲ್‌ಭುವನೇಶ್ವರಿ ಹಂಪಿಯಲ್ಲಿದಿನಾಂಕ:25-08-2014ರಿಂದ28-082014ರವರೆಗೆ 2ರೂಮುಗಳು **(ರೂ:403ಮತ್ತುರೂಂನಂಬರ್404)** ಮಾಡ ಲಾಗಿರುತ್ತದೆ. ಸದ್ರಿಯವರೆಗೆದಿನಾಂಕ:27-08-2014ರಂದು ಸಮಾದೋಪಭಾಷಣ ನಿಗದಿಯಾಗಿರುತ್ತದೆ.ಈ ಹಿನ್ನಲೆಯಲ್ಲಿ ಸದ್ರಿಯವರ ರೂಮುಗಳ ಬಾಡಿಗೆ ಯಾಗಿ ಪಾವತಿಸಿದ ಮೊತ್ತ ರೂ12540/-ಹಾಗೂ ಉಟೋಪಚಾರದ ವೆಚ್ಚ ರೂ:5860/-ಗಳನ್ನು ಒಪ್ಪಲಾಗದು. ಶ್ರಿ.ಯುತರಿಗೆ ರೂ:2000/-ಸಾಂಭಾವನೆ ನೀಡಿರುವುದು ಸೂಕ್ತವಾಗಿದೆ.ಆದರೆ ಶ್ರೀ.ಯತರು ಹಾಗೂ ಅವರ ಕುಟುಂಬ ಸದಸ್ಯರಿಗೆ ಮಾಡಿದ ಒಟ್ಟು ವೆಚ್ಚ ರೂ:18400/-(12540+5860)ಗಳನ್ನು ಆಕ್ಷೇಪಿಸಲಾಗಿದೆ.

ಈ ಶಿಬಿರವು ಕನ್ನಡ ವಿ.ವಿ.ವಿದ್ಯಾರಣ್ಯ ಅವರಣದಲ್ಲಿ ನಡೆದಿರುತ್ತದೆ. ಆದರೆ ವಸತಿ ವ್ಯವಸ್ಥೆಯನ್ನು ಹೊಸಪೇಟೆಯ ಸಾಲಿಟೇರ್ ರಾಯಲ್ ಕಂಫರ್ಟ್‌ನಲ್ಲಿ 15ರೂಮುಗಳನ್ನು ಬಾಡಿಗೆಗೆ ಪಡೆಯಲಾಗಿರುತ್ತದೆ. ವಿ.ವಿ.ಯಲ್ಲಿ ಅತಿಥಿಗೃಹ ಹಾಗೂ ವಸತಿಗೃಹಗಳಿದ್ದಾಗ್ಯೂ ಈ ರೀತಿ ಹೋಸಪೇಟೆಯ ಹೊಟೆಲ್‌ನಲ್ಲಿ ರೂಮುಬಾಡಿಗೆ ಪಡೆದು ರೂ:79560/-ಗಳನ್ನು ಬಾಡಿಗೆಯಾಗಿ ಪಾವತಿಸಿರುವುದು ಹೋಗಲಾಡಿಸಬಹುದಾದ ವೆಚ್ಚವಾಗಿರುತ್ತದೆ(Avoidable Expenrditure) ಈ ರೀತಿ ಬಾಡಿಗೆಗೆ ರೂಮುಗಳನ್ನು ಪಡೆದು ಹಣ ಪಾವತಿಸುವುದು ವಿ.ವಿ.ಯ ಆರ್ಥಿಕ ಹಿತದೃಷ್ಟಿಯಿಂದ ಸೂಕ್ತ ಕ್ರಮವಾಗಿರುವುದಿಲ್ಲ. ಹೊಸಪೇಟೆಯ ಲಾಡ್ಜ್‌ಗಳಲ್ಲಿ ರೂಮುಗಳನ್ನು ಬಾಡಿಗೆಗೆ ಪಡೆದಿರುವುದರಿಂದಲೇ ಅಲ್ಲಿಂದ ವಿ.ವಿ.ಗೆ ಬಂದು ಹೋಗಲು ಸಾರಿಗೆ ವೆಚ್ಚವಾಗಿ ರೂ:59000/-ವನ್ನು ನಂದಿ ಟೂರ್ಸ್ ಆಂಡ್ ಟ್ರಾವಲ್ಸ್‌ಗೆ ಪಾವತಿಸಿರುವುದು Avoidable Expenditure ಆಗಿರುತ್ತದೆ. ಈ ಸಾರಿಗೆ ಕೆಲಸಕ್ಕಾಗಿ ಕೆಎ-06-8761-ಮಿನಿಬಸ್ ಹಾಗೂ ಕೆಎ-35-8909 ಇಂಡಿಗೋ ಕಾರ್‌ನ್ನು ದಿನಾಂಕ:18-08-2014ರಿಂದ27-08-2014ರ ವರೆಗೆ ಬಾಡಿಗೆ ಪಡೆಯಲಾಗಿರುತ್ತದೆ.ಒಟ್ಟು ರೂ:138560/- Avoidable Expenditure ಆಗಿರುತ್ತದೆ.ಈ ವಿಷಯಕ್ಕೆ ಸಂಬಂಧಿಸಿದಂತೆ ವಿ.ಪತ್ರ ಸಂಖ್ಯೆ:-48/09-06-2016ರಂದು ನೀಡಲಾಗಿತ್ತು ಅದರಲ್ಲಿ ನೀಡಿರುವ ಅನುಸರಣೆಗೆ ಸಂಬಂಧಿಸಿದಂತೆ ಪ್ರಯಾಣ ಭತ್ಯೆ ಹಾಗೂ ಸಂಭಾವನೆಯನ್ನು ಮಾತ್ರ ಒಪ್ಪಲಾಗಿದ್ದು ಉಳಿದವುಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಈ ಮೇಲಿನ ನ್ಯೂನ್ಯತೆಗಳಿಗಾಗಿ **ರೂ156960/-** ಗಳನ್ನು ಆಕ್ಷೇಪಿಸಲಾಗಿದೆ.

**2.5.23)ಚಿತ್ರಕಲಾ ವಿದ್ಯಾಲಯಗಳಿಗೆ ನಿಯಮ ಬಾಹಿರವಾಗಿ ಪುಸ್ತಕಗಳನ್ನು ಖರೀದಿಸಿರುವುದು:-**

2014-15 ಮತ್ತು 2015-16ನೇ ಸಾಲಿನ ಕನ್ನಡ ವಿ.ವಿ.ಯ ಲೆಕ್ಕ ಪರಿಶೋಧನೆಯಲ್ಲಿ ಚಿತ್ರಕಲೆ ವಿಭಾಗದ ಕಡತಗಳನ್ನು ಪರಿಶೀಲಿಸಲಾಗಿದ್ದು ಕನ್ನಡ ವಿ.ವಿ.ಯ ಕ್ರಿಯಾ ಯೋಜನೆಯಲ್ಲಿ**(ಚಿತ್ರಕಲಾ ವ್ಯಾಸಂಗದ ಪಠ್ಯ ಕ್ರಮ ತರಬೇತಿ ಮತ್ತು ಪ್ರಕಟಣೆ)** ಕ್ರಮ ಸಂಖ್ಯೆ:6ರಲ್ಲಿ 65 ಚಿತ್ರಕಲಾ ವಿದ್ಯಾಲಯಗಳಿಗೆ ಅತ್ಯಾವಶ್ಯಕ ಪುಸ್ತಕಗಳು ಹಾಗೂ ಇತರೆ ಸಾಮಗ್ರಿಗಳನ್ನು ಉಚಿತವಾಗಿ ವಿತರಿಸಲು ಒಂದು ಚಿತ್ರಕಲಾ ವಿದ್ಯಾಲಯಕ್ಕೆ ರೂ:15000*65=975000/-ನಿಗದಿಯಾಗಿರುತ್ತದೆ.

ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಬಜೆಟ್ಟಿನಲ್ಲೂ ಕ್ರಮ ಸಂಖ್ಯೆ:6.6ರಲ್ಲಿ ಚಿತ್ರಕಲಾ ವಿದ್ಯಾಲಯಗಳಿಗೆ ಅತ್ಯಾವಶ್ಯಕ ಪುಸ್ತಕ ಹಾಗೂ ಇತರ ಸಾಮಗ್ರಿಗಳ ವಿತರಣೆಗೆ.

1)ಪ್ರತಿ ಚಿತ್ರಕಲಾ ವಿದ್ಯಾಲಯಕ್ಕೆ **ರೂ:7500/-**ಮೊತ್ತದ ಪುಸ್ತಕಗಳು **65*7500=487500/-**
2)ಪ್ರತಿ ಚಿತ್ರಕಲಾ ವಿದ್ಯಾಲಯಕ್ಕೆ **ರೂ:7500/-ಗಳ ಪೂರಕ ಸಾಮಗ್ರಿಗಳಿಗೆ 65*75000=487500/-**ನಿಗದಿಪಡಿಸಲಾಗಿರುತ್ತದೆ.

ಖರೀದಿ ಕಡತಗಳನ್ನು ಪರಿಶೀಲಿಸಲಾಗಿ ಪೂರಕ ಸಾಮಗ್ರಿಗಳನ್ನು ಬಿಟ್ಟು ಕೇವಲ ಪುಸ್ತಕಗಳನ್ನು ಒಟ್ಟಾರೆ ಮೊತ್ತ **ರೂ:917175/-**ಗಳಿಗೆ ಖರೀದಿಸಿರುವುದು ಲೆಕ್ಕ ಪರಿಶೋಧನೆಗೆ ಕಂಡು ಬಂದಿರುತ್ತದೆ. ಯಾವುದೇ ಪುಸ್ತಕಗಳನ್ನು ಖರೀದಿಸುವ ಮೊದಲು ಸಂಬಂಧಿಸಿದ 65 ಕಾಲೇಜುಗಳಿಂದ ಇಂಡೆಂಟ್‌ಗಳನ್ನು ಪಡೆಯುವುದು ಮೂಲ ಪರಿಕಲ್ಪನೆಯಾಗಿರುತ್ತದೆ.ಈ ರೀತಿ ಇಂಡೆಂಟ್ ಪಡೆಯುವುದರಿಂದ ಪ್ರತಿಯೊಂದು ಕಾಲೇಜಿಗೆ ಅಗತ್ಯವಾಗಿ ಬೇಕಾಗಿರುವ ಪುಸ್ತಕಗಳ ವಿವರ ಸಿಗುತ್ತದೆ.ಆ ಪುಸ್ತಕಗಳನ್ನು ಖರೀದಿಸುವುದರಿಂದ ಎಲ್ಲಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಗೆ ಅನುಕೂಲವಾಗುತ್ತದೆ.
*ಚಿತ್ರಕಲಾ ವಿಭಾಗದವರು ಪುಸ್ತಕ ಖರೀದಿಸುವ ಬದಲು ವಿ.ವಿ.ಯಲ್ಲಿ ಇರುವ ಗ್ರಂಥಾಲಯ ಮುಖ್ಯಸ್ಥರಿಗೆ ವಹಿಸಿದ್ದರೆ ಅತ್ಯುತ್ತಮ ಪುಸ್ತಕಗಳನ್ನು ಇನ್ನೂ ಹೆಚ್ಚಿನ ರಿಯಾಯಿತಿದರದಲ್ಲಿ ಖರೀದಿಸಲು ಸಾಧ್ಯವಾಗುತ್ತಿತ್ತು.
*ಪುಸ್ತಕಗಳ ಗುಣಪಟ್ಟದ ಕುರಿತು ಯಾವುದೇ ದೃಢೀಕರಣ ಇರುವುದಿಲ್ಲ.
*ಪುಸ್ತಕಗಳನ್ನು ಖರೀದಿಸುವ ಮೊದಲು ಸಂಬಂಧಪಟ್ಟ ಕಾಲೇಜುಗಳಲ್ಲಿ ಆ ಪುಸ್ತಕಗಳು ಇವೆಯೋ ಇಲ್ಲವೋ ಆ ಪುಸ್ತಕಗಳ ಉಪಯುಕ್ತತೆ ಮೌಲ್ಯಿಕತೆ, ಅಗತ್ಯತೆ ಅನುಸರಿಸಿ ಖರೀದಿಸಬೇಕಾಗುತ್ತದೆ.ಆದರೆ ಸದ್ರಿ ಖರೀದಿ ಪ್ರಕ್ರಿಯೆಯಲ್ಲಿ ಈ ನಿಯಮಗಳನ್ನೆಲ್ಲಾ ನಿರ್ಲಕ್ಷಿಸಲಾಗಿದೆ .ಈ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಣೆ ಪತ್ರ ಸಂಖ್ಯೆ:39/26-05-2016ರಂದು ನೀಡಲಾಗಿದ್ದು ಅದರಲ್ಲಿ 30-10-2014ರಂದು ನಡೆದ ಸಲಹಾಸಮಿತಿ ಸಭೆಯಲ್ಲಿ ಪೂರಕ ಸಾಮಗ್ರಿಗಳ ಬದಲಾಗಿ ಪುಸ್ತಕಗಳನ್ನು ಖರೀದಿಸಲು ನಿರ್ಣಯ ಮಾಡಲಾಯಿತು ಎಂದು ತಿಳಿಸಲಾಗಿದೆ.ಯಾವ ಯಾವ ಪುಸ್ತಕಗಳು ಅಗತ್ಯ ಎಂಬುದು ಕಾಲೇಜುಗಳಿಂದ ಪಡೆಯುವ ಇಂಡೆಂಟ್‌ಗಳಿಂದ ಮಾತ್ರ ನಿರ್ಧರಿಸಲು ಸಾಧ್ಯವಾಗುತ್ತದೆ. ಸದ್ರಿ ಪುಸ್ತಕ ಖರೀದಿ ಪ್ರಕ್ರಿಯಲ್ಲಿ ಖರೀದಿಸಿದ ಪುಸ್ತಕಗಳು ಈಗಾಗಲೇ ಆ ಕಾಲೇಜುಗಳಲ್ಲಿ ಲಭ್ಯವಿದ್ದರೆ ಈ ಖರೀದಿ ಪ್ರಕ್ರಿಯೆ ಅನುಪಯುಕ್ತ ವೆಚ್ಚವಾಗುತ್ತದೆ. ಮುಂದೇ ಈ ರೀತಿ ಮಾಡದಂತೆ ಸಮರ್ಪಕ ವಿಧಾನ ಮತ್ತು ನಿಯಮಗಳನ್ವಯ ಖರೀದಿ ಪ್ರಕ್ರಿಯೆ ನಡೆಸುವುದು ಹಾಗೂ ಈ ಖರೀದಿ ಪ್ರಕ್ರಿಯೆಯಲ್ಲಿ ಮಾಡಿದ ವೆಚ್ಚ **ರೂ:917175/-**(ಚೆಕ್ ಸಂಖ್ಯೆ:0111193 ದಿನಾಂಕ:03-12-2014)ನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 2.5.24)2014-15ನೆ ಸಾಲಿನಲ್ಲಿ ಉತ್ತರ ಪತ್ರಿಕೆ ಪುಸ್ತಕಗಳ ಮುದ್ರಣ ಹಾಗೂ ಮುದ್ರಿತ ಲಕೋಟೆಗಳ ಖರೀದಿಯಲ್ಲಿ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು:-

ಕನ್ನಡ ವಿಶ್ವವಿದ್ಯಾಲಯ ಹಂಪಿಯ ದೂರ ಶಿಕ್ಷಣ ನಿರ್ದೇಶನಾಲಯ ಕೇಂದ್ರಕ್ಕೆ 2014-15ನೇ ಸಾಲಿನ ಉತ್ತರ ಪತ್ರಿಕೆಗಳ ಲಕೋಟೆಗಳು, ಪಶ್ನೆ ಪತ್ರಿಕೆ. ಉತ್ತರ ಪತ್ರಿಕೆಗಳ ಮುದ್ರಣಗಳನ್ನು ಟೆಂಡರ್ ಮುಖಾಂತರ ಖರೀದಿಸಲು ದಿನಾಂಕ:26-07-2014ರಂದು ಸ್ಥಳೀಯ ಪತ್ರಿಕೆಗಳಾದ ಲೋಕದರ್ಶನ ಮತ್ತು ಸಂಜೆವಾಣಿ ಪತ್ರಕೆಗಳಲ್ಲಿ ಪ್ರಕಟಣೆ ಮಾಡಲಾಗದೆ ಈ ಟೆಂಡರ್ ಪ್ರಕ್ರಿಯೆಯಲ್ಲಿ 5 ಜನ ಗುತ್ತಿಗೆದಾರರು ಭಾಗವಹಿಸಿದ್ದು **ವಿಜಯ ಬುಕ್ಸ್ ಅಂಡ್ ಸ್ಟೇಷನರಿ ವಿದ್ಯಾರಣ್ಯ** ಇವರು ಕಡಿಮೆ ಧರ ನಮೂದಿಸಿದ್ದು ಸದರಿಯವರು ಎಲ್.1 ಆಗಿದ್ದು.ಇವರಿಗೆ ಟೆಂಡರ್ ವಹಿಸಿಕೊಡಲಾಗಿದೆ. ಪರಿಶೀಲಿಸಿದಾಗ ಟೆಂಡರ್ ಪ್ರಕ್ರಿಯೆಯಲ್ಲಿ ಈ ಕೆಳಗಿನಂತೆ ನ್ಯೂನತೆಗಳು ಕಂಡು ಬಂದಿರುತ್ತದೆ.

1)ಕೆ.ಟಿ.ಪಿ.ಪಿ ನಿಯಮ 2000 ನಿಯಮ 8 ರ ಪ್ರಕಾರ ರು:100000/-ಕ್ಕಿಂತ ಹೆಚ್ಚಾಗಿರುವ ಅಂದಾಜು ಮೊತ್ತದ ಟೆಂಡರ್ ಪ್ರಕಟಣೆಗಳನ್ನು ಜಿಲ್ಲಾ ಟೆಂಡರ್‌ಬುಲೆಟಿನಲ್ಲಿ ಪ್ರಚಾರ ಮಾಡಬೇಕಾಗುತ್ತದೆ.ಸದರಿ ಟೆಂಡರ್‌ನಲ್ಲಿ ಈ ನಿಯಮ ಪಾಲಿಸಿರುವುದಿಲ್ಲ.

2)**ಕೆ.ಟಿ.ಪಿ.ಪಿ ನಿಯಮ 2000 ನಿಯಮ 10** ರ ಪ್ರಕಾರ ಹೆಚ್ಚಿನ ಪ್ರಸರಣೆ ಹೊಂದಿರುವ ದಿನ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿದ್ದು ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಸ್ಥಳೀಯ ಪತ್ರಿಕೆಗಳಾದ ಸಂಜೆಯವಾಣಿ ಮತ್ತು ಲೋಕದರ್ಶನ ಪತ್ರಿಕೆಗಳಲ್ಲಿ ಮಾತ್ರ ಪ್ರಕಟಿಸಲಾಗಿದೆ.

3) ಕೆ.ಟಿ.ಪಿ.ಪಿ ನಿಯಮ 2000 ನಿಯಮ 17(ಎ) ರ ಪ್ರಕಾರ ರೂ:2 ಕೋಟಿ ಟೆಂಡರ್ ಮೊತ್ತವಿರುವ ಟೆಂಡರ್‌ಗಳಿಗೆ ಕನಿಷ್ಟ 30ದಿನಗಳ ಸಮಯವನ್ನು ಟೆಂಡರ್ ಪ್ರಕ್ರಿಯಗಳಿಗೆ ನೀಡಬೇಕಾಗಿರುತ್ತದೆ.ಆದರೆ ಸದರಿ ಟೆಂಡರ್‌ನಲ್ಲಿ ನೋಟಿಫೀಕೆಷನ್ ದಿನಾಂಕ:23-07-2014 ಪತ್ರಿಕೆಗೆ ಪ್ರಕಟಿಸಿದ ದಿನಾಂಕ:26-07-2014 ಖಾಲಿ ಟೆಂಡರ್ ಫಾರಂ ಪಡೆಯುವ ಕೊನೆಯ

ದಿನಾಂಕ:30-07-2014 ಹಾಗೂ ಭರ್ತಿ ಮಾಡಿದ ಟೆಂಡರ್ ಫಾರಂ ವಿತರಿಸುವ ಕೊನೆಯ ದಿನಾಂಕ:01-08-2014 ಸಂಜೆ 3 ಗಂಟೆ ಎಂದು ಪ್ರಕಟಿಸಿದ್ದು.ಕೇವಲ 10ದಿನಗಳಲ್ಲಿ ಈ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ.

4) ಕೆ.ಟಿ.ಪಿ.ಪಿ ನಿಯಮ 2000 ನಿಯಮ 27ರ ಪ್ರಕಾರ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಯು ಟೆಂಡರ್‌ನಲ್ಲಿ ಭಾಗವಹಿಸುವ ಟೆಂಡರ್‌ದಾರರಿಗೆ ಇರಬೇಕಾದ ಫ್ರಿಕ್ವಾಲಿಫಿಕೇಷನ್ನು ನಿಗದಿಪಡಿಸಬೇಕಾಗಿರುತ್ತದೆ.ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಈ ನಿಯಮ ಅನುಸರಿಸಿರುವುದಿಲ್ಲ.

ಮೇಲಿನ ಆಕ್ಷೇಪಣೆ ವಿವರಣೆ ಕೋರಿ **ದಿನಾಂಕ 27-05-2016ರಂದು** ವಿಚಾರಣಾ **ಪತ್ರ ಸಂಖ್ಯೆ 40** ನೀಡಲಾಗಿದ್ದು **ಪುನರ್‌ಪರಿಶೀಲನಾ** ಸಮಯದಲ್ಲಿ ಸದರಿ ಸಂಸ್ಥೆಯವರು ನೀಡಿದ ಉತ್ತರದಲ್ಲಿ ಮೇಲಿನ ಆಕ್ಷೇಪಣೆಗಳಿಗೆ ವಿವರಣೆ ನೀಡದೆ ಚಿತ್ರ ಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಸಲಹಾಸಮಿತಿ ನಡಾವಳಿ ಹಾಗೂ ಕ್ರಿಯಾ ಯೋಜನೆಯನ್ನು ಸಲ್ಲಿಸಿರುತ್ತಾರೆ. ಮೇಲೆ ಸೂಚಿಸಿದಂತೆ ಕೆ.ಟಿ.ಪಿ.ಪಿ. ಅಧಿನಿಯಮ ಪಾಲಿಸದೆ ಈ ಖರೀದಿ ಪ್ರಕ್ರಿಯೆ ಕೈಗೊಂಡಿರುವುದರಿಂದ ರೂ. **370000/-**ಗಳನ್ನು ಆಕ್ಷೇಪಿಸಲಾಗಿದೆ.

## 2.5.25)ಟೆಂಡರ್ ನಿಯಮಗಳನ್ನು ಉಲ್ಲಂಘಿಸಿ ಬುಡಕಟ್ಟು ಚಿತ್ರ ಸಂಪುಟ ಪುಸ್ತಕಗಳನ್ನು ಮುದ್ರಣ ಮಾಡಿರುವುದು:-

ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರು ಮತ್ತು ವಾರ್ತಾ ಇಲಾಖೆ ಬೆಂಗಳೂರು ಇವರ ಸಹಯೋಗದೊಂದಿಗೆ 2012-13ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿ ವಾರ್ತಾ ಇಲಾಖೆಗೆ ಬಿಡುಗಡೆಯಾಗಿರುವ ಅನುದಾನದಿಂದ ಕರ್ನಾಟಕ ಬುಡಕಟ್ಟು ಚಿತ್ರ ಸಂಪುಟ ಕುರಿತು ಗ್ರಂಥ ಸಂಬಂಧ ನಿರ್ದೇಶಕರು ವಾರ್ತಾ ಇಲಾಖೆ ಬೆಂಗಳೂರು ಹಾಗೂ ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ನಡುವೆ ರೂ:1500000/-ಗಳಿಗೆ ದಿನಾಂಕ:01-12-2012ರಂದು ಕರಾರು ಮಾಡಿ ಕೊಂಡಿರುತ್ತಾರೆ.
ಕರ್ನಾಟಕ ಬುಡಕಟ್ಟು ಚಿತ್ರ ಸಂಪುಟ ಕನ್ನಡ ಆವೃತ್ತಿಯ 2000 ಪ್ರತಿಗಳಿಗೆ ರೂ:650000/-ಗಳ ಅಂದಾಜು ವೆಚ್ಚ ಮತ್ತು ಇಂಗ್ಲಿಷ್ ಆವೃತ್ತಿಯ 1000 ಪ್ರತಿಗಳಿಗೆ ಅಂದಾಜು ವೆಚ್ಚ ರೂ:450000/-ಗಳ ಹಾಗೂ ಸಂಭಾವನೆ ಮತ್ತು ಪೂರ್ವ ಸಿದ್ದತೆಗಾಗಿ ರೂ:400000/-ಗಳಿಗೆ ಒಟ್ಟು ರೂ:1500000/-ಗಳನ್ನು ಈ ಯೋಜನೆಗೆ ನಿಗದಿ ಪಡಿಸಲಾಗಿದೆ.
ಈ ಮೇಲಿನ 3000 ಪುಸ್ತಕಗಳನ್ನು ಮುದ್ರಿಸಲು ಟೆಂಡರ್ ಪ್ರಕ್ರಿಯೆ ಕುರಿತಂತೆ ಇ-ಟೆಂಡರ್ ಫಾರಂನಲ್ಲಿ ದಿನಾಂಕ:17-01-2014ರಂದು ಅಪ್ ಲೋಡ್ ಮಾಡಲಾಗಿದೆ ಇದರಲ್ಲಿ 4 ಜನ ಟೆಂಡರ್‌ದಾರರು ಭಾಗವಹಿಸಿರುತ್ತಾರೆ.ಸದರಿ 4 ಜನ ಟೆಂಡರ್‌ದಾರಲ್ಲಿ ಎಲ್-1 ಆಗಿ ಶ್ರೀಬಿ.ಎಲ್ ಶ್ರೀನಿವಾಸ್ ಮಯೂರ್ ಪ್ರಿಂಟ್ ಆ್ಯಡ್ಸ್ ಬೆಂಗಳೂರು ಇವರಿಗೆ ರೂ:1280500ಗಳಿಗೆ ಟೆಂಡರ್ ಅವಾರ್ಡ್ ಮಾಡಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮ 2000ದ ನಿಯಮ 8ರ ಪ್ರಕಾರ ರೂ:100000/-ಗಳಿಗೆ ಮೀರಿರುವ ಟೆಂಡರ್‌ಗಳನ್ನು ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಚರ ಪಡಿಸಬೇಕಾಗಿರುತ್ತದೆ.ಆದರೆ ಈ ಟೆಂಡರ್ ಪ್ರಕ್ರಿಯೆಯಲ್ಲಿ ಪ್ರಚರಪಡಿಸಿರುವುದಿಲ್ಲ.ಕೆ.ಟಿ.ಪಿ.ಪಿ ನಿಯಮ 2000ರ ನಿಯಮ 9ರ ಪ್ರಕಾರ ಟೆಂಡರ್ ಫಾರಂಗಳನ್ನು ವಿತರಿಸುವ ಪ್ರಾರಂಭ ದಿನಾಂಕ ಮತ್ತು ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯದಿನಾಂಕ.ಟೆಂಡರ್ ಬಿಡ್‌ಗಳನ್ನು ತೆರೆಯವ ದಿನಾಂಕ, ಸ್ಥಳ ದಿನಾಂಕ ಮತ್ತು ಸಮಯವನ್ನು ನಿಗದಿ ಪಡಿಸಬೇಕಾಗಿರುತ್ತದೆ.ಆದರೆ ಇವುಗಳನ್ನು ನಿಗದಿ ಪಡಿಸಿದ ಕುರಿತು ಲೆಕ್ಕ ಪರಿಶೋಧನೆಗೆ ಯಾವುದೇ ಮಾಹಿತಿ ಒದಗಿಸಿರುವುದಿಲ್ಲ.

ಕೆ.ಟಿ.ಪಿ.ಪಿ ನಿಯಮ 2000 ರ ನಿಯಮ 10ರ ಪ್ರಕಾರ ಟೆಂಡರ್ ಮೌಲ್ಯದ ಆಧಾರದ ಮೇಲೆ ಹಾಗೂ ಇಲಾಖೆ ನಿಯಮಗಳ ಆಧಾರದ ಮೇಲೆ ದಿನ ಪತ್ರಿಕೆಗಳಲ್ಲಿ ಟೆಂಡರ್‌ಗಳನ್ನು ಪ್ರಚುರ ಪಡಿಸಬೇಕಾಗಿರುತ್ತದೆ.ಆದರೆ ಸದರಿ ಟೆಂಡರ್ ಪ್ರಕ್ರಿಯೆಯನ್ನು ಯಾವುದೇ ದಿನ ಪತ್ರಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ.ಹಾಗೂ ಕೆ.ಟಿ.ಪಿ.ಪಿ.ನಿಯಮ 2000ನಿಯಮ 17ರ ಪ್ರಕಾರ ರೂ:2ಕೋಟಿವರೆಗಿನ ಟೆಂಡರ್‌ಗಳನ್ನು ಸಲ್ಲಿಸಲು ಕನಿಷ್ಠ 30ದಿನಗಳ ಕಾಲವಧಿ ನೀಡಬೇಕಾಗುತ್ತದೆ.ಆದರೆ ಈ ನಿಯಮ ಪಾಲಿಸಿರುವುದಿಲ್ಲ.

ಯಶಸ್ವಿ ಟೆಂಡರ್‌ದಾರರು ತಾಂತ್ರಿಕವಾಗಿ ಅರ್ಹರಿದ್ದಾರೆಯೇ ಅಥವಾ ಇಲ್ಲವೆ ಎನ್ನವುದನ್ನು ಕುರಿತು ಲೆಕ್ಕ ತನಿಖೆಗೆ ದೃಢಪಡಿಸಿಕೊಳ್ಳಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ವಾರ್ತ ಇಲಾಖೆ ನಿಗದಿ ಪಡಿಸಿರುವ ಷರತ್ತುಗಳನ್ವಯ ಕೆ.ವಿ.ವಿ.ಹಂಪಿ ಇವರು ಎಲ್-1 ಆದ ಮಯೂರ್ ಪ್ರಿಂಟ್ ಆ್ಯಡ್ಸ್ ಇವರೊಂದಿಗೆ ಕಾರಾರು ಒಪ್ಪಂದ ಮಾಡಿಕೊಳ್ಳದೆ ಮುದ್ರಣ ಆದೇಶ ನೀಡಿರುತ್ತಾರೆ ಹಾಗೂ ಶೇ.5% ರಷ್ಟು ಅಂದರೆ **ರೂ:55000/-**ಗಳ ಭದ್ರತೆ ಠೇವಣಿಯನ್ನು ಸಹ ಪಡೆಯದೇ ಟೆಂಡರ್ ನೀಡಲಾಗಿದೆ.

1) ದಿನಾಂಕ:01-12-2012ರಂದು ನಿರ್ದೇಶಕರು ವಾರ್ತಾ ಇಲಾಖೆ ಬೆಂಗಳೂರು ಇವರು ಮತ್ತು ಕುಲಸಚಿವರು ಕೆ.ವಿ.ವಿ ಹಂಪಿ ಇವರ ಮಧ್ಯೆ ಕರ್ನಾಟಕ ಬುಡಕಟ್ಟು ಚಿತ್ರ ಸಂಪುಟ ಪುಸ್ತಕ ಪ್ರಕಟಿಸುವ ಕುರಿತು ಒಪ್ಪಂದ ಮಾಡಿಕೊಳ್ಳಲಾಗಿದೆ.ಈ ಒಪ್ಪಂದ ಕರಾರು 6 ತಿಂಗಳವರೆಗೆ ಅಂದರೆ ದಿನಾಂಕ:31-05-2013ರವರೆಗೆ ಚಾಲ್ತಿಯಲ್ಲಿರುತ್ತದೆ.

2) ಆದರೆ ಈ ಒಪ್ಪಂದ ಮುಗಿದ ನಂತರವು ಪರಿಷ್ಕೃತ ಒಪ್ಪಂದ ಮಾಡಿಕೊಳ್ಳದೇ ದಿನಾಂಕ:22-01-2014ರಂದು ಮಯೂರ್ ಪ್ರಿಂಟ್ ಆ್ಯಡ್ಸ್ ಬೆಂಗಳೂರು ಇವರಿಗೆ ಮುದ್ರಣ ಆದೇಶ ನೀಡಲಾಗಿದ್ದು.ಪುಸ್ತಕಗಳನ್ನು ಮುದ್ರಿಸಿ ದಿನಾಂಕ:28-03-2014 ರೊಳಗಾಗಿ ಸರಬರಾಜು ಮಾಡಬೇಕೆಂದು ಷರತ್ತನ್ನು ವಿಧಿಸಲಾಗಿದೆ.

3) ಆದರೆ ಡಿಲಿವರಿ ಚಲನ್ ಪರಿಶೀಲಿಸಿದಾಗ ದಿನಾಂಕ:24-05-2014ರಂದು ಅಂದರೆ 1 ತಿಂಗಳು 26ದಿನಗಳು ವಿಳಂಬವಾಗಿ ಸರಬರಾಜು ಮಾಡಲಾಗಿದೆ ಈ ವಿಳಂಬದ ಅವಧಿಗೆ ಯಾವುದೆ ಕ್ರಮ ಕೈಗೊಂಡಿರುವುದಿಲ್ಲ.

4) ಈ ಪುಸ್ತಕಗಳ ಮುದ್ರಣ ಗುಣಮಟ್ಟವನ್ನು ಮೂರನೇ ಬಾಹ್ಯ ಸಂಸ್ಥೆಯಿಂದ ತಪಾಸಣೆ ಮಾಡಿರುವುದಿಲ್ಲ.

ಕರಾರು ಪತ್ರದ ಒಪ್ಪಂದದಂತೆ **ರೂ:400000/-**ಗಳನ್ನು ಸಂಭಾವನೆ ಮತ್ತು ಪೂರ್ವ ಸಿದ್ಧತೆಗಾಗಿ ನಿಗದಿಪಡಿ ಸಲಾಗಿದೆ. ಹಾಗೂ 2000 ಕನ್ನಡ **ಆವೃತಿ.1000** ಇಂಗ್ಲಿಷ್ ಆವೃತಿ ಪುಸ್ತಕಗಳನ್ನು ಮುದ್ರಿಸಿದ ಬಿಲ್ಲಿನ ಮೊತ್ತ ರೂ:982700/-ಗಳಿದ್ದು ಒಟ್ಟು ರೂ:1382700/-ಗಳಾಗಿರುತ್ತದೆ.ಆದರೆ ಯೋಜನಾ ನಿರ್ದೇಶಕರು ಕರ್ನಾಟಕ ಬುಡಕಟ್ಟು ಚಿತ್ರ ಸಂಪದ ಇವರು ತಮ್ಮ ಯೋಜನೆಯ ವೆಚ್ಚದಲ್ಲಿ **ರೂ:1453450/-**ಗಳು ಎಂದು ತಿಳಿಸಿರುತ್ತಾರೆ.ಅಂದರೆ **ರೂ:70750/-**ಹೆಚ್ಚಿಗೆ ವೆಚ್ಚಮಾಡಿದಂತಾಗಿದೆ. ಇದನ್ನು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ. ಹಾಗೂ ರೂ:46550/-(1500000-1453450=46550)ಗಳಿ ಸದರಿ ಯವರಲ್ಲಿ ಉಳಿದಿದ್ದು ಈ ಮೊತ್ತವನ್ನು ನಿರ್ದೇಶಕರು ವಾರ್ತಾ ಇಲಾಖೆ ಬೆಂಗಳೂರು ಇವರಿಗೆ ಹಿಂದಿರುಗಿಸದ ಬಗ್ಗೆ ಲೆಕ್ಕ ಪರಿಶೋಧನೆಗೆ ತಿಳಿದು ಬಂದಿರುವುದಿಲ್ಲ.

ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆ.ಟಿ.ಪಿ.ಪಿ ನಿಯಮಗಳನ್ನು ನಿರ್ವಹಿಸಲಾಗಿದೆಯೇ ಎಂದು ಲೆಕ್ಕ ಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ 63 ದಿನಾಂಕ:01-07-2016ರಂದು ವಿವರಣೆಗಳನ್ನು ನೀಡಲು ಪತ್ರ ನೀಡಲಾಗಿತ್ತು. ಸದರಿ ಸಂಸ್ಥೆಯವರು **ಪುನರ್‌ಪರಿಶೀಲನಾ** ಸಮಯದಲ್ಲಿ ನೀಡಿದ ಅನುಪಾಲನೆಯಲ್ಲಿ ಟೆಂಡರ್ ಪ್ರಕ್ರಿಯೆ ಮಾಡಿದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ ಆದ್ದರಿಂದ ಕೆ.ಟಿ.ಪಿ.ಪಿ. ಅಧಿನಿಯಮ ಪಾಲಿಸದೆ ಪುಸ್ತಕ ಮುದ್ರಣ ಕಾರ್ಯ ಮಾಡಿರುವುದರಿಂದ **ರೂ. 982700/-**ನ್ನು ಆಕ್ಷೇಪಿಸಲಾಗಿದೆ.

## 2.5.26)ವಿಶ್ವವಿದ್ಯಾಲಯ ವಿವಿಧ ಭಾಗಗಳಿಗೆ ಲ್ಯಾಪ್ ಟ್ಯಾಪ, ಗಣಕಯಂತ್ರ ಯಂತ್ರೋಪಕರಣ, ಸಿಸಿ ಕ್ಯಾಮೆರಾ ಬಯೊಮೆಟ್ರಿಕ್ ಹಾಗೂ ಇತರೆ ಸಾಮಗ್ರಿಗಳಿಗೆ ಕೆ.ಟಿ.ಪಿ.ಪಿ ನಿಯಮ ಪಾಲಿಸದೆ ಖರೀದಿಸಿ ರುವುದು:-

**2014-15ನೇ ಮತ್ತು 2015-16ನೇ** ಸಾಲಿನ ಕನ್ನಡ ವಿಶ್ವವಿದ್ಯಾಲಯದ ವಿವಿಧ ಭಾಗಗಳಿಗೆ ಲ್ಯಾಪ್ ಟ್ಯಾಪ್ ಗಣಕಯಂತ್ರ ಯಂತ್ರೋಪಕರಣ, ಸಿ.ಸಿ.ಕ್ಯಾಮೆರಾ, ಬಯೊಮೆಟ್ರಿಕ್ ಹಾಗೂ ಇತರೆ ಸಾಮಗ್ರಿಗಳನ್ನು **ಮೇ.ಜಿ.ಐ.ಎಲ್. ಇನ್. ಫಾರ್ ಮೇಷನ್ ಟೆಕ್ನಾಲಜಿ ಲಿಮಿಟೆಡ್ ಬೆಂಗಳೂರು** ಇವರಿಂದ ಖರೀದಿಸಿ ರೂ:98.00 ಲಕ್ಷಗಳನ್ನು ವಿವಿಧ ಚೆಕ್ಕುಗಳ ಮೂಲಕ ಪಾವತಿಸಲಾಗಿದೆ. ಕಡತ ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಕಂಡು ಬಂದಿವೆ.

### (1)ಶಾರ್ಟ್ ಟರ್ಮ್ ಟೆಂಡರ್ ಕರೆದಿರುವ ಬಗ್ಗೆ:

**ಕೆ.ಟಿ.ಪಿ.ಪಿ ಆಕ್ಟ್ 1999 ಮತ್ತು ನಿಯಮಗಳು 2000ರ ನಿಯಮ 17ರ** ಪ್ರಕಾರ ಎರಡು ಕೋಟಿವರೆಗಿನ ಮೊತ್ತದ ಟೆಂಡರ್‌ಗಳಿಗೆ ಕನಿಷ್ಠ 30 ದಿಗಳ ಕಾಲಾವಧಿಯನ್ನು ಟೆಂಡರ್ ಪ್ರಕಟಿಸಿದ ದಿನಾಂಕದಿಂದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ನಡುವೆ ನೀಡಬೇಕಾಗಿದ್ದು ಕೇವಲ 15 ದಿನಗಳ ಕಾಲಾವಧಿಯನ್ನು ನೀಡಲಾಗಿದೆ.ಅಲ್ಪಾವಧಿಯ ಟೆಂಡರ್ ಪ್ರಕಟಿಸಿದುದಕ್ಕೆ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದಿಲ್ಲ.

### (2)ಟೆಂಡರ್ ಪ್ರಕಟಣೆಯನ್ನು ಟೆಂಡರ್ ಬುಲೆಟನ್ ಕಳುಹಿಸಿರುವುದಿಲ್ಲ:-

ಕೆ.ಟಿ.ಪಿ.ಪಿ ನಿಯಮ 2000 ನಿಯಮ 8ರ ಪ್ರಕಾರ ಟೆಂಡರ್ ಮೊತ್ತ 1 ಕೋಟಿವರೆಗಿನ ಟೆಂಡರ್‌ಗೆ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಬೇಕಾಗಿದ್ದು ಜಿಲ್ಲಾ ಟೆಂಡರ್ ಬುಲೆಟಿನ್‌ಗೆ ಕಳುಹಿಸಿರುವುದಿಲ್ಲ.

ಸಾಮಾನ್ಯ ಆರ್ಥಿಕ ನಿಯಮ 150ರನ್ವಯ 25 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸಾಮಗ್ರಿಗಳನ್ನು ಖರೀದಿಯನ್ನು ಟೆಂಡರ್ ಪ್ರಕಟಣೆಯನ್ನು ಇಂಡಿಯನ್ ಟ್ರೇಡ್ ಜರ್ನಲ್ ಡೈರೆಕ್ಟರ್ ಜನರಲ್ ಆಫ್ ಕಮರ್ಷಿಯಲ್ ಇಂಟಲಿಜೆನ್ಸ್ ಅಂಡ್ ಸ್ಟಾಟಿಸ್ಟಿಕ್ಸ್ ಕೊಲ್ಕತ್ತಾರವರಿಂದ ಪ್ರಕಟಿಸುವ ಜರ್ನಲ್‌ನಲ್ಲಿ ಜಾಹಿರಾತು ಪಡಿಸಬೇಕಾಗಿತ್ತು ಜಾಹಿರಾತು ಪಡಿಸಿಲ್ಲ.

## (3)ವಿವಿಧ ಭಾಗಗಳಿಗೆ ಅಗತ್ಯತೆಯ ಇಂಡೆಂಟ್ ಮತ್ತು ಹಳೇ ತಾಂತ್ರಿಕ ಉಪಕರಣಗಳ ವಿವರ:–

ಕನ್ನಡ ವಿಶ್ವವಿದ್ಯಾಲಯದ ವಿವಿಧ ಭಾಗಗಳಿಗೆ ಅಗತ್ಯವಿರುವ ಯಂತ್ರೋಪಕರಣಗಳ ಇಂಡೆಂಟ್ ಹಾಗೂ ಹಾಲಿ ವಿಭಾಗಗಳಲ್ಲಿರುವ ಯಂತ್ರೋಪಕರಣಗಳ ಸ್ಥಿತಿಗತಿ ಬಗ್ಗೆ ವಿವರ ನೀಡಿಲ್ಲ

## (4)ವಾರಂಟಿ ಸರ್ಟಿಫಿಕೇಟ:–

ಖರೀದಿ ಮಾಡಿರುವ ವಿವಿಧ ಯಂತ್ರೋಪಕರಣಗಳ 1 ವರ್ಷದ ವಾರಂಟಿ ಸರ್ಟಿ ಫಿಕೇಟ್ ಪಡೆಯುವುದು ಜಿಸಿಸಿ ಕ್ಲಾಸ್ 14 ಕಡ್ಡಾಯವಾಗಿರುತ್ತದೆ. ವಿಶ್ವವಿದ್ಯಾಲಯದ ಸರಬರಾಜು ಆದೇಶದಲ್ಲಿಯೂ ಷರತ್ತು ಸಂಖ್ಯೆ:11ರಲ್ಲಿ ಷರತ್ತು ವಿಧಿಸಲಾಗಿದೆ. ವಾರಂಟಿ ಸರ್ಟಿಫಿಕೇಟ್ ಬಿಲ್ಲಿನೊಂದಿಗೆ ಲಗತ್ತಿಸಿಲ್ಲ. ಜಿ.ಸಿ.ಸಿclause 14 ಮತ್ತು ಎಸ್.ಸಿ.ಸಿಕ್ಲಾಸ್ IV ಪ್ರಕಾರ ವಾರಂಟಿ ಅವಧಿಯ ನಂತರ 3 ವರ್ಷಗಳ ವಾರ್ಷಿಕ ನಿರ್ವಹಣೆ ಕುರಿತು ಕರಾರು ಪತ್ರದಲ್ಲಿ ಮಾಹಿತಿ ದಾಖಲಾಗಿರುವುದಿಲ್ಲ.

## (5)ಫರ್‌ಫಾರ ಮೆನ್ಸ್ ಸೆಕ್ಯುರಿಟಿ ಡಿಪಾಸಿಟ ಪಡೆದಿಲ್ಲ:–

ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕ್ಲಾಸ್ 31.1ಪ್ರಕಾರ ಹಾಗೂ ಜಿ.ಎಫ್.ಆರ್ ನಿಯಮ 158 ಪ್ರಕಾರ ಟೆಂಡರ್ ಆವಾರ್ಡ್ ಆದ 21 ದಿನಗಳೊಳಗಾಗಿ ಯಶಸ್ವಿ ಟೆಂಡರ್‌ದಾರರು ಶೇ.5ರ ಟೆಂಡರ್ ಮೊತ್ತವನ್ನು ಫರ್‌ಫಾರ್‌ಮೆನ್ಸ್ ಸೆಕ್ಯುರಿಟಿಯಾಗಿ ವಿಶ್ವವಿದ್ಯಾಲಯಕ್ಕೆ ನೀಡಬೇಕಾಗಿದ್ದು ಸೆಕ್ಯುರಿಟಿ ಡಿಪಾಸಿಟ್ ನೀಡಿರುವುದಿಲ್ಲ.

## (6)ಕರಾರು ಪತ್ರ:–

**ಜಿ.ಐ.ಎಲ್.ಇನ್ ಫಾರ್‌ಮೇಷನ್ ಟೆಕ್ನಾಲಜಿ ಲಿಮಿಟೆಡ್ ಬೆಂಗಳೂರು** ಹಾಗೂ ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ ಇವರ ನಡುವೆ ದಿ:**21–03–2014**ರಂದು ಕರಾರು ಪತ್ರವಾಗಿದ್ದು **ರೂ:2/–**ಮುಖಬೆಲೆಯ ಸ್ಟಾಂಪ್‌ಕಾಗದದಲ್ಲಿ ಗುತ್ತಿಗೆಕರಾರು ಪತ್ರ ಪಡೆದಿದ್ದು ಇದಕ್ಕೆ ಕುಲಸಚಿವರು ಪ್ರತಿ ಕರಾರು ಪತ್ರದ ಪುಟಗಳಿಗೆ ಸಹಿ ಮಾಡಿರುವುದಿಲ್ಲ.ಹಾಗೂ ಸಾಕ್ಷಿದಾರರ ಸಹಿ ಇರುವುದಿಲ್ಲ. 'e' stamp paper ಗುತ್ತಿಗೆಕರಾರು ಪತ್ರ ಪಡೆದಿಲ್ಲ.

## (7)ಮೂರನೇ ಪಕ್ಷದ ತಪಾಸಣೆ:–

ಸರ್ಕಾರಿ ಆದೇಶ ಸಂಖ್ಯೆ:ಎಪ್.ಡಿ:55:ಪಿಡಬ್ಲ್ಯುಡಿಸೆಲ್ 2004:ಬೆಂಗಳೂರು ದಿನಾಂಕ:17–02–2005 ರನ್ವಯ 25 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸಾಮಗ್ರಿ ಖರೀದಿಸಿದ್ದಕ್ಕೆ ಮೂರನೇ ಸಂಸ್ಥೆಯಿಂದ ತಪಾಸಣೆ ಕಡ್ಡಾಯವಾಗಿರುತ್ತದೆ.ಎಲ್ಲಾ ಯಂತ್ರೋಪಕರಣ ಸುಸ್ಥಿತಿಯಲ್ಲಿದೆ ಹಾಗೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ಖಚಿತ ಪಡಿಸಿಕೊಂಡು ಪಾವತಿ ಮಾಡಬೇಕಾಗಿದ್ದು, ಇದಕ್ಕೆ ವ್ಯತಿರಿಕ್ತವಾಗಿ ಮೂರನೇ ಪಕ್ಷದ 'ತಪಾಸಣೆ ಇಲ್ಲದೆ **03–04–2014** ಮತ್ತು **10–04–2014**ರಂದು ಪಾವತಿ ಮಾಡಿದ್ದಾರೆ. ಪಾವತಿಮಾಡಿದ ನಂತರ 3 ತಿಂಗಳು ಗತಿಸಿದ ನಂತರ' ಮೂರನೇ ಪಕ್ಷದ ತಪಾಸಣೆಯನ್ನು **ದಿನಾಂಕ:10–07–2014 11–07–2014** ಮಾಡಿ ವರದಿಯನ್ನು **ದಿನಾಂಕ:15–07–2014** ನೀಡಿದ್ದಾರೆ. ಮೊದಲೇ ಹಣ ಪಾವತಿಸಿ ನಂತರ ಮೂರನೇ ಸಂಸ್ಥೆಯ ತಪಾಸಣೆ ಅವಶ್ಯಕತೆ ಇರುವುದಿಲ್ಲ ಮೂರನೇ ಸಂಸ್ಥೆಯಿಂದ ಸಂಸ್ಥೆ ತಾಪಾಸಣೆಯನ್ನು **ಎಂ/ಎಸ್. ಹಿಮಾಲಯ ಸರ್ವಿಲೆನ್ಸ್ ಸೆಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು** ಇವರಿಗೆ ಕೊಟೇಷನ್ ಆಧಾರದ ಮೇರೆಗೆ ಪಾವತಿಸಿದ್ದು **ಚೆಕ್ ಸಂಖ್ಯೆ: 56142–43/22–2014** ಪಾವತಿಸಿದ ವಿವರ ಈ ಕೆಳಕಂಡಂತಿವೆ.

| ಕ್ರ ಸಂ | ವಿವರ | ಮೊತ್ತ ರೂಗಳಲಿ |
|---|---|---|
| 1 | ಎಂ/ಎಸ್.ಹಿಮಾಲಯ ಸರ್ವಲೆನ್ಸೆ ಸೆಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್. ಬೆಂಗಳೂರು | 20000 |
| 2 | ಶಾನ್‌ಭಾಗ್ ಇಂಟರ್ ನ್ಯಾಷನಲ್ ಪ್ರೈವೇಟ ಲಿಮಿಟೆಡ್ ಹೊಸಪೇಟೆ ವಸತಿ ರೂಂ ಬಾಡಿಗೆ | 1098 |
| 3 | ವೆಂಕಟೇಶ್ವರ ಟ್ರಾವೆಲ್ಸ್ ಹೊಸಪೇಟೆ | 2300 |
| | ಒಟ್ಟು | **23398** |

ಎಂ/ಎಸ್. ಹಿಮಾಲಯ ಸರ್ವಿಲೆನ್ಸ್ ಸಲ್ಯೂಷನ್ಸ್ ಪ್ರೈವೇಟ ಲಿಮಿಟಡ್ ಬೆಂಗಳೂರು ಸಂಸ್ಥೆ ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆ ಎಂಬುದಕ್ಕೆ ದಾಖಲೆ ಇಲ್ಲ. ಶ್ರೀ.ಶೈಲ ಅತಿಥಿ ಗೃಹ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಬಂದಪಟ್ಟದ್ದು ವಸತಿ ಅಲ್ಲಿ ಮಾಡಿ ರೂ:1098/– ಉಳಿಸಬಹುದಾಗಿತ್ತು. ಹೊಸಪೇಟೆಯಿಂದ ವಿಶ್ವವಿದ್ಯಾಲಯಕ್ಕೆ ಹಾಗೂ ವಿಶ್ವವಿದ್ಯಾಲದಿಂದ ಹೊಸಪೇಟೆಗೆ ಕಾರು ಬಾಡಿಗೆ ರೂ:2300/– ನೀಡಿದ್ದು ವಿಶ್ವವಿದ್ಯಾಲಯದ ಕಾರು ಉಪಯೋಗಿಸಿದ್ದರೆ **ರೂ:2300/–**ಉಳಿಸಬಹುದಾಗಿತ್ತು.

## (8)ದಾಸ್ತಾನು ಲೆಕ್ಕ:–

ಯಂತ್ರೋಪಕರಣಗಳಿಗೆ ಸಂಬಂಧಿಸಿದ ವಿವಿಧ ದಾಸ್ತಾನು ವಹಿ ಹಾಗೂ ಹಿಂದಿನ ಯಂತ್ರೋಪಕರಣಗಳ ದಾಸ್ತಾನು ವಹಿ ಕುರಿತಂತೆ ಲೆಕ್ಕ ಪರಿಶೋಧನೆಗೆ ಮಾಹಿತಿ ಹಾಜರುಪಡಿಸಿಲ್ಲ. ಇದರಿಂದ ವಿ.ವಿ ಹೊಂದಿರುವ ಯಂತ್ರೋಪಕರಣ ಹಾಗೂ ಟೂಲ್ಸ್ ಅಂಡ್ ಪ್ಲಾಂಟ್ ವಿವರ ಲೆಕ್ಕ ಪರಿಶೋಧನೆಯಲ್ಲಿ ಖಚಿತಪಡಿಸಿಕೊಳ್ಳಲು ಸಾದ್ಯವಾಗಿಲ್ಲ.

**ವಿಶ್ವವಿದ್ಯಾಲಯದಿಂದ ಜೆ.ಐ.ಎಲ್ ಸಂಸ್ಥೆ ಬೆಂಗಳೂರು ರವರಿಗೆ** ಈ ಕೆಳಕಂಡ ಚೆಕ್ಕುಗಳ ಮೂಲಕ ಪಾವತಿಸಲಾಗಿದೆ.

| ಕ್ರ ಸಂ | ಚೆಕ್ಕು ಸಂಖ್ಯೆ | ದಿನಾಂಕ | ಮೊತ್ತ |
|---|---|---|---|
| 1 | 051227 | 03–04–2014 | 681065 |
| 2 | 022909 | 03–04–2014 | 1267006 |
| 3 | 027738 | 03–04–2014 | 163581 |
| 4 | 050288 | 03–04–2014 | 1389242 |
| 5 | 107132 | 03–04–2014 | 490282 |
| 6 | 107270 | 10–04–2014 | 4283849 |
| 7 | 027739 | 10–04–2014 | 88889 |
| 8 | 036958 | 10–04–2014 | 21680 |
| 9 | 0107134 | 10–04–2014 | 28184 |
| 10 | 022910 | 10–04–2014 | 1386222 |
| | | **ಒಟ್ಟು** | **9800000** |

ಮೇಲ್ಕಂಡ ನ್ಯೂನತೆಗಳಿಗೆ ಸೂಕ್ತ ವಿವರಣೆ ನೀಡಲು ಲೆಕ್ಕಪರಿಶೋಧನೆ ವಿಚಾರಣೆ **ಪತ್ರ ಸಂಖ್ಯೆ:32.2016–17:ದಿನಾಂಕ:19–05–2016** ಕೇಳಿದ್ದು ಅದಕ್ಕೆ ಉತ್ತರವಾಗಿ **ಪತ್ರ ಸಂಖ್ಯೆ:ಕವಿಹಂ:ಹವಿ:2016–17:ದಿನಾಂಕ:11–07–2016** ಉತ್ತರ ನೀಡಿದ್ದು **ಪರಿಶೀಲಿಸಲಾಗಿ ಕ್ರಸಂ 1 ರಲ್ಲಿ** ಯು.ಜಿ.ಸಿ., ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ ಯಿಂದ ಆರ್ಥಿಕ ವರ್ಷದ ಕೊನೆಯಲ್ಲಿ ಅನುದಾನ ಬಿಡುಗಡೆಯಾದ್ದರಿಂದ ಆ. ಆರ್ಥಿಕ ವರ್ಷದಲ್ಲಿಯೇ ಬಳಕೆ ಮಾಡಿ ಪ್ರಮಾಣ ಪತ್ರ ಸಲ್ಲಿಸಬೇಕಾಗಿತ್ತು "ಸಮಯದ ಅಭಾವದಿಂದ 30 ದಿನಗಳ ಬದಲಾಗಿ ಅಲ್ಪಾವಧಿ ಟೆಂಡರ್ ಕರೆದು ಕ್ರಮ ವಹಿಸಲಾಗಿದೆಯೆಂದು ತಿಳಿಸಿದ್ದಾರೆ" ಈ ಕಂಡಿಕೆಯ ಕ್ರಮ ಸಂಖ್ಯೆ 1 ರಲ್ಲಿ ಸೂಚಿಸಿದಂತೆ ಅಲ್ಪಾವಧಿ ಟೆಂಡರಗೆ ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿ ಬೇಕಾಗಿದ್ದು ಈ ಸಂಸ್ಥೆಯವರು ಅನುಮತಿ ಪಡೆದಿಲ್ಲ. ಆದ್ದರಿಂದ ಈ ವಿವರಣೆ ಒಪ್ಪಲಾಗುವುದಿಲ್ಲ. ಇನ್ನು **ಕ್ರಮಸಂಖ್ಯೆ 2** ರ ಆಕ್ಷೇಪಣೆಗೆ ಇದು **ಇ-ಟೆಂಡರ್ ಆಗಿರುವುದರಿಂದ** ಜಿಲ್ಲಾ ಟೆಂಡರ್ ಬುಲೆಟಿನ್ ನಲ್ಲಿ ಪ್ರಕಟಿಸಿರುವುದು ಅನ್ವಯಿಸುವುದಿಲ್ಲವೆಂದು ತಪ್ಪಾದ ಗ್ರಹಿಕೆಯಾಗಿತ್ತೆಂದು ತಿಳಿಸಿದ್ದಾರೆ. ಆದರೆ ಕೆ.ಟಿ.ಪಿ.ಪಿ. ಅಧಿನಿಯಮ 1999 ಹಾಗೂ ನಿಯಮಾವಳಿ 2000 ರಲ್ಲಿ ಇ– ಪ್ರಕ್ಯೂರ್‌ಮೆಂಟ್ ಮಾಡಿದಾಗ ಜಿಲ್ಲಾ ಟೆಂಡರ್ ಬುಲೆಟೆನ್ನಿನಲ್ಲಾಗಲಿ ಅಥವಾ ರಾಜ್ಯ ಟೆಂಡರ್ ಬುಲೆಟಿನ್ನಲ್ಲಾಗಲಿ ಹಾಕಬಾರದೆಂದು/ ಪ್ರಚುರ ಪಡಿಸಬಾರದೆಂದು ಎಲ್ಲಿಯೂ ತಿಳಿಸಿಲ್ಲ ಆದ್ದರಿಂದ ಈ ವಿವರಣೆಯನ್ನು ಒಪ್ಪಲಾಗುವುದಿಲ್ಲ.

ಇನ್ನು ಕಂಡಿಕೆ (3)ರ ಆಕ್ಷೇಪಣೆಗೆ ಉತ್ತರವಾಗಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು ತಮ್ಮ ಕೋರಿಕೆ/ಬೇಡಿಕೆಗಳನ್ನು ಕಡತಗಳ ಮೂಲಕ ಸಲ್ಲಿಸಿದ್ದು ಈ ಕಡತಗಳಲ್ಲಿ ಮಾನ್ಯ ಕುಲಪತಿಗಳು/ಕುಲಸಚಿವರು ಅನುಮೋದನೆ ನೀಡಿದ ನಂತರ ಕಡತಗಳಲ್ಲಿನ ವಿವರಗಳನ್ನು ಪಟ್ಟಿ ಮಾಡಲಾಗುತ್ತಿದೆಯೆಂದು ತಿಳಿಸಿರುತ್ತಾರೆ. ಆದರೆ ವಿವರಗಳ ಪಟ್ಟಿಯನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿಲ್ಲ.

ಕ್ರಮ ಸಂಖ್ಯೆ (4)ರಲ್ಲಿ ಆಕ್ಷೇಪಣಗೆ Warranty Certificate ಪಡೆಯಲು ಇನ್ನು ಮುಂದೆ ಕ್ರಮ ವಹಿಸಲಾಗುವುದೆಂದು ತಿಳಿಸಿದ್ದಾರೆ. ಕ್ರ.ಸಂ (5)ರ ಆಕ್ಷೇಪಣೆಗೆ ಕ್ರಮ ವಹಿಸಲಾಗುವುದೆಂದು ತಿಳಿಸಿದ್ದಾರೆ.

ಕ್ರ.ಸಂ.(7)ರ ಆಕ್ಷೇಪಣೆಗೆ "ಕುಲಸಚಿವರು ಏಕ ಕಾಲದಲ್ಲಿಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರಿಂದ ಈ ಕಾರ್ಯ ವಿಳಂಬವಾಗಿದೆ" ಇನ್ನು ಮುಂದೆ ನಿಯಮಾನುಸಾರ ಕ್ರಮ ಸಹಿಸಲಾಗುವುದೆಂದು ತಿಳಿಸಿರುತ್ತಾರೆ.

ಈ ಮೇಲೆ ಸೂಚಿಸಿದಂತೆ **ಈ 98.00** ಲಕ್ಷದ ಸಾಮಾಗ್ರಿಗಳನ್ನು ಖರೀದಿಸಬೇಕಾದಾಗ ಅನುಸರಿಸಬೇಕಾದ ನಿಯಮಗಳು. ಜಾಗರೂಕತೆ ಮುಂತಾದವುಗಳನ್ನು ಉಲ್ಲಂಘಿಸಿ ಈ ಖರೀದಿ ಮಾಡಿರುವುದರಿಂದ ರೂ. 98.00 ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 2.5.27)2014–15ನೇ ಸಾಲಿನಲ್ಲಿ ವಿವಿಧ ವಾರ್ಷಿಕ ಪರೀಕ್ಷೆಗಳಿಗಾಗಿ ಉತ್ತರ ಪತ್ರಿಕೆ ಖರೀದಿಯಲ್ಲಿ ನಿಯಮ ಉಲ್ಲಂಘನೆ ಮಾಡಿರುವುದು:-

**ಚೆಕ್ ಸಂಖ್ಯೆ:063556/17-08-2015 ರೂ:283850/-**ಮೇ ಪ್ಯಾರಾಮೌಂಟ್ ಪ್ರಿಂಟರ್ಸ್ ಸರ್ವಿಸಸ್ ಗಂಗಾವತಿ. ಕನ್ನಡ ವಿಶ್ವ ವಿದ್ಯಾಲಯ ಹಂಪಿಯ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗದಲ್ಲಿ 2014-15ನೇ ಸಾಲಿಗೆ ನಡೆಯುವ ವಿವಿಧಿ ಸ್ನಾತಕೋತ್ತರ ಪದವಿ ಸ್ನಾತಕೋತ್ತರ ಡಿಪ್ಲೊಮೊ ಹಾಗೂ ಡಿಪ್ಲೊಮೊ ಕೋರ್ಸುಗಳ ವಾರ್ಷಿಕ ಪರೀಕ್ಷೆಗಳಿಗಾಗಿ ಉತ್ತರ ಪತ್ರಿಕೆಯನ್ನು ಟೆಂಡರ್ ಮುಖಾಂತರ ಖರೀದಿಸಲು ದಿನಾಂಕ:03-07-2015ರಂದು ಸ್ಥಳೀಯ ಪತ್ರಿಕೆಗಳಾದ ಸುದ್ದಿ ಮೂಲ ಮತ್ತು ಸ್ವತಂತ್ರ ಹೋರಾಟ ಪತ್ರಕೆಗಳಲ್ಲಿ ಪ್ರಕಟಣೆ ಮಾಡಲಾಗಿದೆ. ಈ ಟೆಂಡರ್ ಪ್ರಕ್ರಿಯೆಯಲ್ಲಿ 2 ಜನ ಗುತ್ತಿಗೆದಾರರು ಭಾಗವಹಿಸಿದ್ದು. ದಿ ಪ್ಯಾರಾಮೌಂಟ್ ಪ್ರಿಂಟರ್ಸ್ ಅಂಡ್ ಸರ್ವಿಸಸ್ ಗಂಗಾವತಿ ಇವರು ಎಲ್.1 ಆಗಿದ್ದು.ಇವರಿಗೆ ಟೆಂಡರ್ ವಹಿಸಿಕೊಡಲಾಗಿದೆ. ಹಾಗೂ ಧರ ಸಂಧಾನ ಮಾಡಿಕೊಂಡು ಬಿಲ್ಲಿನ ಮೊತ್ತಕ್ಕೆ ರೂ:1000/-ಗಳನ್ನು ಕಡಿಮೆ ಮಾಡಲು ಒಪ್ಪಿ ದಿನಾಂಕ:22-07-2015ರಂದು ಕರಾರು ಪತ್ರ ಮಾಡಿಕೊಳ್ಳಾಲಾಗಿದೆ.ಸದರಿ ಟೆಂಡರ್‌ನಲ್ಲಿ ಪ್ರಕ್ರಿಯೆಯಲ್ಲಿ ಕಂಡು ಬಂದ ನ್ಯೂನತೆಗಳು.

1)ಯಾವುದೇ ಟೆಂಡರ್ ಪ್ರಕ್ರಿಯೆಯಲ್ಲಿ 3 ಜನ ಟೆಂಡರ್‌ದಾರರಿಗಿಂತ ಕಡಿಮೆ ಜನರು ಭಾಗವಹಿಸಿದಾಗ ಆ ಟೆಂಡರ್ ರದ್ದುಗೊಳಿಸಿ ಮರು ಟೆಂಡರ್ ಕರೆಯಬೇಕಾಗುತ್ತದೆ. ಆದರೆ ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಕೇವಲ 2 ಜನ ಟೆಂಡರ್‌ದಾರರು ಭಾಗವಹಿಸಿದ್ದು ಅದರಲ್ಲಿಯೇ ಒಬ್ಬರಾದ 'ದಿ ಪ್ಯಾರಾಮೌಂಟ್ ಪ್ರಿಂಟರ್ ಅಂಡ್ ಸರ್ವಿಸಸ್ ಗಂಗಾವತಿ ಇವರಿಗೆ ಟೆಂಡರ್ ಅವಾರ್ಡ್ ಮಾಡಲಾಗಿದೆ.

2) ಕೆ.ಟಿ.ಪಿ.ಪಿ ನಿಯಮ 2000 ನಿಯಮ 8ರ ಪ್ರಕಾರ ರೂ:100000/-ಕ್ಕಂತ ಹೆಚ್ಚು ಅಂದಾಜು ಮೊತ್ತದ ಟೆಂಡರ್ ಪ್ರಕಟಣೆಗಳನ್ನು ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಚರ ಪಡಿಸಬೇಕಾಗುತ್ತದೆ.ಸದರಿ ಟೆಂಡರ್‌ನಲ್ಲಿ ಈ ನಿಯಮ ಪಾಲಿಸಿರುವುದಿಲ್ಲ.

3) ಕೆ.ಟಿ.ಪಿ.ಪಿ ನಿಯಮ 2000 ನಿಯಮ 9ರ ಪ್ರಕಾರ ಟೆಂಡರ್ ಷಡ್ಯೂಲ್‌ಗಳನ್ನು ನೀಡುವ ಪ್ರಾರಂಭ ದಿನಾಂಕ. ಟೆಂಡರ್ ಷಡ್ಯೂಲ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಟೆಂಡರ್ ತೆರೆಯುವ ಸ್ಥಳ, ದಿನಾಂಕ ಮತ್ತು ಸಮಯ ನಿಗದಿ ಮಾಡಿದ ಕುರಿತು ಟೆಂಡರ್ ದಾಖಲೆಗಳನ್ನು ಪರಿಶೀಲಿಸಿದಾಗ ಕಂಡು ಬಂದಿರುವುದಿಲ್ಲ.

4) ಕೆ.ಟಿ.ಪಿ.ಪಿ ರೂಲ್ಸ್ 2000 ರ ನಿಯಮ 10ರ ಪ್ರಕಾರ ಹೆಚ್ಚಿನ ಪ್ರಸರಣ ಹೊಂದಿರುವ ದಿನ ಪತ್ರಿಕೆಗಳಿಗೆ ನೀಡಬೇಕಾಗಿದ್ದು ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಸ್ಥಳೀಯ ದಿನ ಪತ್ರಿಕೆಗಳಾದ ಸುದ್ದಿಮೂಲ ಮತ್ತು ಸ್ವತಂತ್ರ ಹೊರಾಟ ಪತ್ರಿಕೆಗಳಿಗೆ ನೀಡಿರುವುದರಿಂದ ಹೆಚ್ಚಿನ ಟೆಂಡರ್‌ದಾರರು ಭಾಗವಹಿಸದೆ ಕೇವಲ 2ಜನ ಟೆಂಡರ್‌ದಾರರು ಭಾಗವಹಿಸಿದ್ದು ಹಾಗೂ ಸ್ಪರ್ದಾತ್ಮಕ ಧರ ಪಡೆಯಲಾಗಿರುವುದಿಲ್ಲ.

5) ಕೆ.ಟಿ.ಪಿ.ಪಿ ರೂಲ್ಸ್ 2000 ರ ನಿಯಮ 27ರ ಪ್ರಕಾರ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಯು ಟೆಂಡರ್‌ನಲ್ಲಿ ಭಾಗವಹಿಸುವ ಟೆಂಡರ್‌ದಾರರಿಗೆ ಇರಬೇಕಾದ ಪ್ರೀ ಕ್ವಾಲಿಫಿಕೇಷನ್ ನಿಗದಿಪಡಿಸಬೇಕಾಗಿರುತ್ತದೆ.ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ನಿಗದಿ ಪಡಿಸಿದ ಪ್ರಿಕ್ವಾಲಿಫಿಕೇಷನ್ ಕುರಿತು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ.

6) ಗುತ್ತಿಗೆದಾರರಿಂದ ಟೆಂಡರ್ ನಿಯಮದ ಪ್ರಕಾರ ಶೇ.5% ರಷ್ಟು ಭದ್ರತಾ ಠೇವಣಿ ಪಡೆದಿರುವುದಿಲ್ಲ.

7) ಖರೀದಿಸಿರುವ ಉತ್ತರ ಪತ್ರಿಕೆಗಳ ಗುಣಮಟ್ಟ 3ನೇ ಬಾಹ್ಯ ಸಂಸ್ಥೆಯಿಂದ ತಪಾಸಣೆ ಮಾಡಿರುವುದಿಲ್ಲ.

ಈ ಮೇಲಿನ ಎಲ್ಲಾ ನ್ಯೂನತೆಗಳಿಗೆ ವಿಚಾರಣೆ **ಪತ್ರ ಸಂಖ್ಯೆ:55 ದಿನಾಂಕ:24-06-2016** ರಂದು ವಿವರಣೆಯನ್ನು ಕೇಳಲಾಗಿತ್ತು.ಸದರಿ ಕ.ವಿ.ವಿ. ಹಂಪಿ ಇವರು ಸಮಂಜಸವಾದ ವಿವರಣೆಗಳನ್ನು ನೀಡದೇ ಇರುವುದರಿಂದ ಇದನ್ನು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಿ ಕೊಳ್ಳಲಾಗುವುದಿಲ್ಲ.ಆದ್ದರಿಂದ ಮೇಲಿನ ಮೊತ್ತ **ರೂ:283850/-**ಗಳನ್ನು ಆಕ್ಷೇಪಿಸಲಾಗಿದೆ.

# 2.6

# ಇತರೆ ಪ್ರಮುಖ ಆಕ್ಷೇಪಣೆ/ ವಸೂಲಾತಿ ಪ್ರಕರಣಗಳು

**2.6.1)ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯ ವಿಭಾಗವು ಸಹಾಯಕ ಪ್ರಾಧ್ಯಾಪಕರ ಮತ್ತು ಕೆ.ಎ.ಎಸ್.ಅಧಿಕಾರಿಗಳ ತರಬೇತಿ ಕಾರ್ಯಕ್ರಮಗಳ ವೆಚ್ಚಗಳಿಗೆ ರೂ: 392000/– ಮುಂಗಡ ಪಡೆದಿದ್ದು ಹೊಂದಾಣಿಕೆ ಓಚರನಲ್ಲಿ ಕಂಡುಬಂದ ನ್ಯೂನತೆಗಳು:–**

ಸಂಯೋಜನಾಧಿಕಾರಿ ಪ.ಜಾ./ಪ.ಪಂ ವಿಶೇಷ ಘಟಕ ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ ಇವರು ಸಹಾಯಕ ಪ್ರಾಧ್ಯಾಪಕರ ಮತ್ತು **ಕೆ.ಎ.ಎಸ್.ಅಧಿಕಾರಿಗಳ ತರಬೇತಿ** ಕಾರ್ಯಕ್ರಮಗಳ ವೆಚ್ಚಗಳಿಗೆ **ಚೆಕ್ಕುಸಂಖ್ಯೆ:050392 ಮತ್ತು 23420 ದಿನಾಂಕ:18–12–2015ರಲ್ಲಿ ರೂ:392000/–** ಮುಂಗಡ ನೀಡಿದ್ದು ರೂ:170870/–ನ್ನು ಬ್ಯಾಂಕ್ ಆಫ್ ಇಂಡಿಯಾ ಖಾತೆ ಸಂಖ್ಯೆ:842210100002021 ಖಾತೆಗೆ ದಿನಾಂಕ:20–04–2016ರಂದು ಜಮಾ ಮಾಡಿದ್ದಾರೆ.

ಮುಂಗಡ ತೆಗೆದುಕೊಳ್ಳುವಾಗ ಪೂರ್ವಭಾವಿ ತಯಾರಿ ನಡೆಸಿ ಒಂದು ನಿರ್ಧಿಷ್ಟ ಕ್ರಿಯಾಯೋಜನೆ ರೂಪಿಸಿ ಆಪ್ರಕಾರ ಕಾರ್ಯಕ್ರಮ ನಡೆಸಿದಲ್ಲಿ ಮುಂಗಡ ಹಣ ಕಡಿಮೆ ತೆಗೆದುಕೊಳ್ಳಬಹುದಾಗಿತ್ತು. ರೂ:170870/–ಖರ್ಚು ಮಾಡದೆ ವಾಪಸ್ಸು ನೀಡಿರುವುದು ಅವೈಜ್ಞಾನಿಕ ಪೂರ್ವಭಾವಿ ತಯಾರಿ ಆಗಿರುತ್ತದೆ. ವಿವಿಧ ವಿಶೇಷ ಉಪನ್ಯಾಸಕರನ್ನು ತರಬೇತಿಗೆ ಕರೆಸಿದ್ದು ಸದರಿ ಉಪನ್ಯಾಸಕರು ಎ.ಸಿ.ದರ್ಜೆಯಲ್ಲಿ ಪ್ರಮಾಣ ಮಾಡಿದ್ದರೆಂದು ಪ್ರವಾಸಭತ್ಯೆ ಬಿಲ್ಲು ಖರ್ಚು ಹಾಕಿದ್ದು, ರೈಲ್ವೆ ಪಿ.ಎನ್.ಆರ್. ನಂ:ದಾಖಲೆ ಇರುವುದಿಲ್ಲ .ಇದರಿಂದ ಸದರಿ ಉಪನ್ಯಾಸಕರು **ಎ ಸಿಯಲ್ಲಿ ಪ್ರಯಾಣ ಮಾಡಿರುವುದು ಸಂದೇಹ ಉಂಟಾಗಿದೆ.**

1)ಶ್ರೀ ಪುರುಷೋತ್ತಮ ಉಪನ್ಯಾಸಕರು ಬಳ್ಳಾರಿ ಇವರು ಸಹಾಯಕ ಅಧ್ಯಾಪಕರ ಹುದ್ದೆಯ ತರಬೇತಿ ಶಿಬಿರದಲ್ಲಿ ತರಬೇತಿ ನೀಡಲು ಬಳ್ಳಾರಿಯಿಂದ ಹೊಸಪೇಟೆ ಕ್ಲಾಸ್ 2 ಎಸಿ ದರ್ಜೆ ದರ ರೂ:690/– ದಿನಾಂಕ:23–02–2015ರಂದು ಪ್ರಯಾಣ ಮಾಡಿದ್ದು ಪ್ರಯಾಣ ಬಿಲ್ಲು ಖರ್ಚುತೋರಿಸಿದ್ದು ಹೊಸಪೇಟೆಯಿಂದ ಬಳ್ಳಾರಿಗೆ ರೂ:690/–2 ಕ್ಲಾಸ್ ಎಸಿ ದರ್ಜೆ ರೈಲುನಲ್ಲಿ ಪ್ರಯಾಣಿಸಿದ್ದು ನಮೂದಿಸಿದ್ದು ಪ್ರಯಾಣ ಬಿಲ್ಲು ಖರ್ಚುಹಾಕಿದ್ದಾರೆ.
ಅದೇಉಪನ್ಯಾಸಕರು ದಿನಾಂಕ:13–02–2015ರಂದು ಕೆಎಎಸ್ ಅಧಿಕಾರಿಗಳ ಸ್ಪರ್ಧಾತ್ಮಕ ತರಬೇತಿ ಶಿಬಿರದಲ್ಲಿ ತರಬೇತಿ ನೀಡಲು ಬಳ್ಳಾರಿಯಿಂದ ಹೊಸಪೇಟೆಗೆ 2 ಕ್ಲಾಸ್ ಎಸಿ ರೈಲು ರೂ:690/– 16–03–2015ರಂದು ಹೊಸಪೇಟೆಯಿಂದ ಬಳ್ಳಾರಿಗೆ 2 ಕ್ಲಾಸ್ ಎಸಿ ರೈಲು ರೂ:690/–ಪ್ರಮಾಣಿಸಿದ್ದು ಪ್ರಯಾಣ ಖರ್ಚುಹಾಕಿದ್ದಾರೆ..
ಸದರಿ ಉಪನ್ಯಾಸಕರು 2 ಕ್ಲಾಸ್ ಎಸಿ ರೈಲುನಲ್ಲಿ ಪ್ರಯಾಣಿಸಿರುವುದಕ್ಕೆ ಪಿ.ಎನ್.ಆರ್. ನಂ: ಇಲ್ಲದಿರುವುದರಿಂದ 690*4=2760/–ಸಂಚಾಲಕರಿಂದ ವಸೂಲಿ ಮಾಡಿ ವಿ.ವಿ.ನಿಧಿಗೆ ಜಮಾ ಮಾಡಲು ಸೂಚಿಸಿದೆ.

2)ಡಾ.ಎನ್.ಹೆಚ್.ಕಲ್ಲೂರು ಪ್ರಾಧ್ಯಾಪಕರು ಧಾರವಾಡ ಸಹಾಯಕ ಅಧ್ಯಾಪಕರ ಹುದ್ದೆಯ ತರಬೇತಿ ಶಿಬಿರದ ಕಾರ್ಯಕ್ರಮದಲ್ಲಿ ತರಬೇತಿ ನೀಡಲು **ದಿನಾಂಕ:26–02–2015**ರಂದು ಧಾರವಾಡದಿಂದ ಹೊಸಪೇಟೆಗೆ **ಕ್ಲಾಸ್ 1** ಎ.ಸಿ **ರೈಲು ರೂ:1150/–** ಪ್ರಯಾಣಿಸಿದ್ದು ಸೂಚಿಸಿದ್ದು **ದಿನಾಂಕ:29–02–2015** ರಂದು ಹೊಸಪೇಟೆಯಿಂದ ಧಾರವಾಡಕ್ಕೆ **ಕ್ಲಾಸ್ 1** ಎ.ಸಿ **ರೈಲು ರೂ:1150/–** ಪ್ರಯಾಣಿಸಿದ್ದು ನಮೂದಿಸಿದ್ದು ಸಂಬಂದ ರೈಲು ಪಿ.ಎನ್.ಆರ್. ನಂಬರು ಇರುವುದಿಲ್ಲ. **ಕ್ಲಾಸ್ 1** ಎ.ಸಿ **ದರ್ಜೆಯಲ್ಲಿ** ಪ್ರಯಾಣಿಸಿರುವುದು ಸಂದೇಹಸ್ಪಾದವಾಗಿದ್ದು**(1150+1150)2300/–**ಗಳನ್ನು ಸಂಚಾಲಕರಿಂದ ವಸೂಲಿ ಮಾಡಿ ವಿವಿ ನಿಧಿಗೆ ಜಮಾ ಮಾಡಲು ಸೂಚಿಸಿದೆ.

3)ಶ್ರೀ ಶರಣಯ್ಯ ಅಧ್ಯಾಪಕರು ಧಾರವಾಡ ಇವರು ಸಹಾಯಕ ಅಧ್ಯಾಪಕರ ಹುದ್ದೆಯ ತರಬೇತಿ ಶಿಬಿರದಲ್ಲಿ ತರಗತಿಗಳಲ್ಲಿ ಉಪನ್ಯಾಸ ನೀಡಲು ದಿನಾಂಕ:03–03–2015ರಂದು ಧಾರವಾಡದಿಂದ ಹೊಸಪೇಟೆಗೆ **ಕ್ಲಾಸ್ 1** ಎ.ಸಿ.**ರೈಲು ರೂ:1150/– ಮತ್ತು 05–03–2015ರಂದು ಹೊಸಪೇಟೆಯಿಂದ ಧಾರವಡಕ್ಕೆ ಕ್ಲಾಸ್ 1** ಎ.ಸಿ **ರೈಲು ರೂ:1150/–**ಪ್ರಮಾಣಿಸಿದ್ದು P.N.R ನಂಬರ ನಮೂದಿಸಿಲ್ಲ. **1 ಕ್ಲಾಸ್** ಎ.ಸಿ **ರೈಲು** ಪ್ರಯಾಣ ಸಂದೇಹಸ್ಪಾದವಾಗಿದ್ದು**(1150+1150)2300/–**ಗಳನ್ನು ಸಂಚಾಲಕರಿಂದ ವಸೂಲಿ ಮಾಡಿ ವಿವಿ ನಿಧಿಗೆ ಜಮಾ ಮಾಡಲು ಸೂಚಿಸಿದೆ.

4)ಶ್ರೀ. ಭೀಮೇಶ್ ಉಪನ್ಯಾಸಕರು ಧಾರವಾಡ ಇವರು ಸಹಾಯಕ ಅಧ್ಯಾಪಕರ ಹುದ್ದೆಯ ತರಬೇತಿ ಶಿಬಿರದ ಕಾರ್ಯಕ್ರಮದಲ್ಲಿ ತರಗತಿಯಲ್ಲಿ ಉಪನ್ಯಾಸ ನೀಡಲು ದಾರವಾಡದಿಂದ ಹೊಸಪೇಟೆಗೆ **ದಿನಾಂಕ:04–03–2015**ರಂದು **1 ಕ್ಲಾಸ್** ಎ.ಸಿ.**ರೈಲು ರೂ:1150/–** ಮತ್ತು ಹೊಸಪೇಟೆಯಿಂದ ಧಾರವಾಡಕ್ಕೆ **ದಿನಾಂಕ:06–03–2015**ರಂದು **1 ಕ್ಲಾಸ್** ಎ.ಸಿ. **ರೈಲು ರೂ:1150/–1 ಕ್ಲಾಸ್** ಎ.ಸಿ. **ರೈಲು ಪ್ರಯಾಣ ನಮೂದಿಸಿದ್ದು** ಪಿ.ಎನ್.ಆರ್ ಸಂಖ್ಯೆ ನಮೂದಿಸದೆ ಇರುವುದರಿಂದ **1 ಕ್ಲಾಸ್** ಎ.ಸಿ. **ರೈಲು ಪ್ರಯಾಣ** ಸಂದೇಹಾಸ್ಪದವಾಗಿದ್ದು **ರೂ:2300/–**ಸಂಚಾಲಕರಿಂದ ವಸೂಲಿ ಮಾಡಿ ವಿ.ವಿ ನಿಧಿಗೆ ಜಮಾ ಮಾಡಲು ಸೂಚಿಸಿದೆ.

5)ಡಾ.ಜಗದೀಶ್ ಬಸಾಪುರ ಉಪನ್ಯಾಸಕರು ಬಳ್ಳಾರಿ ಕೆ.ಪಿ.ಎಸ್.ಸಿ, ಕೆ.ಎ.ಎಸ್. ಪರೀಕ್ಷಾ ತರಬೇತಿ ಕಾರ್ಯಕ್ರಮದಲ್ಲಿ ತರಗತಿಗೆ ಬೋಧನೆ ಮಾಡುವ ಸಲುವಾಗಿ ಬಳ್ಳಾರಿಯಿಂದ ಹೊಸಪೇಟೆಗೆ **ದಿನಾಂಕ:26-03-2015ರಂದು 2 ಕ್ಲಾಸ್ ಎ.ಸಿ ರೈಲು ದರ ರೂ:690/-**ರಲ್ಲಿ ಪ್ರಮಾಣ ಮಾಡಿದ್ದೆಂದು ನಮೂದಿಸಿದ್ದು **ದಿನಾಂಕ:27-03-2015ರಂದು** ಹೊಸಪೇಟೆಯಿಂದ ಬಳ್ಳಾರಿಗೆ **2 ಕ್ಲಾಸ್ ಎ.ಸಿ ರೈಲು ದರ ರೂ:690/-**ಪ್ರಯಾಣ ಮಾಡಿದ್ದೆಂದು ನಮೂದಿಸಿದ್ದು ಪಿ.ಎನ್.ಆರ್.ನಂಬರು ಇರುವುದಿಲ್ಲ. ಪಿ.ಎನ್.ಆರ್ ನಂಬರ ಇಲ್ಲದಿರುವುದರಿಂದ **2 ಕ್ಲಾಸ್** ಎ.ಸಿ **ರೈಲು** ಪ್ರಯಾಣಿಸಿರುವುದು ಸಂದೇಹಸ್ಪಾದವಾಗಿದೆ. **(690+690)1380/-**ನ್ನು ಸಂಚಾಲಕರಿಂದ ವಸೂಲಿ ಮಾಡಿ ವಿ.ವಿ.ನಿಧಿಗೆ ಜಮಾ ಮಾಡಲು ಸೂಚಿಸಿದೆ. ಈ ಬಗ್ಗೆ ವಿಚಾರಣೆ **ಪತ್ರ ಸಂಖ್ಯೆ:03/2016-17 ದಿನಾಂಕ:18-04-2016**ರಲ್ಲಿ ವಿವರ ನೀಡಲು ಸೂಚಿಸಿದ್ದು ವಿಶ್ವವಿದ್ಯಾಲಯ ಕಛೇರಿ **ಪತ್ರ ಸಂಖ್ಯೆ:ಕವಿಹಂ:ಹವಿ:2016-17:23-05-2016**ರಲ್ಲಿ ಪಿ.ಎನ್.ಆರ್ ನಂಬರು ಅಧ್ಯಾಪಕರು ಪಡೆದಿರುವುದಿಲ್ಲ.ಇನ್ನು ಮುಂದೆ ಪಿ.ಎನ್.ಆರ್. ನಂಬರು ಪಡೆದು ಪ್ರಾವಾಸ ಬಿಲ್ಲಿನಲ್ಲಿ ಲಗತ್ತಿಸಲಾಗುವುದೆಂದು ಪತ್ರ ನೀಡಿದ್ದಾರೆ .ಎಸಿಯಲ್ಲಿ ಪ್ರಯಾಣಿಸುವಾಗ **ಪಿ.ಎನ್.ಆರ್ ನಂಬರ್** ಅವಶ್ಯಕವಾಗಿದ್ದು ಮೇಲಿನ ಉತ್ತರ ಸಮರ್ಪಕವಾಗಿರುವುದಿಲ್ಲ.

ಮಹಾಲೇಖಪಾಲಕರು ಬೆಂಗಳೂರು 20-12-2013ರಿಂದ2014-15ರ ಲೆಕ್ಕ ತನಿಖಾ ವರದಿ ಪತ್ರ ಸಂಖ್ಯೆ:ಪಿ.ಆರ್.ಎ.ಜಿ (G.And.S.S.A)ಓಎಡಿ:ಸ್ಪೆಷಲ್ ಸೆಲ್:ಬಿ:2015-16:128 ದಿನಾಂಕ:14-03-2016ರಲ್ಲಿ ಪಿ.ಎನ್.ಆರ್.ಸಂಖ್ಯೆ ಕಡ್ಡಾಯವಾಗಿರುತ್ತದೆ. ಪ್ರಯಾಣದ ಬಿಲ್ಲು ಪಾವತಿಸುವಾಗ ಕನಿಷ್ಟ ಚೆಕ್‌ಗಳನ್ನು ಆಳವಡಿಸಿ ಸರಿಯಾದ ಆಧಾರವಿಲ್ಲದೆ ಹೆಚ್ಚಿಗೆ ಪ್ರಯಾಣ ಭತ್ಯ ಪಾವತಿಸುವುದು ವಿಶ್ವವಿದ್ಯಾಲಯ ಆರ್ಥಿಕ ಸ್ಥಿತಿಗೆ ಹೊರೆಯಾಗುತ್ತದೆ. ವಿ.ವಿ.ಯು ರೈಲ್ವೆ ಇಲಾಖೆಯಾಂದಿಗೆ ಸಂಪರ್ಕಿಸಿ ಸದರಿ ಪ್ರಾಧ್ಯಾಪಕರು ಎ.ಸಿ ರೈಲಿನಲ್ಲಿ ಪ್ರಯಾಣಿಸಿದ್ದಾರೆ ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳದೆ ಪಾವತಿಸಿರುವುದು ತಪ್ಪಾಗಿರುತ್ತದೆ. 2760+2300+2300+2300+1380 ಒಟ್ಟೂ **ರೂ:8740/-**ಗಳನ್ನು ವಸೂಲಿಗೆ ಸೂಚಿಸಿದೆ.

. **ಪುನರ್‌ಪರಿಶೀಲನಾ** ಸಮಯದಲ್ಲಿ ಪಿ.ಎನ್. ಆರ್ ತೆಗೆದುಕೊಳ್ಳುವ ಬಗ್ಗೆ ಮಾಹಿತಿ ಇಲ್ಲದಿರುವುದರಿಂದ ತೆಗೆದುಕೊಂಡಿಲ್ಲ. ಇನ್ನುಮುಂದೆ ಪಿ.ಎನ್.ಆರ್.ನಂ ತೆಗೆದುಕೊಳ್ಳತ್ತೇವೆಂದು ಅನುಪಾಲನಾ ವರದಿ ಸಲ್ಲಿಸಿದ್ದಾರೆ. ಪ್ರಯಾಣ ಮಾಡಿರುವುದಕ್ಕೆ ಪಿ.ಎನ್.ಅರ್. ಸಂಖ್ಯೆ ಅವಶ್ಯಕ ದಾಖಲೆ ಇರುವುದರಿಂದ ಈ ಉತ್ತರವನ್ನು ಒಪ್ಪಲಾಗುವುದಿಲ್ಲ.

## 2.6.2)ಡಾ:ಎ.ವೆಂಕಟೇಶ್ ಉಪಕುಲಸಚಿವರು ನಿಯಮಬಾಹಿರವಾಗಿ ಹೊಟೆಲ್ ಭತ್ಯ ಮತ್ತು ವಸತಿ ಭತ್ಯ ಪಡೆದಿರುವುದು:-

**2014-15 ಮತ್ತು 2015-16ನೇ** ಸಾಲಿನ ಕನ್ನಡ ವಿ.ವಿ ಹಂಪಿಯ ಲೆಕ್ಕಪರಿಶೋಧನೆಯಲ್ಲಿ ಪ್ರಯಾಣಭತ್ಯ ಬಿಲ್ಲುಗಳನ್ನು ಪರಿಶೀಲಿಸಲಾಗಿದ್ದು. ಡಾ.ಎ.ವೆಂಕಟೇಶ್ ಉಪಕುಲಸಚಿವರು ಆಡಳಿತ ಇವರು **ದಿನಾಂಕ:22-02-2016ರಂದು** ಯು.ಜಿ.ಸಿ ಕೇಂದ್ರ ಕಛೇರಿ ನವದೆಹಲಿ **ಕೊಠಡಿ ಸಂಖ್ಯೆ:110**ರಲ್ಲಿ ಇಂಟರ್ ಫೇಸ್ ಮೀಟಿಂಗ್ನಲ್ಲಿ ಭಾಗವಹಿಸಲು ವಿಮಾನದಲ್ಲಿ ಪ್ರಯಾಣ ಮಾಡಿರುತ್ತಾರೆ. ವಿಮಾನ ಪ್ರಯಾಣಕ್ಕೆ **ರೂ:17277/-**(ಬೆಂಗಳೂರಿನಿಂದ ದೆಹಲಿಗೆ ಹಾಗೂ ದೆಹಲಿಯಿಂದ ಬೆಂಗಳೂರು ಎರಡು ಕಡೆ ಸೇರಿ)ವಾಸ್ತವ ಪ್ರಯಾಣಭತ್ಯ ಪಡೆದಿರುತ್ತಾರೆ.

. ಹೊಸಪೇಟೆಯಿಂದ ಬೆಂಗಳೂರು ಹಾಗೂ ಬೆಂಗಳೂರಿನಿಂದ ಹೊಸಪೇಟೆಗೆ ಕಾರಿನಲ್ಲಿ ತೆರಳಲು ರೂ:4200/-ಮೈಲೇಜುದರ ಪಡೆದಿರುತ್ತಾರೆ.ಬೆಂಗಳೂರಿನಲ್ಲಿ ದಿನಭತ್ಯಯಾಗಿ(1 1/2) ದಿನಕ್ಕೆ ರೂ:453/-ಪಡೆದಿರುತ್ತಾರೆ .ಪ್ರಯಾಣ ಭತ್ಯೆ ನಿಯಮದ ಪ್ರಕಾರ ಅವಕಾಶವಿದೆ. ಸದ್ರಿ ಉಪಕುಲಸಚಿವರು ಆಡಳಿತ ರೂ:41100/-ಮೂಲ ವೇತನ ಹೊಂದಿದ್ದು ಕೆ.ಸಿ.ಎಸ್.ನಿಯಮ 451(1)ಪ್ರಕಾರ 1 ಎ ಗುಂಪಿಗೆ ಸೇರಿರುತ್ತಾರೆ.ರೂ:40050/-ಮತ್ತು ಅದಕ್ಕಿಂತ ಹೆಚ್ಚಿನ ಮೂಲ ವೇತನ ಹೊಂದಿರುವವರು ರಾಜ್ಯದ ಹೊರಗೆ ಮಿತವ್ಯಯ ದರ್ಜೆಯಲ್ಲಿ ವಿಮಾನದಲ್ಲಿ ಪ್ರಯಾಣ ಮಾಡಲು ಅರ್ಹರಿರುತ್ತಾರೆ.ಕೆ.ಸಿ.ಎಸ್ ನಿಯಮ 451(3)ಪ್ರಕಾರ ದೆಹಲಿಯಲ್ಲಿ ಊಟವಸತಿಗೆ 1 ಎ ವರ್ಗಕ್ಕೆ ದಿನಕ್ಕೆ ರೂ:750/-ಭತ್ಯ ಪಡೆಯಲು ಅವಕಾಶವಿದೆ.

ಸದ್ರಿಯವರು ದಿನಭತ್ಯೆಗೆ ಬದಲಾಗಿ ಹೊಟೆಲ್ ಬಿಲ್, ಲಾಡ್ಜ್ ಬಿಲ್, ಟ್ಯಾಕ್ಸಿಬಿಲ್ ಎಂದು ರೂ:7859/-ಪಡೆದಿರುವುದು ನಿಯಮಬಾಹಿರ. ಇದರಲ್ಲಿ ದೆಹಲಿಯಲ್ಲಿ ವಸತಿಗೆ ರೂ:750/-ಕ್ಕೆ ಅವಕಾಶ ನೀಡಿ ಉಳಿದ ಹೆಚ್ಚುವರಿಯಾಗಿ ಸಂದಾಯ ಮಾಡಿದ ರೂ:7109/-ಗಳನ್ನು ಶ್ರೀಯುತರಿಂದ ವಸೂಲಿಸಿ ವಿ.ವಿ.ನಿಧಿಗೆ ಜಮಾ ಮಾಡುವುದು.ಈ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಣಾ ಪತ್ರ ಸಂಖ್ಯೆ-18 ದಿನಾಂಕ:26-04-2016ರಂದು ನೀಡಲಾಗಿದ್ದು ಇದಕ್ಕೆ ಸದ್ರಿಯವರು ನೀಡಿರುವ ವಿವರಣೆಯನ್ನು ಲೆ.ಪ.ಮಾನ್ಯ ಮಾಡುವುದಿಲ್ಲ.ಈ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಭತ್ಯೆ **ರೂ:7109/-**ವಸೂಲಿಸಿ ಲೆ.ಪ.ಗೆ.ಅನುಸರಣೆ ನೀಡುವುದು.

## 2.6.3)ಚಿತ್ರಕಲಾ ವಿದ್ಯಾಲಯಗಳ ಪ್ರಗತಿ ಪರಿಶೀಲನೆ ಹಾಗೂ ಭೌತಿಕ ಪರಿಶೀಲನೆ ತಂಡದಿಂದ ನಿಯಮಬಾಹಿರವಾಗಿ ವಸತಿ ಭತ್ಯೆ, ದಿನಭತ್ಯೆ ಪಡೆದಿರುವುದು:-

2014-15 ಮತ್ತು 2015-16ನೇ ಸಾಲಿನ ಹಂಪಿ ಕನ್ನಡ ವಿ.ವಿ.ಯ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಕಡತ ಮತ್ತು ವೋಚರುಗಳನ್ನು ಪರಿಶೀಲಿಸಲಾಗಿದ್ದು.ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಸಲಹಾಸಮಿತಿ ನಡಾವಳಿ ದಿನಾಂಕ:13-01-2015ರಂದು ನಡೆದಿದ್ದು ವಿಷಯ-2ರಲ್ಲಿ ಚಿತ್ರಕಲಾ ವಿದ್ಯಾಲಯಗಳ ಪ್ರಗತಿ ಪರಿಶೀಲನಾ ಸದಸ್ಯರುಗಳಿಗೆ ಪ್ರತಿ ಕಾಲೇಜಿಗೆ ಸಂಭಾವನೆಯಾಗಿ ರೂ:1000/-ಗಳನ್ನು ನೀಡಲು ಸಭೆ ಅನುಮೋದನೆ ನೀಡಿರುತ್ತದೆ.ಇದಕ್ಕೆ ದಿನಾಂಕ:18-04-2015ರಂದು ನಡೆದ 173ನೇ ಕಾರ್ಯಕಾರಿ ಸಮಿತಿ ಸಭೆ ಸ್ಥಿರೀಕರಿಸಿದೆ.ಇದಕ್ಕೆ ಸಂಬಂಧಿಸಿದಂತೆ ಅದಿಸೂಚನೆ ಹೊರಡಿಸಲಾಗಿದೆ. ಅಧಿಸೂಚನೆ ಸಂಖ್ಯೆ:ಕ.ವಿ.ಹಂ:ಕು.ಸ.ಚಿ.ಸಿ.ಪ್ರ.ಪ.ಸ 2015-16 ಜೂನ್ 05-2015ರ ಪ್ರಕಾರ.

1)ಪ್ರೊ.ವಿ.ಸಿ ಸವಡಿ ಸಮಿತಿ ಅಧ್ಯಕ್ಷರು.
2)ಶ್ರೀ ಬಾಬುರಾವ್ ನಡೋಣಿ-ಕಲಾವಿದರು-ಸದಸ್ಯರು
3)ಶ್ರೀ.ಹೆಬ್ಬಾಲೆ-ಕೆ.ನಾಗೇಶ್ ನಿರ್ದೇಶಕರು.ಚಿ.ವಿ.ನಿ.ಕೇಂದ್ರ-ಸದಸ್ಯರು
4)ಶ್ರೀ.ಹೆಚ್.ಶ್ರೀ.ನಿವಾಸ್-ಸದಸ್ಯರು-ಅಗಿರುತ್ತಾರೆ..

ರಾಜ್ಯದಲ್ಲಿ ಒಟ್ಟು 65 ಚಿತ್ರಕಲಾ ವಿದ್ಯಾಲಯಗಳಿದ್ದು ಪ್ರತಿಯೊಬ್ಬರು ರು:65000/-ಸಂಭಾವನೆ ಪಡೆದಿರುತ್ತಾರೆ ಚಿತ್ರಕಲಾವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಸಲಹಾ ಸಮಿತಿಯ ನಡಾವಳಿ ಪ್ರಕಾರ 4 ಜನ ಸದಸ್ಯರು ತಲಾ ರೂ:65000/- ಸಂಭಾವನೆ ಪಡೆಯಲು ಅವಕಾಶವಿದೆ.

ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ನಡಾವಳಿಗಳಲ್ಲಿ ಪ್ರಯಾಣ ಭತ್ಯ/ದಿನಭತ್ಯ ಮತ್ತು ವಸತಿ ಭತ್ಯ ಕುರಿತು ಪ್ರಸ್ತಾಪವಿರುದಿಲ್ಲ.ಹಾಗೂ 'ಡಿ' ದರ್ಜೆ ನೌಕರರಾದ ಶ್ರೀ.ಜಿ.ಮಾಬು ಸಾಬ್ ಇವರು ಸದಸ್ಯರಲ್ಲಿದಿದ್ದರು ಇವರನ್ನು ಪ್ರಗತಿ ಪರಿಶೀಲನೆ ತಂಡದೊಂದಿಗೆ ಕರೆದು ಕೊಂಡು ಹೋಗಿ ಪತ್ರಿ ಕಾಲೇಜಿಗೆ ರೂ:500/-ರಂತೆ ಒಟ್ಟು ಕಾಲೇಜುಗಳಿಗೆ ಒಟ್ಟು 32500/- ನೀಡಿರುತ್ತಾರೆ. ನಿಯಮ ಬಾಹಿರ ವಾಗಿರುತ್ತದೆ. ಆದ್ದರಿಂದ ಶ್ರೀ.ಯುತರಾದ ಶ್ರೀ.ಜಿ.ಮಾಬು ಸಾಬ್ ಇವರಿಂದ ರು:32500/- ವಸೂಲಿಸಿ ವಿ.ವಿ.ಖಾತೆಗೆ ಜಮಾ ಮಾಡಿ ಲೆ.ಪ.ಗೆ ಅನುಸರಣೆ ನೀಡುವುದು:-

**ಸದಸ್ಯರು ನಿಯಮಬಾಹಿರವಾಗಿ ವಸತಿ ಭತ್ಯ/ದಿನಭತ್ಯೆ ಪಡೆದ ವಿವರ**

| ಕ್ರ ಸಂ | ವಿವರ | ಮೊತ್ತ |
|---|---|---|
| 1 | ಪ್ರೊ.ವಿ.ಸಿ ಸವಡಿ | ರೂ: 7000 |
| 2 | ಶ್ರೀ ಬಾಬುರಾವ್ ನಡೋಣಿ | ರೂ: 11100 |
| 3 | ಡಾ.ಹೆಬ್ಬಾಲೆ-ಕೆ.ನಾಗೇಶ್ | ರೂ: 2700 |
| 4 | ಶ್ರೀ.ಹೆಚ್.ಶ್ರೀ.ನಿವಾಸ್ | ರೂ: 2700 |
| 5 | ಇತರೆ ವೆಚ್ಚ- (hotel and restorent bills) | ರೂ: 2478 |
| | ಒಟ್ಟು | ರೂ. 25978 |

ಈ ಮೇಲನ ಸದಸ್ಯರುಗಳಿಂದ **ರೂ:25978/**-ಗಳನ್ನು ವಸೂಲಿಸಿ ವಿ.ವಿ.ಖಾತೆಗೆ ಜಮಾ ಮಾಡುವುದು ಹಾಗೂ ಲೆ.ಪ.ಗೆ ಅನುಸರಣೆ ನೀಡುವುದು.

ಒಬ್ಬ ಸರ್ಕಾರಿ ನೌಕರನು ದಿನನಿತ್ಯ ಕೇಂದ್ರ ಸ್ಥಳದಲ್ಲಿ ನಿರ್ವಹಿಸುವ ಕೆಲಸಗಳನ್ನು ಬಿಟ್ಟು ಬೇರೆ ಕೆಲಸಗಳನ್ನು ವಿವಿಧ ಸ್ಥಳಗಳಲ್ಲಿ ನಿರ್ವಹಿಸಿದಾಗ ಹೆಚ್ಚಿನ ಖರ್ಚು-ವೆಚ್ಚಗಳಿಂದ ಆರ್ಥಿಕವಾಗಿ ತೊಂದರೆಯಾಗದಿರಲೆಂದು ದಿನಭತ್ಯೆ/ಸಂಭಾವನೆಯನ್ನು ನೀಡಲಾಗಿರುತ್ತದೆ ಆ ಸಂಭಾವನೆಯಾಗಿ ಪಡೆದ ಹಣದಲ್ಲಿ ಸದಸ್ಯರು ಖರ್ಚು-ವೆಚ್ಚಗಳನ್ನು ನಿರ್ವಹಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಮೇಲಿನ ಸದಸ್ಯರು ಹಾಗೂ ಜಿ.ಮಾಬು ಸಾಬ್ ಇವರಿಂದ ಒಟ್ಟು **ರೂ:58478/**-ಗಳನ್ನು ವಸೂಲಿಸಿ ವಿ.ವಿ ನಿಧಿಗೆ ಜಮಾ ಮಾಡಲು ಸೂಚಿಸಿದೆ.ಈ ವಿಚಾರಕ್ಕೆ ಸಂಬಂಧಿಸಿದಂತೆ **ಲೆ.ಪ.ವಿ.ಪತ್ರ ಸಂಖ್ಯೆ:51 ದಿನಾಂಕ:18-06-2016**ರಂದು ನೀಡಲಾಗಿತ್ತು ಇದಕ್ಕೆ ನೀಡಿರುವ ವಿವರಣೆಯನ್ನು ಲೆ.ಪ.ವು.ಮಾನ್ಯಮಾಡುವುದಿಲ್ಲ. ಕಾರಣಮೇಲ್ಕಾಣಿಸಿದಂತೆ **ರೂ:58478/**-ಗಳನ್ನು ವಸೂಲಿಗೆ ಸೂಚಿಸಿದೆ.

## 2.6.4)ಕುಲಪತಿಗಳ ಗೃಹ ಕಛೇರಿಗೆ ಸಾಮಗ್ರಿ ಖರೀದಿಸುವಾಗ ಕೆ.ಟಿ.ಪಿ.ಪಿ ನಿಯಮ ಅಡಿಯಲ್ಲಿ ಟೆಂಡರ್ ಕರೆಯದೆ ಕೊಟೇಷನ್ ಮೂಲಕ ಸಾಮಗ್ರಿಗಳನ್ನು ಖರೀದಿಸಿರುವುದು:-

ಕನ್ನಡ ವಿಶ್ವವಿದ್ಯಾಲಯದ 2014-15 ಮತ್ತು 2015-16ನೇ ಸಾಲಿನಲ್ಲಿ ಕುಲಪತಿಗಳ ಗೃಹ ಕಛೇರಿಗೆ ನಿತ್ಯ ಉಪಯೋಗ ಸಾಮಗ್ರಿಗಳನ್ನು ಖರೀದಿಸಿದ್ದು **ರೂ:1031610/-** ವಿವಿಧ ಸಾಮಗ್ರಿಗಳನ್ನು ಖರೀದಿಸಿದ್ದು, ತಾಂತ್ರಿಕ ವಿಭಾಗದವರು ಕುಲಪತಿಗಳ ಅಗತ್ಯಕ್ಕೆಬೇಕಾದ ಎಲ್ಲಾ ಸಾಮಗ್ರಿಗಳನ್ನು ಒಂದು ಪೂರ್ವಭಾವಿ ಕ್ರಿಯಾ ಯೋಜನೆ ರೂಪಿಸಿ ಕುಲಪತಿಯವರ ಅನುಮತಿ ಪಡೆದು ಕೆ.ಟಿ.ಪಿ.ಪಿ ಅಧಿನಿಯಮ 1999ರ ಸೆಕ್ಷನ್ 4 ee(ii ಪ್ರಕಾರ ಅಡಿಯಲ್ಲಿ ಸಾಮಗ್ರಿಗಳನ್ನು ಖರೀದಿಸಬಹುದಾಗಿತ್ತು.ಇದರಿಂದ ಸಾಮಗ್ರಿಗಳಿಗೆ ಸ್ಪರ್ಧಾತ್ಮಕದರವೇರ್ಪಟ್ಟು ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಕುಲಪತಿಯವರ ಗೃಹ ಕಛೇರಿಗೆ ಸರಬರಾಜು ಮಾಡಬಹುದಾಗಿತ್ತು. ಹಾಗೂ ಹಿಂದಿನ ಕುಲಪತಿಗಳು ಗೃಹ ಕಛೇರಿಯಲ್ಲಿ ಉಪಯೋಗಿಸಿದ ಸಾಮಗ್ರಿಗಳನ್ನು ಡೆಡ್ ಸ್ಟಾಕ್ ರಿಜಿಸ್ಟರ್‌ನಲ್ಲಿ ಅಥವಾ ಉಪಯೋಗಿಸಲು ಸಾಧ್ಯವಿದ್ದ ಪಕ್ಷದಲ್ಲಿ ವಿಶ್ವವಿದ್ಯಾಲಯದ ಶಾಖೆಗಳಿಗೆ ಕಳುಹಿಸಬಹುದಾಗಿತ್ತು.ಈ ಕ್ರಮ ಜರುಗಿಸಿರುವುದಿಲ್ಲ.ಅತ್ಯ ಮೂಲ್ಯ ಸಾಮಗ್ರಿಗಳನ್ನು ಸುರಕ್ಷಿತವಾಗಿಟ್ಟಿರುವುದು ತಾಂತ್ರಿಕ ಶಾಖೆಯ ಆದ್ಯ ಕರ್ತವ್ಯವಾಗಿದ್ದು ಕರ್ತವ್ಯ ಲೋಪವೆಸಗಿದ್ದಾರೆ. ಕುಲಪತಿಗಳ ಗೃಹ ಕಛೇರಿಗೆ ಕೆ.ಟಿ.ಪಿ.ಪಿ ನಿಯಮದಡಿ ಸರ ಸಾಮಗ್ರಿಗಳನ್ನು ಖರೀದಿಸದೆ ಇರುವುದಕ್ಕೆ ತಾಂತ್ರಿಕ ಶಾಖೆಯ ಸಂಬಂಧಪಟ್ಟ ಸಿಬ್ಬಂದಿಯ ಮೇಲೆ ಆಡಳಿತಾತ್ಮಕ ವಿಚಾರಣೆನಡೆಸಿ ಶಿಸ್ತಿನ ಕ್ರಮ ಜರುಗಿಸಿ ಲೆಕ್ಕ ತನಿಖೆಗೆ ವಿವರ ನೀಡಲು ಸೂಚಿಸಿದೆ ಅದುವರೆಗೆ **ರೂ:1031610/-**ಆಕ್ಷೇಪಣೆಯಲ್ಲಿಡಲಾಗಿದೆ ವಿವರಗಳನ್ನು **ಅನುಬಂಧ-30** ದಲ್ಲಿ ಲಗತ್ತಿಸಿದೆ.

## 2.6.5)ನಿಯಮ ಬಾಹಿರವಾಗಿ ಹೆಚ್ಚು ದೂರದ ಮೈಲೇಜುದರ ಪಾವತಿಸಿರುವುದು:-

**2014-15 ಮತ್ತು 2015-16ನೇ** ಸಾಲಿನ ಪ್ರಯಾಣ ಭತ್ಯ ಬಿಲ್ಲುಗಳನ್ನು ಪರಿಶೀಲಿಸಲಾಗಿದ್ದು, ಎರಡು ಸ್ಥಳಗಳ ನಡುವಿನ ಹತ್ತಿರದ ದೂರ(Shortest)ದ ಮೈಲುದರ ಪಡೆಯದೇ ದೂರದ ಅಥವಾ ಹೆಚ್ಚಿನ ದೂರದ ಮೈಲುದರ ಪಾವತಿಸಲಾಗಿರುತ್ತದೆ. ಕೆ.ಸಿ.ಎಸ್ ನಿಯಮಗಳು ನಿಯಮ 462(ಎ) ಪ್ರಕಾರ. For the purpose of calculating travelling allowance .a journey between two stations shall be held to be performed by the shortest of two or more practicable routes or by the cheapest of such routes is may be equally short:provided that when they are alternative . railway routes and the difference between them in point of time and cost is not great mileage allowance should be calculated on the route actually used"

(b) the shortest route is that by which the traveller can most speedily reach his destination by the ordinary modes of travelling in cases of doubt government will declare which shall be regarded as the shortest of two or more routes.

ಈ ಹಿನ್ನಲೆಯಲ್ಲಿ ದೂರದ ಮೈಲುದರ ಪಡೆದ ಪ್ರಕರಣಗಳಲ್ಲಿ ಹತ್ತಿರದ ಮೈಲುದರವನ್ನು ಲೆಕ್ಕಾಚಾರ ಮಾಡಿ ವ್ಯತ್ಯಾಸದ ಮೊತ್ತ **ರೂ:67232/-**ಅನ್ನು ವಿವಿಧ ಸಿಬ್ಬಂದಿಗಳಿಂದ ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಸರಣೆ ಸಲ್ಲಿಸುವುದು.ವಿವರಗಳನ್ನು **ಅನುಬಂಧ-31** ರಲ್ಲಿ ವರದಿಗೆ ಲಗತ್ತಿಸಿದೆ. ಈ ಅನುಬಂಧ ದಲ್ಲಿ ತಿಳಿಸಿದ ಸಿಬ್ಬಂದಿಯನ್ನು ಬಿಟ್ಟು ಬೇರೆ ಸಿಬ್ಬಂದಿಗಳು ಈ ರೀತಿ ಹೆಚ್ಚಿನ ದೂರದ ಮೈಲುದರ ಕ್ಲೇಮು ಮಾಡಿದ ಸಂದರ್ಭದಲ್ಲಿ ಈ ಮೇಲಿನಂತೆ ಕ್ರಮ ಕೈಗೊಂಡು ಲೆಕ್ಕ ಪರಿಶೋಧನೆಗೆ ಅನುಪಾಲನೆ ನೀಡಲು ಸೂಚಿಸಿದೆ.

## 2.6.6)ಟೆಲಿ ಪೋನ್ ಬಿಲ್ಲಿಗೆ ನಿಗದಿತ ರಿಜಿಸ್ಟರ್ ನಿರ್ವಹಿಸದೇ ಪಾವತಿಸಿರುವುದು:-

**2014-15 ಮತ್ತು 2015-16ನೇ** ಸಾಲಿನ ದೂರವಾಣಿ ಬಿಲ್ಲುಗಳನ್ನು ನೀಡಿದ್ದು ಸಂಬಂದಿಸಿದ ರಿಜಿಸ್ಟರ್ ನಿರ್ವಹಿಸಿ ತನಿಖೆಗೆ ಹಾಜರುಪಡಿಸಿಲ್ಲ. ಎಂಪಿ ಇ **1958** ನಿಯಮ **53(ಬಿ)** ಸಿ(1) ವರೆಗೆ **ಫಾರಂ.7-ಎ-**ರಲ್ಲಿ ರಿಜಿಸ್ಟರ್ ನಿರ್ವಹಿಸಿಲ್ಲ. ರಿಜಿಸ್ಟರ್ ನಿರ್ವಹಿಸದೇ ಇರುವುದರಿಂದ ಬಿಲ್ಲುಗಳಲ್ಲಿ ನಮೂದಿಸಿದ ಕರೆಗಳಲ್ಲಿ ಕಛೇರಿಯ ಕೆಲಸಕ್ಕಾಗಿ ಎಷ್ಟು ಕರೆಗಳು ಮತ್ತು ಖಾಸಗಿ ಕೆಲಸಕ್ಕಾಗಿ ಎಷ್ಟು ಕರೆಗಳು ಎಂಬುದನ್ನು ವಿಂಗಡಿಸಲು ಸಾಧ್ಯವಾಗಿಲ್ಲ ಕಾರಣ ರಿಜಿಸ್ಟರ್ ನಿಗದಿತ ನಮೂನೆಯಲ್ಲಿ ನಿರ್ವಹಿಸಿ ಎಲ್ಲಾ ವಿವರಗಳನ್ನು ನಮೂದಿಸಿ ಹಾಜರುಪಡಿಸುವವರೆಗೆ **2014-15ನೇ** ಸಾಲಿನಲ್ಲಿ **ರೂ:180368/- ಹಾಗೂ 2015-16ನೇ** ಸಾಲಿನಲ್ಲಿ **ರೂ:229407/-** ಒಟ್ಟು **ರೂ:409774/-**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ವಿವರಗಳನ್ನು **ಅನುಬಂಧ 32** ಎ&ಬಿ ದಲ್ಲಿ ಲಗತ್ತಿಸಿದೆ.

## 2.6.7)ಸಮಾವೇಶಗಳಿಗೆ ಪರಿನಿಯಮ ಉಲ್ಲಂಘಿಸಿ ಹಣವನ್ನು ಹೆಚ್ಚಾಗಿ ಮಂಜೂರು ಮಾಡಿರುವುದು:-

ಕನ್ನಡ ವಿ.ವಿ. ಹಂಪಿಯ ಪರಿನಿಯಮ 35(ಖ)ಪ್ರಕಾರ ಚಾರ್ಚಾಕೂಟಗಳು, ಸಮ್ಮೇಳನಗಳು, ಸಮಿತಿಗಳು ಇತ್ಯಾದಿಗಳನ್ನು ಸಮಾವೇಶಗೊಳಿಸುವುದಕ್ಕೆ ಪ್ರತಿಯೊಂದು ಸಮಾವೇಶಕ್ಕೆ ರೂ:25000/-ಗಳನ್ನು ಮೀರದಂತೆ ಹಣವನ್ನು ಮಂಜೂರು ಮಾಡ ಬೇಕಾಗಿರುತ್ತದೆ. ಕಡತಗಳನ್ನು ಓಚರುಗಳನ್ನು ಪರಿಶೀಲಿಸಿದಾಗ ರೂ:25000/-ಕ್ಕಿಂತ ಹೆಚ್ಚು ಮೊತ್ತ ಮಂಜೂರು ಮಾಡಿರುವುದು ಕಂಡುಬಂದಿದೆ. ಲೆಕ್ಕ ಪರಿಶೋಧನೆಯು ಇದನ್ನು ಒಪ್ಪುವುದಿಲ್ಲ.ಆದ್ದರಿಂದ.ರೂ:7092676/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-33 ರಲ್ಲಿ ವರದಿಗೆ ಲಗತ್ತಿಸಿದೆ.

## 2.6.8)ಪ್ರಾಸಾರಾಂಗ ವಿಭಾಗ, ಪ್ರಾದೇಶಿಕ ಕಛೇರಿ ಬೆಂಗಳೂರು ಮತ್ತು ಸರಸ್ವತಿ ಮಾರಾಟ ಮಳಿಗೆ ಕನ್ನಡ ವಿಶ್ವ ವಿದ್ಯಾಲಯ ಹಂಪಿ ಇವುಗಳ ಪುಸ್ತಕಗಳ ಮಾರಾಟ ಮತ್ತು ಬಾಕಿ ವಸೂಲಾತಿ:-

ಕನ್ನಡ ವಿಶ್ವವಿದ್ಯಾಲಯ ಹಂಪಿ ಇದರ ಪ್ರಸಾರಾಂಗ ವಿಭಾಗಳಲ್ಲಿ ಸರಸ್ವತಿ ಮಾರಾಟ ಮಳಿಗೆ ವಿದ್ಯಾರಣ್ಯ ಆವರಣ ಮತ್ತು ಪ್ರಾದೇಶಿಕ ಕಛೇರಿ ಬೆಂಗಳೂರು ಕಛೇರಿಗಳಿಗೆ ಸಂಬಂಧಿಸಿದ ಲೆಕ್ಕ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಈ ಎರಡೂ ಕಛೇರಿಗಳಲ್ಲಿ ಕ್ರಮವಾಗಿ 1996 ಮತ್ತು 2004ರಿಂದ ಮತ್ತು ಪ್ರಸ್ತುತ 2014-15 ಹಾಗೂ 2015-16ನೇ ಸಾಲಿನಲ್ಲಿ ಮಸ್ತಕಗಳನ್ನು ಸಾಲದರೂಪದಲ್ಲಿ ಮಾರಾಟ ಮಾಡುವುದು ಮತ್ತು ಬಾಕಿ ವಸೂಲಾತಿ ಕಂಡು ಬಂದಿರುತ್ತದೆ.ದಿನಾಂಕ:31-03-2016ರ ಅಂತ್ಯಕ್ಕೆ ರೂ:332934/-ಗಳ ಬಾಕಿಯನ್ನು ವಸೂಲಿಸಬೇಕಾಗಿದ್ದು. ಈ ಸಂಬಂಧ ವಿವರಣೆಯನ್ನು ಕೇಳಿ ಲೆಕ್ಕ ಪರಿಶೋಧನಾ ವಿಚಾರಣೆ ಪತ್ರ ಸಂಖ್ಯೆ:50 ದಿನಾಂಕ:18-06-2016 ರಲ್ಲಿ ಕೇಳಲಾಗಿತ್ತು.ಕ.ವಿ.ವಿ.ಹಂ.ಇವರು ಮಾರಾಟ ಮತ್ತು ಬಾಕಿ ವಸೂಲಾತಿ ತಖ್ತೆಗಳನ್ನು ಹಿಂದಿನ ಮತ್ತು ಪ್ರಸ್ತುತ ಸಾಲಿಗೆ ಸಂಬಂಧಿಸಿದಂತೆ ಸಾಲದ ಮಾರಾಟ ಮತ್ತು ಬಾಕಿ ವಸೂಲಾತಿಯ ವಿವರಗಳ ತಖ್ತೆಯನ್ನು ದಿನಾಂಕ:20-06-2016ರ ವರೆಗೆ ಸಲ್ಲಿಸಿರುತ್ತದೆ.ಪರಿಶೀಲಿಸಲಾಗಿ ವಿವರಗಳನ್ನು ಈ ಕೆಳಗಿನಂತಿವೆ ತಖ್ತೆಗಳನ್ನು ವರದಿಗೆ ಲಗತ್ತಿಸಿದೆ.

| ಕ್ರ ಸಂ | ವಿವರಗಳು | 31-03-2016 ರಂದು ಇದ್ದ ಬಾಕಿ | 20-06-2016 ರ ವರೆಗೆ ವಸೂಲಿಸಿದ ಮೊತ್ತ | ಬಾಕಿ |
|---|---|---|---|---|
| 1 | ಪ್ರಾದೇಶಿಕ ಕಛೇರಿ ಬೆಂಗಳೂರು | 205808 | 82955 | 122853 |
| 2 | ಸರಸ್ವತಿ ಪುಸ್ತಕ ಮಾರಾಟ ಮಳಿಗೆ ಕ.ವಿದ್ಯಾರಣ್ಯ | 127126 | 35023 | 92103 |
| | ಒಟ್ಟು | **332934** | **117978** | **214956** |

ರೂ:214956/-ಗಳು ವಸೂಲಿ ಮಾಡಬೇಕಾಗಿದ್ದು ಕೂಡಲೇ ಸಂಬಂಧಿಸಿದವರಿಂದ ವಸೂಲಿಸಿ ಪ್ರಸಾರಾಂಗ ಖಾತೆಗೆ ಜಮಾ ಮಾಡಿ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡುವುದು.

## 2.6.9)ಅಂದಾಜು ವೆಚ್ಚಮೀರಿ ಮತ್ತು ಕನ್ನಡ ವಿ.ವಿ.ಯ ಪರಿನಿಯಮ ನಿಗದಿಪಡಿಸಿದ ಮೀತಿಯನ್ನು ಮೀರಿ ವೆಚ್ಚ ಮಾಡಿರುವುದು:-

2014-15 ಮತ್ತು 2015-16ನೇ ಸಾಲಿನ ಹಂಪಿ ಕನ್ನಡ ವಿ.ವಿ.ಯ ಲೆಕ್ಕ ಪರಿಶೋಧನೆಯಲ್ಲಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಹಂಪಿ ವಿ.ವಿ.ಯಿಂದ ಕುಪ್ಪಳ್ಳಿಯಲ್ಲಿ ದಿನಾಂಕ:29.30.31 ಡಿಸೆಂಬರ್ 2014-ರಂದು ನಡೆಸಿದ ಕನ್ನಡ ಕಮ್ಮಟದ ಕಡತಗಳನ್ನು ಪರಿಶೀಲಿಸಲಾಗಿದ್ದು, ಈ ಕಾರ್ಯ ಕ್ರಮ ನಡೆಸಲು ರೂ:141500/-ಚೆಕ್ ನಂ:057597 ದಿನಾಂಕ:23-12-2014 ಹಾಗೂ ಹೆಚ್ಚುವರಿ ಮೊತ್ತ ರೂ:7670/-ಚೆಕ್ ನಂ:060917 ದಿನಾಂಕ:15-04-2015 ರಂದು ವೆಚ್ಚವಾಗಿದ್ದು. ಒಟ್ಟು ವೆಚ್ಚ ರೂ:149170/-ರೂ ಗಳನ್ನು ಈ ಕಮ್ಮಟ ನಡೆಸಲು ಮುಂಗಡ ಮತ್ತು ಹೆಚ್ಚುವರಿ ಮೊತ್ತಗಳನ್ನು ಪಡೆಯಲಾಗಿರುತ್ತದೆ.

ತಮ್ಮ ಅಂದಾಜುಪಟ್ಟಿಯಲ್ಲಿ ಪ್ರಯಾಣ ಭತ್ಯೆ, ವೇದಿಕೆ ಭತ್ಯೆ ,ಸಭಾ ಭತ್ಯೆಗೆ ರೂ:57000/-ನಿಗದಿಪಡಿಸಲಾಗಿದೆ.ಆದರೆ ವಾಸ್ತವವಾಗಿ ಪ್ರಯಾಣ ಭತ್ಯೆ ವೆಚ್ಚ ರೂ:85640/- ಆಗಿರುತ್ತದೆ. ಆಂದರೆ ರೂ:28640/-ಅಂದಾಜುಪಟ್ಟಿಯಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚುವರಿ ಆದಂತಾಯಿತು.ಯಾವುದೇ ಅಂದಾಜುಪಟ್ಟಿಯು ವಾಸ್ತವಿಕವಾಗಿ ಮಾಡುವ ವೆಚ್ಚಗಳಿಗೆ ತುಂಬಾ ಹತ್ತಿರವಿರಬೇಕು.ನಿಮ್ಮ ಅಂದಾಜುಪಟ್ಟಿ ಹಾಗೂ ವಾಸ್ತವ ವೆಚ್ಚ ಶೇ.50% ಹೆಚ್ಚು ವ್ಯತ್ಯಾಸವಾಗಿರುವುದು ಸಮಂಜಸವಲ್ಲ.

ಸದ್ರಿ ಕಾರ್ಯಕ್ರಮದ ಪ್ರಸ್ತಾವನೆಯಲ್ಲಿ ಶ್ರೀ.ಬಿ.ಎಂ.ಪುಟ್ಟಯ್ಯ ಮುಖ್ಯಸ್ಥರು ಕ.ಸಾಹಿತ್ಯ ಅಧ್ಯಯನ ವಿಭಾಗ ಇವರು ಸಂಪನ್ಮೂಲ ವ್ಯಕ್ತಿಗಳಿಗೆ ಪ್ರಯಾಣ ಭತ್ಯಯನ್ನು ಸೂಪರ್ ಡೀಲಕ್ಸ್ ಬಸ್ ಮತ್ತು 2ನೇ ದರ್ಜೆ ಎ.ಸಿ.ರೈಲು ಇದರ ದರ ನೀಡುತ್ತವೆ ಎಂದು ತಿಳಿಸಿರುತ್ತಾರೆ. ಆದರೆ ಪ್ರಯಾಣ ಭತ್ಯೆ ನೀಡುವಾಗ ಬಹಳಷ್ಟು ಜನ ಸಂಪನ್ಮೂಲ ವ್ಯಕ್ತಿಗಳಿಗೆ 1ನೇ ದರ್ಜೆ ಎ.ಸಿ.ರೈಲಿನ ಪ್ರಯಾಣ ಭತ್ಯ ನೀಡುರುವುದನ್ನು ಗಮನಿಸಿದೆ.ಇದು ತಮ್ಮ ಅಂದಾಜು ಪತ್ರಿಕೆಗೆ ವ್ಯತಿರಿಕ್ತವಾಗಿ ಮಾಡಿದ ವೆಚ್ಚವಾಗಿರುತ್ತದೆ.ಅಲ್ಲದೇ

1ನೇ ದರ್ಜೆಯ ಎ.ಸಿ ರೈಲಿನಲ್ಲಿ ಪ್ರಯಾಣ ಮಾಡಿರುವುದನ್ನು ದೃಢಪಡಿಸಿಕೊಳ್ಳಲು ಪಿ.ಎನ್.ಆರ್. ನಂಬರ್ ಹಾಜರುಪಡಿಸಬೇಕಾಗುತ್ತದೆ. ಆದರೆ ಪಿ.ಎನ್.ಆರ್. ಹಾಜರುಪಡಿಸಿಲ್ಲ.

ಕನ್ನಡ ಕಮ್ಮಟದ ವೇಳಾಪಟ್ಟಿಯಲ್ಲಿ ತಿಳಿಸಿದಂತೆ **29-01-2014**ರ ಸಮಯ **10.30**ರಿಂದ **1.00**ಗಂಟೆ ನೊಂದಣಿ ಮಾಡಲು ಸಮಯ ಮೀಸಲಾಗಿಡಲಾಗಿದೆ.ಆದರೆ ನೊದಣಿ ರಿಜಿಸ್ಟರ್ ಹಾಜರುಪಡಿಸಿರುವುದಿಲ್ಲ ದಾಸ್ತಾನು ವಹಿಯನ್ನು ಹಾಜರುಪಡಿಸಿಲ್ಲ.

ಕನ್ನಡ ವಿ.ವಿ.ಪರಿನಿಯಮಗಳು ನಿಯಮ **35(ಖ)** ಪ್ರಕಾರ ಚರ್ಚಾಕೂಟ.ಸಮ್ಮೇಳನಗಳು.ಸಮಿತಿಗಳು ಇತ್ಯಾದಿಗಳನ್ನು ಸಮಾವೇಶಗೊಳಿಸುವುದಕ್ಕೆ ಪ್ರತಿಯೊಂದು ಸಮಾವೇಶಕ್ಕೆ **ರೂ:25000/-**ಮೀರದಂತೆ ಹಣವನ್ನು ಮಂಜೂರುಮಾಡುವುದು ಎಂದು ತಿಳಿಸಲಾಗಿದೆ.ಆದರೆ ಕುಲಪತಿಗಳು ಈ ನಿಯಮ **ಮೀರಿ 149170/-**ಅಂದರೆ **ರೂ:124170/-**ಹೆಚ್ಚುವರಿ ಮಂಜೂರು ಮಾಡಿದಂತಾಯಿತು.ಕೆ.ವಿ.ವಿ. ಅಧಿನಿಯಮ ಹಾಗೂ ಪರಿನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಇಲ್ಲದಿದ್ದರೆ ಅವುಗಳನ್ನು ರೂಪಿಸಿರುವ ಉದ್ದೇಶವೇ ಈಡೇರುವುದಿಲ್ಲ .ಈ ರೀತಿ ನಿಯಮ ಮೀರಿ ವೆಚ್ಚ ಮಾಡುವುದನ್ನು **ಲೆ.ಪ.ವಿ.ಪತ್ರ ಸಂಖ್ಯೆ:16 ದಿನಾಂಕ:21-04-2016** ರಂದು ನೀಡಲಾಗಿತ್ತು.ಇದಕ್ಕೆ ನೀಡಿರುವ ವಿವರಣೆಯನ್ನು ಒಪ್ಪಲಾಗುವುದಿಲ್ಲ **ಆದ್ದರಿಂದ ರೂ:149170/-**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 2.6.10)ನಿಯಮ ಬಾಹಿರವಾಗಿ ನಿಗದಿತ ಪ್ರಯಾಣ ಭತ್ಯೆ ಮಂಜೂರು ಮಾಡಿರುವುದು:-

2014-15 ಹಾಗೂ 2015-16ನೇ ಸಾಲಿಗೆ ವೇತನ ಬಿಲ್ಲುಗಳನ್ನು ಪರಿಶೀಲಿಸಲಾಗಿ ವಾಹನ ಭತ್ಯೆ ಒಟ್ಟು ಮೊತ್ತ **ರೂ:279500/-**ಗಳು ಪಡೆಯುತ್ತಿರುವುದು ಕಂಡು ಬಂದಿದ್ದು. **ವಿಚಾರಣೆ ಸಂಖ್ಯೆ:46** ಹಾಗೂ **ವಿಚಾರಣೆ ಸಂಖ್ಯೆ:57**ರಲ್ಲಿ ವಿವರಣೆಯನ್ನು ಕೇಳದ್ದು ವಿಶ್ವವಿದ್ಯಾಲಯದ **ಆದೇಶ ಸಂಖ್ಯೆ:ಕ.ವಿ.ಹಂ:ಕು.ಸ:ವಿಧ:2014-15:ದಿನಾಂಕ:09-08-2014** ಹಾಗೂ ವಿಶ್ವವಿದ್ಯಾಲಯದ **ಆದೇಶ ಸಂಖ್ಯೆ:ಕ.ವಿ.ಹಂ:ಕು.ಕ:2012-13:ದಿನಾಂಕ:11-02-2013**ರಲ್ಲಿ **ಭೋಧಕ ಸಿಬ್ಬಂದಿಗೆ ಮಾಸಿಕ ರು:6000/-**ಗಳಂತೆ ಹಾಗೂ ತಾಂತ್ರಿಕ ಸಿಬ್ಬಂದಿ ಮಾಸಿಕ **ರೂ:2500/-**ರಂತೆ ಡ್ರಾ ಮಾಡಲು ಆದೇಶವಿರುತ್ತದೆ.

ಆದರೆ ಸರ್ಕಾರದ **ಆದೇಶ ಸಂಖ್ಯೆ:ಎಫ್ ಡಿ:12:ಎಸ್.ಆರ್.ಪಿ:2012(11) ಬೆಂಗಳೂರು ದಿನಾಂಕ:14-06-2012**ರಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ವಾಹನ ಸೌಲಭ್ಯ ಇಲ್ಲದೇ ಇರುವವರಿಗೆ ಮಾತ್ರ ವಾಹನ ಭತ್ಯೆಯನ್ನು ನೀಡಲು ಅವಕಾಶ ವಿರುತ್ತದೆ.ಕನ್ನಡ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಯು ಎಂಟು ಕಿಲೋಮೀಟರ್‌ಗಿಂತ ಕಡಿಮೆ ಇರುತ್ತದೆ.ಹಾಗೂ ಇದರ ಅಧೀನದಲ್ಲಿ ಯಾವುದೇ ಕಾಲೇಜುಗಳು ಇರುವುದಿಲ್ಲ.ಅನುಬಂಧ-34 ರಲ್ಲಿ ವಿವರಿಸಿದ ಅಧಿಕಾರಿಗಳ ನಿಗದಿತ ಪ್ರಯಾಣ ಭತ್ಯೆ **ರೂ:279500/-**ಗಳನ್ನು ಸಂಬಂಧಿಸಿದ ಅಧಿಕಾರಿಗಳಿಂದ ವಸೂಲಿಸಿ ವಿಶ್ವವಿದ್ಯಾಲಯದ ಇಲ್ಲಿಯವರೆಗೆ ಡ್ರಾ ಮಾಡಿದ ಮೊತ್ತವನ್ನು ಸಹ ವಸೂಲಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಿ ಲೆಕ್ಕ ಪರಿಶೋಧಕರಿಗೆ ಅನುಪಲನ ವರದಿ ನೀಡಲು ಸೂಚಿಸಿದೆ.

## 2.6.11)ವಿ.ವಿ.ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ನಿಯಮ ಬಾಹಿರವಾಗಿ ಮಾನವ ಸಂಪನ್ಮೂಲ ಸಂಭಾವನೆ ನೀಡಿರುವುದು:-

**2014-15 ಮತ್ತು 2015-16**ನೇ ಸಾಲಿನ ಹಂಪಿ ಕನ್ನಡ ವಿ.ವಿ.ಯ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾಕೇಂದ್ರದ ಕಡತ ಮತ್ತು ವೋಚರುಗಳನ್ನು ಪರಿಶೀಲಿಸಲಾಗಿದ್ದು,ಮಾನವ ಸಂಪನ್ಮೂಲ ಸಂಭಾವನೆ ಎಂದು ವಿ.ವಿ.ಯ ಸಿಬ್ಬಂದಿಗಳಿಗೆ ಸಂಭಾವನೆ ನೀಡಿರುವುದು ಕಂಡು ಬಂದಿದೆ.

| ಕ್ರ ಸಂ | ಚೆಕ್ ಸಂಖ್ಯೆ | ದಿನಾಂಕ | ಮೊತ್ತ |
|---|---|---|---|
| 1 | 107172 | 18-08-2014 | 81300 |
| 2 | 58933 | 04-02-2015 | 51100 |
| 3 | 118984 | 16-05-2015 | 31500 |
| | | ಒಟ್ಟು | **163900** |

**ಒಟ್ಟು ರೂ:163900/-**ಗಳನ್ನು ಮಾನವ ಸಂಪನ್ಮೂಲ ಸಂಭಾವನೆ ಎಂದು ವಿ.ವಿ.ಯ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ಅಧ್ಯಾಪಕರಿಗೆ ನೀಡಲಾಗಿದೆ. ವಿ.ವಿ.ಯ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ವಿ.ವಿ.ಯ ವಿದ್ಯಾರಣ್ಯದಲ್ಲಿ ಬೇರೆ ಬೇರೆ ವಿಭಾಗಗಳ ಕಾರ್ಯಗಳಿಗೆ ನಿಯೋಜಿಸಿದಾಗ/ ಕಾರ್ಯನಿರ್ವಹಿಸಿದಾಗ ಮಾನವ ಸಂಪನ್ಮೂಲ ಸಂಭಾವನೆ ಎಂದು ನೀಡಿರುವುದಕ್ಕೆ ಯಾವುದಾದರೂ ಸರ್ಕಾರಿ ಆದೇಶವನ್ನು ಆಧಾರವಾಗಿ ಪರಿಗಣಿಸಲಾಗಿದೆಯೇ ಅಥವಾ ವಿ.ವಿ.ಯಿಂದ ಮಾನವ ಸಂಪನ್ಮೂಲ ಸಂಭಾವನೆ ಎಂದು ನೀಡಲು

ಯಾವುದಾದರೂ ಆದೇಶವಿದೆಯೇ.ಕೆ.ಸಿ.ಎಸ್.ನಿಯಮ **497ಎ ಟಿಪ್ಪಣಿ 4(i)ರ ಪ್ರಕಾರ ಕೇಂದ್ರ ಸ್ಥಳದ 8.ಕಿ.ಮೀ** ವ್ಯಾಸದೊಳಗೆ ಯಾವ ಪ್ರಯಾಣಭತ್ಯೆ/ದಿನಭತ್ಯೆಗೂ ಅರ್ಹರಾಗುವುದಿಲ್ಲ.ಅಲ್ಲದೇ ಈ ರೀತಿ ಮಾನವ ಸಂಪನ್ಮೂಲ ಸಂಭಾವನೆಯಾಗಿ ಶಿಲ್ಪಕಲಾಶಿಬಿರ, ಪುನರ್‌ಮನನ ಶಿಬಿರ, ಇತರ ಕಾರ್ಯಕ್ರಮಗಳಲ್ಲಿ ಪಡೆದಿರುವುದು ನಿಯಮಬಾಹಿರವಾಗಿರುತ್ತದೆ.ಇದಕ್ಕೆ ಸೂಕ್ತ ವಿವರಣೆ ನೀಡುವಂತೆ ಲೆ.ಪ.ವಿ. **ಪತ್ರ ಸಂಖ್ಯೆ:49 ದಿನಾಂಕ:17-06-2016** ರಂದು ನೀಡಲಾಗಿತ್ತು ಆದರೆ ವಿವರಣೆಯಲ್ಲಿ ಕ್ರಿಯಾಯೋಜನೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು ಇದರಂತೆ ಕಡತದಲ್ಲಿ ಅಂದಾಜು ಪಟ್ಟಿಯಲ್ಲಿ ಅನುಮೋದನೆ ಪಡೆದು ಪಾವತಿಸಲಾಗಿದೆ ಎಂದು ತಿಳಿಸಲಾಗಿರುತ್ತದೆ. ಆದರೆ ಇದನ್ನು ಲೆಕ್ಕ ಪರಿಶೋಧನೆಯು ಒಪ್ಪುವುದಿಲ್ಲ.ಯಾವುದೇ ಸಂಭಾವನೆ ನೀಡಲು ನಿರ್ದಿಷ್ಟ ಸರ್ಕಾರಿ ಆದೇಶ ವಿದ್ದು ಅದನ್ನು ವಿ.ವಿ.ಯ ಪರಿನಿಯಮಗಳಲ್ಲಿ ಅಳವಡಿಸಿಕೊಂಡರೆ ಮಾತ್ರ ಅದಕ್ಕೆ ಕಾನೂನು ಮಾನ್ಯತೆ ಇರುತ್ತದೆ. ಈ ಹಿನ್ನಲೆಯಲ್ಲಿ ವಿ.ವಿ.ಯ ಸಿಬ್ಬಂದಿಗೆ ಮಾನವ ಸಂಪನ್ಮೂಲ ಸಂಭಾವನೆಯಾಗಿ ಪಾವತಿಸಿದ ಒಟ್ಟು ಮೊತ್ತ **ರೂ:163900/-**ಗಳನ್ನು ಸದರಿ ಸಿಬ್ಬಂದಿಗಳಿಂದ ವಸೂಲಿಸಿ ವಿ.ವಿ.ನಿಧಿಗೆ ಜಮಾ ಮಾಡಲು ಸೂಚಿಸಿದೆ.ಸಿಬ್ಬಂದಿ ಹೆಸರು ಅವರು ಸಂಭಾವನೆಯಾಗಿ ಪಡೆದ ಮೊತ್ತ ಮುಂತಾದ ವಿವರಗಳನ್ನು ಅನುಬಂಧ-35ರಲ್ಲಿ ವರದಿಗೆ ಲಗತ್ತಿಸಿದೆ.

ಲೆಕ್ಕ ತನಿಖೆಗೆ ಕಂಡು ಬಂದ ಒಂದೆರಡು ಉದಾಹರಣೆ ಮಾತ್ರ ಇಲ್ಲಿ ತಿಳಿಸಲಾಗಿದೆ. ಈ ರೀತಿ ವಿವಿಧ ಸಂಭಾವನೆ ಗಳನ್ನು ನೀಡಿರುವುದನ್ನು ವಿ.ವಿ.ಯೇ ಲೆಕ್ಕಾಚಾರ ಮಾಡಿ ಸಿಬ್ಬಂದಿಗಳಿಂದ ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಪಾಲನೆ ಸಲ್ಲಿಸಲು ಸೂಚಿಸಿದೆ.

## 2.6.12)ವಿಶೇಷ ಭತ್ಯೆ ನಿಯಮಬಾಹಿರವಾಗಿ ನೀಡಿರುವುದು:-

**2014-15 ಹಾಗೂ 2015-16ನೇ** ಸಾಲಿಗೆ ಸಿಬ್ಬಂದಿಯ ವೇತನ ಬಿಲ್ಲುಗಳನ್ನು ಪರಿಶೀಲಿಸಲಾಗಿ ಮೊತ್ತ ರೂ:46555/- ಗಳನ್ನು ಡ್ರಾ ಮಾಡಿರುವುದು ಕಂಡು ಬಂದಿದ್ದು ವಿಚಾರಣೆ **ಪತ್ರ ಸಂಖ್ಯೆ:60,61**ರಲ್ಲಿ ವಿವರಣೆ ಕೇಳಲಾಗಿದ್ದು ಮಾಹಿತಿ ಬದಗಿಸಿರುವುದಿಲ್ಲ.ಸರ್ಕಾರದ **ಆದೇಶ ಸಂಖ್ಯೆ:ಎಫ್.ಡಿ:12:ಎಸ್.ಆರ್.ಪಿ:2012(9) ಬೆಂಗಳೂರು ದಿನಾಂಕ:14-06-2012**ರ ಪ್ರಕಾರ ಶೀಘ್ರಲಿಪಿಗಾರರು ಹಾಗೂ ವಾಹನ ಚಾಲಕರಿಗೆ ಮಾಸಿಕ **ರೂ:165/-ಹಾಗೂ 135/-ಗಳಿದ್ದು** ಹಾಗೂ ಅಧೀಕ್ಷಕರು ಹಾಗೂ 'ಡಿ' ಗ್ರೂಪ್ ನೌಕರರಿಗೆ ಆದೇಶದಲ್ಲಿ ಅವಕಾಶವಿರುವುದಿಲ್ಲ.

ಸಿಬ್ಬಂದಿಯವರು ಡ್ರಾ ಮಾಡಿದ ಒಟ್ಟು ಮೊತ್ತ **ರೂ:46555/-ಗಳನ್ನು ಅನುಬಂಧ-36ರಲ್ಲಿ** ವಿವರಿಸಿದ ಸಿಬ್ಬಂದಿ ಇಂದ ವಸೂಲಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲು ಹಾಗೂ ಮಾರ್ಚ್-2016ರಿಂದ ಇಲ್ಲಿಯವರೆಗೆ ಡ್ರಾ ಮಾಡಿದ ಮೊತ್ತವನ್ನು ಸಹ ವಸೂಲಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಿ ಲೆಕ್ಕ ಪರಿಶೋಧಕರಿಗೆ ಅನುಪಾಲನವರದಿ ನೀಡಲು ಸೂಚಿಸಿದೆ.

## 2.6.13)ಪಿ.ಎನ್.ಆರ್ ಸಂಖ್ಯೆ ಹಾಜರುಪಡಿಸದಿರುವುದು:-

**2014-15 ಮತ್ತು 2015-16ನೇ** ಸಾಲಿನಲ್ಲಿ ಕನ್ನಡ ವಿ.ವಿ ಹಂಪಿಯ ವಿವಿಧ ವಿಭಾಗಗಳ ಪ್ರಯಾಣ ಭತ್ಯೆ ಕಡತಗಳನ್ನು ಪರಿಶೀಲಿಸಿದಾಗ ಹಲವಾರು ಭೋಧಕ ಸಿಬ್ಬಂಧಿಗಳು **1ನೇ ಹಾಗೂ 2ನೇ ದರ್ಜೆ** ಎ.ಸಿ.ರೈಲಿನಲ್ಲಿ ಪ್ರಯಾಣಿಸಿದ್ದಾಗಿ ತಿಳಿಸಿ ಪ್ರಯಾಣ ಭತ್ಯೆಯನ್ನು ಪಡೆದಿರುತ್ತಾರೆ. **1ನೇ ಹಾಗೂ 2ನೇ ದರ್ಜೆ** ಎ.ಸಿಯಲ್ಲಿ ಪ್ರಯಾಣಿಸಿದ್ದಕ್ಕೆ ದೃಢಿಕರಿಸಿಕೊಳ್ಳಲು ಸದರಿ ದರ್ಜೆಯಲ್ಲಿ ಪ್ರಯಾಣಿಸಿದ ಸಿಬ್ಬಂದಿಗಳ **ಪಿ.ಎನ್.ಆರ್.ನಂಬರ್** ಹಾಜರುಪಡಿಸಲು ಸೂಚಿಸಲಾಗಿತ್ತು. **ಪಿ.ಎನ್.ಆರ್** ಅನ್ನು ಲೆ.ಪ.ಗೆ **ಹಾಜರುಪಡಿಸದೇ** ಇರುವುದರಿಂದ **1ನೇ ಹಾಗೂ 2ನೇ ದರ್ಜೆಯ** ಎ.ಸಿ.ಯಲ್ಲಿ ಪ್ರಯಾಣಿಸಿದ್ದಕ್ಕೆ ದೃಢಪಡಿಸಿಕೊಳ್ಳಲು ಸಾಧ್ಯವಾಗಿಲ್ಲ.ಇದಕ್ಕೆ ಸಂಬಂಧಿಸಿದಂತೆ ಅನುಪಾಲನೆ ನೀಡಲು ಸೂಚಿಸಿದೆ.ಹಾಗೂ ಕೆಲವು ಸಿಬ್ಬಂದಿಗಳು **1ನೇ ಹಾಗೂ 2ನೇ ದರ್ಜೆಯ** ಎ.ಸಿ.ರೈಲಿನಲ್ಲಿ ಪ್ರಯಾಣಿಸಿದ ವಿವರಗಳನ್ನು **ಅನುಬಂದ-37ರಲ್ಲಿ** ವರದಿಗೆ ಲಗತ್ತಿಸಿದೆ.

ಈ ಪ್ರಕರಣಗಳನ್ನು ಕೇವಲ ಉದಾಹರಣೆಗೆ ಮಾತ್ರ ನೀಡಲಾಗಿದ್ದು **ರೂ:26250/-**ಗಳ ಮೊತ್ತ ಒಳಗೊಂಡಿದ್ದು ಮೇಲ್ಕಾಣಿಸಿದ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವವರೆಗೆ **ರೂ:26250/-**ನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 2.6.14)ವಾಹನಗಳ ದುರಸ್ಥಿಯನ್ನು ಕೈಗೊಳ್ಳುವಾಗ ಹಾಗೂ ಬಿಡಿಭಾಗಗಳನ್ನು ಬದಲಿಸುವಾಗ ನಿಯಮಗಳನ್ನು ಸರಿಯಾಗಿ ಪಾಲಿಸದಿರುವುದು:-

**2014-15 ಮತ್ತು 2015-16ನೇ** ಸಾಲಿನ ವಿ.ವಿ.ಯ ವಾಹನದ ಲಾಗ್ ಪುಸ್ತಕಗಳನ್ನು ಪರಿಶೀಲಿಸಲಾಗಿ ವಾಹನದ ದುರಸ್ಥಿ ಮತ್ತು ಬಿಡಿಭಾಗಗಳನ್ನು ಬದಲಾಯಿಸುವಾಗ ಈ ಕೆಳಗಿನಂತೆ ನ್ಯೂನತೆಗಳು ಕಂಡು ಬಂದಿರುತ್ತವೆ.

**1) ಲಾಗ್ ಪುಸ್ತಕದ ಭಾಗ-2ರಲ್ಲಿ 11 ಕಾಲಂಗಳಲ್ಲಿ** ವಿವಿಧ ವಿಷಯಗಳನ್ನು ದಾಖಲಿಸಬೇಕಾಗುತ್ತದೆ.ಉದಾಹರಣೆಗೆ ವಾಹನದ ಸರ್ವಿಸ್ ಮಾಡಿಸಿದ ದಿನಾಂಕ,ವಾಹನ ದುರಸ್ಥಿಗೆ ಬಂದ ದಿನಾಂಕ, ರಿಪೇರಿ ಸ್ವರೂಪ, ರಿಪೇರಿಗೆ ಕಳುಹಿಸಿದ ದಿನಾಂಕ,

ದುರಸ್ಥಿಗೊಂಡ ನಂತರ ವಾಹನ ವಾಪಾಸ್ ಬಂದ ದಿನಾಂಕ.ಮುಂತಾದ ಕಾಲಂಗಳಲ್ಲಿ ಕೇಳಿರುವ ವಿಷಯಗಳನ್ನು ದಾಖಲಿಸ ಬೇಕಾಗುತ್ತದೆ. ಆದರೆ ಸದ್ರಿ ವಿ.ವಿ.ಯ ವಾಹನದ ಲಾಗ್ ಪುಸ್ತಕಗಳನ್ನು ಪರಿಶೀಲಿಸಲಾಗಿದ್ದು ಈ ವಿಷಯಗಳನ್ನು ದಾಖಿಲಿಸಿದೇ ಕೇವಲ ದುರಸ್ಥಿಮಾಡಿಸಿದ ಬಿಲ್ಲನ್ನು ಈ ಬಾಗದಲ್ಲಿ ಅಂಟಿಸಲಾಗಿದೆ. ಈ ರೀತಿ ಬಿಲ್ಲುಗಳನ್ನು ಅಂಟಿಸಿರುವುದರಿಂದ ರಿಪೇರಿ ಕುರಿತಂತೆ ಯಾವ ವಿಷಯಗಳು ಲೆಕ್ಕ ಪರಿಶೋಧನೆಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.ಆದ್ದರಿಂದ ಕಾಲಂಗಳಲ್ಲಿ ಕೇಳಿರುವ ವಿಷಯಗಳನ್ನು ದಾಖಲಿಸಿ ಲೆ.ಪ.ಗೆ ಲಾಗ್‌ಪುಸ್ತಕಗಳನ್ನು ಹಾಜರುಪಡಿಸಲು ಸೂಚಿಸಿದೆ.

2) ವಾಹನಗಳ ದೊಡ್ಡ ಪ್ರಮಾಣದ ಅಮೂಲಾಗ್ರ ದೂರಸ್ಥಿಗಳನ್ನು ಇಲಾಖಾ ಮುಖ್ಯಸ್ಥರಿಂದ ಅನುಮೋಧನೆ ಪಡೆಯದೇ ಮಾಡಿಸಲಾಗಿದೆ.ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ ನಿಯಮ-55(40)(3)(ಬಿ)(2) ಪ್ರಕಾರ ನಿರ್ದಿಷ್ಟ ದೂರ ಕ್ರಮಿಸಿದ ನಂತರವೇ ವಾಹನದ ದೊಡ್ಡ ಪ್ರಮಾಣದ ಅಮೂಲಾಗ್ರ ದುರಸ್ಥಿಗೆ ವೆಚ್ಚ ಮಾಡಲು ಅಧಿಕಾರ ಹೊಂದಿರುತ್ತಾರೆ ಎಂದು ತಿಳಿಸಲಾಗಿದೆ.ಆದರೆ ವಿ.ವಿ.ಯಲ್ಲಿ ಈ ನಿಯಮ ಪಾಲಿಸಿರುವುದಿಲ್ಲ.

3) 1 ಲಕ್ಷ ರೂಗಳನ್ನು ಮೀರಿದ ದುರಸ್ಥಿಯನ್ನು ಕೈಗೊಳ್ಳುವಾಗ ಕ.ಸಾ.ಸಂ.ಪಾ ಅಧಿನಿಯಮ 1999 ಸೆಕ್ಷನ್ 4ಇ(2)ಪ್ರಕಾರ ಟೆಂಡರ್ ಮೂಲಕವೇ ದುರಸ್ಥಿ ರಿಪೇರಿ ಕೈ ಗೊಳ್ಳಬೇಕಾಗುತ್ತದೆ.ಆದರೆ ವಿ.ವಿ.ಯು ಈ ನಿಯಮ ಪಾಲಿಸಿರುವುದಿಲ್ಲ. ಉದಾ(1) **ಚೆಕ್ ಸಂಖ್ಯೆ:073230 ದಿನಾಂಕ:18-02-2016 ಮೊತ್ತ ರೂ:108707/-** ಸ್ಕೋಡಾ ವಾಹನವನ್ನು ಟೆಂಡರ್ ಕರೆಯದೇ ದುರಸ್ಥಿ ಮಾಡಿರುವುದು.

**(ಎ)(2) ಚೆಕ್ ಸಂಖ್ಯೆ:115005 ದಿನಾಂಕ:22-12-2014 ಮೊತ್ತ ರೂ:104916/- ಕನ್ನಡಸಿರಿ ಬಸ್ ದುರಸ್ಥಿ.**

4) ಸಾ.ವೆ.ಕೈ.ನಿಯಮ 55(40)(3)(ಎ)ನಲ್ಲಿ ತಿಳಿಸಿರುವಂತೆ ವಾಹನಗಳು ಅವುಗಳನ್ನು ಖರೀದಿ ಮಾಡಿದಂದಿನಿಂದ/ ಸಂದರ್ಭಾನುಸಾರ ಟೈರು/ಟ್ಯೂಬುಗಳನ್ನು ನವೀಕರಿಸಿದಂದಿನಿಂದ/ಟೈರು ಟ್ಯೂಬುಗಳನ್ನು ರಿಟ್ರೇಡ್ ಮಾಡಿಸಿದಂದಿನಿಂದ ನಿರ್ಧಿಷ್ಟ ದೂರ ಕ್ರಮಿಸಿದ ನಂತರವೇ ಮಾಡಿಸಬೇಕು ಸದರಿ ಬಾಬುಗಳಿಗೆ ಆದ ವೆಚ್ಚವನ್ನು ನಿಯಂತ್ರಣಾಧಿಕಾರಿ/ಇಲಾಖಾ ಮುಖ್ಯಸ್ಥರು ಮಂಜೂರು ಮಾಡಬಹುದು ಎಂದು ತಿಳಿಸಲಾಗಿರುತ್ತದೆ.ಇಲಾಖಾ ಮುಖ್ಯ ಸ್ಥರು ಅನುಮೋಧನೆ ಪಡೆದಿರುವುದಿಲ್ಲ.

ಈ ಮೇಲಿನ ನ್ಯೂನತೆಗಳನ್ನು ಸರಿಪಡಿಸಿ ಲೆ.ಪ.ಗೆ ಅನುಸರಣೆ ನೀಡುವುದು ಈ ಮೇಲಿನ ನ್ಯೂನತೆಗಳಿಗಾಗಿ **2014-15 ಮತ್ತು 2015-16**ರಲ್ಲಿ ವಾಹನಗಳ ದುರಸ್ಥಿ/ಬಿಡಿಬಾಗಗಳಿಗೆ ವೆಚ್ಚ ಮಾಡಿದ **ಒಟ್ಟು ರೂ:1109682/-**ಗಳನ್ನು ಆಕ್ಷೇಪಣೆಯಲ್ಲಿ ಡಲಾಗಿದೆ. ವಿವರಗಳನ್ನು **ಅನುಬಂದ-38 ಮತ್ತು 39**ರಲ್ಲಿ ವರದಿಗೆ ಲಗತ್ತಿಸಿದೆ.

## 2.6.15)ಅಸಮರ್ಪಕವಾಗಿ ಲಾಗ್ ಪುಸ್ತಕಗಳನ್ನು ನಿರ್ವಹಿಸಿರುವುದು:-

2014-15 ಮತ್ತು 2015-16ನೇ ಸಾಲಿನ ಕನ್ನಡ ವಿ.ವಿ.ಯ ಲಾಗ್ ಪುಸ್ತಕಗಳನ್ನು ಪರಿಶೀಲಿಸಲಾಗಿದ್ದು.ಈ ಕೆಳಗಿನ ಸಾಮಾನ್ಯ ನ್ಯೂನತೆಗಳು ಲೆಕ್ಕ ಪರಿಶೋಧನೆಗೆ ಕಂಡು ಬಂದಿರುತ್ತವೆ.

1) ಲಾಗ್ ಪುಸ್ತಕಗಳನ್ನು ಸರ್ಕಾರಿ ಮುದ್ರಣಾಲಯದಿಂದ ಖರೀದಿಸದೇ ಖಾಸಗಿ ಮುದ್ರಕರಿಂದ ಖರೀದಿಸಿದ್ದು ಕಾಲಂಗಳು ಚಿಕ್ಕದಾಗಿದ್ದು ಸಮರ್ಪಕವಾಗಿ ಹಾಗೂ ಸಂಪೂರ್ಣವಾಗಿ ಮಾಹಿತಿಯನ್ನು ದಾಖಲಿಸಿರುವುದಿಲ್ಲ.

2) ಲಾಗ್ ಪುಸ್ತಕದ ಭಾಗ-1ರಲ್ಲಿ **ಯಿಂದ ಮತ್ತು ಕಾಲ ಗೆ.ಮತ್ತು ಕಾಲ** ಈ ಕಾಲಂನಲ್ಲಿ ಸ್ಥಳ ಮತ್ತು ಸಮಯವನ್ನು ದಾಖಲಿಸದೇ ಸ್ಪೀಡಾಮೀಟರ್ ರೀಡಿಂಗ್‌ಗಳನ್ನು ದಾಖಲಿಸಲಾಗಿದೆ.

3) ಪ್ರತಿ ತಿಂಗಳು ಕೊನೆಯಲ್ಲಿ ಘೋಷ್ವಾರೆ(Abstract)ಗಳನ್ನು ಸಮರ್ಪಕವಾಗಿ ಹಾಕಿರುವುದಿಲ್ಲ/ದಾಖಲಿಸಿರುವುದಿಲ್ಲ ಹಾಗೂ ಈ ಘೋಷ್ವಾರೆಗಳನ್ನು ದೃಢೀಕರಿಸಿರುವುದಿಲ್ಲ.

4) ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮಗಳು **ನಿಯಮ 55(40)ಇ(i)**ರಲ್ಲಿ ತಿಳಿಸಿದಂತೆ ಕಛೇರಿ ಮುಖ್ಯಸ್ಥರು ಅಗತ್ಯವಾದಾಗಲೆಲ್ಲ ತೈಲವನ್ನು ಅವರೇ ಖರೀದಿ ಮಾಡಬಹುದು.ಆದರೆ ಖರೀದಿಸಿದ ಪರಿಮಾಣಗಳು ನಿಗದಿತ ಬಳಕೆಯ ಪ್ರಮಾಣ(standard rate of consumption)ದ ಆಧಾರದ ಮೇಲೆ ಓಡಿದ ದೂರಕ್ಕೆ ಅನುಮತಿಸಬಹುದಾದ ಪರಿಮಾಣಗಳನ್ನು ಮೀರಕೂಡದು. ಖರೀದಿಸಿದ ಪರಿಮಾಣಗಳು ಅನುಮತಿಸಬಹುದಾದ ಪರಿಮಿತಿಯೊಳಗಿವೆ ಎಂಬ ಬಗ್ಗೆ ಹಣತೆಗೆಯುವ ಅಧಿಕಾರಿಯು (drawing officer) ಅವದಿ,(period cover) ಓಡಿದ ಮೀಟರು, ನಿಗದಿತ ಬಳಕೆಯ ದರ (standard rate of consumption) ಸೂಚಿಸಿ ಬಿಲ್ಲುಗಳ ಮೇಲೆ ಪ್ರಮಾಣೀಕರಿಸಬೇಕು.ಆದರೆ ವಿ.ವಿ.ಯ ಯಾವ ವಾಹನದ ಲಾಗ್ ಪುಸ್ತಕದಲ್ಲಿ standard rate of consumption ದಾಖಲಿಸಿರುವುದಿಲ್ಲ.ಹಾಗೂ ಹಣತೆಗೆಯುವ ಅಧಿಕಾರಿ ಈ ಮೇಲಿನಂತೆ ಬಿಲ್ಲುಗಳ ಮೇಲೆ ಪ್ರಮಾಣೀಕರಿಸಿರುವುದಿಲ್ಲ.

5) ಖರೀದಿಯ/ಅಮೂಲಾಗ್ರ ದುರಸ್ಥಿಯ ಬಳಿಕೆ ವಾಹನಗಳ ಚಾರ್ಜ್ ಹೊಂದಿರುವ ಅಧಿಕಾರಿಯು ವಾಹನವು ಒಂದು ಲೀಟರ್ ಇಂಧನಕ್ಕೆ ಎಷ್ಟು ಮೈಲಿ ಓಡುತ್ತದೆ ಎಂಬುದರ ಬಗ್ಗೆ ಪ್ರತಿಯೊಂದು ವಾಹನವನ್ನು ಪರೀಕ್ಷಿಸಿ ವಾಹನದ ಲಾಗ್ ಬುಕ್‌ನಲ್ಲಿ ಆ

ಸಂಗತಿಯನ್ನು ದಾಖಲು ಮಾಡಿ ತಾನು ದೃಢೀಕರಿಸಬೇಕು. ಹಾಗೆ ದಾಖಲು ಮಾಡಿದ ದರವನ್ನು ನಿಗದಿತ ಬಳಕೆಯ ದರ(standard rate of consumption) ಎಂದು ಪರಿಗಣಿಸತಕ್ಕದ್ದು. ಮತ್ತು ಅದನ್ನು ಪರಿಷ್ಕರಿಸುವ ವರೆಗೆ ಆ ಧರವು ಹಾಗೆಯೇ ಉರ್ಜಿತವಾಗಿರುತ್ತದೆ.ಸದ್ರಿ ವಿ.ವಿ.ಯ ವಾಹನದ ಇನ್ ಚಾರ್ಜ್ ಅಧಿಕಾರಿಯು ಯಾವುದೇ ವಾಹನ ಲಾಗ್ ಬುಕ್‌ನಲ್ಲಿ ಇದನ್ನು ದಾಖಲು ಮಾಡಿರುವುದಿಲ್ಲ.

**6)** ಪ್ರತಿಯೊಂದು ವಾಹನದ ಪ್ರತಿಯೊಂದು ಚಲನವಲನಗಳನ್ನು ಸಮರ್ಪಕವಾಗಿ ಹಾಗೂ ಕಟ್ಟುನಿಟ್ಟಾಗಿ ದಾಖಲಿಸಬೇಕೆಂದು ಕರ್ನಾಟಕ ಅರ್ಥಿಕ ಸಂಹಿತೆಯ **ಅನುಚ್ಛೇದ 174** ಹಾಗೂ ಸಾದಿಲ್ವಾರು ವೆಚ್ಚ ಕೈಪಿಡಿ **ನಿಯಮ 55(40)** ತಿಳಿಸುತ್ತವೆ.ಪ್ರತಿಯೊಂದು ಪ್ರಯಾಣವು ಸರ್ಕಾರಿ ಹಿತದೃಷ್ಟಿಯಿಂದ ಪ್ರಯಾಣಿಸಿದ್ದೆ ಅಥವಾ ಖಾಸಗಿ ಪ್ರಯಾಣವೇ ಎಂದು ಪ್ರಯಾಣಿಸಿದ ಅಧಿಕಾರಿಯು ಪರಿಶೀಲಿಸಿ ಪ್ರಯಾಣ ಮುಗಿದ **24ಗಂಟೆಯೊಳಗೆ** ಸಹಿಮಾಡಬೇಕೆಂದು ಈ ನಿಯಮಗಳು ತಿಳಿಸುತ್ತವೆ. ಆದ್ರೆ ಸದ್ರಿ ವಿ.ವಿ.ಯ ವಾಹನದ ಲಾಗ್ ಪುಸ್ತಕಗಳನ್ನು ಪರಿಶೀಲಿಸಲಾಗಿ **ವಿ.ವಿ.ಯ ಕುಲಪತಿ** ಹಾಗೂ ಕುಲ ಸಚಿವರು ವಾಹನಗಳ ಲಾಗ್ ಪುಸ್ತಕಗಳಿಗೆ ಆಪ್ತಕಾರ್ಯದರ್ಶಿ/ಆಪ್ತ ಸಹಾಯಕ ಸಹಿಹಾಕಿರುವುದು ನಿಯಮ ಬಾಹಿರವಾಗಿರುತ್ತದೆ.

**7)** ಕರ್ತವ್ಯ ಅವಧಿಯ ನಂತರ ಹಾಗೂ ರಜಾ ದಿನಗಳಲ್ಲಿ ಸಾಮಾನ್ಯವಾಗಿ ಸರ್ಕಾರಿ ವಾಹನಗಳನ್ನು ಅಧಿಕಾರಿಗಳು ಬಳಸುವಂತಿಲ್ಲ. ಆದರೆ ಸದ್ರಿ ವಿ.ವಿ.ಯಲ್ಲಿ ಈ ನಿಯಮವನ್ನು ಬಹಳಷ್ಟು ಸಾರಿ ಉಲ್ಲಂಘಿಸಲಾಗಿದೆ.

**8)** ಲಾಗ್ ಪುಸ್ತಕದ **ಭಾಗ-1ರ** ಪ್ರಯಾಣದ ಉದ್ದೇಶ ಹಾಗೂ ಪ್ರಯಾಣಿಸಿದ ವ್ಯಕ್ತಿಗಳ ವಿವರಗಳನ್ನು ಸರಿಯಾಗಿ ದಾಖಲಿಸಿರುವುದಿಲ್ಲ.

ಈ ಮೇಲಿನ ನ್ಯೂನತೆಗಳನ್ನು ಸರಿಪಡಿಸಿ ಲೆ.ಪ.ಗೆ ಅನುಸರಣೆ ಸಲ್ಲಿಸಲು ಸೂಚಿಸಿದೆ.ಅಲ್ಲಿಯವರೆಗೆ **2014-15 ಮತ್ತು 2015-16**ರಲ್ಲಿ ಇಂಧನಕ್ಕಾಗಿ ವ್ಯಯಿಸಿದ ಒಟ್ಟು ವೆಚ್ಚ **ರೂ:737703/-**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ವಿವರಗಳನ್ನು ಅನುಬಂದ-38 ಮತ್ತು 39 ರಲ್ಲಿ ವರದಿಗೆ ಲಗತ್ತಿಸಿದೆ.

## 2.6.16)ವಾಹಗಳ ಬಾಡಿಗೆ ಬಿಲ್ಲುಗಳಲ್ಲಿ ಕಂಡು ಬಂದ ನ್ಯೂನತೆಗಳು:-

**ನಂದಿ ಟೂರ್ಸ್ ಅಂಡ್ ಟ್ರಾವೆಲ್ಸ್** ಇವರಿಂದ ವಾಹನಗಳನ್ನು ಬಾಡಿಗೆಗೆ ಪಡೆದಿದ್ದು, ಈ ವಾಹನಗಳ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳನ್ನು ಪರಿಶೀಲಿಸಲಾಗಿದ್ದು ನ್ಯೂನತೆಗಳು ಕಂಡು ಬಂದಿರುತ್ತವೆ.ವಾಹನ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳನ್ನು ಪರಿಶೀಲಿಸಲಾಗಿದ್ದು, ಬಿಲ್ಲುಗಳ ಸಂಖ್ಯೆ ಮತ್ತು ದಿನಾಂಕಗಳು ಹೊಂದಾಣಿಕೆ ಯಾಗಿರುವುದಿಲ್ಲ.ಉದಾಹರಣೆ ಬಿಲ್ಲಿನ ಸಂಖ್ಯೆ:8988 ದಿನಾಂಕ:15-08-2014 ಇದ್ದು ಸದರಿ ಬಿಲ್ಲಗಿಂತ ಬಿಲ್ಲಿನ ಸಂಖ್ಯೆ:8984 ಕಡಿಮೆ.ಇದ್ದು ದಿನಾಂಕದಲ್ಲಿ ಹೆಚ್ಚದ್ದು ದಿನಾಂಕ:28-08-2014 ಎಂದು ಇರುತ್ತದೆ.ಹಾಗೂ ಬಿಲ್ಲಿನ ಸಂಖ್ಯೆ:8988 ದಿನಾಂಕ:15-08-2014 ಎಂದು ಇದ್ದು ಈ ಬಿಲ್ಲನ್ನು ಪರಿಶೀಲಿಸಿದಾಗ 3 ಟವೇರಾ ವಾಹಗಳನ್ನು ದಿನಾಂಕ:09-09-2014ರಿಂದ11-09-2014ರ ವರೆಗೆ ಬಾಡಿಗೆಗೆ ಪಡೆದಿದ್ದು ವಾಹನವನ್ನು ಉಪಯೋಗಿಸುವ ಮೊದಲೇ ಅಂದರೆ ದಿನಾಂಕ:15-08-2014ರಂದು ಬಿಲ್ಲನ್ನು ಪಡೆದು ಪಾವತಿಸಲಾಗಿದೆ.ಇದನ್ನು ನೋಡಿದಾಗ ವಾಹನ ಬಾಡಿಗೆ ಪಡೆದಿರುವುದು ಮತ್ತು ಪ್ರಯಾಣವು ಅನುಮಾನಾಸ್ಪದವಾಗಿ ಕಂಡು ಬರುತ್ತದೆ. ಹಾಗೂ ಬಿಲ್ಲುಗಳನ್ನು ಪೂರ್ಣವಾಗಿ ಪರಿಶೀಲಿಸದಿರುವುದು ಹಣಕಾಸು ವಿಭಾಗದ ನಿರ್ಲಕ್ಷತೆಯನ್ನು ತೋರಿಸುತ್ತದೆ.

ಈ ಆಕ್ಷೇಪಣೆ ವಿವರಣೆ ಕೋರಿ **26-05-2016** ರಂದು ವಿಚಾರಣಾ **ಪತ್ರ ಸಂಖ್ಯೆ 38** ನೀಡಲಾಗಿದ್ದು **ಪುನರ್‌ಪರಿಶೀಲನೆ** ಸಮಯದಲ್ಲಿ ಸಂಸ್ಥೆಯವರು ನೀಡಿದ ಉತ್ತರದಲ್ಲಿ ಬಿಲ್ಲಿನ ಮೊತ್ತ ಪಾವತಿಸುವ ಸಂಧರ್ಭದಲ್ಲಿ ಕಣ್ತಪ್ಪಿನಿಂದಾಗಿ ಬಿಲ್ಲು ಸಂಖ್ಯೆ ಹಿಂದು ಮುಂದು ಆಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ ಮೇಲೆ ಸೂಚಿಸಿದಂತೆ ವಾಹನವನ್ನು ಬಾಡಿಗೆ ಪಡೆಯುವ ಮೊದಲೇ ಬಿಲ್ಲನ್ನು ಸಲ್ಲಿಸಿರು ವುದರಿಂದ ಈ ವಿವರಣೆಯನ್ನು ಒಪ್ಪಲಾಗುವುದಿಲ್ಲ. ಆದ್ದರಿಂದ **ರೂ. 67829/-** ಆಕ್ಷೇಪಿಸಲಾಗಿದೆ.

## 2.6.17)ಬನಶಂಕರಿ ಬಾದಾಮಿಯಲ್ಲಿರುವ ವಾಸ್ತುಶಿಲ್ಪ ಪ್ರತಿಮಾಶಾಸ್ತ ವಿಭಾಗದ ವಿದ್ಯಾರ್ಥಿಗಳ ವಸತಿ ನಿಲಯದ ಬಾಡಿಗೆಯನ್ನು ನಿಯಮಬಾಹಿರವಾಗಿ ಪಾವತಿಸಿರುವುದು ಹಾಗೂ ಕರಾರು ಒಪ್ಪಂದವನ್ನು ಸರಿಯಾಗಿ ಮಾಡಿಕೊಳ್ಳದಿರುವುದು:-

(ಎ) 2014-15 ಮತ್ತು 2015-16ನೇ ಸಾಲಿನ ಕನ್ನಡ ವಿ.ವಿ.ಯ ಲೆಕ್ಕ ಪರಿಶೋಧನೆಯಲ್ಲಿ ವಾಸ್ತುಶಿಲ್ಪ ಪ್ರತಿಮಾಶಾಸ್ತ ವಿಭಾಗದ ಕಡಿತಗಳನ್ನು ಪರಿಶೀಲಿಸಲಾಗಿದ್ದು.ವಿದ್ಯಾರ್ಥಿಗಳ ವಸತಿ ಉದ್ದೇಶಕ್ಕಾಗಿ ಬನಶಂಕರಿ ಆವರಣದಲ್ಲಿರುವ ಶ್ರೀ.ಬಸಟಪ್ಪ(ಅಪ್ಪಣ್ಣ) ನೂರಂದಪ್ಪಹುಂಡೇಕಾಶ್ ಡಾ:ಬನಶಂಕರಿ ತಾ:ಬಾದಾಮಿ ಇವರು ಒಡೆತನದ 5 ಕೊಠಡಿಗಳಿಂದ ಕೂಡಿದ ಕಟ್ಟಡವನ್ನು ಬಾಡಿಗೆ ಪಡೆಯಲಾಗಿದೆ.

ದಿನಾಂಕ:01-06-2013 ಕ್ಕಿಂತ ಮೊದಲು ಮಾಸಿಕ ಬಾಡಿಗೆ ದರ ರೂ:6000/- ನಿಗದಿ ಪಡಿಸಲಾಗಿದೆ.ದಿನಾಂಕ:01-06-2013ರಿಂದ 31-05-2015ರ ವರೆಗೆ ರೂ:9000/-ಮಾಸಿಕ ಬಾಡಿಗೆದರವನ್ನು ನಿಗದಿ ಪಡಿಸಲಾಗಿದೆ.ದಿನಾಂಕ:01-06-2015ರಿಂದ ಈಚೆಗೆ ರೂ:12000/-ಮಾಸಿಕ ಬಾಡಿಗೆ ದರವನ್ನು ನಿಗದಿಪಡಿಸಲಾಗಿದೆ.ಈ ಬಾಡಿಗೆ ದರವನ್ನು ಯಾವ ಆಧಾರದ ಮೇಲೆ ನಿಗದಿಪಡಿಸಲಾಗಿದೆ.ಎಂದು ಕೇಳಿ ಲೆ.ಪ.ವಿ ಪತ್ರ ಸಂಖ್ಯೆ:22 ದಿನಾಂಕ:03-05-2016 ರಂದು ನೀಡಲಾಗಿತ್ತು.ಕಟ್ಟಡದ ಮಾಲಿಕರ ಬೇಡಿಕೆಯ ಅನುಸಾರ ನಿಗದಿ ಪಡಿಸಿರುವುದಾಗಿ ತಿಳಿಸಲಾಗಿದೆ.ಆದರೆ ಸಾ.ವೆ.ಕೈ ನಿಯಮ.55(46)(ಸಿ) ಪ್ರಕಾರ P.W.D ಅಧಿಕಾರಿಗಳು ಕಟ್ಟಡದ ಬಾಡಿಗೆಯನ್ನು ನಿಗದಿಪಡಿಸಲು ಅವಕಾಶವಿರುತ್ತದೆ.ಹಾಗೂ ಎಂ.ಸಿ.ಇ:55(46)(ಎ) ಪ್ರಕಾರ " the payments of the rents requires the sanction of government unless specific power are delegated"ಎಂದು ತಿಳಿಸುತ್ತದೆ. ಆದರೆ ಸದ್ರಿ ಕಟ್ಟಡದ ಬಾಡಿಗೆ ಪಾವತಿಸಲು ವಿ.ವಿ.ಗೆ ಅಧಿಕಾರವಿದೆ ಎಂಬ ಕುರಿತು ದಾಖಲೆ ಒದಗಿಸಿರುವುದಿಲ್ಲ.ಹಾಗೂ P.W.D ಅಧಿಕಾರಿಗಳಿಂದ ಕಟ್ಟಡದ ಬಾಡಿಗೆ ನಿಗದಿಪಡಿಸಿರುವುದಿಲ್ಲ.

**ಪುನರ್‌ಪರಿಶೀಲನೆ** ಸಮಯದಲ್ಲಿ ಮೇಲಿನ ಆಕ್ಷೇಪಣೆಗೆ ಉತ್ತರ ನೀಡಿರುತ್ತಾರೆ. ಪರಿಶೀಲಿಸಲಾಗಿ ಕಂಡಿಕೆಯಲ್ಲಿ ಸೂಚಿಸಿರುವ ಆಕ್ಷೇಪಣೆಗಳಿಗೆ ಸಮರ್ಪಕ ಉತ್ತರ ನೀಡದೆ ಕಡತದಲ್ಲಿರುವ ದಾಖಲೆಗಳನ್ನು ಮರು ಸಲ್ಲಿಸಿರುತ್ತಾರೆ. ಆದ್ದರಿಂದ ಈ ಉತ್ತರವನ್ನು ಒಪ್ಪಲಾಗುವುದಿಲ್ಲ.

## (ಬಿ)ಕರಾರು ಮಾಡಿಕೊಳ್ಳುವಾಗ ಕಂಡು ಬಂದ ನ್ಯೂನತೆಗಳು:-

ದಿನಾಂಕ:01-06-2015 ರಿಂದ ತಿಂಗಳಿಗೆ ರೂ:12000/-ದಂತೆ 12 ತಿಂಗಳವರೆಗೆ ಮಾಸಿಕ ಬಾಡಿಕೆ ಆಧಾರದ ಮೇಲೆ ಬಾಡಿಗೆಗೆ ಸಂಬಂಧಿಸಿದಂತೆ ಕಟ್ಟಡದ ಮಾಲೀಕರೊಂದಿಗೆ ಕರಾರು ಮಾಡಿಕೊಳ್ಳಲಾಗಿದೆ.ಈ ಕರಾರು ಪತ್ರಕ್ಕೆ ಕುಲಸಚಿವರು ಕನ್ನಡ ವಿ.ವಿ.ಹಂಪಿ ಹಾಗೂ ಬಸಟಪ್ಪ ನೂರಂದಪ್ಪ ಹುಂಡೇಕಾಶ್ ಸಹಿ ಹಾಕಿರುತ್ತಾರೆ. ಈ ಸ್ಟ್ಯಾಂಪ್ ಸರ್ಟಿಫಿಕೇಟ ನಂ:-In-Ka 2395148217 8700 N ಹಾಗೂ ಸರ್ಟಿಫಿಕೇಟ್ ವಿತರಿಸಿದ ದಿನಾಂಕ:10-09-2015 02:01 ಪಿಎಂ ಎಂದು ದಾಖಲಿಸಲಾಗಿದೆ.ಅಂದರೆ e-stamp ಕೊಂಡ ದಿನಾಂಕ:10-09-2015 ಅಗಿದ್ದು ದಿನಾಂಕ:01-06-2015ಕ್ಕೆ ಕರಾರು ಮಾಡಿಕೊಳ್ಳಲು ಹೇಗೆ ಸಾದ್ಯ.

ಅಂದರೆ ಕರಾರನ್ನು ದಿನಾಂಕ: 10-09-2015ರ ನಂತರವೇ ಮಾಡಿಕೊಂಡಿರುವುದು ಖಚಿತವಾಗುತ್ತದೆ.ಹಾಗಾಗಿ ದಿನಾಂಕ:01-06-2015ರಿಂದ ದಿನಾಂಕ:31-08-2015ರ ವರೆಗೆ(3 ತಿಂಗಳು) ಪ್ರತಿ ತಿಂಗಳು ಬಾಡಿಗೆ ರೂ:12000/-ಪಾವತಿಸಿರಲು ಹೇಗೆ ಸಾದ್ಯ? ಈ ಕರಾರು ಪತ್ರದ ಅಧಾರದ ಮೇಲೆ 01-06-2015ರ ಹಿಂದಿನಿಂದ ಜಾರಿಯಲ್ಲಿದ್ದ ಬಾಡಿಗೆಯು ಮಾಸಿಕ ದರ ರೂ:9000/-ದಂತೆ 3 ತಿಂಗಳಿಗೆ ರೂ:27000/-ಪಾವತಿಸಬೇಕಾಗುತ್ತದೆ.ಹಾಗಾಗಿ ಹೆಚ್ಚುವರಿಯಾಗಿ ಪಾವತಿಸಿದ ರೂ:9000/-ಗಳನ್ನು ಬಸಟಪ್ಪ ಇವರಿಂದ ವಸೂಲಿಸಿ ವಿ.ವಿ.ಖಾತೆಗೆ ಜಮಾ ಮಾಡಲು ಸೂಚಿಸಿದೆ. ಈ ರೀತಿ ತಪ್ಪು ಕರಾರು ಮಾಡಿಕೊಳ್ಳಲು ಕಾರಣರಾದವರ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈ ಗೊಂಡು ಲೆ.ಪ.ಗೆ ಅನುಸರಣೆ ನೀಡಲು ಸೂಚಿಸಿದೆ.

## 2.6.18)ಕುಲಸಚಿವರು ಪದನಿಮಿತ್ತ ವಸತಿ ಗೃಹ ಉಪಯೋಗಿಸದಿರುವುದು:-

**2014-15** ಹಾಗೂ **2015-16ನೇ** ಸಾಲಿಗೆ ವೇತನ ಬಿಲ್ಲುಗಳನ್ನು ಪರಿಶೀಲಿಸಲಾಗಿ ಶ್ರೀ.ಪಾಂಡುರಂಗ ಬಾಬು ಕುಲಸಚಿವರು ಅವರಿಗೆ ಪದನಿಮಿತ್ತ ವಸತಿ ಗೃಹವಿದ್ದಾಗ್ಯೂ ಅವರು ಮನೆಬಾಡಿಗೆ ಭತ್ಯೆ ಪಡೆಯುತ್ತಿರುವುದು(**ಹೆಚ್.ಆರ್.ಎ**)ಕಂಡು ಬಂದಿರುತ್ತದೆ.

Allotment of the govt buildings e.t.c licence fee rules 2002 rules 9 ಪ್ರಕಾರ if a building whether nearly built bought or adapted for the purpose is provided for a government servent as his residence he is bound to pay licence fee even if he does not actnaly it when a government building intended for one government servent is occupied by another the licence fee that may be recovered from the latter will be deducted from the amount of licence fee payable by the former from whome the house was intended and who is primarily responsible for it

ಈ ಹಿನ್ನಲೆಯಲ್ಲಿ ಮನೆ ಬಾಡಿಗೆ ಅವಧಿ ದಿನಾಂಕ:15-09-2015ರಿಂದ ಫೆಬ್ರವರಿ-2016ರ ವರೆಗೆ ಮೊತ್ತ ರೂ:37620/- ಗಳನ್ನು ವಸೂಲಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡುವುದು ಹಾಗೂ ಮಾರ್ಚ್-2016ರಿಂದ ಇಲ್ಲಿಯವರೆಗೆ ಡ್ರಾ ಮಾಡಿದ ಮೊತ್ತವನ್ನು ಸಹ ವಸೂಲಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಿ ಲೆಕ್ಕ ಪರಿಶೋಧನೆಗೆ ಅನುಪಾಲನಾವರದಿ ನೀಡಲು ಸೂಚಿಸಿದೆ.

| ಕ್ರ ಸಂ | ಅವಧಿ | ಚೆಕ್ ಸಂಖ್ಯೆ | ದಿನಾಂಕ | ಮೊತ್ತ |
|---|---|---|---|---|
| 1 | 15-09-2015ರಿಂದ30-09-2015ವರೆಗೆ | 062943 | 30-09-2015 | 3420 |
| 2 | ಅಕ್ಟೋಬರ್ 2015 | 062975 | 02-11-2015 | 6840 |
| 3 | ನವೆಂಬರ್ 2015 | 068724 | 01-12-2015 | 6840 |
| 4 | ಡಿಸೆಂಬರ್ 2015 | 068748 | 31-12-2015 | 6840 |
| 5 | ಜನವರಿ 2016 | 068777 | 01-02-2016 | 6840 |
| 6 | ಫೆಬ್ರವರಿ 2016 | 068803 | 01-03-2016 | 6840 |
| | ಒಟ್ಟು | | | **37620** |

## 2.6.19)ರಸೀದಿ ಪುಸ್ತಕಗಳು, ಲಾಗ್ ಪುಸ್ತಕಗಳು&ಸೇವಾಪುಸ್ತಕಗಳನ್ನು ನಿಯಮಬಾಹಿರವಾಗಿ ಖಾಸಗಿಯವರಿಂದ ಮುದ್ರಿಸಿರುವುದು:-

**2014-15** ಮತ್ತು **2015-16ನೇ** ಸಾಲಿನಲ್ಲಿ ಹಂಪಿ ಕನ್ನಡ ವಿ.ವಿ.ಯ ಲೆಕ್ಕ ಪರಿಶೋಧನೆಯಲ್ಲಿ ಮುದ್ರಿಸಲ್ಪಟ್ಟ ರಸೀದಿ ಪುಸ್ತಕಗಳು, ಲಾಗ್ ಪುಸ್ತಕಗಳ ,ಸೇವಾ ಪುಸ್ತಕಗಳನ್ನು ಪರಿಶೀಲಿಸಿದಾಗ ಎಲ್ಲ ಮುದ್ರಣಗಳನ್ನು ಖಾಸಗಿ ಮುದ್ರಕರಿಂದ ಮುದ್ರಿಸಿ ಉಪಯೋಗಿಸುತ್ತಿರುವುದು ಕಂಡು ಬಂದಿರುತ್ತದೆ.ಇದು ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ **1958**ರ ನಿಯಮ **44**(ಎ)ಪ್ರಕಾರ ಸರ್ಕಾರಿ ಕಛೇರಿ/ಸಂಸ್ಥೆಗೆ ಸಂಬಂಧಿಸಿದ ಎಲ್ಲ ರೀತಿಯ ಮುದ್ರಣ ಕಾರ್ಯವನ್ನು ಸರ್ಕಾರಿ ಮುದ್ರಣಾಲಯದಿಂದಲೇ ಮುದ್ರಿಸಬೇಕೆಂದು ನಿಯಮ ತಿಳಿಸುತ್ತದೆ.ಆದರೆ ಈ ನಿಯಮಕ್ಕೆ ವ್ಯತಿರಿಕ್ತವಾಗಿ ಹಂಪಿ ವಿ.ವಿ.ಯು ಪ್ರಮುಖ ಮುದ್ರಣಗಳಾದ ರಸೀದಿ ಪುಸ್ತಕ ,ಲಾಗ್ ಪುಸ್ತಕ, ಇನ್ನಿತರೇ ರಿಜಿಸ್ಟರುಗಳನ್ನು ಖಾಸಗಿ ಮುದ್ರಕರಿಂದ ಮುದ್ರಿಸಿ ಉಪಯೋಗಿಸುತ್ತಿರುವುದನ್ನು ಲೆಕ್ಕ ಪರಿಶೋಧನೆಯು ಒಪ್ಪುವುದಿಲ್ಲ.ಆದ್ದರಿಂದ ಇದಕ್ಕೆ ಸಂಬಂಧಿಸಿದಂತೆ ಕ್ರಮ ಕೈ ಗೊಂಡು ಕೂಡಲೇ ಅನುಪಾಲನಾ ವರದಿಸಲ್ಲಿಸಲು ಸೂಚಿಸಿದೆ.

## 2.6.20)ಕನ್ನಡ ವಿಶ್ವವಿದ್ಯಾಲಯದ ನಗದು ಸ್ಟೋರ್ ಅಥವಾ ವಾಹನ ಚಾಲಕರು ಇತರೆ ಜವಾಬ್ದಾರಿ ಕಾರ್ಯನಿರ್ವಹಿಸುತ್ತಿರುವವರಿಂದ ಭದ್ರತಾ ಠೇವಣಿ ಪಡೆಯದಿರುವುದು:-

ಭದ್ರತಾ ಠೇವಣಿ ರಿಜಿಸ್ಟರ್ ಪರಿಶೀಲಿಸಿದಾಗ ಈ ಕೆಳಕಂಡ ಅಧಿಕಾರಿಗಳು ಭದ್ರತಾ ಠೇವಣಿ ಪಡೆದಿದ್ದು ವಿವರ ಈ ಕೆಳಕಂಡಂತಿವೆ.

| ಕ್ರ ಸಂ | ವಿವರಗಳು | ಮೊತ್ತ ರೂ |
|---|---|---|
| 1 | ಶ್ರೀ.ಎಸ್.ಸುಹಾಸ್ ಸಹಾಯಕ ಗ್ರಂಥಪಾಲಕರು | 5000 |
| 2 | ಶ್ರೀ.ಈ.ಟಿ.ನಾಗರಾಜ್ ಯೋಜನಾಧಿಕಾರಿ | 5000 |
| 3 | ಶ್ರೀ.ಕೆ.ಎನ್.ಮರಿಸ್ವಾಮಿ ಪ್ರದಸ | 5000 |
| 4 | ಶ್ರೀ.ಗುರು ಬಸಪ್ಪ ಸಹಾಯಕ ಕುಲಸಚಿವರು | 5000 |

ಕನ್ನಡ ವಿಶ್ವವಿದ್ಯಾಲಯದ ಪರಿನಿಯಮಗಳು **15**(ಇ) ಪ್ರಕಾರ ಹುದ್ದೆಗೆ ನೇಮಕಗೊಂಡ ವ್ಯಕ್ತಿಯು ನಿಗದಿಪಡಿಸುವ ರೀತಿಯಲ್ಲಿ ಠೇವಣಿಯನ್ನು ಸಂದಾಯ ಮಾಡಬೇಕಾಗುತ್ತದೆ. ಕೆ.ಎಫ್.ಸಿ ಆರ್ಟಿಕಲ್ 271(4)353 ಮತ್ತು ಪಿಡಬ್ಲುಪಿಪ್ಯಾರಾಗ್ರಾಫ್ 389 ಪ್ರಕಾರ ವಿಶ್ವವಿದ್ಯಾಲಯದ ನಗದು ಸ್ಟೋರ್ ಅಥವಾ ಇತರೆ ಜವಾಬ್ದಾರಿ ಕಾರ್ಯ ನಿರ್ವಹಿಸುತ್ತಿರುವವರ ಭದ್ರತಾ ಠೇವಣಿ ಪಡೆಯಬೇಕಾಗಿದ್ದು ಈ ಕೆಳಕಂಡ ವಿಭಾಗಗಳ ಭದ್ರತಾ ಠೇವಣಿ ಹಾಜರುಪಡಿಸಿರುವುದಿಲ್ಲ.

| ಕ್ರ ಸಂ | ವಿವರ |
|---|---|
| 1 | ಪ್ರಸಾರಾಂಗ ಸಹಾಯಕ ನಿರ್ದೇಶಕರು |
| 2 | ದೂರ ಶಿಕ್ಷಣ ಕೇಂದ್ರ ಅಧೀಕ್ಷಕರು |
| 3 | ಶ್ರೀ.ಶೈಲ ಅತಿಥಿ ಗೃಹ ಮೇಲ್ವಿಚಾರಣಾಧಿಕಾರಿ |
| 4 | ಚಿತ್ರ ಕಲೆ ಅಧೀಕ್ಷಕರು |
| 5 | ಎಲ್ಲಾ ವಾಹನ ಚಾಲಕರು |

ನಿಯಮಾನುಸಾರ ಎಲ್ಲಾ ಅಧಿಕಾರಿ/ನೌಕರರಿಂದ ಭದ್ರತಾ ಠೇವಣಿಯನ್ನು ಶೀಘ್ರವಾಗಿ ಪಡೆದು ಕುಲಸಚಿವರ ಹೆಸರಿನಲ್ಲಿ ಪ್ಲೆಡ್ಜ್ ಮಾಡಲು ಸೂಚಿಸಿದೆ.

## 2.6.21)ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ ಕನ್ನಡ ವಿಶ್ವವಿದ್ಯಾಲಯವು 2014–15 ಮತ್ತು2015–16ನೇ ಸಾಲಿನಲ್ಲಿ ಕ್ರಮವಾಗಿ 39 ಹಾಗೂ 72 ಪತ್ರಗಳು ತಡವಾಗಿ ಮಾಹಿತಿ ನೀಡಿದ್ದು ನಿಯಮಾನುಸಾರ ದಂಡ ಪಾವತಿಸದಿರುವುದು:–

ವಿಶ್ವವಿದ್ಯಾಲಯ ಸಾರ್ವಜನಿಕ ಪ್ರಾಧೀಕಾರಗಳು ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು.ಹುದ್ದೆ.ಕಛೇರಿ ವಿಳಾಸ ಇತ್ಯಾದಿ ವಿವರಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು ಕಛೇರಿ ಪತ್ರ ಸಂಖ್ಯೆ:ಕವಿಹಂ:ಕುಸ:ಯಾಕೇಂ.ಮಾಹಕಾ:ಪಸಂ:11:2016–17 ದಿನಾಂಕ:23–04–2016ರಲ್ಲಿ ಈ ಕೆಳಕಂಡಂತೆ ವಿವರ ನೀಡಿದ್ದಾರೆ.

| ಕ್ರ ಸಂ | ವಿವರಗಳು | ಮಾಹಿತಿ |
|---|---|---|
| 1 | ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 5(1)ರ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ದಿ:02–03–2008ರಿಂದ ಜಾರಿಗೆ ಬರುವಂತೆ ಡಾ.ಡಿ.ಮೀನಾಕ್ಷಿ ನೋಡೆಲ್ ಅಧಿಕಾರಿ ಸಾರ್ವಜನಿಕಮಾಹಿತಿ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ |
| 2 | ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ | ಡಾ.ಡಿ.ಪಾಂಡುರಂಗ ಬಾಬು ಕುಲಸಚಿವರು ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ |
| 3 | ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 19(1)ರ ಪ್ರಕಾರ ಮೇಲ್ಮನವಿ ಪ್ರಾಧೀಕಾರ | ಡಾ:ಮಲ್ಲಿಕಾ ಎಸ್.ಘಂಟಿ ಕುಲಪತಿಗಳು ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ |

2014–15ನೇ ಸಾಲಿನ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 4(1)(ಎ) ಮತ್ತು 4(1)ಬಿ ವಿವರ ಸರ್ಕಾರದ ಪ್ರಧಾನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ. ಕರ್ನಾಟಕ ಸರ್ಕಾರದ ಸಚಿವಾಲಯ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಕಛೇರಿ ಪತ್ರ ಸಂಖ್ಯೆ:ಕು.ಸ.ಮಾಕೇಂ.ಮಾಹಕಾ:ವಾವ:ಪಸಂ.19:2015–16:233:ದಿನಾಂಕ:08–09–2015ರಲ್ಲಿ ವಿವರ ಕಳುಹಿಸಿದ್ದು ವಿವರ ಈ ಕೆಳಗಿನಂತಿವೆ.

ಒಟ್ಟು ಪತ್ರಗಳು ಸ್ವೀಕೃತವಾಗಿದ್ದು 76
ನಿಗದಿತ ಅವಧಿ ಯೊಳಗೆ ವಿಲೇವಾರಿ ಮಾಡಿದ್ದು 37
ವಿಳಂಬದ ಅವಧಿಯಲ್ಲಿ ವಿಲೇ ಮಾಡಿದ್ದು **39**

**2015–16ನೇ ಸಾಲಿನ** ವರದಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ ಸಾಮಾನ್ಯ–2 ಶಾಖೆ ಕಾರ್ನಟಕ ಸರ್ಕಾರದ ಸಚಿವಾಲಯ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಕಛೇರಿ **ಪತ್ರಸಂಖ್ಯೆ:ಕವಿಹಂ:ಕುಸ:ಮಾಕೇಂಮಾಡಿ:ಪಾವ:ಪ ಸಂ.20:2016–17 ದಿನಾಂಕ:04–06–2016ರಂದು ಕಳುಹಿಸಿದ್ದು.**

ವಿವರ ಕೆಳಗಿನಂತಿವೆ

ಒಟ್ಟು ಪತ್ರಗಳು ಸ್ವೀಕೃತವಾಗಿದ್ದು: 96
ನಿಗದಿತ ಅವಧಿ ಯೊಳಗೆ ವಿಲೇ ಮಾಡಿದ್ದು 24
ವಿಳಂಬದ ಅವಧಿಯಲ್ಲಿ ವಿಲೇ ಮಾಡಿದ್ದು **72**

ಕರ್ನಾಟಕ ಮಾಹಿತಿ ಆಯೋಗ ವಾರ್ಷಿಕ ವರದಿ **2005–06 ಅದ್ಯಾಯ–5 ಮಾಹಿತಿ** ಆಯೋಗಗಳ ಅಧಿಕಾರಿಗಳು ಮತ್ತು ಕಾರ್ಯಗಳು ಅಪೀಲು ಮತ್ತು ದಂಡನೆಗಳು **18(6) (1)** ಉಪ ಪ್ರಕರಣದ ಅಡಿಯಲ್ಲಿ ಅಥವಾ **(2)ನೇ** ಉಪ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ. ಅಪೀಲನ್ನು ಅದನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗಾಗಿ ಅಥವಾ ಸಂದರ್ಭಾ ನುಸಾರ ಅದನ್ನು ಸಲ್ಲಿಸಿದ ದಿನಾಂಕದಿಂದ ಒಟ್ಟು ನಲವತ್ತೈದು ದಿನಗಳನ್ನು ಮೀರದ ಹಾಗೆ ವಿಸ್ತರಿಸಿದ ಅವಧಿಯೊಳಗೆ ದಾಖಲಿಸತಕ್ಕದ್ದು ಸ್ಪಷ್ಟ ಆದೇಶ ನೀಡಿದ್ದು ಕಡತದಲ್ಲಿ **2014–15ನೇ** ಸಾಲಿನಲ್ಲಿ ವಿಳಂಬವಾದ 39 **ಪತ್ರಗಳು** ಹಾಗೂ 2015–16ನೇ ಸಾಲಿನಲ್ಲಿ ವಿಳಂಭವಾದ 72 ಪತ್ರಗಳು ಯಾವ ಅಧಿಕಾರಿಯಿಂದ ಉತ್ತರ ನೀಡುವಲ್ಲಿ ವಿಳಂಬವಾಯಿತು ಎಷ್ಟುದಿನ ವಿಳಂಬವಾಯಿತು ವಿಳಂಬಕ್ಕೆ ನಿಯಮ **18(10)ರ** ಪ್ರಕಾರ ಅರ್ಜಿಯನ್ನು ಸ್ವೀಕರಿಸಿದ ದಿನದವರೆಗೆ ಅಥವಾ ಮಾಹಿತಿಯನ್ನು ಒದಗಿಸಿದ ದಿನದವರೆಗೆ ಪ್ರತಿ ದಿನಕ್ಕೆ ಎರಡು ನೂರು ಐವತ್ತು ರೂ ಪಾಯಿಗಳ ಜುಲ್ಮಾನೆಯನ್ನು ವಿಧಿಸತಕ್ಕದ್ದು ಆದರೆ ಜುಲ್ಮಾನೆಯ ಒಟ್ಟು ಮೊತ್ತವು ಇಪ್ಪತ್ತೈದು ಸಾವಿರ ಮೀರತಕ್ಕದಲ್ಲ ಎಂಬ ಸ್ಪಷ್ಟ ಆದೇಶ ವಿದ್ದು ಎಷ್ಟು ಜನಅಧಿಕಾರಿಯಿಂದ ಜುಲ್ಮಾನೆ ಹಣ ಸರ್ಕಾರಕ್ಕೆ ಜಮಾ ಮಾಡಿದ್ದೀರಿ ಈ ಬಗ್ಗೆ ವಿಚಾರಣೆ **ಪತ್ರ ಸಂಖ್ಯೆ:52:2016:17:ದಿನಾಂಕ:23–06–2016ರಲ್ಲಿ** ವಿಚಾರಣೆ ಪತ್ರ ನೀಡಿ ವಿವರ ಕೇಳಿದ್ದು ವಿ.ವಿ.ಯ ಉತ್ತರ

ನೀಡಿರುವುದಿಲ್ಲ.ಇದರಿಂದ ಲೆಕ್ಕ ತನಿಖೆಯಲ್ಲಿ ವಿಳಂಬದ ಅವಧಿಗೆ ಜುಲ್ಮಾನೆ ವಿಧಿಸಿ ಸರ್ಕಾರಕ್ಕೆ ಎಷ್ಟು ಮೊತ್ತ ಪಾವತಿಸಿದ್ದಾರೆ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗಿಲ್ಲ.ವಿ.ವಿ. ಈ ವಿಷಯದ ಬಗ್ಗೆ ಪ್ರಥಮ ಆದ್ಯತೆ ನೀಡಿ **2014-15 2015-16** ವಿಳಂಬ **ಪತ್ರಗಳ** ವಿಲೇಗೆ ಸಂಬಂಧಪಟ್ಟವರ ಮೇಲೆ ಸೂಕ್ತ ವಿಚಾರಣೆ ನಡೆಸಿ ಶಿಸ್ತಿನ ಕ್ರಮ ತೆಗೆದುಕೊಂಡು ಜುಲ್ಮಾನೆ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿ ಲೆಕ್ಕ ತನಿಖೆಗೆ ವರದಿ ಮಾಡಲು ಸೂಚಿಸಿದೆ.

## 2.6.22)ವಿಶ್ವವಿದ್ಯಾಲಯದ ವಿವಿಧ ಯೋಜನೆಗಳ ಅನುಷ್ಠಾನದ ಬಗ್ಗೆ:-

**2014-15** ಮತ್ತು **2015-16ನೇ** ಸಾಲಿನ ಕನ್ನಡ ವಿ.ವಿ.ಯ ಎಂ.ಆರ್.ಪಿ **ಯೋಜನೆ ಐ.ಸಿ.ಎಸ್.ಆರ್.ಐ.ಡಿ.ಹೆಚ್ ಸೆಂಟರ್** ಫಾರ್ ಉಮನ್ ಸ್ಟಡೀಸ್ ಕಡತ ಪರಿಶೀಲಿಸಲಾಗಿದ್ದು ಯೋಜನೆಗೆ ಮಂಜೂರಾದ ಅನುದಾನ ಖರ್ಚಾದ ಮೊತ್ತ ಮತ್ತು ಯೋಜನೆಗೆ ನಿಗದಿಪಡಿಸಿದ ಅವಧಿ ಯೋಜನೆಯನ್ನು ಪೂರ್ಣಗೊಳಿಸಿದ್ದು ಹಾಗೂ 6 ಪೂರ್ಣವಿರುವ ಯೋಜನೆಗಳ ವಿವರಗಳನ್ನು **ಅನುಬಂಧ-40**ದಲ್ಲಿ ಲಗತ್ತಿಸಿದೆ.

## 2.6.23)ಓಚರುಗಳನ್ನು ಹಾಜರುಪಡಿಸದೇ ಇರುವುದು:-

**2014-15 ಮತ್ತು 2015-16ನೇ** ಸಾಲಿನಲ್ಲಿ ಹಂಪಿ ಕನ್ನಡ ವಿ.ವಿ.ಯ ಲೆಕ್ಕ ಪರಿಶೋಧನೆಯಲ್ಲಿ ವಿವಿಧ ವಿಭಾಗಗಳ ಕಡತ ಹಾಗೂ ವೋಚರಗಳನ್ನು ಪರಿಶೀಲಿಸಲಾಗಿದೆ.ಆದರೆ ಚಿತ್ರಕಲಾ ನಿರ್ವಹಣೆ ವಿಭಾಗದ ಕೆಲವು ಕಡತ ಮತ್ತು ವೋಚರುಗಳನ್ನು ಹಾಜರುಪಡಿಸಿರುವುದಿಲ್ಲ.ಹಾಜರುಪಡಿಸುವವರೆಗೆ **ರೂ:2368523/-**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. **ವಿವರ ಈ ಕೆಳಗಿನಂತಿದೆ**

| ಕ್ರ ಸಂ | ಚೆಕ್ ಸಂಖ್ಯೆ | ದಿನಾಂಕ | ಮೊತ್ತ | ಷರಾ |
|---|---|---|---|---|
| 1 | 116856 | 18-02-2015 | 82290 | ಮೆ:ರಾಮದೇವ್ ಪೇಪರ್ ಏಜೆನ್ಸಿಸ್ ಹೊಸಪೇಟೆ |
| 2 | 116946 | 10-03-2015 | 340134 | ಜೆರಾಕ್ಸ್ ಯಂತ್ರ ಖರೀದಿಸಿದ ಬಾಬ್ತು ಮೇ:ಎಸ್.ಕೆ.ಆಫೀಸ್ ಸೇಲ್ಯುಷನ್ಸ್ ಕಲಬುರ್ಗಿ |
| 3 | 116947 | 10-03-2015 | 159971 | ರಿಸೋಗ್ರಾಫರ್ ಯಂತ್ರ ಖರೀದಿ |
| 4 | 116631 | 20-03-2015 | 68840 | ಲೇಖನ ಸಾಮಗ್ರಿ ಖರೀದಿ |
| 5 | 116954 | 20-03-2015 | 59180 | ವಾಹನ ಬಾಡಿಗೆ |
| 6 | 116651 | 28-03-2015 | 597141 | ಪರೀಕ್ಷೆಗಳ ಪೂರಕ ಸಾಮಗ್ರಿ ಖರೀದಿ |
| 7 | 116655 | 28-03-2015 | 48845 | ಟೋನರ್ ಖರೀದಿ ಬಾಬ್ತು |
| 8 | 107132 | 03-04-2014 | 490282 | ಗಣಕ ಯಂತ್ರ ಖರೀದಿಸಿದ ಬಾಬ್ತು |
| 9 | 107137 | 25-04-2014 | 521840 | ಪರೀಕ್ಷಾ ಲೇಖನ ಸಾಮಗ್ರಿ ಖರೀದಿ |
| | **ಒಟ್ಟು** | | **2368523** | |

ಈ ಮೇಲ್ಕಾಣಿಸಿದ ಓಚರುಗಳಲ್ಲಿ ಯಾವುದಾದರೂ ಅನಿಯಮಿತೆ , ಹಣದುರುಪಯೋಗ ಇತ್ಯಾದಿ ಪ್ರಕರಣಗಳು ಇದ್ದಲ್ಲಿ ಸಂಬಂಧಿಸಿದವರೇ ಜವಾಬ್ದಾರರಾಗಿರುತ್ತಾರೆ.

## 2.6.24)ವಿಶ್ವವಿದ್ಯಾಲಯದ ಆಸ್ತಿ ರಿಜಿಸ್ಟರ್ ನಿರ್ವಹಣೆ ಕುರಿತು:-

ವಿಶ್ವವಿದ್ಯಾಲಯವು **1991**ರಲ್ಲಿ ಕಾರ್ಯರಂಬ ಮಾಡಿದ್ದು ವಿಶ್ವವಿದ್ಯಾಲಯ ಮುಖ್ಯ ಆವರಣವು 686.93 ಎಕರೆ ಜಮೀನಿನಲ್ಲಿ ವ್ಯಾಪಿಸಿಕೊಂಡಿರುತ್ತದೆ. ವಿಶ್ವವಿದ್ಯಾಲಯ ಪ್ರಾರಂಭದಿಂದ ನಿರ್ಮಿಸಲಾಗಿರುವ ಕಟ್ಟಡಗಳು, ಖಾಲಿ ಜಾಗ ಆವರಣದಲ್ಲಿರುವ ರಸ್ತೆಗಳು ಮರ, ಗಿಡಗಳು ಮುಂತಾದ ಎಲ್ಲವು ವಿಶ್ವವಿದ್ಯಾಲಯದ ಸ್ಥಿರಾಸ್ತಿಗಳಾಗಿದ್ದು ,ಇವುಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆ ನಮೂನೆಗಳಾದ ಪಿಡಬ್ಲುಜಿ 81.82 ಹಾಗೂ 84ರಲ್ಲಿ ನಮೂದಿಸಿ ಪ್ರಾರಂಭರಿಂದಲು ಈ ಆಸ್ತಿಗಳನ್ನು ಅರ್ಜಿಸಿದ ವಿಧಾನ ಅವುಗಳ ಮೊತ್ತ ಇತ್ಯಾದಿಗಳನ್ನು ದಾಖಲಿಸುವುದು ಅತ್ಯಗತ್ಯವಾಗಿರುತ್ತದೆ.ಆದರಂತೆ ವಿಶ್ವವಿದ್ಯಾಲಯ ಹೊಂದಿರುವ ಚರಾಸ್ತಿಗಳ ವಿವರಗಳನ್ನು ಸಹಿತ ಕೇಂದ್ರೀಕೃತ ದಾಖಲೆ ರಿಜಿಸ್ಟರ್ ನಿರ್ವಹಿಸಿ ಕಾಲೋಚಿತಗೊಳಿಸಿ(Update) ಸಕ್ಷಮ ಪ್ರಾಧೀಕಾರಗಳಿಂದ ದೃಢೀಕರಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.ಈ ಬಗ್ಗೆ ಲೆಕ್ಕ ತನಿಖಾ ವಿಚಾರಣೆ **ಪತ್ರ ಸಂಖ್ಯೆ:31:16:17ದಿನಾಂಕ:13-05-2016**ರಲ್ಲಿ ಚರಾಸ್ತಿ, ಸ್ಥಿರಾಸ್ತಿ ಹಾಗೂ ವಾರ್ಷಿಕ ತಪಾಸಣೆ ಮಾಡಿದ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಲು ಸೂಚಿಸಿದ್ದು ತಾಂತ್ರಿಕ ವಿಭಾಗದವರು ಸ್ಥಿರಾಸ್ತಿ ವಾರ್ಷಿಕ ಸತ್ಯಾಪನೆ ಮಾಡಿದ ವಿವರಗಳನ್ನು ತನಿಖೆಗೆ ಹಾಜರುಪಡಿಸಿದ್ದಾರೆ.ಆದರೆ **ಪಿಡಬ್ಲುಜಿ.81.82 84**ರಲ್ಲಿ ನಿರ್ವಹಿಸಿ ಎಲ್ಲಾ ವಿವರಗಳನ್ನು ನಮೂದಿಸಿ ವಾರ್ಷಿಕ ಸತ್ಯಾಪನೆ ಮಾಡಿದ ರಿಜಿಸ್ಟರ್ ತನಿಖೆಗೆ ಹಾಜರುಪಡಿಸಿಲ್ಲ.ಚರಾಸ್ತಿಯ ಯಾವುದೇ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿಲ್ಲ.ಕಾರಣ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಮೇಲ್ಕಾಣಿಸಿದ ರೀತಿಯಲ್ಲಿ ದಾಖಲಿಸಿ ಸಕ್ಷಯ ಪ್ರಾಧೀಕಾರಗಳ ದೃಢೀಕರಣದೊಂದಿಗೆ ಮುಂದಿನ ಲೆಕ್ಕ ಪರಿಶೋಧನೆ ಹಾಜರುಪಡಿಸುವುದು ವಿ.ವಿ.ಯ ಆದ್ಯ ಕರ್ತವ್ಯವಾಗಿದ್ದು ಸ್ಥಿರ &ಚರಾಸ್ತಿಗಳ ರಿಜಿಸ್ಟರ್ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

## 2.6.25)ದಾಸ್ತಾನು ರಿಜಿಸ್ಟರ್ ನಿರ್ವಹಿಸದಿರುವುದು:–

**2014–15 ಮತ್ತು 2015–16ನೇ** ಸಾಲಿನ ಕನ್ನಡ ವಿ.ವಿ.ಯ ಲೆಕ್ಕ ಪರಿಶೋಧನೆಯಲ್ಲಿ ಹಲವು ಬಾರಿ ಮೌಖಿಕವಾಗಿ ದಾಸ್ತಾನು ವಹಿ ಹಾಜರುಪಡಿಸಲು ಸೂಚಿಸಿದರು ಹಾಜರುಪಡಿಸಿರುವುದಿಲ್ಲ.ಕರ್ನಾಟಕ ಆರ್ಥಿಕ ಸಂಹಿತೆಯ ಆರ್ಟಿಕಲ್ **164(ಎ)** ಪ್ರಕಾರ ಕಛೇರಿ ಮುಖ್ಯಸ್ಥರು ಮತ್ತು ದಾಸ್ತಾನು ನಿರ್ವಹಣೆ ಜವಾಬ್ದಾರಿ ಹೊಂದಿರುವ ಇತರ ಸಿಬ್ಬಂದಿಗಳು ಎಲ್ಲಾ ವಿಧದ ದಾಸ್ತಾನು ಲೆಕ್ಕಗಳನ್ನು ನಿರ್ವಹಿಸಬೇಕು.ದಾಸ್ತಾನು ರಿಜಿಸ್ಟರ್‌ನಲ್ಲಿ ಸಮರ್ಪಕವಾಗಿ ದಾಸ್ತಾನು ಲೆಕ್ಕಗಳನ್ನು.ನಿರ್ವಹಿಸುವುದರಿಂದ ಆಕಸ್ಮಿಕವಾಗಿ ಸಂಭವಿಸುವ ಕಳ್ಳತನ, ಪ್ರಾಡ್ಸ್ ಮತ್ತು ಸಿಬ್ಬಂದಿಯ ನಿರ್ಲಕ್ಷದಿಂದ ಆಗಬಹುದಾದ ಕಳ್ಳತನ ಪ್ರಾಡ್ಸ್ & ಸಿಬ್ಬಂದಿಯ ನಿರ್ಲಕ್ಷ್ಯತೆಯಿಂದ ಸಂಭವಿಸುವ ನಷ್ಟಗಳನ್ನು ತಡೆಗಟ್ಟಬಹುದು.ಪ್ರತಿಯೊಂದು ಸಾಮಗ್ರಿಯನ್ನು ಸಂರಕ್ಷಣೆ ಮಾಡಲು ಪ್ರತಿಯೊಂದು ಸಾಮಗ್ರಿಯ ಸ್ವೀಕೃತಿ ಮಾಡಿದ ವಿವರ ಹಂಚಿಕೆ ಮಾಡಿದ್ದು/ನಿರ್ವಹಣೆ ಮಾಡಿದ ವಿವರಗಳನ್ನು ಆಯಾ ಸಂಧರ್ಭಗಳಲ್ಲಿ ದಾಸ್ತಾನು ರಿಜಿಸ್ಟರಿನಲ್ಲಿ ದಾಖಲಿಸಬೇಕು.

ಕರ್ನಾಟಕ ಆರ್ಥಿಕ ಸಂಹಿತೆ ಆರ್ಟಿಕಲ್ 166 ಪ್ರಕಾರ ಕಛೇರಿ ಪೀಠೋಪಕರಣಗಳು ಮತ್ತು ಇತರೆ ದಾಸ್ತಾನುಗಳಿಗೆ ಸಂಬಂಧಿಸಿದಂತೆ ಫಾರಂ–34 ಎ ನಲ್ಲಿ ನಿರ್ವಹಿಸಬೇಕು ಹಾಗೂ ಪ್ರತಿಯೊಂದು ಸಾಮಗ್ರಿಗಳಿಗೆ ಫಾರ್ಮ–34ರಲ್ಲಿ ಲೆಡ್ಜರ್ ಅಕೌಂಟ್ ನಿರ್ವಹಿಸಬೇಕು ಸಾಮಗ್ರಿಗಳನ್ನು ಖರೀದಿಸಿದ/ಪೂರೈಕೆ ಮಾಡಿದ ತಕ್ಷಣ ದಾಸ್ತಾನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು.ಪ್ರತಿ ತ್ರೈಮಾಸಿಕಕ್ಕೊಮ್ಮೆ ಈ ದಾಸ್ತಾನು ರಿಜಿಸ್ಟರ್‌ಗಳನ್ನು ಪರಿಶೀಲಿಸಿ ಇದರ ಫಲಿತಾಂಶವನ್ನು ವಿ.ವಿ.ಯ ಮುಖ್ಯ ಸ್ಥರಿಗೆ ವರದಿ ಮಾಡಬೇಕಾಗುತ್ತದೆ.ಈ ರೀತಿ ದಾಸ್ತಾನು ಲೆಕ್ಕಗಳನ್ನು ನಿರ್ವಹಿಸಲು ಇಲಾಖಾ ಮುಖ್ಯ ಸ್ಥರು/ಕಛೇರಿ ಮುಖ್ಯ ಸ್ಥರು ಅಗತ್ಯ ಕ್ರಮ ಕೈ ಗೊಳ್ಳತಕ್ಕದ್ದು.

**ಕ.ಆ.ಸ. ಕಲಂ 169** ಪ್ರಕಾರ ದಾಸ್ತಾನುಗಳನ್ನು ಕನಿಷ್ಟ ವರ್ಷಕೊಂದು ಬಾರಿ ಪರಿಶೀಲಿಸಿ ಅದರ ವರದಿಯನ್ನು ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸುವುದು ಎಂದು ತಿಳಿಸುತ್ತದೆ. ಈ ಮೇಲಿನ ನಿಯಮಗಳ ರೀತಿಯಲ್ಲಿ ದಾಸ್ತಾನು ಲೆಕ್ಕಗಳನ್ನು ನಿರ್ವಹಿಸಿದ ಕುರಿತು ದಾಖಲೆಗಳನ್ನು ಲೆ.ಪ.ಗೆ ಹಾಜರುಪಡಿಸಿರುವುದಿಲ್ಲ.ದಾಸ್ತಾನು ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುವ ವಿಭಾಗದ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈ ಗೊಂಡು ಲೆ.ಪ.ಗೆ ಅನುಪಾಲನೆ ಸಲ್ಲಿಸುವುದು.

## 2.6.26)ಹಣಕಾಸು ಮತ್ತು ಶ್ರೀಶೈಲ ಅತಿಥಿ ಗೃಹ ಮತ್ತು ಪ್ರಸಾರಾಂಗ ವಿಭಾಗಗಳ ರಸೀದಿ ಪುಸ್ತಕಗಳ ದಾಸ್ತಾನು ವಿವರ:–

ರಸೀದಿ ಪುಸ್ತಕಗಳ ದಾಸ್ತಾನು ಬಗ್ಗೆ (ದೂರಶಿಕ್ಷಣ) 2014–15ಮತ್ತು 2015–16ನೇ ಸಾಲಿನ ಲೆ.ಪ.ವಿ.ಹಾಮಿ ಲೆಕ್ಕ ಪರಿಶೋಧನೆ ಕೈ ಗೊಂಡಿದ್ದು 2014–15 ಈ ಮೇಲ್ಕಾಂಡ ವಿಭಾಗಗಳ ರಸೀದಿಗಳ ದಾಸ್ತಾನು ವಿವರ.

| | |
|---|---|
| ಆರಂಭಿಕ ಶಿಲ್ಕು ದಿನಾಂಕ:01–04–2015ಕ್ಕೆ | 88 |
| 2014–15ರಲ್ಲಿ ಮುದ್ರಣ | ಇಲ್ಲ |
| ಒಟ್ಟು | **88** |
| 2014–15ರಲ್ಲಿ ಬಳಕೆ: | 09 |
| ದಿನಾಂಕ:31–03–2015ಕ್ಕೆ ಅಂತ್ಯ ಶಿಲ್ಕು: | 79 |

**2015–16:–**

| | |
|---|---|
| ಆರಂಭಿಕ ಶಿಲ್ಕು ದಿನಾಂಕ:01–04–2015ಕ್ಕೆ | :79 |
| 2015–16ಕ್ಕೆ ಮುದ್ರಣ | :ಇಲ್ಲ |
| ಒಟ್ಟು | :79 |
| 2015–16ರಲ್ಲಿ ಬಳಕೆ | :ಇಲ್ಲ |
| ದಿನಾಂಕ:31–03–2016ಕ್ಕೆ ಅಂತ್ಯಶಿಲ್ಕು | :79 |

## 2.6.26) ಹಣಕಾಸು ವಿಭಾಗದ ರಸೀದಿ ಪುಸ್ತಕಗಳ ದಾಸ್ತಾನು ವಿವರ:–

**2014–15:–**

| | |
|---|---|
| ಆರಂಭಿಕ ಶಿಲ್ಕು ದಿನಾಂಕ:01–04–2014ಕ್ಕೆ | :436/– |
| 2014–15ನೇ ಸಾಲಿನಲ್ಲಿ ಮುದ್ರಣ | :ಇಲ್ಲ |
| ಒಟ್ಟು | **:436/–** |
| 2014–15ನೇ ಸಾಲಿನಲ್ಲಿ ಬಳಕೆಯಾದ ರಸೀದಿ ಪುಸ್ತಕಗಳು | :21 |
| ದಿನಾಂಕ:31–03–2015ಕ್ಕೆ ಅಂತ್ಯಶಿಲ್ಕು | :415/– |

**2015–16:–**

ಆರಂಭಿಕ ಶಿಲ್ಕು ದಿನಾಂಕ:01–04–2015ಕ್ಕೆ :415/–
2015–16ನೇ ಸಾಲಿನಗೆ ಮುದ್ರಣ :ಇಲ್ಲ
ಒಟ್ಟು **:415/–**
2015–16ನೇ ಸಾಲಿನಲ್ಲಿ ಬಳಕೆಯಾದ ಪುಸ್ತಕಗಳು :24
ದಿನಾಂಕ 31–03–2016ಕ್ಕೆ ಅಂತ್ಯ ಶಿಲ್ಕು **:391/–**

## 2.6.26)2014–15ನೇ ಸಾಲಿನ ರಸೀದಿ ಪುಸ್ತಕಗಳ ದಾಸ್ತಾನು ವಿವರ ಈ ಕೆಳಗಿನಂತಿವೆ.(ಶ್ರೀ.ಶೈಲ ಅತಿಥಿ ಗೃಹ)

**2014–15:–**

ಆರಂಭಿಕ ಶಿಲ್ಕು ದಿನಾಂಕ:01–04–2014ಕ್ಕೆ : 15
**2014–15**ರಲ್ಲಿ ಖರೀದಿಸಿದಿ ರಸೀದಿ ಪುಸ್ತಕಗಳು :ಇಲ್ಲ
ಒಟ್ಟು ರಸೀದಿ ಪುಸ್ತಕಗಳು **:15**
2014–15ರಲ್ಲಿ ಬಳಸಿದ ರಸೀದಿ ಪುಸ್ತಕಗಳು :02
ದಿನಾಂಕ:31–03–2015ಕ್ಕೆ ಉಳಿದ ರಸೀದಿ ಪುಸ್ತಕಗಳು :13

**2015–16:–**

ಆರಂಭಿಕ ಶಿಲ್ಕು ದಿನಾಂಕ:01–04–2015ಕ್ಕೆ :13
**2015–16**ರಲ್ಲಿ ಖರೀದಿಸಿದಿ ರಸೀದಿ ಪುಸ್ತಕಗಳು :ಇಲ್ಲ
ಒಟ್ಟು ರಸೀದಿ ಪುಸ್ತಕಗಳು :13
2015–16ರಲ್ಲಿ ಬಳಸಿದ ರಸೀದಿ ಪುಸ್ತಕಗಳು :02
ದಿನಾಂಕ 31-03–2016ಕ್ಕೆ ಅಂತ್ಯ ಶಿಲ್ಕು **:11/–**

## 2.6.26)ಪ್ರಸಾರಾಂಗದ ಮಾರಾಟ ರಸೀದಿ ಪುಸ್ತಕಗಳ ದಾಸ್ತಾನು ವಿವರ:–

**2014–15**ನೇ ಸಾಲಿನಲ್ಲಿ ವಿವರ ಈ ಕೆಳಗಿನಂತಿವೆ.

| ವಿವರಗಳು | ನಗದು ರಸೀದಿ | ಸಲದ ರಸೀದಿ | ನಿಯತ ಕಲಿಕ ನಗದು ರಸೀದಿ | ನಿಯತ ಕಲಿಕ ಸಲದ ರಸೀದಿ |
|---|---|---|---|---|
| ಆರಂಭಿಕ ಶಿಲ್ಕು | 16 | 98 | 10 | 12 |
| 2014–15ರಲ್ಲಿ ಖರೀದಿಸಿದ ರಸೀದಿ ಪುಸ್ತಕಗಳು | 500 | – | – | – |
| **ಒಟ್ಟು** | **516** | **98** | **10** | **12** |
| 2014–15ರಲ್ಲಿ ಬಳಸಿದ ರಸೀದಿಪುಸ್ತಕಗಳು | 62 | 15 | 2 | – |
| 31–03–2015 ಕ್ಕೆ ಉಳಿದ ರಸೀದಿ ಪುಸ್ತಕಗಳು | 454 | 83 | 8 | 12 |

## 2.6.26)2015–16ನೇ ಸಾಲಿನ ವಿವರ ಈ ಕೆಳಗಿನಂತಿವೆ.

| ವಿವರಗಳು | ನಗದು ರಸೀದಿ | ಸಲದ ರಸೀದಿ | ನಿಯತ ಕಲಿಕ ನಗದು ರಸೀದಿ | ನಿಯತ ಕಲಿಕ ಸಲದ ರಸೀದಿ |
|---|---|---|---|---|
| ಪ್ರಾರಂಭಿಕ ಶಿಲ್ಕು 01–04–2015ಕ್ಕೆ | 454 | 83 | 8 | 12 |
| 2014–15ರಲ್ಲಿ ಖರೀದಿಸಿದ ರಸೀದಿ ಪುಸ್ತಕಗಳು | – | – | – | – |
| **ಒಟ್ಟು** | **454** | **83** | **8** | **12** |
| 2015–16ರಲ್ಲಿ ಬಳಸಿದ ರಸೀದಿ ಪುಸ್ತಕಗಳು | 21 | 1 | 2 | – |
| 31–03–2016ಕ್ಕೆ ಉಳಿದ ರಸೀದಿ ಪುಸ್ತಕಗಳು | 433 | 82 | 6 | 12 |

## 2.6.27)ಪರೀಕ್ಷೆ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸಿದ ಭೋಧಕ ಮತ್ತು ಭೋಧಕೇತರ ಸಿಬ್ಬಂದಿಗಳಿಗೆ ನಿಯಮ ಬಾಹಿರವಾಗಿ ಸಂಭಾವನೆ ನೀಡಿರುವುದು:-

2013-14ನೇ ಸಾಲಿನ ವಾರ್ಷಿಕ ಪರೀಕ್ಷೆಗಳನ್ನು ರಾಜ್ಯದ ವಿವಿಧಕಡೆ 7 ಪರೀಕ್ಷೆ ಕೇಂದ್ರಗಳಲ್ಲಿ ಏಕೆ ಕಾಲಕ್ಕೆ ಪರೀಕ್ಷೆಗಳನ್ನು ಹಮ್ಮಿಕೊಂಡಿದ್ದು ಈ ಪರೀಕ್ಷೆಗಳ ಕಾರ್ಯವನ್ನು ನಿರ್ವಹಿಸಲು ಒಂದು ಕೇಂದ್ರಕ್ಕೆ ಒಬ್ಬ ಪರೀಕ್ಷಾಧಿಕಾರಿ ಹಾಗೂ ಒಬ್ಬ ಸಹಾಯಕರನ್ನು(ಭೋದಕ ಮತ್ತು ಭೋದಕೇತರ)ನೇಮಿಸಿ ಕಛೇರಿ ಆದೇಶ ಹೊರಡಿಸಲಾಗಿದೆ.ಈ ಪರೀಕ್ಷೆ ಕಾರ್ಯ ನಿರ್ವಹಿಸಲು ಬೇಕಾದ ಮೊತ್ತ **ರೂ:346000/-**ಗಳನ್ನು **ಚೆಕ್ ಸಂಖ್ಯೆ:053936 ದಿನಾಂಕ:21-08-2014**ರಂದು ಹಣಕಾಸು ಖಾತೆಯಿಂದ ಮುಂಗಡ ಪಡೆಯಲಾಗಿದ್ದು ಸದರಿ ಮೊತ್ತಕ್ಕೆ ಪರೀಕ್ಷಾ ಕಾರ್ಯ ಮುಗಿದನಂತರ ಹೊಂದಾಣಿಕೆ ಓಚರುಗಳನ್ನು ಸಲ್ಲಿಸಲಾಗಿದೆ.ಈ ಓಚರುಗಳನ್ನು ಪರಿಶಿಲಿಸಲಾಗಿ ಪ್ರತಿಯೊಂದು ಪರೀಕ್ಷೆ ಕೇಂದ್ರಕ್ಕೆ ಎರಡು ಕಾರುಗಳನ್ನು ಬಾಡಿಗೆಗೆ ಪಡೆದು ಕೊಂಡಯ್ಯಲಾಗಿದೆ ಹಾಗೂ ಪರೀಕ್ಷೆ ಕೇಂದ್ರದಲ್ಲಿ ಕಾರ್ಯನಿರ್ವಹಿಸಿದ ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳಿಗೆ ವಿಧವಿಧವಾಗಿ ಭತ್ಯೆಗಳನ್ನು ನೀಡಿರುವುದು ಕಂಡು ಬಂದಿದೆ ಇದೆಲ್ಲವನ್ನು ಪರಿಶೀಲಿಸಲಾಗಿ ನಿಯಮ ಬಾಹಿರವಾಗಿ ಸಂಭಾವನೆಗಳನ್ನು ಪಾವತಿಸಿರುವುದು ಕಂಡು ಬರುತ್ತದೆ.

under section 28 of the Karnataka education act-1983 disharge of examination work is mandatory not with standing and anything contained in any law or contract or judgement/decree awarded by the court.there has not been any provition for the payment of any extra remuneration to carry out-the examination related work of universities.lecturer shall discharge their examination related duties including valuation and tabulation work as part of their academic function and tabulation will not be entitled for payment of any extra remuneration. However they shall be enfitled TA/DA as admissible under KCSR's for the journeys per formed by them for examination work.

ಲೆಕ್ಕ ತನಿಖಾ **ವಿಚಾರಣೆ ಸಂಖ್ಯೆ:20 ದಿನಾಂಕ:30-04-2016** ರಂದು ಈ ಮೇಲಿನ ಎಲ್ಲಾ ನ್ಯೂನತೆಗಳನ್ನು ಅನುಸರಣೆಯನ್ನು ಕೇಳಲಾಗಿತ್ತು.ಇದರ ಬಗ್ಗೆ ನಿರ್ದೇಶಕರು ದೂರ ಶಿಕ್ಷಣ ನಿರ್ದೇಶನಾಲಯ ಇವರು ಅನುಸರಣೆಯನ್ನು ಸಲ್ಲಿಸಲಾಗಿದ್ದು. ಈ ಅನುಸರಣೆಯನ್ನು ಲೆಕ್ಕ ಪರಿಶೋಧನೆಗೆ ಸಮಂಜಸದಾಗದೇ ಇರುವುದರಿಂದ ಒಪ್ಪುವುದಿಲ್ಲ ಹಾಗೂ **ಅನುಬಂಧ-41**ರಲ್ಲಿ ಸೂಚಿಸಲಾಗಿರುವ **ರೂ:90682/-**ಗಳ ಮೊತ್ತವನ್ನು ಸದರಿಯವರಿಂದ ವಸೂಲಿಸಿ ಕ.ವಿ.ವಿ.ಹಂಪಿ ಇವರ ಬಾಡಿಗೆ ಜಮಾ ಮಾಡಿ ಅನುಸರಣೆ ನೀಡಲು ಸೂಚಿಸಿದೆ.

## 2.6.28)ಅಂಚೆ ಚೀಟಿ:-2014-15ಮತ್ತು 2015-16ನೇ ಸಾಲಿನಲ್ಲಿ ಖರೀದಿಸಿದ ಮತ್ತು ಖರ್ಚು ಮಾಡಿದ ಅಂಚೆ ಚೀಟಿ ವಿವರಗಳು ಈ ಕೆಳಗಿನಂತಿವೆ:-

**2014-15:-**

| | |
|---|---|
| 01-04-2014ಕ್ಕೆ ಪ್ರಾರಂಭ ಶಿಲ್ಕು | ರೂ:15232/- |
| 2014-15ನೇ ಸಾಲಿನಲ್ಲಿ ಖರೀದಿಸಿದ ಮೊತ್ತ | ರೂ:35000/- |
| ಒಟ್ಟು ಮೊತ್ತ | **ರೂ:50232/-** |
| 2014-15ನೇ ಸಾಲಿನಲ್ಲಿ ಖರ್ಚು ಮಾಡಿದ ಮೊತ್ತ | ರೂ:50223/- |
| 31-03-2015ರಂದು ಅಂತ್ಯ ಶಿಲ್ಕು | **ರೂ:09=00** |

**2015-16:-**

| | |
|---|---|
| 01-04-2015ರಂದು ಪ್ರಾರಂಭ ಶಿಲ್ಕು | ರೂ: 09/- |
| 2015-16ನೇ ಸಾಲಿನಲ್ಲಿ ಖರೀದಿಸಿದ ಮೊತ್ತ | ರೂ: 185000/- |
| ಒಟ್ಟು ಮೊತ್ತ | ರೂ: 185009/- |
| 2015-16ನೇ ಸಾಲಿನಲ್ಲಿ ಖರ್ಚು ಮಾಡಿದ ಮೊತ್ತ | ರೂ:(-)87726/- |
| 31-03-2016 ರಂದು ಅಂತ್ಯ ಶಿಲ್ಕು | ರೂ: 97283/- |

## 2.6.29)ಸಾಮಾನ್ಯ ಅಭಿಪ್ರಾಯ:-

**1)**ಲೆಕ್ಕ ಪತ್ರಗಳನ್ನು ಯಾವ ಪದ್ಧತಿಯಲ್ಲಿ ನಿರ್ವಹಿಸಬೇಕು ಎಂಬು ಕುರಿತು ಹಣಕಾಸು ಅಧಿಕಾರಿ ಹಾಗೂ ಹಣಕಾಸು ಸಮಿತಿಯಲ್ಲಿ ಯಾವುದೇ ನಿಯಮಗಳನ್ನು ರಚಿಸಿಕೊಂಡಿರುವುದಿಲ್ಲ.

**2)**ಮಾಸಿಕ ಲೆಕ್ಕ ಪತ್ರಗಳನ್ನು ತಯಾರಿಸಿ ಲೆಕ್ಕ ಪರಿಶೋಧನೆಗೆ ಒಳಪಡಿಸಿಲ್ಲ.

**3)**ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳ ಪಾವತಿಗಳಲ್ಲಿ ಹಿಂದಿನ ವರದಿಗಳಲ್ಲಿ ಹೇಳಲಾದ ನ್ಯೂನತೆಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ.ಅಲ್ಲದೇ ಪ್ರಸಕ್ತ ವರ್ಷದಲ್ಲಿ ಕೂಡ ನಿಯಮಗಳನ್ನು ಉಲ್ಲಂಘಿಸಿ ಬೇರೆ ಬೇರೆ ಪ್ರಕರಣಗಳಲ್ಲಿ ಹೆಚ್ಚಿನ ವೇತನ ಮತ್ತು ಭತ್ಯೆಗಳನ್ನು ಪಾವತಿಸಲಾಗುತ್ತಿದೆ.

**4)**ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಪ್ರಸಕ್ತ ವರ್ಷದಲ್ಲಿಯೂ ಕೂಡಾ ಅನಿಯಮಿತವಾಗಿ ವಿವಿಧ ಸಂಭಾವನೆ/ಗೌರವಧನ ಮುಂತಾದ ಪಾವತಿಗಳನ್ನು ಮಾಡಲಾಗಿದ್ದು ವಿಶ್ವವಿದ್ಯಾಲಯಕ್ಕೆ ಅನಾವಶ್ಯಕ ಆರ್ಥಿಕ ಹೊರೆಯನ್ನು ಉಂಟುಮಾಡಲಾಗಿದೆ.

**5)**ಆಕ್ಷೇಪಣೆ ಮತ್ತು ವಸೂಲಾತಿ ಪ್ರಕರಣಗಳ ತೀರುವಳಿಗೆ ಸರಿಯಾಗಿ ಗಮನಹರಿಸಿಲ್ಲ.

**6)**ಕಟ್ಟಡ ಕಾಮಗಾರಿಗಳ ನಿರ್ವಹಣೆಯಲ್ಲಿ ಕರ್ನಾಟಕ ಪಾರದರ್ಶಕ **ಅಧಿನಿಯಮ 1999** ಹಾಗೂ **ನಿಯಮ 2000** ಅಡಿಯಲ್ಲಿ ನಿಗದಿಪಡಿಸಲಾದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಮೂನೆ **Kw-1** ರಿಂದ **Kw-6** ರವರೆಗೆ ಹಾಗೂ ಖರೀದಿಗಳಿಗೆ ಸಂಬಂಧಿಸಿದಂತೆ ಕೆ.ಜಿ.ನಮೂನೆಗಳು ಹಾಗೂ ಸೇವೆಗಳಿಗೆ ಕೆ.ಸಿ ನಮೂನೆಗಳ ಪ್ರಕ್ರಿಯೆ ನಿರ್ವಹಿಸದೇ ಹಳೆಯದಾದ **ಫಾರ್ಮ್ ಬಿ-2** ನಮೂನೆ ಅಡಿ ಕರಾರು ಒಪ್ಪಂದ ಮಾಡಿಕೊಂಡಿರುವುದನ್ನು ಸ್ಥಗಿತಗೊಳಿಸಿ ಈ ಮೇಲೆ ತಿಳಿಸಿದ ನಮೂನೆಗಳ**(standard documents)** ಪ್ರಕಾರ ಕ್ರಮ ಕೈ ಗೊಳ್ಳಲು ಸೂಚಿಸಿದೆ.

**7)**ಶಾಸನಬದ್ಧ ಕಟಾವಣೆಗಳಾದ ಆದಾಯತೆರಿಗೆ, ಮಾರಾಟತೆರಿಗೆ, ರಾಜಧನ, ಕಾರ್ಮಿಕ ಕಲ್ಯಾಣನಿಧಿ.ಇ.ಪಿ.ಎಫ್.ಇ.ಎಸ್.ಐ ಮುಂತಾದವುಗಳನ್ನು ಕಡ್ಡಾಯವಾಗಿ ಕಾಮಗಾರಿ/ಖರೀದಿ ಬಿಲ್ಲುಗಳಿಂದ ಕಟಾಯಿಸಿ ಪ್ರಚಲಿತ ನಿಯಮಗಳ ಪ್ರಕಾರ ಸಂಬಂದಿಸಿದ ಇಲಾಖೆಗಳಿಗೆ ತಪ್ಪದೇ ಸಲ್ಲಿಸುವುದು.

**8)**ಹಣಬಳಕೆ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದಂತೆ ಫಂಡಿಂಗ್ ಏಜೆನ್ಸಿಗಳಿಂದ ನೀಡಲಾಗುವ ಮಾರ್ಗದರ್ಶಿ ನಿಯಮಗಳನ್ವಯ ದಾಖಲೆಗಳನ್ನು ನಿರ್ವಹಿಸಿ ಸಂಬಂಧಿಸಿದ ಫಂಡಿಂಗ್ ಏಜೆನ್ಸಿಗಳಿಗೆ ಹಣಬಳಕೆ ಪ್ರಮಾಣ ಪತ್ರಗಳನ್ನು ತಪ್ಪದೇ ಸಲ್ಲಿಸುವುದರೊಂದಿಗೆ ಲೆಕ್ಕಗಳನ್ನು ಮರುಸಮನ್ವಯಗೊಳಿಸುವುದು.

**9)**ಖರೀದಿ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಉಲ್ಲಂಘಿಸುತ್ತಿರುವುದನ್ನು ಈ ವರ್ಷದಲ್ಲಿಯೂ ಕಾಣಬಹುದಾಗಿದೆ.

**10)**ಪರೀಕ್ಷಾ ಕಾರ್ಯಗಳಿಗಾಗಿ ಸಿಬ್ಬಂದಿಗಳಿಗೆ ಸರ್ಕಾರದ ಸ್ಪಷ್ಟ ಆದೇಶದ ಹೊರತಾಗಿಯೂ ಅನಿಯಮಿತವಾಗಿ ಸಂಭಾವನೆ/ಪರಿಹಾರ ಭತ್ಯೆ/ಪ್ರೋತ್ಸಾಹಧನ/ಮಾನವ ಸಂಪನ್ಮೂಲ ಸಂಭಾವನೆ/ಎಂದು ವಿವಿಧ ಹೆಸರಿನಲ್ಲಿ ಪಾವತಿಸಿ ವಿಶ್ವವಿದ್ಯಾಲಯಕ್ಕೆ ನಷ್ಟ ಉಂಟು ಮಾಡಲಾಗಿದೆ.

**11)**ಸಾಕಷ್ಟು ಮೊತ್ತದ ಮುಂಗಡ ಹೊಂದಾಣಿಕೆಗಾಗಿ ಬಾಕಿಯಿದ್ದು ಯಾವುದೇ ಕ್ರಮ ಕೈಗೊಳ್ಳದ ಕಾರಣ ವಿಶ್ವವಿದ್ಯಾಲಯದ ನಿಧಿಯನ್ನು ನಿಲಂಬನೆಯಲ್ಲಿರಿಸಿದಂತಾಗಿದೆ.

**12)**ಹಣಕಾಸಿನ ನಿರ್ವಹಣೆಯಲ್ಲಿ ನಿಯಮಗಳ ಪರಿಪಾಲನೆ ಪಾವತಿಕ್ಲೆಮುಗಳ ಸಂಪೂರ್ಣ ಪರಿಶಿಲನೆ ಮುಂತಾದ ಕ್ರಮಗಳ ಕಡೆ ಗಮನ ಹರಿಸುವುದು ಅತ್ಯವಶ್ಯ ಎಂದು ಅಭಿಪ್ರಾಯಪಟ್ಟಿದೆ.

ಅಪರ ನಿರ್ದೇಶಕರು
**ಕರ್ನಾಟಕ** ರಾಜ್ಯ ಲೆಕ್ಕಪರಿಶೋಧನೆ **ಮತ್ತು**
ಲೆಕ್ಕ ಪತ್ರ ಇಲಾಖೆ
**ಪ್ರಾಂ**ತೀಯ ಕಛೇರಿ, ಕಲಬುರಗಿ